ಶಿಕ್ಷಣ

ಉಳ್ಳಾಲ ಮಂಗೇಶರಾವ್,
ಬಿ. ಎ., ಎಲ್. ಟಿ.

Approved by the Text Book Committee, Madras.
Recognised by the Director of Public Instruction, Madras.

PUBLISHED BY

THE BALA SAHITYA MANDALA, LTD.,
Kodialbail, Mangalore.

FOLK TALES FOR LITTLE FOLKS SERIES

ILLUSTRATED — ONE ANNA EACH

1. How The Mice Danced.
2. The Lark And Its Eggs.
3. The Crow And The Sparrow.
4. The Wood Louse Is Dead.

Printed at the Codialbail Press, Mangalore, S. K.—1923.

ಬಾಲಸಾಹಿತ್ಯ ಮಂಡಲ,

ಲಿ ಮಿ ಟೆ ಡ್,

ಕೊಡಿಯಾಲ್‌ಬೈಲು, ಮಂಗಳೂರು.

ಶ್ರೀಕೃಷ್ಣ

ಗ್ರಂಥಕರ್ತ :—ಉಳ್ಳಾಲ ಮಂಗೇಶರಾವ್, ಬಿ. ಎ., ಎಲ್. ಟಿ.
ಮಂಗಳೂರಿನ ಗವರ್ನಮೆಂಟ ಹಾಯರ್ ಎಲಿಮೆಂಟರಿ ಟ್ರೈನಿಂಗ
ಶಾಲೆಯ ಮುಖ್ಯ ಉಪಾಧ್ಯಾಯರಾಗಿದ್ದು ಪೆನ್ಶನ್ ಹೊಂದಿದವರು.

1933

[ಬೆಲೆ 1/2 ರೂಪಾಯಿ.

ಮುನ್ನುಡಿ

ಈ ಪುಸ್ತಕವನ್ನು ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೂ ಶಿಕ್ಷಣ ವಿಚಾರದಲ್ಲಿ ಆಸಕ್ತಿಯುಳ್ಳವರಿಗೂ ಉಪಯುಕ್ತವಾಗುವಂತೆ ಬರೆದಿದೆ. ಇದಕ್ಕೆ ಆಧಾರವಾಗಿಟ್ಟುಕೊಂಡ ಗ್ರಂಥಗಳ ಹೆಸರುಗಳನ್ನು ಇನ್ನೊಂದು ಕಡೆಯಲ್ಲಿ ಕಾಣಿಸಿದೆ. ಈ ಪುಸ್ತಕವು ಉಪಾಧ್ಯಾಯರಿಗೆ ಮನಶ್ಶಾಸ್ತ್ರ ಮತ್ತು ಶಿಕ್ಷಣ ಇವುಗಳ ಸಂಬಂಧವನ್ನು ತಿಳಿಯುವುದಕ್ಕೆ ಉಪಕಾರಿಯಾದೀತೆಂದು ಭರವಸೆ ಇದೆ.

ಉಳ್ಳಾಲ ಮಂಗೇಶರಾವ್.

ಮೂಲಧಾರವಾಗಿಟ್ಟುಕೊಂಡ ಗ್ರಂಥಗಳು.

1. Infant schools, their History and Theory, by David Salmon and Winifred Hindshaw, B. A.
2. The Education of Behaviour, by I. B. Saxby, D. Sc.
3. Children's Ways, by James Sully, M. A., D. D.
4. Paradise of Childhood, by Edward Wiebe.
5. Know Your Own Mind, by William Glover.
6. The Psychology of Education, by J. Welton, D. Lit. M. A.
7. Experimental Education, by Robert R. Rusk, M. A. Ph. D.
8. Lessons in Hygienic Physiology, by Walter Moore Coleman, B. A.
9. Developing A Project Curriculum for Village Schools in India by William J. Mckee Ph. D.
10. ಗೀತಾರಹಸ್ಯ—ಲೋಕಮಾನ್ಯ ಬಾಲಗಂಗಾಧರ ಟಿಳಕರಿಂದ (ಕನ್ನಡದ ಪರಿವರ್ತನೆ— ವೆಂಕಟೇಶ ಭೀಮರಾವ್ ಆಲೂರ, ಮತ್ತು ವಾಸುದೇವಚಾರ್ಯ, ಕೆರೂರ).
11. ಸಾಹಿತ್ಯ—ಮಾಸ್ತಿ ವೆಂಕಟೇಶಯ್ಯಂಗಾರ್ಯರು, ಅಂಡರ್ ಸೆಕ್ರೆಟೆರಿ, ಮೈಸೂರು ಗವರ್ನಮೆಂಟ, ಬೆಂಗಳೂರು.
12. ಶಿಕ್ಷಣ ಮೀಮಾಂಸ— ವಿ. ಬಿ. ಆಲೂರ; ಬಿ. ಎ., ಎಲ್. ಎಲ್. ಬಿ., ಮತ್ತು ವೆಂಕಟೇಶ ನರಸಿಂಹ ಮುಗದಾಳ ಬಿ. ಎ.

ಶಿಕ್ಷಣ

1ನೆ ಅಧ್ಯಾಯ

ಪೀಠಿಕೆ

‘ಅಯ್ಯಾ! ನಿಮ್ಮ ಮಗುವನ್ನು ಯಾತಕ್ಕೆ ಶಾಲೆಗೆ ಕಳುಹಿಸುತ್ತೀರಿ?’ ಎಂದು ಹಳ್ಳಿಯ ಅಥವಾ ಪೇಟೆಯ ಜನರಿಗೆ ಪ್ರಶ್ನಿಸಿರಿ. ‘ವಿದ್ಯಾಭ್ಯಾಸಕ್ಕೋಸ್ಕರ ಕಳುಹಿಸುತ್ತೇವೆ’ ಎಂದು ಅವರ ಉತ್ತರವು ಹೊರಡುವುದು. ‘ವಿದ್ಯಾಭ್ಯಾಸವೆಂದರೇನು?’ ಎಂದು ಅವರಿಗೆ ಪುನಃ ಪ್ರಶ್ನಿಸಿದರೆ ‘ಓದು ಬರಹ ಲೆಕ್ಕಗಳ ಪರಿಚಯ’ ಎನ್ನುವರು. ‘ಇವುಗಳಿಂದಾದರೂ ಪ್ರಯೋಜನವೇನು ಅದೆ?’ ಎಂದು ಇನ್ನೊಮ್ಮೆ ನೀವು ಕೇಳಿದರೆ ಇಂಥ ಸುಲಭ ಪ್ರಶ್ನೆಯನ್ನು ಕೇಳಿದ ನೀವು ತೀರಾ ಮಂಕರೆಂದು ಅವರು ನಕ್ಕು ಹೋಗುವರು. ಒಂದು ವೇಳೆ ಅವರು ತಾಳ್ಮೆಯುಳ್ಳವರಾದರೆ ಬೇರೆ ಬೇರೆ ರೀತಿಯಾಗಿ ನಿಮಗೆ ಉತ್ತರ ಕೊಡುವರು. ‘ಜ್ಞಾನಸಂಪಾದನೆ’ ಎಂದು ಕೆಲವರೂ, ‘ಉದ್ಯೋಗದಿಂದ ಜೀವನ ಮಾಡಿಕೊಳ್ಳುವುದಕ್ಕೆ ದಾರಿ’ ಎಂದು ಇನ್ನೂ ಕೆಲವರೂ, ಮನೆಯಲ್ಲಿ ಸುಮ್ಮನೆ ತಂಟೆ ಮಾಡುವ ಬದಲಾಗಿ ಶಾಲೆಗೆ ಹೋಗಿ ಎರಡಕ್ಷರ ಕಲಿತುಕೊಳ್ಳಲಿ’ ಎಂದು ಇತರರೂ ಹೇಳಬಹುದು. ಈ ಉತ್ತರಗಳಿಂದ ನಿಮ್ಮ ಪ್ರಶ್ನೆಯು ನಿಜವಾಗಿಯೂ ಸುಲಭದ್ದಲ್ಲ, ‘ಶಿಕ್ಷಣ’ ಎಂಬ ಮಾತಿನ ಗಂಭೀರವಾದ ಅರ್ಥ ಪರಿಚಯವು ಜನರಿಗೆ ಚೆನ್ನಾಗಿ ಆಗಲಿಲ್ಲವೆಂದು ಸ್ಪಷ್ಟವಾಗುವುದು.

ಓದು ಬರಹ ಲೆಕ್ಕಗಳ ವಿಶೇಷ ಪರಿಚಯವಿಲ್ಲದೆ ಧಾರಾಳವಾಗಿ ಹಣ ಸಂಪಾದನೆ ಮಾಡುವ ಸಾಹುಕಾರರನ್ನಾಗಲೀ ಓನಾಮದ ಗಂಧ

ಗಾಳಿಯಿಲ್ಲದೆ ಚೆನ್ನಾಗಿ ದುಡಿಯುವ ಬಡಿಗೆಯವ, ಕಮ್ಮಾರ, ನೇಯಿಗಾರ ಮುಂತಾದವರನ್ನಾಗಲಿ ನೀವು ನೋಡಿರಬಹುದು. ಆ ವೃತ್ತಿಗಳನ್ನು ನಡೆಸುವ ಸಂದರ್ಭದಲ್ಲಿ ಅವರು ಉಮೇದುವಾರರಾಗಿದ್ದು, ತಮ್ಮ ಹಿರಿಯರಿಂದಲೇ ಅವನ್ನು ಕಲಿತುಕೊಂಡಿದ್ದಾರೆ. ಬಡಗಿಯವನಾಗಲಿ, ಕಮ್ಮಾರನಾಗಲಿ, ಶಿಲ್ಪಿಯಾಗಲಿ, ರೇಖಾಗಣಿತವನ್ನು ಶಾಲೆಯಲ್ಲಿ ಓದದೆನೆ ಅದರ ಕೆಲವು ತತ್ವಗಳನ್ನು ತನ್ನ ಕೆಲಸದಲ್ಲಿ ಪ್ರಯೋಗಿಸುತ್ತಾನೆ. ನಿರಕ್ಷರ ಕುಕ್ಷಿಯಾದ ಉಪ್ಪಾರನು ಕಟ್ಟಡದ ಪಾಯವನ್ನು ಹಾಕುವಾಗ ಜಲ ಮಟ್ಟ ಲಂಬಕಸೂತ್ರ ಮುಂತಾದವುಗಳನ್ನು ಉಪಯೋಗಿಸುವ ಜ್ಞಾನವು ಅವನಿಗೆ ಶಾಲೆಯಿಂದ ಸಿಗಲಿಲ್ಲವೆಂದು ಖಂಡಿತವಾಗಿ ಹೇಳಬಹುದು. ಕೃಷಿಕನು ರಸಾಯನಶಾಸ್ತ್ರದ ಸ್ವಲ್ಪವೂ ವಾಸನೆಯಿಲ್ಲದೆ ಸವುಳಾದ ನೆಲ, ಗೋಡು, ಉಸುಬಿನ ಮೈದಾನು ಇವುಗಳಲ್ಲಿ ಏನೇನು ಬೆಳಿಸಬಹುದು, ಅಂಥ ಪೈರಿಗೆ ಯಾವ ಗೊಬ್ಬರವನ್ನಿಡಬೇಕು ಎಂಬದನ್ನು ಪಾರಂಪರ್ಯವಾಗಿ ತಿಳಿದು ಬಂದ ಅನುಭವದ ಮೂಲಕ ನಿರ್ಣಯಿಸುತ್ತಾನೆ. ತನ್ನ ಜಾನುವಾರುಗಳಿಗೆ ರೋಗ ಬಂದಾಗ ಅಲ್ಲಲ್ಲಿ ಬೆಳೆದಿರುವ ಗಿಡಮೂಲಿಕೆಗಳಿಂದ ಪರಿಹಾರ ಮಾಡುತ್ತಾನೆ. ಇವರೆಲ್ಲ ಶಾಲೆಯ ಕಿಟಿಕಿಗಳಿಂದ ಸಹ ಒಳಗೆ ಇಣಿಕಿ ನೋಡಲಿಲ್ಲವಾಗಿರಬಹುದು. ಅಂಥವರ ದುಡಿತದ ಕ್ರಮವು ತೊಡಕಿಲ್ಲದೆ ನಡೆಯುವುದಾದರೆ ಶಾಲೆಯಿಂದ ಅವರಿಗೆ ಪ್ರಯೋಜನವೇನೂ ಇಲ್ಲ. ಇಲಾಖೆಯವರು ಅಥವಾ ಬೋರ್ಡಿನವರು ಶಾಲೆಗಳನ್ನು ಏರ್ಪಡಿಸಿದ್ದರಿಂದಲೆ ತಾನು ಮಕ್ಕಳನ್ನು ಶಾಲೆಗೆ ಕಳುಹಿಸುತ್ತೇನೆ ಎಂದು ಅಂಥವನು ಹೇಳಿದರೆ ನಮ್ಮಲ್ಲಿ ಮರುಮಾತಿಲ್ಲ. ದೊಡ್ಡ ಹುದ್ದೆಗಳನ್ನು ವಿದ್ಯಾಭ್ಯಾಸದ ಮೂಲಕ ಪಡೆಯಬಹುದು ಎಂದು ವಾದಿಸುವುದಾದರೆ ಶಾಲೆಯಲ್ಲಿ ಕಲಿತು ಮುಗಿಸಿ, ವೃತ್ತಿ ಉದ್ಯೋಗಗಳಿಲ್ಲದೆ ಅಲೆದಾಡುವವರ ಸಂಖ್ಯೆ ದಿನೆ ದಿನೆ ಹೆಚ್ಚಾಗುತ್ತಿದೆ. ಜ್ಞಾನಸಂಪಾದನೆಯೇ ಶಾಲೆಗೆ ಹೋಗುವುದರ ಉದ್ದೇಶವೆಂದಾದರೆ ಯಾವ ಜ್ಞಾನವನ್ನು ಪಡೆಯಬೇಕು ಎಂಬ ಪ್ರಶ್ನೆ ಬರುತ್ತದೆ. ಆಫೀಸಿನಲ್ಲಿ ಗುಮಾಸ್ತೆಯಾಗಿ ಜೀವನ ನಡಿಸುವವನಿಗೆ ಕ್ಷೇತ್ರಗಣಿತ, ರಸಾಯನ ಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ ಇವುಗಳ ಜ್ಞಾನವು ಏನು ಉಪಕಾರಿಯಾದೀತು? ತನ್ನ ಊರನ್ನು ಬಿಡದಿರುವ

ಕೃಷಿವೃತ್ತಿಯವನಿಗೆ ಬೀಜಗಣಿತ, ನೌಕಾಶಾಸ್ತ್ರ ಇವುಗಳ ಪರಿಚಯ ದಿಂದೇನು ಫಲ? ಹೀಗೆ ಯಾವನಿಗೆ ಯಾವ ಶಾಸ್ತ್ರವನ್ನು ಹೇಳಿ ಕೊಡಬೇಕು, ಎಂಬದನ್ನು ಗೊತ್ತು ಹಚ್ಚುವ ಬಗೆ ಹೇಗೆ? ಪ್ರತಿಯೊಂದು ಶಾಸ್ತ್ರವು ಅತಿ ವಿಸ್ತೃತ ರೀತಿಯಲ್ಲಿ ಬೆಳೆದಿರುವಾಗ ಅವುಗಳ ಸಂಪೂರ್ಣ ಪರಿಚಯವನ್ನಾದರೂ ಮಾಡಿಸುವ ಬಗೆ ಹೇಗೆ? ಅಥವಾ ಜರ್ಮನರಂತಹ ಪಾಶ್ಚಾತ್ಯ ಜನಾಂಗಗಳೂ ತಮ್ಮ ಶಾಸ್ತ್ರಜ್ಞಾನದ ಹೆಮ್ಮೆಯಿಂದ ಇಡೀ ಪ್ರಪಂಚದ ಮೇಲೆ ತಮ್ಮ ಸತ್ತೆಯನ್ನು ಸ್ಥಾಪಿಸಲು ಮಾಡಿದ ಪ್ರಯತ್ನಗಳು ನಿಷ್ಫಲವಾಗಲಿಲ್ಲವೆ? ಹಾಗೂ ಇದೇ ಜರ್ಮನರ ವಿಷಯವಾಗಿ ಒಂದು ಕಡೆಯಲ್ಲಿ ಪ್ರಸ್ತಾಪಿಸುವಾಗ, ಇಂಗ್ಲೆಂಡಿನ ಶ್ರೀಮಂತರಲ್ಲಿ ಒಬ್ಬರಾದ ಲೋರ್ಡ ಹಾಲ್ಡೇನರು ಹೀಗಂದರು:—'ಸರ್ವ ಕಲೆಗಳಲ್ಲಿ ನಿಪುಣರಾಗಿದ್ದು 1913ನೇ ಇಸವಿಯಲ್ಲಿ ಯುದ್ಧಾಸಕ್ತರಾಗಿರುವ ಜರ್ಮನರನ್ನು ಹೆದರುವುದಕ್ಕಿಂತಲೂ ಅವರು ಸೋತು ತಮ್ಮ ಸರ್ವಸ್ವವನ್ನು ಕಳೆದುಕೊಂಡ 1922ನೆ ಇಸವಿಯಲ್ಲಿ ಅವರನ್ನು ನಾವು ಹೆಚ್ಚಿಗೆ ಹೆದರಬೇಕು.' ಪ್ರಥಮ ದೃಷ್ಟಿಯಲ್ಲಿ ಅದು ಹಾಸ್ಯಾಸ್ಪದವಾಗಲಿಕ್ಕಿಲ್ಲವೇ ಎಂದು ನಮಗೆ ತೋರಬಹುದು. ಆದರೆ 1913ನೆ ಇಸವಿಯ ವರೆಗೆ ಜರ್ಮನರು ನಿಖಿಲ ಶಾಸ್ತ್ರಜ್ಞಾನವನ್ನು ಪಡೆದು ಇರುವಾಗ, ಅದರಿಂದ ಲೋಕವನ್ನೆ ತಮ್ಮ ಯುದ್ಧಾಸಕ್ತಿಗೆ ಬಲಿ ಇಡಬೇಕು ಎಂಬ ದುರಾಕಾಂಕ್ಷೆಗೆ ಒಳಗಾಗಿದ್ದರು. 1922ನೆ ಇಸವಿಯೊಳಗೆ ಅವರ ಈ ಸೊಕ್ಕು ಮುರಿದು ತಮ್ಮ ಈ ದುರಾಕಾಂಕ್ಷೆಯಿಂದ ಇಡೀ ಲೋಕದ ಸಮಾಜಕ್ಕೆ ಎಂತಹ ಘಾತವಾಯಿತು ಎಂಬ ವಿಚಾರದಿಂದ ದಿವ್ಯಾಂಜನವು ಕಣ್ಣಿಗೆ ಹಚ್ಚಿದಂತಾಗಿ, ಅವರು ತಮ್ಮ ಶಾಸ್ತ್ರಜ್ಞಾನವನ್ನು ತಮ್ಮ ಏಳ್ಗೆಗೆ, ತಮ್ಮ ಸುಧಾರಣೆಗೆ ವಿನಿಯೋಗಿಸಲು ಸೊಂಟಗಟ್ಟಿದರು. ಸರ್ವನಾಶವಾಗಿ ಆಹಾರಕ್ಕೆನೆ ತುಟ್ಟಿಯಾದಾಗ, ತಮ್ಮ ಈ ಶಾಸ್ತ್ರಜ್ಞಾನವು ತಮ್ಮನ್ನು ಅಡ್ಡದಾರಿಗೆ ಕೊಂಡು ಹೋಯಿತು ಎಂಬ ತಿಳಿವಳಿಕೆಯು ಅವರಲ್ಲಿ ತಲೆದೋರಿತು. ಅವರು ಆ ಪಥವನ್ನು ಬಿಟ್ಟು, ತಮ್ಮ ಸಮಾಜವು ಹೇಗೆ ಉದ್ಧಾರವಾಗಬೇಕು, ಜನರಲ್ಲಿ ಶಾಂತಿಯು ಮೂಲಕ ಹೇಗೆ ಸುಖ ಜೀವನವನ್ನು ಪಡೆಯುಬಹುದು ಎಂಬದನ್ನು ವಿಚಾರ ಮಾಡತೊಡಗಿದರು. ಹೀಗೆ ಇತರರ ನಾಶಕ್ಕೆ ವಿನಿಯೋಗಿಸುವ

ವಿದ್ಯೆಯನ್ನು ಸಮಾಜದ ಸುಖಜೀವನಕ್ಕೆ ಹಚ್ಚಲು ಅವರು ತೊಡಗಿದ್ದ ರಿಂದಲೇ ಅವರ ಸಹಜವಾದ ಮನೋದಾರ್ಢ್ಯ ಮತ್ತು ಅವರ ಶಿಕ್ಷಣದ ಬಲವು ಇತರರ ಗೌರವಕ್ಕೂ ಪಾತ್ರವಾಗುತ್ತದೆ. ಆ ರೀತಿಯಲ್ಲಿ ಅವರ ವರ್ತನಕ್ರಮದಲ್ಲಿ ಬದಲಾವಣೆಗಳು ಆದುದರಿಂದಲೇ ಜರ್ಮನರ ವಿದ್ಯೆಯ ಬಲಕ್ಕೆ ನಾವು ಈಗ ಹೆದರಬೇಕು ಎಂದು ಲೊರ್ಡ ಹಾಲ್ಡೇನರು ಹೇಳಿದ ಮಾತಿನ ಅಭಿಪ್ರಾಯ.

ಶಿಕ್ಷಣಕ್ಕೂ ಸಮಾಜಕ್ಕೂ ಸಂಬಂಧ:—ಮೇಲಿನ ಮಾತುಗಳಿಂದ ಬರೇ ಜ್ಞಾನ ಸಂಪಾದನೆ, ಅಥವಾ ದುಡಿತಕ್ಕೆ ಬೇಕಾದ ವೃತ್ತಿಪರಿಚಯ ಇವುಗಳೇ ಶಿಕ್ಷಣವಲ್ಲ, ಶಿಕ್ಷಣದ ಉದ್ದೇಶವು ಬೇರೆಯೇ ಇದೆ ಎಂದು ತಿಳಿದುಬರುವುದು. ಯಾವ ಅನುಭವವು ಜೀವನಸಾರ್ಥಕ್ಯವನ್ನು ಮಾಡು ತ್ತದೊ, ಯಾವುದರಿಂದ ಸಮಾಜವು ದಿನೆ ದಿನೆ ಸುಖಜೀವನವನ್ನು ಹೊಂದು ತ್ತದೊ, ಯಾವುದರ ಆಸ್ತಿಕ್ಯವೇ, ಪಶುಗಳ ಜೀವನಕ್ರಮಕ್ಕಿಂತ ನಮ್ಮ ಜೀವನಕ್ರಮವು ಸುಧಾರಿತವಾದದ್ದು ಎಂದು ನಿರ್ಧರಿಸುತ್ತದೊ ಅದೇ ಶಿಕ್ಷಣ ವೆಂದು ತಿಳಿಯಬೇಕು. ಜೀವನವೆಂದರೆ ಬರೇ ಹೊಟ್ಟೆ ಹೊರಕೊಳ್ಳುವುದು ಎಂಬ ಸಂಕುಚಿತ ಅರ್ಥವಲ್ಲ. ಶರೀರದ ಪೋಷಣೆಯನ್ನು ಹೇಗೆ ಮಾಡ ಬೇಕು, ಮನಸ್ಸನ್ನು ಶುದ್ಧೀಕರಿಸುವ ಬಗೆ ಹೇಗೆ, ಲೋಕ ವ್ಯವಹಾರದಲ್ಲಿ ನಾವು ಕೈಕೊಳ್ಳುವ ಕೆಲಸಗಳ ವ್ಯವಸ್ಥೆಯನ್ನು ಹೇಗೆ ಮಾಡಬೇಕು, ಸಂಸಾ ರವನ್ನು ಸುಖದಿಂದ ಸಾಗಿಸುವ ಹಂಚಿಕೆ ಯಾವುದು, ನಮ್ಮೊಡನೆ ಬೆರತು ಇರುವ ಇತರ ಜನಗಳೊಡನೆ ನಮ್ಮ ವರ್ತನವು ಹೇಗಿರಬೇಕು, ನಾವು ನಾಗರಿಕರೆನ್ನಿಸಿಕೊಳ್ಳುವುದಕ್ಕೆ ನಮ್ಮಲ್ಲಿ ಯಾವ ಲಕ್ಷಣಗಳು ತಲೆದೋರ ಬೇಕು, ಸೃಷ್ಟಿಯಲ್ಲಿ ಕಾಣಸಿಗುವ ವಿವಿಧ ವಸ್ತುಗಳನ್ನು ಪಕ್ವಮಾಡಿ ಅವು ಗಳನ್ನು ಮನುಷ್ಯನ ಉಪಯೋಗಕ್ಕೆ ಹೇಗೆ ವಿನಿಯೋಗ ಮಾಡಲು ಸಿದ್ಧ ಪಡಿಸಬೇಕು ಎಂದು ಮುಂತಾದ ಎಲ್ಲ ವಿಷಯಗಳು ಈ ಜೀವನಕ್ರಮದಲ್ಲಿ ಅಡಕವಾಗಿವೆ. ಈ ಎಲ್ಲ ವಿಚಾರಗಳು ಪಶುಗಳ ಮತ್ತು ಕಾಡಾಡಿಗಳ ಜೀವನಕ್ರಮದಲ್ಲಿ ಬರುವುದಿಲ್ಲ. ಅವುಗಳಿಗೆ ಆತ್ಮರಕ್ಷಣೆ, ಸಂತಾನವೃದ್ಧಿ, ಆಹಾರ ಸಂಪಾದನೆ ಇನಷ್ಟರ ಅನುಕೂಲತೆಗಳಿದ್ದರೆ ಸಾಕಾಗುತ್ತದೆ. ಈ ಮೂರರಲ್ಲಿಯೂ ಮನುಷ್ಯನ ಸೌಕರ್ಯ ಇಚ್ಛೆಗಳ ಮೊತ್ತವು ಪಶುಗಳಷ್ಟು ಅಥವಾ ಕಾಡಾಡಿಗಳಷ್ಟು ಅಲ್ಪತರದ್ದಲ್ಲ, ವಿಶೇಷ ನಾಜೂಕಾಗಿದೆ. ಅದಷ್ಟೆ

ಅಲ್ಲ. ಅವನು ನಾಗರಿಕತೆಯ ಮೆಟ್ಟಲನ್ನು ಹತ್ತತೊಡಗಿದೊಡನೆ ಸಮಾಜದ ಒಂದು ಅಂಗವಾಗಿದು, ಅವನ ಕಷ್ಟ ಸುಖಗಳು ಅವನೊಡನೆ ಬೆರತುಕೊಂಡಿರುವ ಇತರರಿಗೂ ತಗಲುತ್ತವೆ. ಹೀಗಾಗಿ ಪ್ರತಿಯೊಬ್ಬನು ತನ್ನ ಕೈಲಾದ ಮಟ್ಟಿಗೆ ತನ್ನ ಸಮಾಜದ ಒಳ್ಳಿತಕ್ಕೆ ಕಷ್ಟಪಡುವುದು ಅಗತ್ಯವಾಗುತ್ತದೆ.

ಸಮಾಜವೆಂಬ ಮಾತನ್ನು ಇಲ್ಲಿ ಸ್ವಲ್ಪ ಟೀಕಿಸುವುದು ಅಗತ್ಯ. ಒಂದು ಸಂತೆಯಲ್ಲಿ ಅಥವಾ ರೈಲು ಪ್ರಯಾಣದಲ್ಲಿ ತಾತ್ಕಾಲಿಕವಾಗಿ ಒಟ್ಟು ಕೂಡಿದ ಪರಿಶೆಯು ಸಮಾಜವಾಗುವುದಿಲ್ಲ. ಅಲ್ಲಿ ನೆರೆದವರ ಪೈಕಿ ಒಬ್ಬನಿಗೆ ಆಗುವ ಕೇಡು ಇನ್ನಿತರರ ಮನಸ್ಸಿಗೆ ವೇದನೆಯನ್ನು ಉಂಟು ಮಾಡದೆ ಇರಬಹುದು. ಆದರೆ ಒಂದು ಜಾತಿ, ಅಥವಾ ಒಂದು ಕೂಟದಲ್ಲಿ ಸೇರಿ ಒಬ್ಬನು ಇನ್ನೊಬ್ಬನಿಗೆ ಕಷ್ಟಸುಖಕಾಲಗಳಲ್ಲಿ ನೆರವಾಗುತಿದ್ದರೆ ಅದೇ ಸಮಾಜವಾಗುತ್ತದೆ. ಅದರಲ್ಲಿ ಸೇರಿದ ಪ್ರತಿಯೊಬ್ಬ ವ್ಯಕ್ತಿಯು ಕೂಡಾ ಸಮಾಜವೆಂಬ ದೇಹದ ಪ್ರತ್ಯಪ್ರತ್ಯೇಕ ಅಂಗವಾಗಿದ್ದಾನೆ. ಒಂದು ದೇಹದಲ್ಲಿರುವ ಬೇರೆ ಬೇರೆ ಅಂಗಗಳು ಅವುಗಳಿಗೆ ನಿಯಮಿತವಾದ ವೃತ್ತಿ ವ್ಯಾಪಾರಗಳನ್ನು ಸಕಾಲದಲ್ಲಿ ಸರಿಯಾಗಿ ಮಾಡಲು ಸಾಧ್ಯವಿಲ್ಲದಿದ್ದರೆ ಅದರಿಂದ ಇಡೀ ದೇಹಕ್ಕೆ ಕೇಡುಬರುವಂತೆ ಸಮಾಜದಲ್ಲಿ ಸೇರಿದ ವ್ಯಕ್ತಿಗಳು ತಮ್ಮ ಕರ್ತವ್ಯಗಳನ್ನು ಸರಿಯಾಗಿ ವಹಿಸುವಷ್ಟು ಸಾಮರ್ಥ್ಯವಿಲ್ಲದವರಾಗಿದ್ದರೆ ಅದರಿಂದ ಸಮಾಜದಲ್ಲಿ ಅವ್ಯವಸ್ಥೆಯುಂಟಾಗಿ ಶಾಂತಿಯೂ ಸುಖವೂ ತೊಲಗಿ ಹೋಗುತ್ತವೆ. ಹೀಗಾದುದರಿಂದ ಈ ಪ್ರತಿಯೊಂದು ವ್ಯಕ್ತಿಗೆ ಅಗತ್ಯವಿರುವ ತಿಳಿವಳಿಕೆಯನ್ನು ಕೊಟ್ಟು ಕರ್ತವ್ಯಜ್ಞಾನವನ್ನು ಉಂಟು ಮಾಡುವುದೇ ಶಿಕ್ಷಣದ ಉದ್ದೇಶವಾಗಿದೆ.

ಸಮಾಜದ ಪರಿಸ್ಥಿತಿ:—ಸಮಾಜವು ಎಲ್ಲಾ ಕಾಲಗಳಲ್ಲಿಯೂ ಒಂದೇ ಸ್ಥಿತಿಯಲ್ಲಿ ಇರುವುದಿಲ್ಲ. ಪ್ರತಿಯೊಂದು ವ್ಯಕ್ತಿಯೂ ತನ್ನ ಸುಖಜೀವನಕ್ಕೆ ನೂತನ ಹಾದಿಗಳನ್ನು ಕಂಡುಹಿಡಿಯುತ್ತಾನೆ. ಅಂಥ ಹಾದಿಗಳನ್ನು ತನ್ನ ಸಮಾಜದಲ್ಲಿ ಇತರರಿಗೂ ಹೇಳಿಕೊಡುತ್ತಾನೆ. ಹೀಗೆ ಸಮಾಜದಲ್ಲಿ ಅನುಭವದ ಮೊತ್ತವು ಹೆಚ್ಚಾಗುತ್ತ ಹೋಗಿ ಸಲಕರಣೆಗಳ ಸಂಖ್ಯೆಯೂ ವೃದ್ಧಿಯಾಗುತ್ತದೆ. ಕಾಡಾಡಿಗಳಾಗಿ ಸೊಪ್ಪುಗಳಿಂದ ನಾಚಿಕೆಯನ್ನು ಮುಚ್ಚಿಕೊಳ್ಳುವ ಜಾತಿಗಳಿಗೂ ನಗರವಾಸಿಗಳಾಗಿ ಮೋಟರು ಬಂಡಿಗಳಲ್ಲಿ ಓಡಾಡುತ್ತ ಮಹಡಿಮನೆಗಳಲ್ಲಿ ವಾಸಮಾಡುವವರಿಗೂ ನಡುವೆ ನಾಗರಿಕತೆ

ಮತ್ತು ಸುಧಾರಣೆಯ ಮೆಟ್ಟಲುಗಳು ಹಲವು ಇವೆ. ಈ ಬೇರೆ ಬೇರೆ ಮೆಟ್ಟಲುಗಳನ್ನು ಹತ್ತಿದವರ ಸೌಕರ್ಯಗಳ ಮೊತ್ತವು ಒಂದೇ ರೀತಿಯಾಗಿಲ್ಲ. ಅವುಗಳಲ್ಲಿಯೂ ವ್ಯತ್ಯಾಸವಿದೆ. ಆಯಾಯ ಮೆಟ್ಟಲಿನಿಂದ ಆದರ ಮೇಲಿನ ಮೆಟ್ಟಲಿಗೆ ಹತ್ತುವುದಕ್ಕೆ ಕಾಲವೂ ಪ್ರಯತ್ನವೂ ಸಾಕಷ್ಟು ವ್ಯವಸಾಯವೂ ಬೇಕಾಗಿವೆ. ಮೇಲಿನ ಮೆಟ್ಟಲುಗಳನ್ನು ಹತ್ತುವಷ್ಟಕ್ಕೆ ಸಮಾಜದಲ್ಲಿ ಪರಸ್ಪರ ಸಂಬಂಧವು ಬಿಗಿಯುತ್ತ ಬರುತ್ತದೆ. ಕಾಡಿನಲ್ಲಿ ಅಲೆಯುವವನಿಗೆ ಆಹಾರ ಪಾನಗಳ ರುಚಿ ವಿಶೇಷವಾಗಿ ಬೆಳೆದಿಲ್ಲ, ಸ್ವಲ್ಪದರಲ್ಲಿಯೇ ಅವನ ಆಸೆ ತಣಿಯುತ್ತದೆ. ಹೀಗಾಗಿ ಅವನು ತನ್ನಂತೆ ಇರುವ ಇತರರ ಮೇಲೆ ಹೊಂದಿಕೊಂಡಿಲ್ಲ. ಆದರೆ ಸುವ್ಯವಸ್ಥಿತ ಸಮಾಜದಲ್ಲಿ ಪ್ರತಿಯೊಬ್ಬನು ಬಾಹ್ಯದೃಷ್ಟಿಗೆ ಸುಖದ ಉಯ್ಯಾಲೆಯಲ್ಲಿ ತೂಗುತಿದ್ದಾನೆಂದೂ ಇತರರಿಗೆ ಹಂಗಾಳಾಗಿಲ್ಲವೆಂದೂ ಕಂಡರೆ ಅದು ನಿಜವಲ್ಲ. ನಮಗೆ ಅತಿ ಅಗತ್ಯವಾದ ಅನ್ನಬಟ್ಟೆಯ ವಿಷಯವನ್ನೆ ಯೋಚಿಸೋಣ. ಆ ಬಟ್ಟೆಯನ್ನು ಪರಊರಿನಿಂದ ತರಿಸಿ ಇಟ್ಟ ವ್ಯಾಪಾರಿ, ಆ ಬಟ್ಟೆಯನ್ನು ನೇಯಿದ ಜೇಡ, ಆ ಜೇಡನಿಗೆ ಮಗ್ಗವನ್ನು ಮಾಡಿಕೊಟ್ಟ ಬಡಗಿ, ಆ ಬಡಗಿಗೆ ಉಳಿಗಳನ್ನು ತಯಾರಿಸಿ ಕೊಟ್ಟ ಕಮ್ಮಾರ, ಕಮ್ಮಾರನಿಗೋಸ್ಕರ ಗನಿಯಿಂದ ಲೋಹವನ್ನು ಅಗಿದ ಮಜೂರನು, ಅದನ್ನು ಪರಿಷ್ಕರಿಸಿದ ರಸಾಯನ ಶಾಸ್ತ್ರಜ್ಞನು ಇವರೆಲ್ಲರೂ ನಮಗೆ ಬಟ್ಟೆಯನ್ನು ಒದಗಿಸಿ ಕೊಡುವುದಕ್ಕೆ ಸಹಾಯ ಮಾಡಿದವರು. ಇದೇ ರೀತಿಯಲ್ಲಿ ನಮ್ಮ ಆಹಾರಕ್ಕೆ ಬೇಕಾದ ದವಸಧಾನ್ಯಗಳನ್ನು ಒದಗಿಸಲಿಕ್ಕೂ ಹಲವರ ಸಹಾಯವು ನಮಗೆ ಬೇಕಾಗಿದೆ. ಹೀಗನ್ನುವಾಗ, ನಾವು ಎಷ್ಟೆ ದರಿದ್ರರಾಗಿರಲಿ, ಎಷ್ಟೆ ಶ್ರೀಮಂತರಾಗಿರಲಿ, ನಾವು ಕುಡಿಯುವ ನೀರಿಗೂ, ಸೇದುವ ಗಾಳಿಗೂ ಕೂಡಾ ನಾವು ಇತರರ ಉಪಕಾರಕ್ಕೆ ಒಳಗಾಗಿದ್ದೇವೆ. ನಮ್ಮ ಸೌಕರ್ಯಗಳ ಮೊತ್ತವು ಹೆಚ್ಚಿದ ಹಾಗೆ ಈ ರೀತಿಯಲ್ಲಿ ಸಮಾಜದೊಳಗಿನ ಪರಸ್ಪರ ಸಂಬಂಧವು ಇನ್ನಷ್ಟು ಬಲವತ್ತರವಾಗಿ ಬೆಳೆಯುತ್ತ ಹೋಗುತ್ತಿದೆ. ಆದುದರಿಂದ ಈ ರೀತಿಯ ನಿಕಟ ಸಂಬಂಧವಿರುವ ಸಮಾಜವು ಸಾರ್ವದಾ ಬೆಳೆಯುತ್ತ ಹೋಗುವಂತೆಯೂ ಯಾವಾಗಲೂ ಚೇತನದಿಂದಲೇ ತುಂಬಿ ಇರುವಂತೆಯೂ ಮಾಡುವ ಯಾವ ಕೀಲಿಕೈ ಇದೆಯೋ ಅದೇ ಶಿಕ್ಷಣ.

೨ನೆ ಅಧ್ಯಾಯ

ಶಿಕ್ಷಣದ ಮೀಮಾಂಸೆ.

ಸಮಾಜವು ಚೇತನಾವಸ್ಥೆಯಲ್ಲಿದ್ದು ಕ್ರಮವಾಗಿ ಬೆಳೆಯುವುದಕ್ಕೆ ಸಹಾಯಕವಾಗುವ ಜ್ಞಾನವೇ ಶಿಕ್ಷಣವೆಂದು ಹಿಂದೆ ಹೇಳಿದೆವು. ಹರ್ಬರ್ಟ್ ಸ್ಪೆನ್ಸರ್ ಎಂಬ ಆಂಗ್ಲೇಯ ವಿದ್ವಾಂಸರು ಶಿಕ್ಷಣದಲ್ಲಿ ಐದು ಅಂಗಗಳಿವೆ ಎಂದು ಹೇಳಿರುವರು.

ಶಿಕ್ಷಣದ ಅಂಗಗಳು:—(1) ಪ್ರತ್ಯಕ್ಷವಾಗಿ ಆತ್ಮರಕ್ಷಣೆಯನ್ನು ಒದಗಿಸಿಕೊಡುವ ವ್ಯವಸಾಯಗಳು, (2) ಉದರನಿರ್ವಾಹಕ್ಕೆ ಅವಶ್ಯವಿರುವ ವಸ್ತುಗಳನ್ನು ಒದಗಿಸಿಕೊಡುವ ವ್ಯವಸಾಯಗಳು, ಅಂದರೆ ಅಪ್ರತ್ಯಕ್ಷ ಆತ್ಮರಕ್ಷಣೆಯ ವ್ಯವಸಾಯಗಳು, (3) ಮಕ್ಕಳ ಸಂಗೋಪನ ಶಿಕ್ಷಣಗಳಿಗೆ ನೆರವಾಗುವ ವ್ಯವಸಾಯಗಳು, (4) ಸಾಮಾಜಿಕ ಅಥವಾ ರಾಜಕೀಯ ನಿರ್ಬಂಧಗಳ ಸಂರಕ್ಷಣಾರ್ಥ ಮಾಡಲ್ಪಡುವ ವ್ಯವಸಾಯಗಳು, (5) ಮನೋವೃತ್ತಿಗಳನ್ನೂ ಇಂದ್ರಿಯಗಳನ್ನೂ ಸಂತೋಷಪಡಿಸಿ ನಮ್ಮ ವಿರಾಮಕಾಲವನ್ನು ವ್ಯಾಪಿಸುವ ವ್ಯವಸಾಯಗಳು.

1. **ಪ್ರತ್ಯಕ್ಷ ಆತ್ಮರಕ್ಷಣೆಯ ವ್ಯವಸಾಯಗಳು:**—ಈ ಬಗೆಯ ಜ್ಞಾನವು ಎಲ್ಲ ಪ್ರಾಣಿಗಳಲ್ಲಿಯೂ ಸಸ್ಯಗಳಲ್ಲಿಯೂ ನೈಸರ್ಗಿಕವಾಗಿಯೇ ಇದೆ. ಎಲೆಗಳ ಮೇಲೆ ಹರಿದಾಡುವ ಕ್ರಿಮಿಕೀಟಗಳು ಎಲೆಗಳ ಬಣ್ಣವನ್ನು ಹೊಂದಿಕೊಂಡು, ತಮ್ಮ ಜೀವಕ್ಕೆ ಶತ್ರುಗಳಾದ ಪ್ರಾಣಿಗಳಿಂದ ಕಣ್ಮರೆಯಾಗುತ್ತವೆ. ಹವಳದ ಕ್ರಿಮಿ, ಚಿಪ್ಪುಹುಳ, ಶಂಕುಹುಳ ಇವುಗಳು ತಮ್ಮ ಸುತ್ತಲೂ ಸುಣ್ಣದ ಕವಚವನ್ನು ಬೆಳೆಯಿಸಿಕೊಂಡು ಅನ್ಯ ಪ್ರಾಣಿಗಳ ಬಾಯಿಗೆ ತುತ್ತಾಗದೆ ಸುರಕ್ಷಿತವಾಗುತ್ತವೆ. ಆಮೆಯು ತನ್ನ ಬೆನ್ನಿಗೆ ಬಲವಾದ ಚಿಪ್ಪನ್ನು ಬೆಳೆಯಿಸಿಕೊಂಡು ಆ ಚಿಪ್ಪಿನೊಳಕ್ಕೆ ತನ್ನ ಕಾಲುಗಳನ್ನೂ ತಲೆಯನ್ನೂ ಮರೆಪಡಿಸುತ್ತದೆ. ಇವುಗಳಿಗಿಂತಲೂ ಮೇಲಿನ ಮೆಟ್ಟಲಲ್ಲಿರುವ ಪ್ರಾಣಿಗಳಲ್ಲಿ ಚೇಳು ಕೊಂಡಿಯಿಂದಲೂ, ಏಡಿಯು ತನ್ನ

ಕೊಂಬುಗಳಿಂದಲೂ ಇನ್ನಿತರ ಹಲವು ಪ್ರಾಣಿಗಳು ವಿವಿಧ ರೂಪದ ಅಂಗ ಭಾಗಗಳನ್ನು ಬೆಳೆಯಿಸಿಕೊಂಡು ಅವುಗಳ ಮೂಲಕವೂ ತಮ್ಮ ಜೀವರಕ್ಷಣೆಯನ್ನು ಮಾಡಿಕೊಳ್ಳುತ್ತವೆ. ಆದರೆ ಮನುಷ್ಯನು ಸೃಷ್ಟಿವರ್ಗದಲ್ಲಿ ಅತಿ ಉತ್ಕೃಷ್ಟ ಪ್ರಾಣಿಯಾಗಿದ್ದರೂ ಅವನಿಗೆ ಇರುವ ಶತ್ರುಗಳ ಸಂಖ್ಯೆಯೂ ಹೆಚ್ಚು, ಅವುಗಳ ಬಲವೂ ವಿಶೇಷ ತರದ್ದಾಗಿರುವುದರಿಂದ ಅವನ ಜೀವ ರಕ್ಷಣೆಯ ಕ್ರಮವು ಇನ್ನಷ್ಟು ಕಷ್ಟತರದ್ದಾಗಿದೆ. ಇದಕ್ಕಾಗಿ ಆತನು ತಾಯಿಯ ಗರ್ಭದಿಂದ ಜನ್ಮವೆತ್ತಿದೊಡನೆ ನೈಸರ್ಗಿಕವಾಗಿ ಉಂಟಾದ ಆತ್ಮರಕ್ಷಣೆಯ ವಿಧಾನಗಳು ಕ್ರಮವಾಗಿ ಬೆಳೆಯುತ್ತಲೆ ಹೋಗುತ್ತಿವೆ. ಆಗಲೆ ಹುಟ್ಟಿರುವ ಮಗುವು ತನ್ನ ಸುಖದಾಯಕವಾದ ಬೆಚ್ಚಗಿನ ಕೋಶವನ್ನು ಬಿಟ್ಟು ಹೊರಗಿನ ಶೀತವಾದ ವಾತಾವರಣದ ಸ್ಪರ್ಶವಾದೊಡನೆ ಅಳತೊಡಗುತ್ತದೆ. ಅದೇ ಅದರ ಶ್ವಾಸೋಚ್ಛ್ವಾಸಗಳ ಪ್ರಾರಂಭಕ್ಕೆ ಆದಿಯಾಗುತ್ತದೆ. ಅನಂತರ ಬೆಳೆಯುತ್ತಿರುವ ಆ ಮಗುವು ತಾಯಿಯ ಕೈಗಳಿಂದ ಫಕ್ಕನೆ ಜಾರಿ ಕೆಳಕ್ಕೆ ಬೀಳಲಿರುವಾಗ ತಾಯಿಯ ಸೆರಗನ್ನು ಗಾಬರಿಯಿಂದ ಬಿಗಿಯಾಗಿ ತನ್ನ ಪುಟ್ಟ ಕೈಗಳಿಂದ ಹಿಡಿಯುತ್ತದೆ. ಕೆಲವು ತಿಂಗಳ ಮೇಲೆ ಅಪರಿಚಿತನ ಮೋರೆಯನ್ನು ಕಂಡೊಡನೆ ಭೀತಿಯಿಂದ ತಾಯಿಯ ಸೆರಗಿನಲ್ಲಿ ತನ್ನ ಮೋರೆಯನ್ನು ಅಡಗಿಸಿಕೊಳ್ಳುತ್ತದೆ. ಮುಂದೆ ಅದು ಓಡುತ್ತದೆ, ಹಾರುತ್ತದೆ, ಚಿಗಿಯುತ್ತದೆ, ಮರವನ್ನು ಹತ್ತುತ್ತದೆ, ಕೆಳಕ್ಕೆ ಬೀಳುತ್ತದೆ. ಈ ಎಲ್ಲಾ ಪ್ರಯತ್ನಗಳಿಂದ ತನ್ನ ಮಾಂಸಖಂಡಗಳಲ್ಲಿ ನರನಾಡಿಗಳಲ್ಲಿ ದಾರ್ಢ್ಯವನ್ನೂ ಶಕ್ತಿಯನ್ನೂ ಉಂಟುಮಾಡಿಕೊಳ್ಳುತ್ತದೆ. ಇವೆಲ್ಲ ಮುಂದೆ ಅದಕ್ಕೆ ಬರಬಹುದಾದ ಅಪಾಯಗಳನ್ನು ಹೋಗಲಾಡಿಸುವುದಕ್ಕೆ ನೈಸರ್ಗಿಕವಾಗಿ ಅದು ಮಾಡುವ ವ್ಯವಸಾಯಗಳು.

೨. ಅಪ್ರತ್ಯಕ್ಷ ಆತ್ಮರಕ್ಷಣೆಯ ವ್ಯವಸಾಯಗಳು: — ಇವುಗಳು ನೇರಾಗಿ ಆತ್ಮರಕ್ಷಣೆಯವುಗಳು ಅಲ್ಲದಿದ್ದರೂ ಉದರ ನಿರ್ವಾಹಕ್ಕೆ ಅಗತ್ಯವಾಗಿದ್ದು ತನ್ಮೂಲಕ ಪ್ರಾಣಧಾರಕವಾಗಿವೆ. ಇಂಥ ವ್ಯವಸಾಯಗಳು ಅತಿ ಅಲ್ಪವಾದ ಪ್ರಾಣಿಗಳಲ್ಲಿಯೂ ಸಸ್ಯಾದಿಗಳಲ್ಲಿಯೂ ನಿಯಮಿತ ಕ್ರಮಗಳನ್ನು ಅನುಸರಿಸಿ ನಡೆಯುತ್ತಿವೆ. ಒಂದೇ ಕಡೆಯಲ್ಲಿ ಹುಟ್ಟಿ ಬೆಳೆದ ಪಶುಗಳು ಸಸ್ಯಾಹಾರವನ್ನೆಲ್ಲ ತೀರ ವೆಚ್ಚಮಾಡಿ ಮುಂದೆ ಆಹಾರವಿಲ್ಲದೆ

ಸಾಯುವ ಗತಿಯು ಬಾರದಂತೆ ಬೀಜಗಳ ಪ್ರಸಾರಕಾರ್ಯವು ನಡೆಯುತ್ತಿದೆ. ಹುಲ್ಲಿನ ಮೇಲೆ ನಾವು ನಡೆಯುವಾಗ ನಮ್ಮ ಬಟ್ಟೆಗೆ ಅಂಟಿಕೊಳ್ಳುವ ತಂತುರೂಪವಾದ ಬೀಜಗಳು ನಮ್ಮ ಮೂಲಕ ಇನ್ನೊಂದು ಕಡೆಗೆ ಒಯ್ಯಲ್ಪಟ್ಟು ಅಲ್ಲಿ ಚಿಗುರುತ್ತವೆ. ಗಾಳಿಯಲ್ಲಿ ಹಾಯಿಕಟ್ಟಿ ಹಾರುವ ಮೂಲಕವೂ, ತುಂಬಿಗಳ ರೆಕ್ಕೆಗಳಿಗೆ ಅಂಟಿಕೊಳ್ಳುವ ಪುಷ್ಪ ಪರಾಗದ ಮೂಲಕವೂ, ಮಾಂಸಲವಾದ ಹಣ್ಣುಗಳ ಮೂಲಕವೂ ಬೀಜಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಯ್ಯಲ್ಪಟ್ಟು ಹೊಸ ಸಸ್ಯಾಹಾರವನ್ನು ಸಂಪಾದಿಸಿಕೊಂಡು ಅಲ್ಲಿ ಹುಲುಸಾಗಿ ಬೆಳೆಯುತ್ತವೆ. ಪ್ರಾಣಿಗಳಲ್ಲಿಯೂ ಒಂದೇ ಕಡೆಯಲ್ಲಿ ನೆಲೆ ನಿಲ್ಲುವುದರಿಂದ ಆಹಾರದ ತುಟ್ಟಿಯಾಗದಂತೆ ಅವನ್ನು ರೆಕ್ಕೆಗಳು ಕಾಲುಗಳು ಮುಂತಾದ ಚಲನೇಂದ್ರಿಯಗಳು ಹೊಸ ಆಹಾರವಿದ್ದೆಡೆಗೆ ಸಾಗಿಸಿಬಿಡುತ್ತವೆ. ಬೇಟೆಯಾಡುವ ಪ್ರಾಣಿಗಳು ತಮ್ಮ ಮಕ್ಕಳು ಮರಿಗಳಿಗೆ ಬೇಟೆಯಾಡುವ ವಿಧಾನವನ್ನು ಕಲಿಸಿಕೊಡುತ್ತವೆ. ಮನುಷ್ಯನು ತನ್ನ ಆಹಾರ ಸೌಕರ್ಯಗಳನ್ನು ಹೆಚ್ಚಿಸಿಕೊಂಡ ಹಾಗೆ ಅವನಿಗೆ ಅದನ್ನು ಒದಗಿಸಿಕೊಳ್ಳುವ ಕಷ್ಟಗಳೂ ಪ್ರಯತ್ನಗಳೂ ಹೆಚ್ಚುತ್ತವೆ. ಇದಕ್ಕಾಗಿ ಅವನಿಗೆ ಅಭ್ಯಾಸಬಲವು ಹೆಚ್ಚಬೇಕಾಗುತ್ತದೆ.

3. **ಕುಟುಂಬ ಪೋಷಣೆಯ ವ್ಯವಸಾಯಗಳು:**— ಇಲ್ಲಿಯೂ ಅತಿ ಅಲ್ಪ ತರಗತಿಯ ಪ್ರಾಣಿಗಳಿಗೆ ಹುಟ್ಟಿದೊಡನೆ ನೈಸರ್ಗಿಕವಾಗಿ ರಕ್ಷಣೆಯಾಗುವ ಕಾರಣ ಕುಟುಂಬರಕ್ಷಣೆಯ ಭಾರವು ಇಲ್ಲ. ಆದರೆ ಹಕ್ಕಿಗಳಿಗೆ ತಮ್ಮ ಮರಿಗಳಿಗೆ ರೆಕ್ಕೆ ಹುಟ್ಟಿ ಹಾರತೊಡಗುವ ವರೆಗೆ ಅವನ್ನು ಸಾಕುವ ಭಾರವು ಇದೆ. ಹಾಲುಣಿಸುವ ಪ್ರಾಣಿಗಳು ತಮ್ಮ ಹಾಲಿನಿಂದ ಮರಿಗಳನ್ನು ಸಾಕುತ್ತಿವೆ. ಅವಕ್ಕೆ ಇತರ ಪ್ರಾಣಿಗಳಿಂದ ಅಪಾಯ ಬಾರದಂತೆ ಆರೈಕೆ ಮಾಡುತ್ತವೆ. ಮಂಗವು ಮರದಿಂದ ಮರಕ್ಕೆ ಹಾರ್ಯಾಡುವಾಗ ತನ್ನ ಮರಿಯನ್ನು ತನ್ನ ಹೊಟ್ಟೆಗೆ ಕಟ್ಟಿಕೊಳ್ಳುತ್ತದೆ. ಬೆಕ್ಕು ತನ್ನ ಮರಿಗಳಿಗೆ ಕಣ್ಣುಗಳು ತೆರೆದು ಅದು ಓಡಾಡ ಹತ್ತುವ ವರೆಗೆ ಅದಕ್ಕೆ ಅಪಾಯ ಬಾರದಂತೆ ತನ್ನ ಬಾಯಿಯಿಂದ ಎತ್ತಿಕೊಂಡು ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಯ್ದು ಅದನ್ನು ಅವಿತಿಡುತ್ತದೆ. ಆದರೆ ಮನುಷ್ಯನು ತನ್ನ ಮಕ್ಕಳುಮರಿಗಳು ಸ್ವಂತವಾಗಿ ಆಹಾರ ಸಂಪಾದನೆ

ಮಾಡಲು ಕಲಿಯುವ ವರೆಗಿನ ಕಾಲಾವಧಿಯು ವಿಸ್ತೃತವಾಗಿದ್ದುದರಿಂದ ಆ ಕಾಲದಲ್ಲಿ ಅವಕ್ಕೆ ಆಹಾರ ಒದಗಿಸುವುದು, ರೋಗುರುಜಿನಗಳು ಬಾರದಂತೆ ನೋಡಿಕೊಳ್ಳುವುದು ಮುಂತಾದ ಮಕ್ಕಳ ಸಂಗೋಪನದ ವಿಶೇಷ ಭಾರವನ್ನು ವಹಿಸಿಕೊಳ್ಳಬೇಕಾಗುತ್ತದೆ.

4. ಸಾಮಾಜಿಕ ಅಥವಾ ರಾಜಕೀಯ ವ್ಯವಸಾಯಗಳು:—ಇವುಗಳು ಸಹ ಬೀಜರೂಪವಾಗಿ ಸಣ್ಣ ಪ್ರಾಣಿಗಳಲ್ಲಿ ಕೂಡಾ ಕಂಡುಬರುತ್ತವೆ. ಒಂದು ಕಡೆಯಿಂದ ಇನ್ನೊಂದು ಕಡೆಗೆ ಸತ್ತ ಅಕ್ಕಳೆಯ ದೇಹವನ್ನು ಹೊತ್ತುಕೊಂಡು ಹೋಗುವ ಇರುವೆಗಳನ್ನು ನೋಡಿರಿ. ಅವುಗಳಲ್ಲಿ ಎಷ್ಟು ವ್ಯವಸ್ಥಿತ ಕ್ರಮವೂ ಸಾಹಸವೂ ಒಗ್ಗಟ್ಟೂ ಕಂಡುಬರುತ್ತವೆ! ಆವವುಗಳು ಮಾಡಬೇಕಾದ ಕೆಲಸಗಳನ್ನು ಅವು ನಿರಾಲಸ್ಯದಿಂದ ತಮ್ಮೊಳಗೆ ಆರಿಸಿಕೊಂಡ ನಾಯಕರ ಅನುಜ್ಞೆಯ ಮೇರೆಗೆ ಮಾಡುತ್ತಿವೆ. ಜೇನುಗೂಡಿನಲ್ಲಿರುವ ವ್ಯವಸ್ಥೆಯಾದರೂ ಅದೇ ರೀತಿಯಲ್ಲಿದೆ. ಜೇನು ಸಂಗ್ರಹಮಾಡುವ ಹುಳುಗಳೆ ಬೇರೆ, ಮೊಟ್ಟೆ ಇಟ್ಟು ಮರಿಮಾಡುವ ಹುಳುಗಳೇ ಬೇರೆ. ಎಲ್ಲಿ ಗುಂಪು ಕೂಡಿ ಇರುವ ಅಭ್ಯಾಸವನ್ನು ಒಂದೇ ಬಗೆಯ ಪ್ರಾಣಿಗಳು ಕಲಿತುಕೊಂಡಿವೆಯೋ ಅಲ್ಲಿ ಸಮಾಜದ ಮೂಲ ಬೀಜವಿದೆ ಎಂದು ತಿಳಿಯ ಬೇಕು. ಕಾಗೆಯಾದರೂ ಒಂದು ಕಡೆಯಲ್ಲಿ ಕಾಳನ್ನಾಗಲಿ ಸತ್ತು ಬಿದ್ದಿರುವ ಇಲಿಯನ್ನಾಗಲಿ ಕಂಡರೆ ಕರ್ರೆನ್ನುತ್ತದೆ. ಆಗಲೇ ಹಲವು ಕಾಗೆಗಳು ಅಲ್ಲಿಗೆ ಹಾರಾಡುತ್ತವೆ. ಅನಂತರ ಕಾಳನ್ನೊ ಇಲಿಯ ಮಾಂಸವನ್ನೊ ಕೊಕ್ಕಿನಿಂದ ಎತ್ತಿಕೊಂಡು ತಮ್ಮ ಮರಗಳ ಕೊಂಬೆಗೆ ಹಾರಿಹೋಗುತ್ತವೆ. ಆದರೆ ಮನುಷ್ಯನಲ್ಲಿ ನಾಗರಿಕತೆಯು ಹೆಚ್ಚಿದಂತೆ ಸಮಾಜ ಮತ್ತು ಸರಕಾರ ಇವುಗಳ ನಿಯಮಗಳ ನಿರ್ಬಂಧವು ಹೆಚ್ಚುತ್ತದೆ. ಇಂಥ ನಿಯಮ ನಿರ್ಬಂಧಗಳ ಪರಿಚಯವು ಚೆನ್ನಾಗಿ ಮಗುವಿಗೆ ಆದರೆನೆ ಅದು ಮುಂದೆ ಸಮಾಜಕ್ಕೂ ರಾಜ್ಯಕ್ಕೂ ಸಹಕರಿಸುವ ಒಂದು ಅಂಗವಾಗುವುದು. ರಾಷ್ಟ್ರೀಯತ್ವದ ಕಲ್ಪನೆಯು ಆಗಬೇಕಾದರೆ ಈ ಬಗೆಯ ವ್ಯವಸಾಯವು ಸಾಕಷ್ಟು ಇರಬೇಕಾಗುತ್ತದೆ.

5. ಮನೋವೃತ್ತಿಗಳ ಸಂತೋಷದ ವ್ಯವಸಾಯಗಳು:—ಇವು ಆತ್ಮರಕ್ಷಣೆಗೆ ಪ್ರತ್ಯಕ್ಷವಾಗಿ ಆಗಲಿ ಅಪ್ರತ್ಯಕ್ಷವಾಗಿ ಆಗಲಿ ಅಗತ್ಯವಾದು

ವುಗಳಲ್ಲ. ಸಾಮಾಜಿಕ ಅಥವಾ ರಾಜಕೀಯ ವಿಚಾರಗಳಿಗೂ ಅಗತ್ಯವಾದವುಗಳೂ ಅಲ್ಲ. ಬರೆ ಮನೋರಂಜಕವಾಗಿದ್ದು ಮನುಷ್ಯನ ವಿರಾಮಕಾಲವನ್ನು ಸುಖದಲ್ಲಿ ಕಳೆಯುವುದಕ್ಕೆ ಮಾತ್ರ ಸಹಾಯಕವಾಗಿವೆ. ಗಾಯನ, ವಾದನ, ಕಾವ್ಯ, ಚಿತ್ರಲೇಖನ ಇವೇ ಲಲಿತಕಲೆಗಳೆನ್ನಿಸಿಕೊಳ್ಳುವ ಈ ವ್ಯವಸಾಯಗಳು. ಇವುಗಳ ಮೂಲಬೀಜಗಳು ಅತೀ ಅಲ್ಪವಾದ ಪ್ರಾಣಿಗಳಲ್ಲಿಯೂ ಸಸ್ಯಾದಿಗಳಲ್ಲಿಯೂ ಇವೆಯನ್ನಬಹುದು. ಅಂದವಾದ ಹೂಗಳೇ ಭ್ರಮರಗಳನ್ನೂ ಜೇನುಹುಳುಗಳನ್ನೂ ಆಕರ್ಷಿಸುತ್ತವೆ. ಜೇನುಹುಳುವಿನ ಗೂಡಿನ ಅರೆಗಳ ಆಕೃತಿಯು ವಿಚಿತ್ರತರದ್ದಾಗಿದೆ. ಜೇಡನು ತನ್ನ ದೇಹದಿಂದ ಹೊರಬಿಡುವ ನೂಲಿನಿಂದ ಚಮತ್ಕಾರಿಕವಾದ ಬಲೆಯನ್ನು ಹೆಣೆದು ಅದರಲ್ಲಿ ನೊಣನುಶಿಗಳನ್ನು ಸೆರೆಹಿಡಿಯುತ್ತಾನೆ. ನೀರಾನೆಗಳು ಮಡುಗಳ ದಡಗಳಲ್ಲಿ ವಿಚಿತ್ರ ರೀತಿಯಿಂದ ಮನೆಯನ್ನು ಕಟ್ಟುತ್ತವೆ. ಕೆಲವು ಹಕ್ಕಿಗಳು ಮರಿ ಇಡುವ ಮೊದಲು ಕಟ್ಟುವ ಗೂಡುಗಳು ಅವುಗಳ ನೈಸರ್ಗಿಕ ಬುದ್ಧಿಸಾಮರ್ಥ್ಯವನ್ನು ವ್ಯಕ್ತಗೊಳಿಸುತ್ತವೆ. ಹಾವು ಹಾವಾಡಿಗನ ನಾಗಸ್ವರಕ್ಕೆ ಮೆಚ್ಚಿ ತಲೆದೂಗುತ್ತ ಹೆಡೆಯನ್ನು ವಿಸ್ತರಿಸಿಕೊಳ್ಳುತ್ತದೆ. ಕೆಲವು ಹಕ್ಕಿಗಳು ಇಂಪಾದ ಸ್ವರದಿಂದ ಹಾಡಿ ಅರುಣೋದಯವನ್ನು ಸ್ವಾಗತಮಾಡುತ್ತವೆ. ಬಂಡಿ ಎಳೆಯುವ ಎತ್ತು ಕೂಡಾ ಬಂಡಿಯಾಳಿನ 'ಓ ಓ' ಸ್ವರದಿಂದ ಹುರಿದುಂಬಿ, ತನ್ನ ದಣುವಾರಿಸಿ ಹೆಜ್ಜೆ ಮುಂದಿಡುತ್ತದೆ. ಸಣ್ಣ ಮಗುವು ತನ್ನ ತಾಯಿಯ ಅಥವಾ ದಾದಿಯ ಜೋಗುಳ ಹಾಡಿನಿಂದ ಸುಖನಿದ್ರೆ ಮಾಡುತ್ತದೆ. ಆದರೆ ಈ ಲಲಿತಕಲೆಗಳು ಮೇಲಿನ ದೃಷ್ಟಾಂತಗಳಲ್ಲಿ ಬೀಜರೂಪದಲ್ಲಿದ್ದರೂ ಅವುಗಳ ಉತ್ಕರ್ಷವು ನಾಗರಿಕತೆ ಮತ್ತು ಸುಧಾರಣೆಯ ಪರಿಮಿತಿಯ ಮೇಲೆ ಹೊಂದಿರುತ್ತದೆ. ಇವು ಜೀವನೋಪಾಯಕ್ಕೆ ಅತ್ಯಾವಶ್ಯಕವಲ್ಲದಿದ್ದರೂ ಸಮಾಜದಲ್ಲಿ ರಸಿಕತೆಯನ್ನು ವೃದ್ಧಿಗೊಳಿಸಿ ಮನಸ್ಸಿಗೆ ಸುಖವನ್ನೂ ಶಾಂತಿಯನ್ನೂ ಕೊಡುವುದಕ್ಕೆ ಕಾರಣವಾಗುತ್ತವೆ.

ಈ ಬಗೆಯಲ್ಲಿ ಪಂಚಾತ್ಮಕವಾಗಿ ಮನುಷ್ಯನ ವ್ಯವಸಾಯಗಳು ವರ್ಗೀಕರಣ ಮಾಡಲ್ಪಟ್ಟರೂ ಅವುಗಳ ಮೇರೆಯು ಅಷ್ಟೊಂದು ಸ್ಪಷ್ಟವಾಗಿಲ್ಲ. ಅಂದರೆ ಒಂದು ವಿಧದ ಶಿಕ್ಷಣದಲ್ಲಿ ಇನ್ನೊಂದು ವಿಧದ ಶಿಕ್ಷ

ಣದ ಪರಿಚಯವು ಸ್ವಲ್ಪ ಮಟ್ಟಿಗೆ ಆಗುತ್ತದೆ. ಉದಾಹರಣೆಯಾಗಿ ಪ್ರತ್ಯಕ್ಷ ಆತ್ಮರಕ್ಷಣೆಯ ಬಗ್ಗೆ ಮಾಡಿದ ವ್ಯವಸಾಯಗಳು ಒಂದೊಂದು ವೇಳೆ ಉದರನಿರ್ವಾಹಕ್ಕೆ ಸಹಾಯಕವಾಗುತ್ತವೆ. ಜೀವರಕ್ಷಣೆಗೋಸ್ಕರ ವೆಂದು ಬಳೆಯುವಂತೆ ಮಾಡುವ ಮಾಂಸಖಂಡಗಳೇ ಉದರನಿರ್ವಾಹದ ವೃತ್ತಿಗಳಿಗೆ ನೆರವಾಗುತ್ತವೆ. ಅದೇ ರೀತಿಯಲ್ಲಿ ಆರೋಗ್ಯರಕ್ಷಣೆಯ ಬಗ್ಗೆ ಕಲಿಯುವ ವೈದ್ಯಶಾಸ್ತ್ರದ ಸಹಾಯದಿಂದ ನಮ್ಮ ದೇಹಶಕ್ತಿಯನ್ನು ವರ್ಧಿಸಿ ಶತ್ರುಭಯವನ್ನು ತಗ್ಗಿಸಿಕೊಳ್ಳಲಿಕ್ಕಾಗುತ್ತದೆ. ಮಕ್ಕಳ ಸಂಗೋಪನ ಶಿಕ್ಷಣವು ಸಮಾಜದ ಮತ್ತು ರಾಜಕೀಯ ವಿಷಯಗಳ ಅನುಭವಕ್ಕೆ ತಳಹದಿಯನ್ನು ಹಾಕುತ್ತದೆ. ಬರೇ ಮನೋವೃತ್ತಿಗಳನ್ನೂ ಇಂದ್ರಿಯಗಳನ್ನೂ ಸಂತೋಷಪಡಿಸುವ ಲಲಿತಕಲೆಗಳು ಕೂಡಾ ಜೀವನದ ರಕ್ಷಣೆಗೆ ಅಥವಾ ಜನ್ಮಸಾರ್ಥಕತೆಗೆ ಸಹಾಯಕವಾಗಲೂ ಬಹುದು. ಅಂತು ಈ ಪ್ರತಿಯೊಂದು ವರ್ಗದ ಜ್ಞಾನವನ್ನು ಸಂಪೂರ್ಣಗೊಳಿಸುವ ಶಿಕ್ಷಣವೇ ಅತ್ಯುತ್ಕೃಷ್ಟವಾದ ಶಿಕ್ಷಣವು.

ಮಾನಸಿಕ, ಶಾರೀರಿಕ, ನೈತಿಕ ಶಿಕ್ಷಣ:—ಮೇಲೆ ಹೇಳಿದಂತೆ ಪಂಚಾತ್ಮಕವಾಗಿ ವಿಭಜಿಸಿರುವ ವ್ಯವಸಾಯಗಳನ್ನು ಮಾನಸಿಕ, ಶಾರೀರಿಕ, ಮತ್ತು ನೈತಿಕ ಶಿಕ್ಷಣವಾಗಿ ಶಿಕ್ಷಣ ಪಂಡಿತರು ವರ್ಗೀಕರಣ ಮಾಡಿದ್ದಾರೆ. ಈ ಮೂರು ವರ್ಗಗಳಲ್ಲಿಯೂ ಪರಸ್ಪರ ಸಂಬಂಧವಿದ್ದೆ ಇದೆ. ಮಾನಸಿಕ ಶಿಕ್ಷಣ ಅಥವಾ ಜ್ಞಾನಾಭಿವೃದ್ಧಿ ಉಂಟಾದರೆನೆ ಮನುಷ್ಯನಲ್ಲಿ ವಿವೇಚನಾ ಶಕ್ತಿ ವರ್ಧನೆಯಾಗುತ್ತದೆ. ಆದರೆ ಮಾನಸಿಕ ಶಿಕ್ಷಣಕ್ಕೆ ಮುಖ್ಯ ಬಾಹ್ಯಾಂಗವಾಗಿರುವ ಮೆದುಳು ಚೆನ್ನಾಗಿ ಕೆಲಸ ಮಾಡಬೇಕಾದರೆ ಆರೋಗ್ಯವು ನೆಟ್ಟಗಿರಬೇಕು. ಆರೋಗ್ಯರಕ್ಷಣೆಯು ಶಾರೀರಿಕ ಶಿಕ್ಷಣದ ಒಂದು ಶಾಖೆ. ಶರೀರವು ಪುಷ್ಟಿಯಾಗಿ ಕ್ರಮವಾಗಿ ಬಳೆದರೆ ಮಾತ್ರವೇ ಧೈರ್ಯ, ವೀರತ್ವ, ಸ್ಥೈರ್ಯ ಮುಂತಾದ ನೈತಿಕ ಶಿಕ್ಷಣಕ್ಕೆ ಸಂಬಂಧಪಟ್ಟ ಗುಣಗಳಿಗೆ ಅವಕಾಶ ಸಿಗುತ್ತದೆ. ಹೀಗೆ ಈ ತ್ರಿಗುಣಾತ್ಮಕವಾದ ಶಿಕ್ಷಣವು ಹೇಗೆ ದೊರೆಯಬೇಕು, ಅದರಿಂದ ಸಮಾಜವು ಹೇಗೆ ಕ್ರಮವಾಗಿ ಸುಧಾರಣೆಯ ಮೆಟ್ಟಿಲುಗಳನ್ನು ಹತ್ತುತ್ತ ಇರುವುದು ಎಂಬದನ್ನು ವಿಚಾರಿಸುವುದೇ ಈ ಗ್ರಂಥದ ಮೂಲೋದ್ದೇಶವಾಗಿದೆ.

೩ ನೇ ಅಧ್ಯಾಯ

ಶಿಕ್ಷಣದ ಪ್ರಗತಿ

ಸಮಾಜಹಿತವೆ ಶಿಕ್ಷಣದ ಧ್ಯೇಯವೆಂದೂ, ಸುಖಜೀವನವೇ ಶಿಕ್ಷಣದ ಫಲಿತಾಂಶವೆಂದೂ ಹಿಂದೆ ಹೇಳಿದೆವು. ಈ ಬಗೆಯ ಸರ್ವತೋಮುಖವಾದ ಶಿಕ್ಷಣದಲ್ಲಿ ಮಾನಸಿಕ ಶಿಕ್ಷಣ, ಶಾರೀರಿಕ ಶಿಕ್ಷಣ, ನೈತಿಕ ಶಿಕ್ಷಣವೆಂದು ಮೂರು ಕವಲೊಡೆದಿದ್ದರೂ ಅವುಗಳಲ್ಲಿ ಹರಿದಾಡುವ ಜೀವನರಸವು ಒಂದೇಯಾಗಿದ್ದುದರಿಂದ ಅವನ್ನು ಕಟ್ಟುನಿಟ್ಟಾಗಿ ಒಂದರಿಂದ ಒಂದನ್ನು ಪ್ರತ್ಯೇಕಿಸಿ ನೆಡಲು ಸಾಧ್ಯವಲ್ಲವೆಂದೂ ಹಿಂದೆ ಸೂಚಿಸಿದೆವು. ಈ ಶಿಕ್ಷಣ ಪ್ರಚಾರದಲ್ಲಿ ಪಾಶ್ಚಾತ್ಯರಲ್ಲಿಯೂ ಪೌರ್ವಾತ್ಯರಲ್ಲಿಯೂ ಯಾವ ವಿಧದ ವಿಚಾರಗಳು ಬೇರೆ ಬೇರೆ ಕಾಲದಲ್ಲಿ ತಲೆದೋರಿದುವು ಎಂಬದನ್ನು ಸ್ವಲ್ಪ ಮಟ್ಟಿಗೆ ಇಲ್ಲಿ ಎತ್ತಿಕೊಳ್ಳುವುದು ಅಪ್ರಸಕ್ತವಾಗಲಾರದು. ಪಾಶ್ಚಾತ್ಯರಲ್ಲಿ ನಾಗರಿಕತೆಯ ಸುಧಾರಣೆಯನ್ನು ಮೊಟ್ಟಮೊದಲು ಹೊಂದಿದವರು ಗ್ರೀಕರು. ದೇಹವು ಸುಂದರವಾಗಿಯೂ ಪುಷ್ಟಿಯಾಗಿಯೂ ಬೆಳೆದರೆ ಅದರ ಪ್ರತಿಫಲನವು ಮಾನಸಿಕ ವ್ಯಾಪಾರಗಳಲ್ಲಿಯೂ ಕಂಡುಬರುವುದು, ಅಂದರೆ ಸುಂದರಕಾಯನಾಗಿ ದೇಹದಾರ್ಢ್ಯವುಳ್ಳವನಲ್ಲಿ ವೀರಸ್ಥೈರ್ಯಾದಿ ಗುಣಗಳೂ ಉದಾತ್ತ ವಿಚಾರಗಳೂ ಸ್ವಾಭಾವಿಕವಾಗಿಯೇ ಬರುವವು ಎಂದು ಗ್ರೀಕರು ತಿಳಿದರು. ಹೀಗಾಗಿ ಬಗೆಬಗೆಯ ವ್ಯಾಯಾಮಗಳು, ಕಸ್ರತು, ಕತ್ತಿ ಈಟಿಗಳ ಪ್ರಯೋಗ ಮುಂತಾದುವುಗಳಿಗೆ ಅವರು ವಿಶೇಷ ಗಮನ ಕೊಟ್ಟರು. ಆ ಕಾಲದಲ್ಲಿಯೇ ಗ್ರೀಕ ತತ್ವಜ್ಞಾನಿಗಳು ಪ್ರಪಂಚದ ಉತ್ಪತ್ತಿ, ಮನುಷ್ಯನ ಜೀವನಸಾರ್ಥಕ್ಯ ಈ ವಿಚಾರಗಳನ್ನು ತಮ್ಮ ಬುದ್ಧಿಶಕ್ತಿಗೆ ಹೊಳೆದ ರೀತಿಯಲ್ಲಿ ಪ್ರಚಾರಗೊಳಿಸಿದರು. ಗ್ರೀಕರನಂತರ ರೋಮ ದೇಶದವರು ಪ್ರಸಿದ್ಧಿಗೆ ಬಂದರು. ರೋಮಿಯರ ನಾಗರಿಕತೆಯಲ್ಲಿ ರಾಜಕೀಯ ವ್ಯವಸ್ಥೆಯ ಅಸ್ತಿವಾರವು ಹಾಕಲ್ಪಟ್ಟಿತು. ರೋಮಿಯರು ದೇಹದಾರ್ಢ್ಯದ ವಿಚಾರವನ್ನು ದುರ್ಲಕ್ಷಿಸಲಿಲ್ಲ. ಬೇಟೆ, ಭಯಂಕರವಾದ ಕಾಡುಮೃಗಗಳೊಡನೆ

ಕಸ್ರತು, ಮುಂತಾದವುಗಳೆ ಆ ಕಾಲದ ಮಹಾ ವೀರರ ವಿಹಾರಗಳಾಗಿ ದ್ದುವು. ಕಾಲಕ್ರಮದಲ್ಲಿ ರೋಮಿಯರು ಪಾಶ್ಚಾತ್ಯ ದೇಶಗಳನ್ನೆಲ್ಲ ಗೆದ್ದು ಕೆಲವು ಕಾಲದ ವರೆಗೆ ರೋಮಿಯ ಚಕ್ರವರ್ತಿಗಳ ಏಕಛತ್ರಾಧಿಪತ್ಯದೊ ಳಗೆ ತಂದುಕೊಂಡಿದ್ದು, ತಮ್ಮ ನಾಗರಿಕತೆಯನ್ನು ಆ ಬೇರೆ ಬೇರೆ ದೇಶ ಗಳಲ್ಲಿಯೂ ಪ್ರಚಾರಕ್ಕೆ ತಂದರು. ಈ ನಾಗರಿಕತೆಯೊಂದಿಗೆ ಕ್ರೈಸ್ತ ಮತವೂ ಅದರ ಮೂಲತತ್ವಗಳೂ ಈ ದೇಶಗಳಲ್ಲಿ ರೂಢಿಗೆ ಬಂದವು. ಅದರೊಂದಿಗೆ ರೋಮಿಯರು ಗ್ರೀಕರಿಂದ ಪಡೆದ ತತ್ವಜ್ಞಾನದ ವಿಷಯ ಗಳೂ ಈ ದೇಶಗಳಲ್ಲಿ ಪ್ರಚಲಿತವಾದವು. ರೋಮದೇಶದ ಪೋಪ್ ಸಾಹೇ ಬರನ್ನು ಕ್ರೈಸ್ತಮತದ ಧರ್ಮಗುರುವೆಂದು ಕ್ರೈಸ್ತ ಮತಾವಲಂಬಿಗಳಾದ ಪಾಶ್ಚಾತ್ಯ ದೇಶಗಳ ಅರಸರೆಲ್ಲರೂ ಒಪ್ಪಿಕೊಂಡು, ಪಟ್ಟಾಭಿಷೇಕವನ್ನು ಈ ಧರ್ಮಗುರುಗಳ ಆಶೀರ್ವಾದ ಮತ್ತು ಸಮ್ಮತಿಯಿಂದ ಮಾಡಿಸಿಕೊಳ್ಳು ವಷ್ಟು ಪೂಜ್ಯತೆಯನ್ನೂ ವಿಧೇಯತೆಯನ್ನೂ ಈ ಪೀಠಕ್ಕೆ ತೋರಹತ್ತಿದರು. ಧರ್ಮಾಚರಣೆಗಳ ಮತ್ತು ಬೋಧೆಯ ಜ್ಯೋತಿಯನ್ನು ಈ ಪೀಠದ ದೀವಿ ಗೆಯಿಂದಲೇ ಬೇರೆ ಬೇರೆ ದೇಶಗಳಲ್ಲಿ ಹಚ್ಚಿಕೊಳ್ಳಬೇಕಾಯಿತು. ಈ ಧರ್ಮಗುರುಗಳ ಅಧೀನರಾಗಿ ಅಲ್ಲಲ್ಲಿ ಮಠಗಳನ್ನು (ಕೊನವೆಂಟ ಮತ್ತು ಸೆಮಿನೆರಿಗಳನ್ನು) ಸ್ಥಾಪಿಸಿದ ಕ್ರೈಸ್ತ ಸನ್ಯಾಸಿಗಳೇ ಈ ಧರ್ಮ ಬೋಧೆಯ ಮತ್ತು ಶಿಕ್ಷಣದ ಪ್ರಚಾರಕಾರ್ಯವನ್ನು ನಡೆಸುತಿದ್ದರು. ಈ ಧರ್ಮಬೋಧೆಯ ಗ್ರಂಥಗಳೂ ಆ ಕಾಲದಲ್ಲಿ ಸರ್ವಮಾನ್ಯವಾದ ತತ್ವ ಮತ್ತು ಬಗೆಬಗೆಯ ಶಾಸ್ತ್ರಗಳೂ ಗ್ರೀಕ ಮತ್ತು ಲತೀನ ಭಾಷೆಗಳಲ್ಲಿ ಇರು ವುದರಿಂದಲೂ ಆ ಗ್ರಂಥಗಳ ಹಸ್ತಪ್ರತಿಗಳನ್ನೆ ಒದಗಿಸಿಕೊಳ್ಳಬೇಕಾದುದ ರಿಂದಲೂ ಆ ಗ್ರಂಥಸ್ಥಭಾಷೆಯನ್ನು ಕಲಿಯುವ ನಿಮಿತ್ಯ ಈ ಸನ್ಯಾಸಿಗಳ ಮಠಗಳಿಗೆ ಜನರು ಹೋಗಿ ಕಾಲಯಾಪನೆ ಮಾಡಬೇಕಾಗಿತ್ತು. ಹೀಗಾಗಿ ಈ ಮಠಗಳೆಂಬ ಚಿಕ್ಕ ದೀವಿಗೆಗಳ ಜ್ಞಾನ ಪ್ರಕಾಶವು ಜನಸಾಮಾನ್ಯರಿಗೆ ಎಟಕುತ್ತಿರಲಿಲ್ಲ. ಪಾಶ್ಚಾತ್ಯ ರಾಜ್ಯಗಳಲ್ಲಿ ಮಾತೃಭಾಷೆಯು ಪ್ರತ್ಯೇಕ ವಿದ್ದು, ಆ ಭಾಷೆಯಲ್ಲಿ ಈ ಉದ್ಗ್ರಂಥಗಳು ಪರಿವರ್ತನೆಯಾಗುವ ವರೆಗೆ ಮತ್ತು ಮುದ್ರಣಾಲಯುಗಳು ಸ್ಥಾಪನೆಯಾಗುವ ವರೆಗೆ ಜನಸಾಮಾನ್ಯರಿಗೆ ಈ ಧರ್ಮಬೋಧೆ ತತ್ವವಿಚಾರಗಳ ಫಲವು ಕೈಗೆ ಎಟಕುವಂತಿರಲಿಲ್ಲ.

ಗ್ರೀಕ ಮತ್ತು ಲತೀನ ಭಾಷೆಗಳನ್ನು ಕಲಿತವನೆ ಆ ಕಾಲದ ಸುಶಿಕ್ಷಿತನು, ಸಭ್ಯನು, ಶಿಷ್ಟನು. ಇವು ಅನ್ಯ ಭಾಷೆಗಳಾಗಿದ್ದು ಅವುಗಳ ವ್ಯಾಕರಣ, ಶೈಲಿ, ಕಾವ್ಯರಚನೆ ಈ ಕಡೆಗೆನೆ ಕ್ರಮವಾಗಿ ಜನರ ದೃಷ್ಟಿಯು ನೆಲೆಗೊಳ್ಳಬೇಕಾಯಿತು. ಹೀಗಾಗಿ ಆ ಗ್ರಂಥಗಳಲ್ಲಿ ಹುದುಗಿರುವ ತತ್ವಗಳ ಸಿದ್ಧಾಂತಗಳ ಬದಲಾಗಿ ಬರೇ ಆ ಭಾಷಾಜ್ಞಾನಕ್ಕೆನೆ ಪ್ರಾಶಸ್ತ್ಯ ಹೆಚ್ಚಿತು.

ಕೊಮಿನಿಯಸ್ 1592—1671 :— ಕಾಲಕ್ರಮದಲ್ಲಿ ಈ ಅಲಂಕಾರಿಕ ಶಿಕ್ಷಣವು ಜನಸಾಮಾನ್ಯದ ಜೀವನಕ್ಕೆ ಏನೊಂದು ಉಪಕಾರಿಯಾಗಲಾರದೆಂದೂ, ಜನರ ಮಾನಸಿಕ ಸುಧಾರಣೆಗೆ ಈ ಶಾಸ್ತ್ರಗಳೂ ಸಿದ್ಧಾಂತಗಳೂ ದೇಶಭಾಷೆಯಲ್ಲಿ ಪ್ರಕಟವಾಗಬೇಕೆಂದೂ ಪ್ರಕೃತಿ ಪರಿಚಯದಿಂದೊಡಗೂಡಿದ ವ್ಯಾವಹಾರಿಕ ಶಿಕ್ಷಣವೇ ಜೀವನ ಸುಧಾರಣೆಗೆ ಅತ್ಯಗತ್ಯವಾದುದೆಂದೂ ಸುಮಾರು ಹದಿನಾರನೆಯ ಶತಮಾನದಲ್ಲಿ ಒಂದು ಬಗೆಯ ಜಾಗೃತಿಯುಂಟಾಯಿತು. ಇದರೊಂದಿಗೆ ಶಿಕ್ಷಣದ ಪದ್ಧತಿಯು ನೈಸರ್ಗಿಕ ಪದ್ಧತಿಯನ್ನು ಅನುಸರಿಸಬೇಕೆಂದೂ ಒಂದು ಮಗುವು ಮಾತುಗಳನ್ನು ಹೆಕ್ಕಿಕೊಳ್ಳಲು ತೊಡಗಿದೊಡನೆ ಯಾವ ಕ್ರಮದಿಂದ ಜ್ಞಾನಸಂಪಾದನೆ ಮಾಡಿಕೊಳ್ಳುತ್ತದೆಯೊ ಅದೇ ನೈಸರ್ಗಿಕ ಕ್ರಮವೆಂದೂ ಜನರ ದೃಷ್ಟಿಪಥದಲ್ಲಿ ಹೊಳೆಯ ತೊಡಗಿತು. "ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರಕೃತಿಯು ಆಧಾರವಾಗಿರಬೇಕು, ಶಿಕ್ಷಣವು ವಸ್ತುಗಳ ಸಹಾಯದಿಂದ ನಡೆಯಬೇಕು, ಪದಾರ್ಥಗಳಿಲ್ಲದೆ ಪದ (ಶಬ್ದ)ಗಳನ್ನು ಹೇಳಕೂಡದು" ಎಂದು ಪ್ರತಿಪಾದನೆ ಮಾಡಿದವರಲ್ಲಿ ಮೊದಲನೆಯವನು ಕೊಮಿನಿಯಸ್ ಎಂಬವನು. ಇವನು ಒಸ್ಟ್ರಿಯ ದೇಶದ ಮೊರೇವಿಯ ಪ್ರಾಂತದ ಒಂದು ಹಳ್ಳಿಯಲ್ಲಿ ಜನಿಸಿದನು. ಇವನು ಆ ಕಾಲದ ಲೆಟಿನ್ ಪಾಠಶಾಲೆಯಲ್ಲಿ ಮೊದಲು ಕಲಿತು, ಈ ಬಗೆಯ ಪಾಠಶಾಲೆಯಲ್ಲಿ ತನ್ನ ಆಯುಷ್ಯದ ಅತಿ ಉತ್ಕೃಷ್ಟವಾದ ಕಾಲವು ನಿರರ್ಥಕವಾಗಿ ಕಳೆದು ಹೋದುದಕ್ಕೆ ಪಶ್ಚಾತ್ತಾಪಪಟ್ಟು, ಬೇರೆ ಬೇರೆ ದೇಶಗಳಲ್ಲಿ ಸಂಚರಿಸಿ, ಅಲ್ಲಿಯೂ ವಿದ್ಯಾಭ್ಯಾಸದ ಕ್ರಮದಲ್ಲಿ ಅದೇ ರೀತಿಯ ಕೊರತೆಗಳನ್ನು ಕಂಡು, ವಿದ್ಯಾಭ್ಯಾಸದ ಸುಲಭ ಉಪಾಯಗಳನ್ನು ಯೋಚಿಸಿ ಗ್ರಂಥಗಳನ್ನು ಬರೆದನು. ಜನರ, ಮುಖ್ಯವಾಗಿ ಮಕ್ಕಳ, ವಿದ್ಯಾಭ್ಯಾಸದ ಕಾಲವು ಸುಖವಾಗಿ ಕಳೆಯುವಂತೆ

ಮಾಡುವುದೇ ಇವನ ಉದ್ದೇಶವಾಗಿತ್ತು. ಭಾಷೆಯೇ ವಿದ್ಯಾಭ್ಯಾಸದ ಧ್ಯೇಯವಲ್ಲ, ವಸ್ತುಗಳ ಪರಿಚಯುವನ್ನು ತನ್ನ ಇಂದ್ರಿಯುಗಳ ಮೂಲಕ ಮಾಡಿಕೊಂಡ ಮೇಲೆ ಅವುಗಳ ಭಾವನೆಗಳನ್ನು ಪ್ರತ್ಯೇಕಿಸಿ ಗುರುತು ಹಚ್ಚಲಿಕ್ಕೆ ಮಾತ್ರವೇ ಭಾಷೆಯು ಪ್ರಯೋಜನವೆಂದೂ ಮಗುವು ತನ್ನ ಪಂಚೇಂದ್ರಿಯುಗಳನ್ನು ಆಡಿಸಿ ಗೊತ್ತುಹಚ್ಚಿದ ಜ್ಞಾನವೇ ನಿಜವಾದ ಜ್ಞಾನವೆಂದೂ ಪಂಚೇಂದ್ರಿಯುಗಳ ಮೂಲಕ ಜ್ಞಾನಪಡೆಯುವುದೇ ನೈಸರ್ಗಿಕ ಅಥವಾ ಸ್ವಾಭಾವಿಕವಾದ ಮಾರ್ಗವೆಂದೂ ಪಂಚೇಂದ್ರಿಯುಗಳ ಮೂಲಕ ಜ್ಞಾನವನ್ನು ಮಗು ಪಡೆಯಬೇಕಾದರೆ ಅದರ ಸ್ವಾಭಾವಿಕವಾದ ಚಟುವಟಿಕೆಗೆ ನಿರ್ಬಂಧ ಹಾಕದೆ ಧಾರಾಳವಾಗಿ ಅವಕಾಶವನ್ನು ಕೊಡಬೇಕೆಂದೂ ಈ ನೂತನಕ್ರಮದ ಮುಖ್ಯ ಸಿದ್ಧಾಂತಗಳು. ಜ್ಞಾನ, ಧರ್ಮ, ಭಕ್ತಿ ಇವುಗಳು ಸಮಾಜದ ಧಾರಕಗಳೆಂದೂ ಬರೇ ಪುಸ್ತಕಪಾಠವಾದ ಭಾಷಾಜ್ಞಾನದಲ್ಲಿ ಹುರುಳಿಲ್ಲವೆಂದೂ ಕೊಮಿನಿಯಸ್ ಒತ್ತಿ ಹೇಳಿರುವನು.

ರೂಸೊ :– (1712—1778) ಫ್ರಾನ್ಸ್ ದೇಶದ ರೂಸೊ ಎಂಬವನು ಇದನ್ನೆ ಪುಷ್ಟೀಕರಿಸುವಾಗ "ಮಕ್ಕಳು ಸಹಜವಾಗಿಯೇ ಒಳ್ಳೆ ಸ್ವಭಾವವುಳ್ಳವು, ಜನಸಮುದಾಯದಲ್ಲಿ ಬೆರತುಕೊಂಡಾಗಲೆ ಅವುಗಳ ನಡತೆಯು ಕೆಡುವುದು, ಮಕ್ಕಳ ಸ್ವಭಾವವನ್ನು ಅರಿತಲ್ಲದೆ ಅವರ ವಿದ್ಯಾಭ್ಯಾಸವನ್ನು ಪ್ರಾರಂಭಿಸಕೂಡದು, ಮಕ್ಕಳನ್ನು ಬೇಗನೆ ಭಾಷಾಪಂಡಿತರನ್ನಾಗಿ ಮಾಡಲು ಯತ್ನಿಸುವುದು ತಪ್ಪು" ಎಂದು ತನ್ನ ಒಂದು ಗ್ರಂಥದಲ್ಲಿ ವಿಸ್ತಾರವಾಗಿ ಬರೆದನು. ಇದನ್ನೇ ಫ್ರಾನ್ಸ್ ದೇಶದ ಸರಕಾರದವರು ಮನ್ನಿಸಿದರು. ರೂಸೊ ಹೇಳಿದ ಮಾತುಗಳಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಮಕ್ಕಳ ಸ್ವಭಾವಗಳ ಪರಿಚಯು, ಗುರುವಿನ ಯೋಗ್ಯತೆ, ಮಕ್ಕಳ ಸುತ್ತಮುತ್ತಲಿನ ಸ್ಥಿತಿ ಇವುಗಳ ಕಡೆಗೆ ಗಮನಕೊಡಬೇಕು ಎಂದು ಸ್ಪಷ್ಟವಾಗುತ್ತದೆ. ಹನ್ನೆರಡು ವರುಷ ವಯಸ್ಸು ತುಂಬುವ ವರೆಗೆ ಮಕ್ಕಳ ಜ್ಞಾನ ಸಂಪಾದನೆಗೆ ಅವುಗಳ ಇಂದ್ರಿಯುಗಳೇ ದಾರಿಯೆಂತಲೂ ಆ ಮೇಲೆ 15ನೆ ವರ್ಷ ಪ್ರಾಯ ದಾಟುವ ವರೆಗೆ ಉಪದೇಶಪೂರ್ವಕ ಬೋಧನೆ ಸಿಗಬೇಕೆಂತಲೂ ಅನಂತರ ಇತರ ಮನುಷ್ಯರಿಗೂ ತನಗೂ ಇರುವ ಸಂಬಂಧ ತಿಳಿಯುವುದಕ್ಕೆ ಲೋಕಚರಿತ್ರೆ, ದೇಶಸಂಚಾರ ಇವುಗಳನ್ನು ಕೈಕೊಳ್ಳ

ಬೇಕೆಂತಲೂ ರೂಸೊ ಪ್ರತಿಪಾದಿಸಿದನು. ಈತನು ಬರೆದ ಪುಸ್ತಕದ ಪ್ರಚಾರದಿಂದ ಶಿಕ್ಷಣವು ಐಚ್ಛಿಕವಾಗಿ ಇಷ್ಟವಿದ್ದವರು ಮಾತ್ರವೇ ಸಂಪಾದನೆ ಮಾಡಿಕೊಳ್ಳತಕ್ಕ ವಿಷಯವೆಂಬ ಭಾವನೆಯು ತೊಲಗಿ, ಸಮಾಜಸ್ಥಿತಿಯು ಒಳಿತಾಗುವಂತೆ ಶಿಕ್ಷಣ ಪ್ರಚಾರಕ್ಕೆ ಸರಕಾರವೇ ಸೊಂಟಕಟ್ಟಬೇಕೆಂದು ಅಭಿಪ್ರಾಯವು ಆಗಿನ ಪಾಶ್ಚಾತ್ಯ ರಾಜ್ಯಗಳಲ್ಲೆಲ್ಲ ಅಂಕುರಿಸಿತು.

ಪೆಸ್ಟಲೊಟ್ಸಿ:—(1746—1827)—ಕೊಮಿನಿಯಸ್ ಮತ್ತು ರೂಸೊ ಜನರ ಕಣ್ದೆರೆದರು. ಆದರೆ ಅವರು ಪ್ರತಿಪಾದಿಸಿದ ತತ್ವಗಳನ್ನು ಕಾರ್ಯರೂಪದಲ್ಲಿ ತರುವುದು ಪೆಸ್ಟಲೊಟ್ಸಿಯ ಭಾಗಕ್ಕೆ ಬಿತ್ತು. ಪೆಸ್ಟಲೊಟ್ಸಿಯು ಸ್ವಿಟ್ಸರಲೆಂಡ ದೇಶದ ಜೂರಿಚ್ ಪಟ್ಟಣದಲ್ಲಿ ಜನಿಸಿದನು. ಶಿಕ್ಷಣ ಹೊಂದುವ ವಯಸ್ಸಿನಲ್ಲಿ ಇವನ ನಡತೆಯು ವಿಲಕ್ಷಣವಾಗಿ ತೋರಿ, ಈತನು ಎಲ್ಲರ ಪರಿಹಾಸ್ಯಕ್ಕೆ ಗುರಿಯಾಗುತಿದ್ದರೂ, ಅವನ ಸ್ವಾಭಾವಿಕ ನಿಸ್ವಾರ್ಥತೆಯು ಕ್ರಮೇಣ ಅವನನ್ನು ಅವನ ಸಹಪಾಠಿಗಳು ಪ್ರೀತಿಸುವಂತೆ ಮಾಡಿತು. ಇವನು ರೂಸೊ ಬರೆದ ಗ್ರಂಥವನ್ನು ಓದಿ, ಮೊದಲು ಕೃಷಿಕನಾಗಬೇಕೆಂದು ಮಾಡಿದ ಪ್ರಯತ್ನವು ನಿಷ್ಫಲವಾಯಿತು. ಆ ಮೇಲೆ ಬಡ ಮಕ್ಕಳು ವಿದ್ಯಾಭ್ಯಾಸವಿಲ್ಲದೆ ಅಲೆದಾಡುತ್ತಿರುವುದನ್ನು ನೋಡಿ ಅವನು ಕನಿಕರಪಟ್ಟು, ಅವರ ಸ್ವಾಭಾವಿಕ ಚಟುವಟಿಕೆಗಳನ್ನು ಪ್ರಯೋಗಿಸಿ ಅವರಲ್ಲಿ ಸುಧಾರಣೆ ಉಂಟುಮಾಡಲು ಉದ್ಯುಕ್ತನಾದನು. ಓದುಬರಹಗಳೊಡನೆ ಜೀವನದ ವೃತ್ತಿಗಳನ್ನು ಕಲಿಸಬೇಕೆಂದೂ ಅವನು ತೊಡಗಿದನು. ಆಗ ಪಡೆದ ಅನುಭವದಿಂದ ಅವನು ಒಂದು ಗ್ರಂಥವನ್ನು ಬರೆದು ಪ್ರಕಾಶಪಡಿಸಿದನು. “ಮಕ್ಕಳಲ್ಲಿ ತುಂಬಿದ್ದ ಮೌಢ್ಯದಿಂದ ನನಗೆ ವ್ಯಥೆಯಾಗಲಿಲ್ಲ. ದೇವರು ಅವರಿಗೆ ಕೊಟ್ಟಿರುವ ಸಹಜವಾದ ಶಕ್ತಿಗಳನ್ನೆ ವಿದ್ಯಾಭ್ಯಾಸಕ್ಕೆ ಆಧಾರವಾಗಿ ಇಟ್ಟುಕೊಳ್ಳಬೇಕೆಂದು ನಾನು ಯೋಚಿಸಿದೆನು. ಅವರ ಒರಟುತನ, ಲಜ್ಜೆ, ಇವುಗಳ ಹಿಂಭಾಗದಲ್ಲಿ ಅತ್ಯುತ್ತಮವಾದ ಗುಣಗಳು ಅಡಗಿರುವವೆಂದು ನಾನು ತಿಳಿದಿದ್ದೆನು. ಮನುಷ್ಯನಿಗೆ ಅವನು ನಿತ್ಯವೂ ಮಾಡಬೇಕಾದ ಕೆಲಸಗಳನ್ನು ತಿಳಿಸುವಾಗಲೇ ಜನರೊಳಗೆ ಪರಸ್ಪರ ಇರಬೇಕಾದ ಸಂಬಂಧವನ್ನು ತಿಳಿಸುವುದಕ್ಕೂ ಅವನ ಸಹಜವಾದ ಶಕ್ತಿಗಳನ್ನು ವೃದ್ಧಿಗೊಳಿಸುವುದಕ್ಕೂ ಅವಕಾಶವಿರುವುದೆಂದು ನಾನು ತಿಳಿ

ದಿದ್ದೆನು.” ಈ ಬಗೆಯ ಧ್ಯೇಯವನ್ನಿಟ್ಟುಕೊಂಡು ಪೆಸ್ಟಲೊಟ್ಸಿಯು ಮಾಡಿದ ಪ್ರಯತ್ನಗಳು ನಿರರ್ಥಕವಾಗಲಿಲ್ಲ. ಕೆಲವು ದಿನಗಳಲ್ಲಿಯೇ ತನ್ನ ಶಾಲೆಗೆ ಬರುವ ಮಕ್ಕಳ ಗುಣಸ್ವಭಾವಗಳೇ ಬೇರೆಯಾದವೆಂದು ಆತನು ಹೇಳುತ್ತಾನೆ. ಮನೆಯಲ್ಲಿ ತಾಯಿತಂದೆಗಳು ಮಕ್ಕಳಿಗೆ ತೋರಿಸುವ ಪ್ರೀತಿಯು ಶಾಲೆಗಳಲ್ಲಿ ಉಪಾಧ್ಯಾಯ ಮತ್ತು ಶಿಷ್ಯವರ್ಗದೊಳಗೆ ವ್ಯಾಪಿಸಿದ್ದರೆ ಮಾತ್ರ ಮಕ್ಕಳ ಜೀವನವು ಶಾಲೆಯಲ್ಲಿ ಸುಖಜೀವನವಾಗುತ್ತದೆ ಎನ್ನುವಾಗ, ಆ ಕಾಲದಲ್ಲಿ ಇತರ ಶಾಲೆಗಳಲ್ಲಿ ರೂಢಿಯಲ್ಲಿರುವ ಕಠಿಣ ತರದ ಶಿಕ್ಷೆಯ ಪೀಡನವನ್ನು ಅವನು ನಿರ್ಮೂಲ ಮಾಡುವುದಕ್ಕೆ ಟೊಂಕಕಟ್ಟಿದ್ದು, ತನ್ನ ಶಾಲೆಗಳಲ್ಲಿ ತನ್ನ ತತ್ತ್ವಗಳನ್ನು ಸಂಪೂರ್ಣವಾಗಿ ವ್ಯವಹಾರಕ್ಕೆ ತಂದಿದ್ದನು ಎಂದು ಸ್ಪಷ್ಟವಾಗುತ್ತಿದೆ.

ಸ್ಟಾನ್ಸ್ ನಗರದಲ್ಲಿ ಪೆಸ್ಟಲೊಟ್ಸಿಯು ಮಾಡಿದ ಕೆಲಸಗಳ ಮೇಲಿಂದ ಒಬ್ಬ ವಿದ್ವಾಂಸನು ಅವನ ಶಿಕ್ಷಣಪದ್ಧತಿಯ ಮೂಲತತ್ವಗಳನ್ನು ಹೀಗೆಂದು ಎತ್ತಿ ಬರೆದಿರುವನು:—(1) ಮನುಷ್ಯನ ಜ್ಞಾನಾಭಿವೃದ್ಧಿಗೆ ಇಂದ್ರಿಯಗಳಿಂದ ಸಂಗ್ರಹವಾದ ಅನುಭವವೇ ಮೂಲಾಧಾರವು. (2) ವಿದ್ಯಾಭ್ಯಾಸದ ಪ್ರತಿಯೊಂದು ಅಂಶವನ್ನು ಮಕ್ಕಳ ಗ್ರಹಣಶಕ್ತಿಗೆ ಅನುಕೂಲವಾಗುವ ರೀತಿಯ ಸುಲಭಕ್ರಮಗಳಿಂದ ಸಾಗಿಸಬೇಕು. (3) ಪಾಠಕ್ರಮವು ಮನೆಯಲ್ಲಿ ತಾಯಿತಂದೆಗಳೂ ಸಹ ಅನುಸರಿಸುವಂತೆ ಸುಲಭ ರೀತಿಯದಾಗಬೇಕು. (4) ಒಮ್ಮೆ ಕಲಿಸಿದ ಅಂಶವು ಮುಂದಟ್ಟಾಗದೆ ಮುಂದಕ್ಕೆ ಹೆಜ್ಜೆ ಇಡಕೂಡದು (5) ಚಿತ್ರವನ್ನು ಬಾಲ್ಯದಿಂದಲೂ ಬರೆಯುವಂತೆ ಮಕ್ಕಳಿಗೆ ಅಭ್ಯಾಸಮಾಡಿಸಬೇಕು. ಈ ತತ್ವಗಳನ್ನು ಅನುಷ್ಠಾನದಲ್ಲಿ ತರುವುದಕ್ಕೆ ಅವನು ಹಲವು ಕಡೆಗಳಲ್ಲಿ ಶಾಲೆಗಳನ್ನು ತಾನೇ ಸ್ಥಾಪಿಸಿದನು. ಕೆಲವನ್ನು ಕಾರಣಾಂತರಗಳಿಂದ ಮುಚ್ಚಿಬಿಡಬೇಕಾಯಿತು. ಆದರೂ ಇವನು ಸ್ಥಾಪಿಸಿದ ಶಾಲೆಗಳ ಕೀರ್ತಿಯು ಯುರೋಪದ ಹಲವು ದೇಶಗಳಿಗೆ ಹರಡಿ, ಈ ಕ್ರಮಗಳನ್ನು ಕಲಿತುಕೊಳ್ಳುವುದಕ್ಕೆ ಜನರು ಅಲ್ಲಿಂದ ಬರುತ್ತಿದ್ದರು. ಚಿತ್ರ ಬರೆಯುವುದಕ್ಕೆ ಪ್ರಾಶಸ್ತ್ಯ ಕೊಟ್ಟವರಲ್ಲಿ ಇವನೇ ಮೊದಲಿಗನು. ಚಿತ್ರ ಬರೆಯುವುದಕ್ಕೆ ಇವನು ಚೌಕದ ಮನೆಗಳನ್ನು ವಿಶೇಷವಾಗಿ ಉಪಯೋಗಿಸುತಿದ್ದನು. ಇದರಿಂದ ರೇಖಾಗಣಿತಕ್ಕೂ ಭಿನ್ನರಾಶಿಗಳ ಜ್ಞಾನಕ್ಕೂ ಸುಲಭ

ದಾರಿಯಾಗುತಿತ್ತು. ಚಿತ್ರ ಬರೆಯಲು ಸ್ವಲ್ಪ ಅಭ್ಯಾಸವಾದ ಮೇಲೆ ಅವನು ಅಕ್ಷರಾಭ್ಯಾಸವನ್ನು ಮಾಡಿಸುತ್ತಿದ್ದನು. ಓದುಗಾರಿಕೆಯಲ್ಲಿ ಮೊದಲು ಅಕ್ಷರಜ್ಞಾನವನ್ನು ಮಾಡಿಸಿ ಅಲ್ಲಿಂದ ಪದಗಳು, ವಾಕ್ಯಗಳು, ಮುಂತಾದ್ದವನ್ನು ಕಲಿಸುವ ವಾಡಿಕೆಯನ್ನು ಮುರಿದು, ಮೊದಲು ಸಂಭಾಷಣೆಯಲ್ಲಿ ವಾಕ್ಯಗಳನ್ನು, ಅನಂತರ ವಾಕ್ಯಗಳಲ್ಲಿರುವ ಪದಗಳನ್ನು, ಅನಂತರ ಪದಗಳಲ್ಲಿರುವ ಅಕ್ಷರಗಳನ್ನು ಕಲಿಸುವಂತೆ ಪ್ರಥಮತಃ ಆರಂಭಿಸಿದವನು ಇವನೇ. ಸಂಖ್ಯಾಶಾಸ್ತ್ರವನ್ನು ವಸ್ತುನಿದರ್ಶನದ ಮೂಲಕ ಇವನು ಕಲಿಸುತಿದ್ದನು. ಆಟಗಳು, ಅಂಗಸಾಧನೆ, ಕೈಕೆಲಸ ಇವು ಇವನ ಶಾಲೆಗಳಲ್ಲಿ ಓದುಬರಹಗಳಷ್ಟೆ ಉಚ್ಚಸ್ಥಾನವನ್ನು ಪಡೆದಿದ್ದವು. ಭೂಗೋಳವನ್ನು ಪುಸ್ತಕದ ಸಹಾಯದಿಂದ ಕಲಿಸುವ ಬದಲಾಗಿ ಇವನು ಆಯಾ ಸ್ಥಳದ ಸ್ಥಿತಿಗತಿಯನ್ನು ತೋರಿಸಿ, ಆ ಸ್ಥಳದ ರಚನೆಯನ್ನು ಜೇಡಿಮಣ್ಣಿನಿಂದ ಮಾಡಿಕೊಳ್ಳುವಂತೆ ಮಕ್ಕಳಿಗೆ ಪ್ರೋತ್ಸಾಹಿಸುತಿದ್ದನು. ಹೀಗನ್ನುವಾಗ ಈಗ ಸುಧಾರಿತ ಶಿಕ್ಷಣವೆಂದು ಅನ್ನಿಸಿಕೊಳ್ಳುವ ಕ್ರಮಗಳಿಗೆಲ್ಲ ಪೆಸ್ಟಲೊಟ್ಸಿಯೆ ಪಿತೃಪ್ರಾಯನಾಗಿದ್ದನೆನ್ನಬೇಕು. ಪ್ರಪಂಚದ ಬಾಲ್ಯಶಿಕ್ಷಣದಲ್ಲಿ ಇವನು ಮಾಡಿದ ಉಪಕಾರವು ಅತಿ ಮಹತ್ವದ್ದಾಗಿದೆ.

ಫ್ರೊಬೆಲ:—(1782—1852) ಶಿಕ್ಷಣವು ಸೃಷ್ಟಿಪರೀಕ್ಷಣದ ಮೂಲಕ ಆಗಬೇಕೆಂದೂ ಇದಕ್ಕೆ ಇಂದ್ರಿಯಗಳೇ ದಾರಿಯೆಂದೂ ಪೆಸ್ಟಲೊಟ್ಸಿಯು ತೋರ್ಪಡಿಸಿದನಾದರೆ ಅಂಥ ಶಿಕ್ಷಣವು ವ್ಯವಸ್ಥಿತ ಕ್ರಮದಲ್ಲಿ ಸಾಗುವಂತೆ ಫ್ರೊಬೆಲನು ಪ್ರಯತ್ನಿಸಿದನು. ಮಕ್ಕಳಲ್ಲಿ ಸ್ವಾಭಾವಿಕವಾಗಿ ಬೀಜರೂಪದಲ್ಲಿರುವ ಶಕ್ತಿಗಳನ್ನು ಕ್ರಮವಾಗಿ ವ್ಯವಸಾಯದಿಂದ ವೃದ್ಧಿಪಡಿಸಿದರೆ ಮುಂದೆ ಜ್ಞಾನಾರ್ಜನೆಗೆ ಈ ಇಂದ್ರಿಯಗಳು ಕಾರಣವಾಗುವುದರಿಂದ ಇಂದ್ರಿಯಪಾಟವದ ಕಡೆಗೆ ಅವನು ತನ್ನ ದೃಷ್ಟಿಯನ್ನು ತಿರುಗಿಸಿದನು. ಉಪಾಧ್ಯಾಯನು ಹೇಳಿಕೊಟ್ಟದ್ದನ್ನು ಅದು ವ್ಯವಹಾರಕ್ಕೆ ಅಗತ್ಯವಿರಲಿ, ಇಲ್ಲದೆ ಇರಲಿ, ಬಾಯಿಪಾಠ ಮಾಡಿ, ಪಾಠಗಳ ಕಡೆಗೆ ಜಿಗುಪ್ಸೆ ಹುಟ್ಟಿಸುವ ಬದಲಾಗಿ ಮಕ್ಕಳಲ್ಲಿರುವ ಸ್ವಾಭಾವಿಕವಾದ ಚಟುವಟಿಕೆ, ಅನುಕರಣ ಶಕ್ತಿಗಳನ್ನು ಪ್ರಯೋಗಕ್ಕೆ ತಂದು, ಆ ಮಕ್ಕಳ ಇಂದ್ರಿಯಶಕ್ತಿಯನ್ನು ವರ್ಧಿಸಿದರೆ ಮುಂದೆ ಜ್ಞಾನವನ್ನು ತಮಗೆ ಬೇಕಾದಾಗ ಆ ಮಕ್ಕಳು ತಾವಾಗಿಯೇ ಸಂಪಾದಿಸಿಕೊಳ್ಳಬಹುದು ಎಂಬದನ್ನು ಫ್ರೊಬೆಲನು ಪ್ರತಿ

ಪಾದಿಸಿ, ಅಂಥ ಶಿಕ್ಷಣಕ್ಕೆ ಅನುಸಾರವಾದ ಸಾಧನೋಪಕರಣಗಳನ್ನು ಒದಗಿಸಿಕೊಂಡನು.

ಇವನು ಜರ್ಮನಿಯ ತುರಿಂಜಿಯಾ ಕಾಡುಪ್ರದೇಶದ ಒಬರ್‌ವೀಸ್‌ಬೇಕ್ ಎಂಬ ಹಳ್ಳಿಯಲ್ಲಿ ಹುಟ್ಟಿದನು. ಇವನ ತಂದೆಯು ತೋಟದ ಕೆಲಸದಲ್ಲಿ ಆಸಕ್ತಿ ಇದ್ದವನಾದ ಕಾರಣ ಮಗನಲ್ಲಿ ಬಾಲ್ಯದಲ್ಲಿಯೂ ತೋಟಗಾರಿಕೆಯಲ್ಲಿ ಪ್ರೀತಿ ನೆಲಸಿತು. ಇವನು ಪೆಸ್ಟಲೊಟ್ಸಿಯ ಶಿಷ್ಯರಲ್ಲೊಬ್ಬನಾದ ಗ್ರೂನರ್ ಎಂಬವನ ಶಾಲೆಯಲ್ಲಿ ಸಹಾಯಕನಾದನು. ಆಗ್ಗೆ ಇವನಿಗೆ ಬರೆ ಇಪ್ಪತ್ತು ಇಪ್ಪತ್ತೆರಡು ವರ್ಷ ಪ್ರಾಯ. ಉಪಾಧ್ಯಾಯವೃತ್ತಿಯಲ್ಲಿ ಅವನಿಗೆ ಅಭಿರುಚಿ ಹತ್ತಿ, ಪೆಸ್ಟಲೊಟ್ಸಿಯ ಶಿಕ್ಷಣಪದ್ಧತಿಯನ್ನು ಕಲಿಯುವುದಕ್ಕೆ ಅವನೇ ವರ್ಡನ್ ನಗರಕ್ಕೆ ಹೋದನು. ಅಲ್ಲಿ ಪೆಸ್ಟಲೊಟ್ಸಿಯು ಭೂವಿವರಣೆ ಸಸ್ಯಶಾಸ್ತ್ರ ಮುಂತಾದನ್ನು ಕಲಿಸುವ ಕ್ರಮವು ಅವನಿಗೆ ಮನಗಂಡಿತು. ಆದರೆ ಅಲ್ಲಿ ಓದು ಮತ್ತು ಬರಹಗಳಿಗೆ ಪರಸ್ಪರ ಸಂಬಂಧವಿಲ್ಲೆಂತಲೂ ಭೂವಿವರಣೆಗೂ ಸಸ್ಯಶಾಸ್ತ್ರಕ್ಕೂ ಇರಬೇಕಾದ ಸಂಬಂಧವು ಇದ್ದಿಲ್ಲವೆಂತಲೂ ಆತನಿಗೆ ತೋರಿತು. ಎಲ್ಲಾ ಪಾಠಗಳಲ್ಲಿ ಪರಸ್ಪರ ಅನುಬಂಧವಿರುವುದು ನ್ಯಾಯವಾದ ಶಿಕ್ಷಣಮಾರ್ಗವೆಂದು ನಿರ್ಧಾರ ಮಾಡಿ, ವಿಶ್ವವಿದ್ಯಾಲಯಗಳಲ್ಲಿ ಭಾಷಾಜ್ಞಾನ ಮತ್ತು ಪ್ರಾಕೃತಿಕ ಶಾಸ್ತ್ರಗಳನ್ನು ಅವನು ಮೊದಲು ಅನುಭವ ಮಾಡಿಕೊಂಡನು. ಆಗ ಅವನಿಗೆ ಪ್ರಕೃತಿಯಲ್ಲಿ ಎಲ್ಲಾ ರಚನೆಗಳಿಗೂ ಒಂದು ವ್ಯವಸ್ಥೆ ಇದೆ, ಅದೇ ಬಗೆಯ ವ್ಯವಸ್ಥೆಯನ್ನು ಶಿಕ್ಷಣಕ್ರಮಕ್ಕೂ ಪ್ರಯೋಗಿಸಬೇಕೆಂದು ಖಚಿತವಾಯಿತು. ಅದರನಂತರ ತನ್ನಿಬ್ಬರು ಮಿತ್ರರೊಡನೆ ಮಕ್ಕಳಿಗೆ ಆಟಗಳ ಮೂಲಕ ಶಿಕ್ಷಣವನ್ನು ಕೊಡುವ ಶಾಲೆಯನ್ನು ಆತನು ಸ್ಥಾಪಿಸಿದನು. ರಟ್ಟಿನ ಕೆಲಸ, ಕಾಗದ ಹೆಣೆಯುವುದು, ಚಿತ್ರ, ಗಾಯನ ಯುಕ್ತವಾದ ಆಟಗಳು, ಮಣ್ಣಿನ ಕೆಲಸ, ಕಥೆ ಇವನ್ನೆಲ್ಲ ಈ ತನ್ನ ನೂತನ ಶಾಲೆಯಲ್ಲಿ ಆತನು ಪ್ರಾರಂಭಿಸಿದನು. ಇವನು ಶಾಲೆಗಳನ್ನು (1) ಏಳು ವರ್ಷದೊಳಗಿನ ಮಕ್ಕಳ ಶಾಲೆ, (2) ಆ ವಯಸ್ಸು ಮೀರಿದ ಮಕ್ಕಳ ಪ್ರಾಥಮಿಕ ಶಾಲೆ, (3) ಕಸಬುಗಳ ಶಾಲೆ, (4) ತಾಯಿಯರ ಶಾಲೆ ಹೀಗೆ ನಾಲ್ಕು ವಿಧಗಳಾಗಿ ವರ್ಗೀಕರಿಸಿದನು. ಕೊನೆಯ ಶಾಲೆಯಲ್ಲಿ ಮಕ್ಕಳ ಸಂಗೋಪನಕ್ಕೆ ಬೇಕಾದ ಅನುಭವವು ಹೆಣ್ಣು ಮಕ್ಕಳಿಗೆ ಸಿಗುತಿತ್ತು.

ಇವನು ಅಲ್ಲಲ್ಲಿ ಶಾಲೆಗಳನ್ನು ಸ್ಥಾಪಿಸಿ, ಚಿಕ್ಕ ಮಕ್ಕಳ ಬೋಧನೆಗೆ ಸ್ತ್ರೀಯರೇ ಯೋಗ್ಯರೆಂದು ತಿಳಿದು, ಉಪಾಧ್ಯಾಯಿನಿಯರಿಗೆ ಶಿಕ್ಷಣದ ಕ್ರಮವನ್ನು ಹೇಳಿಕೊಡಲಿಕ್ಕೆ ಒಂದು ಟ್ರೈನಿಂಗ್ ಶಾಲೆಯನ್ನೂ ಸ್ಥಾಪಿಸಿದನು. ಇವನು ಮಕ್ಕಳ ಶಿಕ್ಷಣ ಕ್ರಮಕ್ಕೆ ವಿಶೇಷ ವ್ಯವಸ್ಥೆಯನ್ನು ಮಾಡಿ ‘ಕಿಂಡರಗಾರ್ಟನ್’ ಶಾಲೆಗಳನ್ನು ಸ್ಥಾಪಿಸಿದರಿಂದ ಮಕ್ಕಳ ಶಿಕ್ಷಣದಲ್ಲಿ ಇವನ ಕ್ರಮಕ್ಕೆ ‘ಕಿಂಡರಗಾರ್ಟನ್’ ಎಂಬ ಹೆಸರು ಬಂತು.

‘ಕಿಂಡರಗಾರ್ಟನ್’ (ಮಕ್ಕಳ ತೋಟ)

4ನೆ ಅಧ್ಯಾಯ.

‘ಕಿಂಡರಗಾರ್ಟನ್’ ಎಂಬ ಜರ್ಮನ್ ಶಬ್ದಕ್ಕೆ ‘ಮಕ್ಕಳ ತೋಟ’ವೆಂದು ಅರ್ಥ. ಶಾಲೆಯೆ ತೋಟ, ಮಕ್ಕಳೇ ಅದರಲ್ಲಿ ಬಳೆಯುವ ಸಸಿಗಳು, ಉಪಾಧ್ಯಾಯನೇ ತೋಟಗಾರನು ಎಂದು ಫ್ರೋಬೆಲನು ಕಲ್ಪಿಸಿ, ಈ ವಿಚಿತ್ರವಾದ ಹೆಸರನ್ನು ಸಣ್ಣ ಮಕ್ಕಳ ಶಾಲೆಗಳಿಗೆ ಕೊಟ್ಟನು. ನೆಲವನ್ನು ಹದಗೊಳಿಸಿ, ಬಿಸಿಲು ಗಾಳಿ ನೀರು ಚೆನ್ನಾಗಿ ಸಸಿಗಳಿಗೆ ಸಿಗುವಂತೆ ಏರ್ಪಡಿಸಿ, ಅವಕ್ಕೆ ಸರಿಯಾದ ಗೊಬ್ಬರವನ್ನಿಟ್ಟರೆ ಮುಂದೆ ಆ ಸಸಿಗಳು ಹುಲುಸಾಗಿ ಬೆಳೆದು, ಒಳ್ಳೇ ಹೂವನ್ನೂ ಫಲವನ್ನೂ ಕೊಡುವವು. ಹಾಗೆಯೇ ಮಕ್ಕಳಲ್ಲಿ ಸ್ವಾಭಾವಿಕವಾದ ಶಕ್ತಿಗಳಿಗೆ ತಕ್ಕ ವ್ಯವಸಾಯ ಮಾಡಿ ಅವು ಸ್ಫೂರ್ತಿಗೆ ಬರುವಂತೆ ಮಾಡಿದರೆ, ಮಾತ್ರ ಮುಂದೆ ಅವು ತಾವಾಗಿಯೇ ಜ್ಞಾನಾರ್ಜನೆ ಮಾಡಲು ಶಕ್ತರಾಗುವವು ಎಂಬದು ಫ್ರೋಬೆಲನ ಮತ. ಈ ಮತಕ್ಕೆ ಅನುಸಾರವಾಗಿ ಶಿಕ್ಷಣ ದೊರೆಯುವ ಶಾಲೆಗಳಿಗೂ ಮುಂದೆ ಅಲ್ಲಿ ಕಲಿಸುವ ಕ್ರಮಕ್ಕೂ ‘ಕಿಂಡರಗಾರ್ಟನ್’ ಎಂಬ ಹೆಸರು ಬಂತು. ಈ ಪದ್ಧತಿಯ ಸ್ವಭಾವವೇನಂದರೆ :—(1) ಮಕ್ಕಳಲ್ಲಿ ತುಂಬಾ ಚಟುವಟಿಕೆಯಿದೆ. ಆ ಚಟುವಟಿಕೆಗೆ ಇಂಬು ಕೊಟ್ಟರೆ ಮಕ್ಕಳು

ಇತರರಂತೆ ಹಾರುವುದು, ಓಡುವುದು ಮುಂತಾದ ಅಂಗಚೇಷ್ಟೆಗಳಿಂದ ತಮ್ಮ ದೇಹಶಕ್ತಿಯನ್ನು ವರ್ಧಿಸಿಕೊಳ್ಳುತ್ತವೆ. (2) ಇದಲ್ಲದೆ ಇತರರು ಮಾಡಿದಂತೆ ತಾನೂ ಮಾಡಬೇಕೆಂಬ ಅನುಕರಣ ಶಕ್ತಿಯು ಮಕ್ಕಳಲ್ಲಿ ಇರುವುದರಿಂದ ಅವು ತಾನಾಗಿಯೇ ಅನೇಕ ವಸ್ತುಗಳ ಪರಿಶೋಧನೆಯನ್ನು ಮಾಡಿಕೊಳ್ಳುತ್ತವೆ. (3) ಈ ಪರಿಶೋಧನೆಯ ಕಾರ್ಯದಲ್ಲಿ ಅವು ತಮಗೆ ಸಿಕ್ಕಿದ ವಸ್ತುಗಳನ್ನೆಲ್ಲ ಭೇದಿಸಿ ಅವುಗಳಲ್ಲಿ ಏನಿದೆ ಎಂದು ನೋಡುತ್ತ ಅವನ್ನು ಪುನಃ ರಚಿಸಲಿಕ್ಕೆ ನೋಡುತ್ತಿವೆ. (4) ಮಕ್ಕಳಲ್ಲಿ ಒಂಟಿಯಾಗಿರಲು ಮನಸ್ಸಿಲ್ಲ; ಯಾವಾಗಲೂ ಇತರರ ಜತೆಯಲ್ಲಿರುವುದೇ ಅವುಗಳಿಗೆ ಇಷ್ಟ. ಇತರರ ಸಹವಾಸದಲ್ಲಿ ಮಗು ಸುಖ ಪಡುತ್ತದೆ. (5) ಮಕ್ಕಳಲ್ಲಿ ಸ್ವಾಭಾವಿಕವಾದ ಗುಣಗಳು ಕೆಲವು ಇವೆ. ಅವುಗಳಲ್ಲಿ ಬಾಧಕವಾದುವುಗಳನ್ನು ತಗ್ಗಿಸಿ ಸದ್ಗುಣಗಳನ್ನು ಬೆಳೆಯುವಂತೆ ಮಾಡಬೇಕು.

ಈ ಕಾರಣದಿಂದ ಫ್ರೊಬೆಲನು ಇಂಥ ಶಾಲೆಗಳಲ್ಲಿ ಉಪಯೋಗಿಸುವ ಬಗ್ಗೆ ಹಲವು ಉಪಕರಣಗಳನ್ನು ಒದಗಿಸಿಕೊಂಡನು. ಇವುಗಳ ಮೂಲಕ ಆಟದ ರೂಪದಲ್ಲಿ ಓದುಬರಹ ಲೆಕ್ಕಗಳ ಅಸ್ತಿವಾರವನ್ನು ಹಾಕುವುದಲ್ಲದೆ ಮಕ್ಕಳ ಇಂದ್ರಿಯ ಪಾಟವವನ್ನು ವೃದ್ಧಿಸುವುದಕ್ಕೆ ಅವನು ಹಂಚಿಕೆಯಿಟ್ಟನು. ಈ ಕ್ರಮದಲ್ಲಿ ಶಿಕ್ಷಣವು ಮಕ್ಕಳಿಗೆ ಮೂರು ವರ್ಷ ವಯಸ್ಸು ದಾಟಿದೊಡನೆ ಅವುಗಳ ತಾಯಿತಂದೆಗಳಿಂದಲೆ ಕೊಡಲ್ಪಡುವುದು ಯುಕ್ತವೆಂದು ಅವನು ಸೂಚಿಸಿದನು. ಶಾಲೆಗಳಲ್ಲಿ ಈ ಕ್ರಮದಲ್ಲಿ ಪಾಠ ಮಾಡುವ ಉಪಾಧ್ಯಾಯನಿಗೆ ಆ ಮಕ್ಕಳ ಮೇಲೆ ಧಾರಾಳವಾದ ಮಮತೆಯೂ ಸಹಾನುಭೂತಿಯೂ ಇದ್ದು, ಆತನು ತಾನು ಮೇಲಿನ ಅಂತಸ್ತಿನಲ್ಲಿದ್ದೇನೆ ಎಂಬ ಭಾವನೆಯನ್ನು ಬಿಟ್ಟು, ಮಕ್ಕಳ ಅಂತಸ್ತಿಗೆ ಇಳಿದು, ಅವುಗಳ ಜತೆಯಲ್ಲಿ ಒಡನಾಡಿಕೊಂಡಿರಬೇಕು ಎಂದು ಫ್ರೊಬೆಲನು ಸ್ಪಷ್ಟವಾಗಿ ಹೇಳುತ್ತಾನೆ. ಗಂಡಸರಿಗಿಂತ ಹೆಂಗಸರಲ್ಲಿ ತಾಳ್ಮೆಯೂ ಹೃದಯಮಾರ್ದವವೂ ವಿಶೇಷವಾಗಿರುವುದರಿಂದ ಹೆಂಗಸರೇ ಸಣ್ಣ ಮಕ್ಕಳ ಶಿಕ್ಷಣ ಕಾರ್ಯಕ್ಕೆ ಯೋಗ್ಯರೆಂದು ಫ್ರೊಬೆಲನ ಅಭಿಪ್ರಾಯ.

ಫ್ರೊಬೆಲನ ಉಪಕರಣಗಳು :— ಫ್ರೊಬೆಲನು ತನ್ನ ಕ್ರಮಕ್ಕೆ ವ್ಯವಸ್ಥೆ ಮಾಡುವ ಕಾಲದಲ್ಲಿ ಬೇರೆ ಬೇರೆ ದೇಶಗಳನ್ನು ಸಂಚರಿಸಿದಾಗ ಅಲ್ಲಿ

ಮಕ್ಕಳು ಸಾಮಾನ್ಯವಾಗಿ ವಿನಿಯೋಗಿಸುವ ವಸ್ತುಗಳನ್ನು ಸೇರಿಸಿ ಒಂದು ಪಟ್ಟಿಯನ್ನು ತಯಾರಿಸಿದನು. ಅವು ಯಾವುವೆಂದರೆ :—

(1) ಆರು ದಾರಗಳಿಗೆ ತೂಗಿಸಿರುವ ಆರು ಬಣ್ಣದ ಆರು ಚೆಂಡುಗಳು.

(2) ಮರದ ಗೋಲ, ಘನ, ಕೊಳವಿಯಾಕಾರ.

(3) ಎಂಟು ಸಣ್ಣ ಘನಗಳಿಂದ ಕೂಡಿರುವ ಒಂದು ದೊಡ್ಡ ಘನ.

(4) ಎಂಟು ಇಟ್ಟಿಗೆಗಳನ್ನು ಒಳಕೊಂಡಿರುವ ಒಂದು ದೊಡ್ಡ ಘನ.

(5) ಇಪ್ಪತ್ತೇಳು ಘನಗಳನ್ನು ಒಳಕೊಂಡಿರುವ ಒಂದು ದೊಡ್ಡ ಘನ. ಇದರಲ್ಲಿ ಮೂರು ಘನಗಳು ಎರಡು ಹೋಳಾಗಿಯೂ ಮತ್ತೆ ಮೂರು ಘನಗಳು ನಾಲ್ಕು ಹೋಳಾಗಿಯೂ ಸೀಳಲ್ಪಟ್ಟಿರುವವು. ಉಳಿದ 21 ಸಂಪೂರ್ಣ ಘನಗಳು.

(6) ಇಪ್ಪತ್ತೇಳು ಇಟ್ಟಿಗೆಗಳನ್ನು ಒಳಕೊಂಡಿರುವ ಒಂದು ದೊಡ್ಡ ಘನ: ಇವುಗಳಲ್ಲಿ ಆರು ಇಟ್ಟಿಗೆಗಳು ಪ್ರತಿಯೊಂದರಲ್ಲಿಯೂ ಎರಡೆರಡು ಚೌಕಗಳಾಗುವಂತೆ ವಿಭಾಗಿಸಿವೆ; ಇನ್ನು 4 ಉದ್ದುದ್ದಕ್ಕೆ ಎರಡು ಪಾಲಾಗಿ ಸೀಳಲ್ಪಟ್ಟಿರುವವು; ಉಳಿದ ಹದಿನೆಂಟು ಪೂರ್ಣ ಇಟ್ಟಿಗೆಗಳು.

(7) ವಿವಿಧವಾದ ಆಕೃತಿಗಳಲ್ಲಿ ಇಡುವುದಕ್ಕೆ ಅನುಕೂಲವಾದ ಚೌಕ ಮತ್ತು ತ್ರಿಭುಜಾಕೃತಿಯುಳ್ಳ ರಟ್ಟು ಅಥವಾ ತೆಳುವಾದ ಹಲಗೆ ತುಂಡುಗಳು.

(8) ಅನೇಕ ವಿಧವಾದ ಆಕೃತಿಗಳನ್ನು ರಚಿಸುವುದಕ್ಕೆ ಅನುಕೂಲವಾದ ಮರದ ಕಡ್ಡಿಗಳು.

(9) ಅನೇಕ ಆಕೃತಿಗಳನ್ನು ಮಾಡುವುದಕ್ಕೆ ಬೇಕಾದ ಕಬ್ಬಿಣದ ಉಂಗುರಗಳು, ಅರ್ಧ ಉಂಗುರ ಮತ್ತು ಕಾಲುಂಗುರಗಳು.

(10) ಚಿತ್ರ ಬರೆಯುವ ಸಾಮುಗ್ರಿಗಳು.

(11) ಕಾಗದವನ್ನು ಕೊರೆದು ಚಿತ್ರವನ್ನು ಮಾಡುವುದಕ್ಕೆ ಅನುಕೂಲಿಸುವ ಪದಾರ್ಥಗಳು.

(12) ಕಾಗದದಲ್ಲಿ ಕೊರೆದಿರುವ ರಂಧ್ರಗಳ ಮೂಲಕವಾಗಿ ಕಸೂತಿ ಹಾಕಲಿಕ್ಕಿರುವ ಸಾಮಗ್ರಿಗಳು.

(13) ಕಾಗದ ಕತ್ತರಿಸುವುದಕ್ಕೆ ಬೇಕಾದ ಸಾಮಾನುಗಳು.

(14) ಕಾಗದದಿಂದ ಚಾಪೆ ಹೆಣೆಯುವುದಕ್ಕೆ ಬೇಕಾದ ಉಪಕರಣಗಳು.

(15) ನಾನಾ ವಿಧವಾಗಿ ಜೋಡಿಸಿ ಬಗೆಬಗೆಯ ಆಕೃತಿಗಳನ್ನು ಮಾಡುವುದಕ್ಕೆ ಉಪಯೋಗಿಸುವ ತೆಳುವಾದ ಮರದ ದಬ್ಬೆಗಳು.

(16) ಅನೇಕ ಕೊಂಡಿಗಳುಳ್ಳ ಮರದ ದಬ್ಬೆಗಳು.

(17) ಸುಲಿದು ಅನೇಕ ಆಕೃತಿಗಳನ್ನು ಮಾಡಬಹುದಾದ ಉದ್ದವಾದ ಕಾಗದ ಚೂರುಗಳು.

(18) ಮಡಚಿ ಅನೇಕ ಆಕೃತಿಗಳನ್ನು ಮಾಡಬಹುದಾದ ಕಾಗದದ ಚೌಕಗಳು ಮತ್ತು ಆಯತಗಳು.

(19) ಆಕೃತಿಗಳನ್ನು ಮಾಡುವ ಬಗ್ಗೆ ವಿವಿಧ ರೀತಿಯ ಕಾಳುಗಳು.

(20) ವಿವಿಧ ಆಕೃತಿಗಳನ್ನು ಮಾಡಲಿಕ್ಕೆ ಬೇಕಾದ ಮಣ್ಣು ಮರದ ಆಯುಧಗಳು.

ಫ್ರೊಬೆಲನನಂತರ ಸೇರಿಸಿದ ಉಪಕರಣಗಳು:— ಮೇಲೆ ಹೇಳಿದ ಉಪಕರಣಗಳಲ್ಲದೆ ಮುಂದಿನ ಶಿಕ್ಷಕರಲ್ಲಿ ಕೆಲವು ಉತ್ಸಾಹಿಗಳು ಇನ್ನೂ ಕೆಲವು ಉಪಕರಣಗಳನ್ನು ಮೇಲಿನ ಪಟ್ಟಿಯಲ್ಲಿ ಕೂಡಿಸಿದರು. ಅವು ಯಾವವೆಂದರೆ:—

(1) ೫ನೆ ಉಪಕರಣದಲ್ಲಿ ಇಪ್ಪತ್ತೇಳು ಘನಗಳ ಪೈಕಿ, 12 ಪೂರ್ಣ ಘನಗಳು, ಕಾಲು ಅಂಶಗಳಾಗಿರುವ ಮೂರು ಘನಗಳು, ಮುಕ್ಕಾಲು ಆಗಿರುವ ಎಂಟು ಘನಗಳು, ಹನ್ನೆರಡು ಅರ್ಧ ಕೊಳವಿಯಾಕೃತಿಗಳು.

(2) ಏಳನೆ ಉಪಕರಣಗಳ ರಟ್ಟುಗಳ ಜತೆಯಲ್ಲಿ ಹೊಸದಾಗಿ ಸೇರಿಸಿರುವ ವೃತ್ತ, ಅರ್ಧ ವೃತ್ತ, ಕಾಲು ವೃತ್ತಗಳ ಆಕಾರಕ್ಕಿರುವ ರಟ್ಟುಗಳು.

(3) ಒಂಭತ್ತನೆಯ ಉಪಕರಣದ ತುಂಡುಗಳ ಜತೆಯಲ್ಲಿ ಮೊಟ್ಟೆಯಾಕಾರದ ಉಂಗುರಗಳು.

(4) ಹೊಯಿಗೆಯಿಂದ ಆಕೃತಿಗಳನ್ನು ಮಾಡಲಿಕ್ಕೆ ಬೇಕಾದ ಸಲಕರಣೆಗಳು.

(5) ನಾನಾ ವಿಧವಾದ ಆಕೃತಿಗಳನ್ನು ಇಡಲಿಕ್ಕೆ ಬೇಕಾದ ದಾರ.

(6) ಬಟ್ಟೆಯಿಂದ ನೂಲು ತೆಗೆದು ಅನೇಕ ಸಣ್ಣ ವಸ್ತುಗಳನ್ನು ಮಾಡುವುದಕ್ಕೆ ಬೇಕಾದ ಬಟ್ಟೆಯ ಚೂರುಗಳು.

(7) ಬೆತ್ತದಿಂದ ಹೆಣೆಯುವುದಕ್ಕೆ ಆವಶ್ಯಕವಾದ ಉಪಕರಣಗಳು.

(8) ಮಣಿಯನ್ನು ಪೋಣಿಸುವುದಕ್ಕೆ ಬೇಕಾದ ಉಪಕರಣಗಳು.

ಈ ಉಪಕರಣಗಳ ಪಟ್ಟಿಯನ್ನು ಕಂಡಾಗಲೇ ಶಿಕ್ಷಣವು ಮನೆಯಿಂದಲೇ ಪ್ರಾರಂಭವಾಗ ಬೇಕಾದೀತು ಎಂದು ಬೇರೆ ಹೇಳಬೇಕಾಗಿಲ್ಲ.

ಫ್ರೋಬೆಲನ ಶಿಕ್ಷಣದ ಉದ್ದೇಶ :— ಫ್ರೋಬೆಲನು ಇಷ್ಟು ಕೂಲಂಕಷ ರೀತಿಯಲ್ಲಿ ಶಿಕ್ಷಣವ್ಯೂಹವನ್ನು ರಚಿಸಿದಾಗ ಅವನ ಉದ್ದೇಶವೇನಾಗಿರಬಹುದು? ಮಗುವಿಗೂ ಇತರ ಜನರಿಗೂ ಇರಬೇಕಾದ ಸಂಬಂಧವನ್ನು ತಿಳಿಸಿ, ಆ ಮಗುವು ಸಮಾಜದಲ್ಲಿ ಒಂದು ಅಂಗವಾಗಿದೆ ಎಂಬದನ್ನು ಅದಕ್ಕೆ ಸ್ಪಷ್ಟಗೊಳಿಸಿ, ಅದರ ವರ್ತನವನ್ನು ಹಿಂದೆ ಹರ್ಬರ್ಟ ಸ್ಪೆನ್ಸರರ ಮಾತುಗಳಿಂದ ಉಲ್ಲೇಖಿಸಿದಂತೆ ಸಾಮಾಜಿಕ ಮತ್ತು ರಾಜಕೀಯ ನಿರ್ಬಂಧಗಳಿಗೆ ಒಳಗಾಗುವಂತೆ ಮಾಡುವುದು ಒಂದು. ಎರಡನೆಯದು, ಮಗುವಿಗೂ ಅದರ ಸುತ್ತುಮುತ್ತಲಿನ ಸೃಷ್ಟಿಗೂ ಇರುವ ಸಂಬಂಧವನ್ನು ವ್ಯಕ್ತಗೊಳಿಸಿ, ಸೃಷ್ಟಿ ಪರಿಚಯವು ಅಪ್ರತ್ಯಕ್ಷ ಆತ್ಮರಕ್ಷಣೆಯ ದಾರಿಯಾಗುವಂತೆ ಅರಿತುಕೊಳ್ಳುವುದು. ಮೂರನೆದಾಗಿ, ಈ ಸೃಷ್ಟಿಯ ಪರಿಚಯದ ಮೂಲಕ ಆ ಸೃಷ್ಟಿಯ ಕಾರಣನಾದ ಪರಮಾತ್ಮನ ಆಸ್ತಿಕ್ಯವನ್ನು ಮಾಡುವುದು. ಇದಕ್ಕಾಗಿ ಅವನು ಶಾರೀರಿಕ, ನೈತಿಕ, ಮತ್ತು ಮಾನಸಿಕ ಶಿಕ್ಷಣವೆಂಬ ಮೂರು ಕವಲುಗಳನ್ನು ಇನ್ನೊಂದು ರೀತಿಯಾಗಿ ವಿಭಜಿಸಿದ್ದಾನೆ. ಅವನ ಮೇರೆಗೆ (1) ಸ್ತೋತ್ರಗಳ ಸಹಾಯದಿಂದ ಧರ್ಮ ಭೋಧೆ, (2) ಆರೋಗ್ಯ ರಕ್ಷಣೆಯ ಜ್ಞಾನ, (3) ಭಾಷೆಯ ಜ್ಞಾನ, (4) ಭಾವನೆಗಳ ಸ್ಪಷ್ಟತೆಗೆ ಸಂಖ್ಯಾಜ್ಞಾನ, (5) ಭಾವನೆಗಳನ್ನು ರೂಪುಗೊಳಿಸಲಿಕ್ಕೆ ಉಪ

ಕರಣಗಳ ಸಹಾಯದಿಂದ ವೃತ್ತಿಗಳ ಅಭ್ಯಾಸ, (6) ಚಿತ್ರ ಬರೆಯುವುದರಲ್ಲಿ ಬಣ್ಣದ ಜ್ಞಾನ, (7) ವ್ಯವಸ್ಥಿತ ಕ್ರಮವುಳ್ಳ ಆಟಗಳು, (8) ಕಥೆಗಳು, (9) ಪಾಠಶಾಲೆಗೂ ಮನೆಗೂ ಸಂಬಂಧಪಟ್ಟ ಇತರ ವೃತ್ತಿಗಳು ಎಂಬ ಶಾಖೆಗಳಾಗಿ ಬಗೆದು ತನ್ನ ಪಾಠ ಪಟ್ಟಿಯಲ್ಲಿ ಸೇರಿಸಿರುವನು. ಇದರಿಂದ ಒಂದು ಕಾಲದಲ್ಲಿ ಭಾಷಾಜ್ಞಾನವೇ, ಅದರಲ್ಲಿಯೂ ವಿವಕ್ಷಿತ ಭಾಷೆಗಳ ವ್ಯಾಕರಣ, ರಚನೆ, ಕಾವ್ಯ ಮುಂತಾದುವುಗಳು ಮಾತ್ರವೆ ಶಿಕ್ಷಣದ ಉದ್ದೇಶವೆನ್ನುವುದಕ್ಕೂ ಫ್ರೊಬೆಲನು ಹಾಕಿ ಕೊಟ್ಟ ಉದ್ದೇಶಕ್ಕೂ ವಿಶೇಷ ಅಂತರವಿದೆ. ಭಾಷೆಯೆಂಬುದು ಜ್ಞಾನ ಸಂಪಾದನೆಗೆ ಒಂದು ಸಾಧನ ಮಾತ್ರ ವಲ್ಲದೆ ಭಾಷಾಪರಿಚಯವೇ ಶಿಕ್ಷಣದ ಧ್ಯೇಯವಲ್ಲವೆಂಬುದು ಸ್ಪಷ್ಟ ವಾಗುವುದು. ಅಷ್ಟೆ ಅಲ್ಲ. ಸರ್ವವ್ಯಾಪಿಯಾದ ಆದರೂ ಮನುಷ್ಯನಿಗೆ ಇಂದ್ರಿಯಗೋಚರನಾಗದ ಪರಮಾತ್ಮನ ಪರಿಚಯವನ್ನು ಮಾಡಿಕೊಳ್ಳು ವುದಕ್ಕೆ ಇತರರು ಬರೆದ ಗ್ರಂಥಗಳನ್ನು ಓದಿ ಅಂಧ ವಿಶ್ವಾಸವನ್ನು ತಳೆ ಯುವ ಬದಲಾಗಿ ದೇವರ ಸೃಷ್ಟಿಯ ಸೌಂದರ್ಯದ ಪರಿಚಯದಿಂದಲೇ ಸಕಾರಣವಾದ ಭಕ್ತಿಯನ್ನು ಮಕ್ಕಳಲ್ಲಿ ನೆಲೆಗೊಳಿಸುವುದು ಸಮಂಜಸ ವಾಗಿದೆ ಎಂದು ಫ್ರೊಬೆಲನ ಮುಖ್ಯ ಮತ.

ಶಾಲೆಗೊಂದು ತೋಟವಿರಬೇಕೆಂದು ಅವನು ಒತ್ತಿ ಹೇಳುವಾಗಲೂ ಸಜೀವಿಯಾದ ವಸ್ತುವಿನ ಆರೈಕೆಯ ಕ್ರಮದ ಲಾಲಸೆ ಮಗುವಿನಲ್ಲಿ ಅಂಕು ರಿಸಬೇಕೆಂದೇ ಅವನ ಉದ್ದೇಶ. ತೋಟವನ್ನು ಮಾಡಲಿಕ್ಕೆ ಸಾಕಷ್ಟು ಸ್ಥಳವಿಲ್ಲದಿದ್ದರೆ ಸಾಮಾನ್ಯವಾದ ಗಿಡವನ್ನು ಒಂದು ಪೆಟ್ಟಿಗೆಯಲ್ಲಾಗಲಿ ಒಂದು ಕುಂಡದಲ್ಲಾಗಲಿ ಬೆಳಸಿ, ಅದರಿಂದಲಾದರೂ ಈ ಬಗೆಯ ಸೃಷ್ಟಿ ಸಂಸರ್ಗವನ್ನು ಹೊಂದಬೇಕೆಂದು ಫ್ರೊಬೆಲನು ಹೇಳಿದ್ದಾನೆ.

ಪಾಠಪಟ್ಟಿಯಲ್ಲಿರುವ ಬೇರೆ ಬೇರೆ ಪಾಠಗಳಿಗೆ ಪರಸ್ಪರ ಸಂಬಂಧ ವಿರಬೇಕು, ಇದಿಲ್ಲದುದೇ ಪೆಸ್ಟಲೊಟ್ಸಿಯ ಕ್ರಮದಲ್ಲಿರುವ ದೋಷವೆನ್ನು ವುದು ಮನಶ್ಶಾಸ್ತ್ರದೃಷ್ಟಿಯಿಂದಲೂ ಹೇಗೆ ಸರಿ ಹೋಗುತ್ತದೆ ಎಂಬುದನ್ನು ಮುಂದೆ ವಿವರಿಸಲಾಗುವುದು. ಈ ಪರಸ್ಪರ ಸಂಬಂಧದ ಸಂವಿಧಾನ ಗಳನ್ನು ಮುಂದೆ ಚರ್ಚಿಸಲಾಗುವುದು. ಆದರೆ ಈ ಸಂಬಂಧದಿಂದ ಮಕ್ಕಳ ಮನಸ್ಸಿಗೆ ಸುಖವನ್ನೂ ಆನಂದವನ್ನೂ ಹುಟ್ಟಿಸಿ, ಶಾಲೆಯ

ಕೆಲಸವು ಸುಗಮವಾಗುವಂತೆ ಮಾಡಬೇಕು ಎನ್ನುವಾಗ, ಮಕ್ಕಳು ಸ್ವೇಚ್ಛೆಯಿಂದ ಹಗ್ಗ ಬಿಚ್ಚಿ ಬಿಟ್ಟ ಗೂಳಿಗಳಂತೆ ಧಾರಾಳವಾಗಿ ಮೇಯುತ್ತಿರಲಿ, ಅವುಗಳ ಮೇಲೆ ನಿರ್ಬಂಧವಿರಿಸುವುದು ಬೇಡವೆಂದು ವಾದಿಸುವುದಿಲ್ಲ. ಮಕ್ಕಳು ಅತ್ಯಾಚರಣೆಗೆ ಹೋಗದಂತೆ ನಿರ್ಬಂಧವು ಬೋಧಕ ಮತ್ತು ಶಿಷ್ಯರೊಳಗೆ ಇರುವ ಮತ್ತು ವ್ಯಾಪ್ತವಾದ ಮಮತೆಯ ಪಾಶದಿಂದ ಬಿಗಿಯಲ್ಪಟ್ಟಿರಬೇಕಲ್ಲದೆ ಭೀತಿಯಿಂದಲ್ಲ, ಮಮತಾಪಾಶದಿಂದ ಬಿಗಿಯಲ್ಪಟ್ಟ ಗುರು ಶಿಷ್ಯರೊಳಗೆ ದಂಡವಿಧಿಗೆ ಅವಕಾಶವೇ ಇಲ್ಲದಂತಾಗುವುದು ಎಂದು ಫ್ರೊಬೆಲನು ಖಂಡಿತವಾಗಿ ತಿಳಿಯುತ್ತಾನೆ.

ಜ್ಞಾನ ಸಂಪಾದನೆಯ ಅವಯವಗಳು.

5 ನೆಯ ಅಧ್ಯಾಯ.

ಕಿಂಡರಗಾರ್ಟನ ಕ್ರಮವು ಮಾನಸಿಕ ಶಕ್ತಿಗಳ ಬೆಳವಣಿಗೆಗೆ ವ್ಯವಸ್ಥಿತ ಕ್ರಮವಾಗಿದೆ, ಅದು ನೈಸರ್ಗಿಕ ಮಾರ್ಗವನ್ನು ಅನುಸರಿಸುತ್ತದೆ, ಅಂದರೆ ಒಂದು ಮಗುವನ್ನು ನಿರ್ಬಂಧಗಳಿಲ್ಲದೆ ಬಿಟ್ಟುಬಿಟ್ಟರೆ ಅದು ಬಾಹ್ಯವಸ್ತುಗಳ ಪರಿಚಯವನ್ನು ಹೇಗೆ ಮಾಡಿಕೊಳ್ಳುತ್ತದೊ ಅದೇ ಕ್ರಮವು ಕಿಂಡರಗಾರ್ಟನ ಪದ್ಧತಿಯಲ್ಲಿದೆ ಎಂದು ಹಿಂದೆ ಹೇಳಿದೆವು. ಮಗುವು ಜ್ಞಾನವನ್ನು ಸಂಪಾದಿಸುವ ಬಗೆ ಹೇಗೆ, ಇದಕ್ಕೆ ಅವಶ್ಯಕವಾದ ಅವಯವಗಳು ಯಾವವು ಎಂಬ ವಿಚಾರಗಳನ್ನು ಇಲ್ಲಿ ಮಾಡಬೇಕಾಗಿದೆ.

ಜ್ಞಾನೇಂದ್ರಿಯ, ಕರ್ಮೇಂದ್ರಿಯ:—ಮನುಷ್ಯನ ದೇಹವನ್ನು ಒಂದು ಮನೆಗೆ ಸರಿಹೋಲಿಸಿದರೆ ಅದರ ಯಜಮಾನನು ತಲೆಯ ಬುರುಡೆಯೆಂಬ ಮೇಲಿನ ಅಂತಸ್ತಿನಲ್ಲಿ ವಾಸವಾಗಿದ್ದಾನೆ. ಅವನ ಹೆಸರು ಬುದ್ಧಿ. ಅವನಿಗೆ ಹತ್ತು ಮಂದಿ ಸೇವಕರು. ಹಸ್ತ, ಪಾದ, ವಾಣಿ, ಗುದ, ಉಪಸ್ಥ ಇವು

ಹೇಳಿದ ಕೆಲಸ ಮಾಡುವಂಥವರು. ಇವನ್ನು **ಕರ್ಮೇಂದ್ರಿಯ**ಗಳೆನ್ನುತ್ತಾರೆ. ಶಾರೀರಿಕ ವ್ಯವಹಾರಗಳೆಲ್ಲವೂ ಈ ಐದು ಇಂದ್ರಿಯಗಳಿಂದಲೇ ನಡೆಯುತ್ತವೆ. ಮೂಗು, ಕಣ್ಣು, ಕಿವಿ, ನಾಲಗೆ, ತ್ವಚೆ (ಸ್ಪರ್ಶೇಂದ್ರಿಯ) ಇವು ಇನ್ನಿತರ ಐದು ಸೇವಕರು. ಇವುಗಳಲ್ಲಿ ಮೊದಲನೆಯ ನಾಲ್ಕು, ಮುಖದಲ್ಲಿಯೇ ಇದ್ದು ಯಜಮಾನನಿಗೆ ಅತಿ ಸಮೀಪದಲ್ಲಿಯೇ ಇವೆ. ಸ್ಪರ್ಶೇಂದ್ರಿಯವು ದೇಹದ ಎಲ್ಲಾ ಭಾಗಗಳಲ್ಲಿಯೂ ಹೊದಿಕೆಯಾಗಿರುವ ಚರ್ಮದಲ್ಲಿದೆ. ಮೂಗು ವಾಸನೆಯನ್ನು ಕಂಡುಹಿಡಿಯುತ್ತದೆ; ಕಣ್ಣು ಬಾಹ್ಯ ವಸ್ತುಗಳ ಆಕಾರ, ಬಣ್ಣ, ದೂರ, ಪರಿಮಾಣ ಇವನ್ನು ಹೇಳಿಕೊಡುತ್ತದೆ; ಕಿವಿಯು ಶಬ್ದಜ್ಞಾನವನ್ನು ಉಂಟುಮಾಡುತ್ತದೆ; ನಾಲಗೆಯು ವಸ್ತುಗಳ ರುಚಿಯನ್ನು ಹೇಳುತ್ತದೆ; ತ್ವಚೆಯು ನಯ ದೊರಗು, ಗಟ್ಟಿ ಮಿದು, ಉಷ್ಣ ಶೀತ, ಹಗುರ ಭಾರ, ಇತ್ಯಾದಿ ಅನುಭವಗಳನ್ನು ಮಾಡಿಸುತ್ತದೆ. ಈ ಐದು ಸೇವಕರಿಗೆ **ಜ್ಞಾನೇಂದ್ರಿಯ**ಗಳೆನ್ನುತ್ತಾರೆ. ಇವುಗಳಿಂದ ಮನುಷ್ಯನು ಬಾಹ್ಯವಸ್ತುಗಳ ವಿವಿಧ ಪರಿಚಯವನ್ನು ಮಾಡಿಕೊಳ್ಳುವುದರಿಂದ ಇವಕ್ಕೆ ಜ್ಞಾನಸಂಪಾದನೆಯೇ ಉದ್ಯೋಗವಾಗಿದೆ. ಕರ್ಮೇಂದ್ರಿಯಗಳಲ್ಲಿ ಕೈಗಳು ಬುದ್ಧಿಯ ಅಪ್ಪಣೆಯ ಮೇರೆಗೆ ವಸ್ತುಗಳನ್ನು ಹಿಡಿಯುತ್ತವೆ, ಆಹಾರವನ್ನು ಬಾಯಿಗೆ ತರುತ್ತವೆ; ದೇಹಕ್ಕೆ ಅಪಾಯ ಬಾರದಂತೆ ರಕ್ಷಿಸುವುದಕ್ಕೂ ದೇಹವನ್ನು ಪೋಷಿಸುವುದಕ್ಕೂ ಅಗತ್ಯವಾದ ಅವಯವಗಳು. ಕಾಲುಗಳು ಆಹಾರವನ್ನು ಹುಡುಕುವುದಕ್ಕೆ ಹೋಗುವುದಕ್ಕೂ ಶತ್ರುವಿನಿಂದ ತಪ್ಪಿಸಿ ಓಡುವುದಕ್ಕೂ ಸಹಾಯಕವಾಗಿವೆ. ವಾಣಿ ಅಥವಾ ಮಾತಿನ ಇಂದ್ರಿಯವು ಶಬ್ದಗಳನ್ನು ಹೊರಡಿಸಿ ಮಾತುಗಳಿಂದ ನಮ್ಮ ಅಭಿಪ್ರಾಯಗಳನ್ನು ಇತರರಿಗೆ, ಇತರರ ಮನೋಗತವನ್ನು ನಮಗೆ ತಿಳಿಸುವ ಕೆಲಸವನ್ನು ಸಾಗಿಸುವುದು. ಗುದ ಮತ್ತು ಉಪಸ್ಥಗಳು ದೇಹದ ಒಳ ಅಂಗಗಳಲ್ಲಿಯ ಕೊಳೆಯನ್ನು ಹೊರಪಡಿಸಿ ದೇಹವನ್ನು ಶುದ್ಧವಾಗಿರಿಸುತ್ತವೆ.

ಈ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳ ಕಾರ್ಯಕ್ರಮವನ್ನು ಲೋಕಮಾನ್ಯ ಬಾಲಗಂಗಾಧರ ಟಿಲಕರು ತಮ್ಮ 'ಗೀತಾರಹಸ್ಯ'ವೆಂಬ ಗ್ರಂಥದಲ್ಲಿ ಪ್ರಾಚೀನ ಗ್ರಂಥಗಳ ಆಧಾರದಿಂದ ಹೀಗೆ ವರ್ಣಿಸಿದ್ದಾರೆ:—


"ಮನುಷ್ಯನ ದೇಹವು ದೊಡ್ಡದೊಂದು ಕಾರಖಾನೆಯೇ ಇರುತ್ತದೆ. ಕಾರಖಾನೆಯಲ್ಲಿ ಹೊರಗಿನ ಸರಕುಗಳನ್ನು ಒಳಗೆ ತೆಗೆದುಕೊಂಡು ಅದನ್ನು ಆರಿಸಿ ಕ್ರಮಪಡಿಸಿ ಕಾರಖಾನೆಗೆ ಉಪಯೋಗವಾಗುವ ಪದಾರ್ಥವಾವುದು, ಉಪಯೋಗವಲ್ಲದ ಪದಾರ್ಥವಾವುದು ಎಂಬದನ್ನು ನಿಶ್ಚಯಿಸಿ, ಆ ಬಳಿಕ ಅದನ್ನು ಹೊಸ ಪದಾರ್ಥವಾಗಿ ಸಿದ್ಧಪಡಿಸಿ ಹೊರಗೆ ಕಳುಹಿಸುತ್ತಾರೆ. ಮನುಷ್ಯನ ದೇಹದಲ್ಲಿಯೂ ಪ್ರತಿ ಕ್ಷಣದಲ್ಲಿ ಅನೇಕ ವ್ಯಾಪಾರಗಳು ಹೀಗೆಯೇ ನಡೆದಿವೆ. . . . . . . ಹೊರಗಿನ ಪದಾರ್ಥಗಳನ್ನು ಒಳಗೆ ತೆಗೆದುಕೊಳ್ಳುವುದಕ್ಕೂ ಒಳಗಿನ ಸರಕನ್ನು ಹೊರಗೆ ಕಳುಹಿಸಲಿಕ್ಕೂ ಕಾರಖಾನೆಗೆ ಬಾಗಿಲುಗಳಿರುವಂತೆಯೇ ಮನುಷ್ಯನ ದೇಹಕ್ಕೂ ಬಾಗಿಲುಗಳಿವೆ. ಹೊರಗಿನ ಪದಾರ್ಥಗಳನ್ನು ಒಳಗೆ ತೆಗೆದುಕೊಳ್ಳುವುದಕ್ಕೆ ಜ್ಞಾನೇಂದ್ರಿಯಗಳೇ ಬಾಗಿಲುಗಳು; ಒಳಗಿನ ಮಾಲನ್ನು ಹೊರಗೆ ಕಳುಹಿಸುವುದಕ್ಕೆ ಕರ್ಮೇಂದ್ರಿಯಗಳೇ ಬಾಗಿಲುಗಳು. ಸೂರ್ಯ ಕಿರಣಗಳು ಒಂದು ಪದಾರ್ಥದ ಮೇಲೆ ಬಿದ್ದು ಅಲ್ಲಿಂದ ಪರಾವರ್ತನವಾಗುವಾಗ ಅವು ನಮ್ಮ ಕಣ್ಣಿನಲ್ಲಿ ಸೇರುವುದರಿಂದ ನಮ್ಮ ಆತ್ಮಕ್ಕೆ ಆ ಪದಾರ್ಥದ ರೂಪದ ಜ್ಞಾನವಾಗುತ್ತದೆ; ಮತ್ತು ಆ ಪದಾರ್ಥದಿಂದ ಹೊರಡುವ ಗಂಧದ ಸೂಕ್ಷ್ಮ ಪರಮಾಣುಗಳು ನಮ್ಮ ಮೂಗಿನ ಸೊಳ್ಳೆಯ ಮಜ್ಜಾತಂತುಗಳಿಗೆ ಬಂದು ತಗಲಿ ಅದರ ವಾಸನೆಯು ನಮಗೆ ತಿಳಿಯುತ್ತದೆ. ಮಿಕ್ಕ ಜ್ಞಾನೇಂದ್ರಿಯಗಳ ವ್ಯಾಪಾರಗಳೂ ಹೀಗೆಯೇ ನಡೆಯುತ್ತವೆ. ಈ ಪ್ರೇರೆಗೆ ಜ್ಞಾನೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಡೆಯಿಸಿದ ನೆಂದರೆ ಅವುಗಳ ದ್ವಾರದಿಂದ ಬಾಹ್ಯಸೃಷ್ಟಿಯೊಳಗಿನ ಪದಾರ್ಥಗಳ ಜ್ಞಾನವು ನಮಗೆ ಆಗುತ್ತದೆ."

ಇಲ್ಲಿ ಈ ಪದಾರ್ಥಗಳ ಜ್ಞಾನವು ಆ ಇಂದ್ರಿಯಗಳಿಗೆ ಆಗುವುದಿಲ್ಲ. ಅವು ಬರೇ ದ್ವಾರಗಳು. ಆ ದ್ವಾರಗಳಿಂದ ಜ್ಞಾನವು ಬುದ್ಧಿಗೆ ಉಂಟಾಗುತ್ತದೆ. ಬುದ್ಧಿಗೆ ಜ್ಞಾನವು ತಲಪುವುದರಲ್ಲಿ ಒಂದು ವ್ಯವಸ್ಥೆಯಿದೆ. ಉದಾಹರಣೆಯಾಗಿ, "ನಡು ಮಧ್ಯಾಹ್ನದಲ್ಲಿ ಗಡಿಯಾರದಲ್ಲಿ ಹನ್ನೆರಡು ಗಂಟೆಯಾದ ಮಾತ್ರಕ್ಕೆ ಎಷ್ಟು ಹೊಡೆಯುತ್ತದೆಂಬದು ಕಿವಿಗೆ ತಿಳಿಯುವುದಿಲ್ಲ. ಒಂದೊಂದು ಗಂಟೆಯು ಬಾರಿಸಿದಂತೆ ಅದರಿಂದ ಹುಟ್ಟುವ ಹವೆಯ ತರಂಗಗಳು ಕಿವಿಗೆ ಬಂದು ಬಡೆಯುತ್ತವೆ. ಆ ಮೇಲೆ ಮಜ್ಜಾತಂತುಗಳ ದ್ವಾರದಿಂದ ಪ್ರತಿಯೊಂದು ಗಂಟೆಯ ಸಂಸ್ಕಾರವು ಮೊದಲು ಮನಸ್ಸಿನ ಮೇಲೆ ಬೇರೆ ಬೇರೆಯಾಗಿ ಉಂಟಾಗುತ್ತದೆ. ಅನಂತರ ಅವೆಲ್ಲವುಗಳನ್ನು ಒಟ್ಟುಕೂಡಿಸಿ ಎಷ್ಟು ಹೊಡೆಯಿತೆಂದು ನಾವು ನಿಶ್ಚಯಿಸುತ್ತೇವೆ. ಪಶುಗಳಿಗೂ ಜ್ಞಾನೇಂದ್ರಿಯಗಳಿವೆ. ಗಡಿಯಾರದಲ್ಲಿ ಒಂದೊಂದು ಗಂಟೆ ಬಾರಿಸಿದಂತೆ ಅವುಗಳ ಸಂಸ್ಕಾರವು ಕಿವಿಯಲ್ಲಿಯೂ ಆಗಿ ಅವು ಮನಸ್ಸಿನ ವರೆಗೂ ಮುಟ್ಟುತ್ತವೆ. ಆದರೆ ಅವುಗಳನ್ನೆಲ್ಲ ಒಟ್ಟುಕೂಡಿಸಿ ಹನ್ನೆರಡು ಹೊಡೆಯಿತೆಂದು ತಿಳಿದುಕೊಳ್ಳುವಷ್ಟು ಪಶುಗಳ ಮನಸ್ಸು ವಿಕಸಿತವಾಗಿರುವುದಿಲ್ಲ. ಈ ಅರ್ಥವನ್ನೇ ಶಾಸ್ತ್ರೀಯ ಭಾಷೆಯಲ್ಲಿ

ಹೇಳುವುದಾದರೆ ಪಶುಗಳಿಗೆ ಅನೇಕ ಸಂಸ್ಕಾರಗಳ ಪೃಥಕ್ ಪೃಥಕ್ ಜ್ಞಾನವಾದರೂ ಅವುಗಳ ನಾನಾತ್ವದಲ್ಲಿರುವ ಏಕತ್ವದ ಭೋದವಾಗುವುದಿಲ್ಲ ಎಂದು ಹೇಳುತ್ತಾರೆ. . . . ಮನಸ್ಸಿನ ಅಭಾವದಲ್ಲಿ ಕಣ್ಣಿದ್ದೂ ಕಾಣಿಸುವುದಿಲ್ಲ, ಕಿವಿಗಳಿದ್ದೂ ಕೇಳಿಸುವುದಿಲ್ಲ ಎಂಬವರ ತಾತ್ಪರ್ಯವೇನೆಂದರೆ :— ಜ್ಞಾನೇಂದ್ರಿಯಗಳ ದ್ವಾರದಿಂದ ಬಂದ ಹೊರಗಿನ ಮಾಲು ದೇಹದ ಕಾರಖಾನೆಯೊಳಗಿನ ಮನಸ್ಸೆಂಬ ಕಾರಕೂನನ ವಶಕ್ಕೆ ಬರುತ್ತದೆ. ಅನಂತರ ಈ ಕಾರಕೂನನು ಅದನ್ನು ಪರೀಕ್ಷಿಸುತ್ತಾನೆ."

ಇದರಿಂದ ಬಾಹ್ಯವಸ್ತುಗಳ ಪರಿಣಾಮವು ಆಯಾಯ ಇಂದ್ರಿಯದ ಮೇಲೆ ತೋರಿಸಿಕೊಂಡಾಗಲೇ ಅವುಗಳ ಜ್ಞಾನವಾಗಲಾರದು ಎಂಬದು ಸ್ಪಷ್ಟವಾಗುತ್ತದೆ. ನಾವು ಯಾವುದೊ ಒಂದು ಆಲೋಚನೆಯಲ್ಲಿ ಮಗ್ನರಾಗಿ ಕುಳಿತಿದ್ದಾಗ ಹೊರಗೆ ಗಂಟೆ ಬಾರಿಸಬಹುದು, ಯಾರೊಬ್ಬರು ನಮ್ಮ ಕಣ್ಣೆದುರಿಗೆ ಬೀಳಬಹುದು. ಆದರೂ ನಮಗೆ ಗೋಚರವಾಗಲಿಲ್ಲವೆಂದು ನಾವು ಅನ್ನುತ್ತೇವೆ. ಅಂದರೆ ಆ ವಸ್ತುಗಳು ನಮ್ಮ ಇಂದ್ರಿಯಗಳಿಗೆ ಸ್ಪರ್ಶ ಮಾಡಿದರೂ ಅವುಗಳ ವಿಚಾರವು ನಮ್ಮ ಮನಸ್ಸಿಗೆ ಹತ್ತಲಿಲ್ಲ ಅಥವಾ ನಮಗೆ ಅರಿವಾಗಲಿಲ್ಲ ಎಂಬ ಅರ್ಥ. ಹಾಗಾದರೆ ಅರಿವು ಆಗುವುದಕ್ಕೆ ಈ ಇಂದ್ರಿಯಗಳ ಮೇಲೆ ಆದ ಸಂಸ್ಕಾರಗಳು ಮನಸ್ಸಿಗೆ ಮುಟ್ಟಬೇಕು. ಮನಸ್ಸು ಆ ಸಂಸ್ಕಾರಗಳ ಜೋಡಣೆ ಮಾಡಿ ಅವುಗಳನ್ನು ಬುದ್ಧಿಯ ಮುಂದೆ ಇಡುತ್ತದೆ. ಅದು ಅವುಗಳ ಸಾರಾಸಾರ ವಿಚಾರ ಮಾಡಿ ಯಾವುದು ಒಳ್ಳೆಯದು ಯಾವುದು ಕೆಟ್ಟದ್ದು, ಯಾವುದು ಗ್ರಾಹ್ಯ ಯಾವುದು ಅಗ್ರಾಹ್ಯವೆಂದು ನಿರ್ಣಯಿಸುತ್ತದೆ. ಒಳ್ಳೆಯದನ್ನು ಪರಿಗ್ರಹಿಸಲಿಕ್ಕೂ ಕೆಟ್ಟದನ್ನು ತ್ಯಜಿಸಲಿಕ್ಕೂ ಬುದ್ಧಿಯು ಕರ್ಮೇಂದ್ರಿಯಗಳಿಗೆ ತಿಳಿಸುತ್ತದೆ. ಕರ್ಮೇಂದ್ರಿಯಗಳು ಅದರ ಜಾರಿಯನ್ನು ನಡಿಸುತ್ತವೆ. ಹೀಗೆ ಮೂರು ಸ್ಥೂಲಮಾನದ ಕ್ರಿಯೆಗಳು ಇಲ್ಲಿ ನಡೆಯುತ್ತವೆ. ಉದಾಹರಣೆಯಾಗಿ ತೋಟದಲ್ಲಿ ಚೆಲುವಾದ ಒಂದು ಹೂ ಕಣ್ಣಿಗೆ ತೋರಿತು ಎನ್ನೋಣ. ಆ ಹೂವಿನ ಚೆಲ್ವಿಕೆಯು ಕಣ್ಣಿನಿಂದ ಮನಸ್ಸಿಗೆ ಗೋಚರವಾದೊಡನೆ ಮನಸ್ಸು ಆ ಹೂ ಚಲೋದೆಂದು ಬುದ್ಧಿಗೆ ತಿಳಿಸುತ್ತದೆ. ಬುದ್ಧಿಯು 'ಈ ಹೂ ಚೆಲೋದಿದೆ, ಇದಕ್ಕೆ ಪರಿಮಳವಿದೆಯೊ ನೋಡು' ಎಂದು ಕೈಗೆ ತಿಳಿಸುತ್ತದೆ. ಕೈಯು ಅದನ್ನು ಮೂಗಿನ ಬಳಿಗೆ ತರುತ್ತದೆ. ಮೂಗು ಅದನ್ನು ಮೂಸಿ ನೋಡಿ 'ಅದು ಪರಿಮಳವುಳ್ಳದ್ದು' ಎಂದು ಮನಸ್ಸಿಗೆ ತಿಳಿಸುತ್ತದೆ.

ಮನಸ್ಸು ಈ ವಿಷಯವನ್ನು ಪುನಃ ಬುದ್ಧಿಯ ಮುಂದೆ ಇಡುತ್ತದೆ. ಅದು ಪರಿಮಳವುಳ್ಳದೆಂದೂ ಅಂದವಾದದ್ದೆಂದೂ ತಿಳಿದ ಬುದ್ಧಿಯು 'ಅದನ್ನು ಕೊಯ್ದು ಕೊ' ಎಂದು ಪುನಃ ಕೈಗೆ ತಿಳಿಸುತ್ತದೆ. ಹೂವಿನಲ್ಲಿ ದುರ್ವಾಸನೆಯಿದ್ದರೆ 'ಅದನ್ನು ಎಸೆದು ಬಿಡು' ಎಂದೂ ತಿಳಿಸುತ್ತದೆ. ಆಗ ಕೈಯು ಈ ಕೆಲಸಗಳನ್ನು ಜಾರಿಮಾಡುತ್ತದೆ. ಈ ಕಾರ್ಯವನ್ನು ಚಿತ್ರರೂಪವಾಗಿ ಬರೆಯುವುದಾದರೆ ಜ್ಞಾನೇಂದ್ರಿಯದಿಂದ ಬಂದ ವರ್ತಮಾನವು



ಮನಸ್ಸಿಗೆ ಮುಟ್ಟಿ ಅದು ಆ ವರ್ತಮಾನವನ್ನು ಬುದ್ಧಿಯ ಮುಂದೆ ಇಟ್ಟು ಬುದ್ಧಿಯ ಅಪ್ಪಣೆಗಳನ್ನು ಮನಸ್ಸಿನ ಮೂಲಕ ಕರ್ಮೇಂದ್ರಿಯಕ್ಕೆ ತಿಳಿಸುತ್ತದೆ ಎಂಬದನ್ನು ಮೇಲಿನಂತೆ ಕಾಣಿಸಬಹುದು.

ನರಗಳು :— ಜ್ಞಾನೇಂದ್ರಿಯದಿಂದ ಮನಸ್ಸಿಗೂ ಮನಸ್ಸಿನಿಂದ ಬುದ್ಧಿಗೂ ಪುನಃ ಬುದ್ಧಿಯಿಂದ ಮನಸ್ಸಿಗೂ, ಮನಸ್ಸಿನಿಂದ ಕರ್ಮೇಂದ್ರಿಯಕ್ಕೂ ನಡೆಯುವ ಕಾರ್ಯಕಲಾಪವು ಹೇಗೆ ನಡೆಯುತ್ತದೆಂಬದನ್ನು ಈಗ ವಿಚಾರಿಸೋಣ. ಜ್ಞಾನೇಂದ್ರಿಯದಿಂದ ಮನಸ್ಸಿಗೆ ವರ್ತಮಾನ ತಿಳಿಸುವುದಕ್ಕೂ ಮನಸ್ಸಿನಿಂದ ಕರ್ಮೇಂದ್ರಿಯಕ್ಕೆ ಬುದ್ಧಿಯ ಅಪ್ಪಣೆಗಳನ್ನು ತಿಳಿಸುವುದಕ್ಕೂ ಅತಿ ಸೂಕ್ಷ್ಮವಾದ ತಂತುಗಳಿವೆ. ಅವಕ್ಕೆ ಮಜ್ಜಾತಂತುಗಳು ಅಥವಾ ನರಗಳು ಎನ್ನುತ್ತಾರೆ. ಜ್ಞಾನೇಂದ್ರಿಯದಿಂದ ಮನಸ್ಸಿಗೆ ಹೋಗುವ ನರಗಳು 'ಜ್ಞಾನವಾಹಿ' ನರಗಳೆಂತಲೂ ಮನಸ್ಸಿನಿಂದ

ಕರ್ಮೇಂದ್ರಿಯಕ್ಕೆ ಮುಟ್ಟುವ ನರಗಳು 'ಕ್ರಿಯಾವಾಹಿ' ನರಗಳೆಂತಲೂ ಕರೆಯಲ್ಪಡುತ್ತವೆ.

ಮನಸ್ಸು ಮತ್ತು ಬುದ್ಧಿ ಇವುಗಳ ಕೆಲಸವು ಮೆದುಳಿನಲ್ಲಿ ನಡೆಯುತ್ತದೆ. ಇವುಗಳ ಕಾರ್ಯಕ್ರಮವನ್ನು ತಿಳಿಯಲಿಕ್ಕೆ ಒಂದು ದೃಷ್ಟಾಂತವನ್ನು ಕೊಡಬೇಕಾಗಿದೆ. ಒಂದು ತಂತಿಯ ಆಫೀಸಿನಿಂದ ಒಳಕ್ಕೆ ವರ್ತಮಾನಗಳು ಬರಲಿಕ್ಕೂ ಇನ್ನೊಂದು ಕಡೆಗೆ ವರ್ತಮಾನವನ್ನು ತಿಳಿಸುವುದಕ್ಕೂ ತಂತಿಗಳ ಏರ್ಪಾಡು ಇದೆ. ಈ ಆಫೀಸಿಗೆ ಹಲವು ಕಡೆಗಳಿಂದ ವರ್ತಮಾನಗಳನ್ನು ತರಿಸುವುದಕ್ಕೆ ಬೇರೆ ಬೇರೆ ತಂತಿಗಳಿವೆ. ಇದೇ ರೀತಿಯಲ್ಲಿ ಮೆದುಳು ತಂತಿಯ ಆಫೀಸು ಎಂದು ಭಾವಿಸಿದರೆ ಅದಕ್ಕೆ ವರ್ತಮಾನಗಳನ್ನು ತರಲಿಕ್ಕೂ ಅಲ್ಲಿಂದ ಇನ್ನೊಂದು ಕಡೆಗೆ ವರ್ತಮಾನಗಳನ್ನು ತಿಳಿಸಲಿಕ್ಕೂ ನರಗಳೆಂಬ ತಂತಿಗಳು ಇವೆ. ಈ ತಂತಿಗಳು ಮೆದುಳಿನಿಂದ ಹನ್ನೆರಡು ಜತೆಯ ನರಗಳಾಗಿ ಜ್ಞಾನೇಂದ್ರಿಯಗಳಿಗೆ ಮುಟ್ಟುತ್ತವೆ. ಅವುಗಳ ಪೈಕಿ ಒಂದನೆಯವುಗಳು ವಾಸನೆ ಹಿಡಿಯುವ ನರಗಳು, ನಾಸಿಕದ ಒಳಪ್ರದೇಶದಲ್ಲಿ ಚಾಚಿಕೊಂಡಿವೆ, ಎರಡನೇಯವುಗಳು ಕಣ್ಣುಗುಡ್ಡೆಗಳಿಗೆ ವ್ಯಾಪಿಸಿ ದೃಷ್ಟಿಗೆ ಸಹಾಯಕವಾಗಿವೆ. ಮೂರನೆ ಮತ್ತು ನಾಲ್ಕನೆ ಜತೆಯವು ಕಣ್ಣುಗುಡ್ಡೆಗಳಿಗೆ ಸಂಬಂಧಪಡುವ ಸ್ನಾಯುಗಳಿಗೆ ವ್ಯಾಪಿಸಿದ ಕ್ರಿಯಾವಾಹಿ ನರಗಳಾಗಿವೆ. ಐದನೆಯವು ಎರಡು ಕವಲಾಗಿದ್ದು ಒಂದು ಕವಲು ರುಚಿಯನ್ನು ತಿಳಿಸುವ ಜ್ಞಾನವಾಹಿ ನರವಾಗಿದೆ; ಎರಡನೆ ಕವಲು ದವಡೆಗಳ ಚಲನದ ಸ್ನಾಯುಗಳಿಗೆ ಹೋದ ಕ್ರಿಯಾವಾಹಿ ನರವಾಗಿದೆ. ಆರನೆ ಜತೆಯ ನರಗಳೂ ಕಣ್ಣುಗುಡ್ಡೆಗಳಿಗೆ ಚಲನೆಗೆ ಇರುವ ಸ್ನಾಯುಗಳಿಗೆ ಹೋಗಿರುವ ಕ್ರಿಯಾವಾಹಿ ನರಗಳಾಗಿವೆ. ಏಳನೆಯವು ಮುಖದ ಸ್ನಾಯುಗಳಲ್ಲಿ ಹರಡಿಕೊಂಡು ಚಲನೆಗೆ ಸಹಾಯಕವಾದ ಕ್ರಿಯಾವಾಹಿ ನರಗಳು. ಎಂಟನೆ ಜತೆಯ ನರಗಳು ಕಿವಿಗಳಿಗೆ ಮುಟ್ಟಿ ಧ್ವನಿಯನ್ನು ಹಿಡಿಯುವ ಜ್ಞಾನವಾಹಿಯಾಗಿವೆ. ಒಂಬತ್ತನೆ ಜತೆ ನರಗಳು ಎರಡು ಭಾಗವಾಗಿ, ಒಂದು ಜಿಹ್ವೆಯ ಹಿಂಭಾಗದಲ್ಲಿ ಹರಡಿಕೊಂಡಿದ್ದು ರುಚಿಯ ನರವಾಗಿದೆ. ಮತ್ತೊಂದು ಪದಾರ್ಥಗಳನ್ನು ನುಂಗುವ ಕಾರ್ಯಕ್ಕೆ ಅನುಕೂಲವಾದ ಸ್ನಾಯುಗಳ ಚಲನವನ್ನು ಕ್ರಮಪಡಿಸುವ

ಕ್ರಿಯಾಪ್ರವಾಹಿಯಾಗಿದೆ. ಹತ್ತನೆ ಜತೆಯುವು ಗೋವಮಾಳಿ, ಶ್ವಾಸಕೋಶ, ಹೃದಯಕಮಲ, ಅನ್ನಕೋಶ, ಕಾಳಜ ಮುಂತಾದ ಅಂಗಗಳಿಗೆ ಹೋಗಿರುವ ಬಹಳ ಮುಖ್ಯವಾದ ನರಗಳಾಗಿವೆ. ಹನ್ನೊಂದನೆ ಜತೆಯುವು ಕತ್ತು ಮತ್ತು ಬೆನ್ನಿನ ಸ್ನಾಯುಗಳಿಗೆ ಕ್ರಿಯಾಪ್ರವಾಹಿಗಳಾಗಿ ಹೋಗುತ್ತವೆ. ಹನ್ನೆರಡನೆಯುವು ಜಿಹ್ವೆಯ ಸ್ನಾಯುಗಳಲ್ಲಿ ಹರಡಿಕೊಂಡು, ಮಾತನಾಡುವಾಗ ಆ ಸ್ನಾಯುಗಳ ಸೂಕ್ಷ್ಮವಾದ ಚಲನಗಳನ್ನು ಕ್ರಮಪಡಿಸುತ್ತಿವೆ. ಇದರಿಂದ ಮೆದುಳಿನಿಂದ ಹೊರಡುವ ನರಗಳು ಜ್ಞಾನೇಂದ್ರಿಯಗಳಿಗೆ ಮತ್ತು ಮುಂಡದೊಳಗಿನ ಪ್ರಾಮುಖ್ಯವಾದ ಅಂಗಗಳಿಗೆ ಸಹಾ ಹೋಗಿ ಅವುಗಳ ಕೆಲಸವನ್ನು ಸರಿಪಡಿಸಲಿಕ್ಕೂ, ಅವುಗಳ ಮೂಲಕ ಉಂಟಾದ ಅನುಭವಗಳನ್ನು ಮೆದುಳಿಗೆ ತಿಳಿಸಲಿಕ್ಕೂ, ಮೆದುಳಿನ ತೀರ್ಮಾನಗಳನ್ನು ಈ ವಿವಿಧ ಅಂಗಗಳಿಗೆ ತಿಳಿಸಲಿಕ್ಕೂ ಉಪಯುಕ್ತವಾಗಿವೆ ಎಂದು ತಿಳಿದು ಬರುವುದು.

ದೊಡ್ಡ ಮೆದುಳು:—ಮೆದುಳಿನಲ್ಲಿ ಮೂರು ಭಾಗಗಳಿವೆ. ದೊಡ್ಡ ಮೆದುಳು, ಅಥವಾ ಉತ್ತಮ ಮಸ್ತಿಷ್ಕವೆಂತಲೂ, ಸಣ್ಣ ಮೆದುಳು ಅಥವಾ ಕನಿಷ್ಠ ಮಸ್ತಿಷ್ಕವೆಂತಲೂ, ಮಣಿಶಿರವೆಂತಲೂ ಮೂರು ಅಂಗಗಳಾಗಿದೆ. ದೊಡ್ಡ ಮೆದುಳು ತಲೆಬುರುಡೆಯೊಳಗಿನ ಭಾಗದಲ್ಲಿ $\frac{7}{8}$ ಅಂಶವಾಗಿದ್ದು, ಎರಡು ಹೋಳುಗಳಾಗಿ ಆ ಪ್ರತಿಯೊಂದು ಹೋಳು ಮೂರು ಪಾರೆಗಳುಳ್ಳದಾಗಿ ಇದೆ. ಇವುಗಳೊಳಗಿನ ಮೇದಸ್ಸಿನ ಸಾಮಗ್ರಿಯು ಮಡಿತೆಮಡಿತೆಯಾಗಿ ಆಳವಾದ ಬಿರುಕುಗಳಿಂದ ಕೂಡಿದೆ. ಕನಿಷ್ಠ ಪ್ರಾಣಿಗಳ ಮೆದುಳಿನಲ್ಲಿ ಈ ಬಗೆಯ ಮಡಿತೆಗಳು ಇಲ್ಲ. ಉತ್ತಮ ಪ್ರಾಣಿಗಳಲ್ಲಿ ಇವು ಹೆಚ್ಚಾಗಿವೆ. ಸಣ್ಣ ಮಗುವಿನಲ್ಲಿ ಅಥವಾ ಮೆದುಳಿನ ಕೆಲಸವು ವಿಶೇಷವಾಗಿಲ್ಲದ ಕಾಡು ಮನುಷ್ಯನಲ್ಲಿ ಈ ಮಡಿತೆಗಳು ಕಡಿಮೆ. ಬುದ್ಧಿ, ಮನಸ್ಸು ಇವುಗಳ ಸ್ಥಾನವು ಈ ಮೆದುಳಿನಲ್ಲಿದೆ. ಒಬ್ಬನು ತಲೆ ಕೆಳಗಾಗಿ ಬಿದ್ದು ಈ ಉತ್ತಮ ಮಸ್ತಿಷ್ಕಕ್ಕೆ ಪೆಟ್ಟು ತಗಲಿದರೆ, ಅವನ ಬುದ್ಧಿ, ಪ್ರಜ್ಞೆ ಮುಂತಾದ ಮನೋವೃತ್ತಿಗಳನ್ನು ನಾಶಗೊಳಿಸುತ್ತವೆ. ಮಾದಕದ್ರವ್ಯಗಳನ್ನು ಸೇವಿಸುವವನಿಗೆ ಅದರಲ್ಲಿರುವ ವಿಷವು ಈ ಉತ್ತಮ ಮಸ್ತಿಷ್ಕಕ್ಕೆ ವ್ಯಾಪಿಸಿ, ಅವನ ಬುದ್ಧಿ, ಪ್ರಜ್ಞೆ ಮುಂತಾದುವುಗಳನ್ನು ವಿಕಲಗೊಳಿಸುತ್ತದೆ.

ಈ ಭಾಗವು ಸಹಜವಾಗಿರುವುದಕ್ಕಿಂತ ಹೆಚ್ಚಾಗಿ ಮೃದುವಾದರೆ ಅವನ ಬುದ್ಧಿಯು ನಾಶವಾಗಿ ಹುಚ್ಚು ಹಿಡಿಯುವುದು.

ಚಿಕ್ಕ ಮಿದುಳು:—ಚಿಕ್ಕ ಮೆದುಳು ದೊಡ್ಡ ಮೆದುಳಿನ ಹಿಂಭಾಗದ ಅಡಿಯಲ್ಲಿರುವ ಒಂದು ಭಾಗ. ಇದು ಎರಡು ಹೋಳಾಗಿದೆ. ಇದರ ತೂಕವು ಮೆದುಳಿನ ಒಟ್ಟು ತೂಕದಲ್ಲಿ $\frac{1}{10}$ ಅಂಶವಾಗುವುದು. ಇದು ಸ್ನಾಯುಗಳ ಕಾರ್ಯವನ್ನು ಸರಿಗೊಳಿಸಿ ಅವುಗಳ ಕಾರ್ಯಕ್ರಮದಲ್ಲಿ ಬರುವ ಕೆಡುಕುಗಳನ್ನು ದೊಡ್ಡ ಮೆದುಳಿಗೆ ತಿಳಿಸುತ್ತದೆ.

ಮಣಿಶಿರ:—ಇದು ಸಣ್ಣ ಮೆದುಳಿನ ಅಡಿಭಾಗದಲ್ಲಿ ಸುಮಾರು ಒಂದು ಇಂಚು ಉದ್ದದ ಒಂದು ಅಂಗ. ಶ್ವಾಸೋಚ್ಛ್ವಾಸಗಳ ಮತ್ತು ಹೃದಯಕಮಲದ ಮತ್ತು ಗಂಟಲಿನ ಒಳಭಾಗದ ಸ್ನಾಯುಗಳ ಮೇಲೆ ಇದು ಅಧಿಕಾರವನ್ನು ನಡಿಸುವುದರಿಂದ ಈ ಅಂಗಕ್ಕೆ ಪೆಟ್ಟುತಗಲಿದರೆ ಮರಣವು ಕೂಡಲೇ ಉಂಟಾಗುವುದು. ಸೂರ್ಯನ ತೀವ್ರವಾದ ಬಿಸಿಲು ಈ ಭಾಗಕ್ಕೆ ತಗಲಿದರೆ ಮನುಷ್ಯನು ಸ್ಮೃತಿ ತಪ್ಪಿ ಬೀಳುವುದೂ, ಶ್ವಾಸೋಚ್ಛ್ವಾಸಗಳು ನಡೆಯದಂತೆ ಗಂಟಲು ಬಿಗಿದುಕೊಳ್ಳುವುದರಿಂದ ಪ್ರಯಾಸವಾಗಿ ಮರಣ ಪ್ರಾಪ್ತಿಯಾಗುವುದೂ ಉಂಟು. ಇದಕ್ಕೆ, ಸೋಂಕು ತಗಲುವುದು ಅಥವಾ ಭೂತದ ಪೆಟ್ಟಾಗುವುದು ಎಂಬದಾಗಿ ವಾಡಿಕೆಯಾಗಿ ಸಾಮಾನ್ಯವಾಗಿ ಹಳ್ಳಿಗಳಲ್ಲಿ ಹೇಳುತ್ತಾರೆ. ಈ ಅಂಗವು ಮೆದುಳಿನಿಂದ ಕಶೇರುಕಾರಜ್ಜುವಿಗೆ ಸಂಬಂಧವನ್ನು ಕಟ್ಟುವ ಒಂದು ಸೇತುವೆಯಂತಿದೆ.

ಕಶೇರುಕಾ ರಜ್ಜು:—ಇದು ಬೆನ್ನುಹುರಿಯು (ಕಶೇರುಕಾಸ್ತಂಭದ) ಕಾಲುವೆಯೊಳಗೆ ಉದ್ದಕ್ಕೂ ವಿಸ್ತರಿಸಿಕೊಂಡಿರುವ ನರಗಳ ಒಂದು ಹಗ್ಗವೆನ್ನಬಹುದು. ಕಶೇರುಕಾ ಸ್ತಂಭದ ಕೀಲುಗಳ ನಡುವೆ ಒಂದರ ಕೆಳಗೆ ಒಂದಾಗಿ ಮೂವತ್ತೊಂದು ರಂಧ್ರಗಳಿಂದ ಮೂವತ್ತೊಂದು ಜತೆ ನರಗಳು ಈ ಮೆದುಳುಬಳ್ಳಿಯ ಒಳಗಿನಿಂದ ಹೊರಕ್ಕೆ ದೇಹದ ಎಲ್ಲಾ ಸ್ನಾಯುಗಳ ಮೇಲೆ ವ್ಯಾಪಿಸಿಕೊಂಡಿವೆ. ಈ ಒಂದೊಂದು ಜತೆಯಲ್ಲಿ ಒಂದು ಜ್ಞಾನವಾಹಿ, ಇನ್ನೊಂದು ಕ್ರಿಯಾವಾಹಿ. ಇವು ಮುಖ್ಯವಾಗಿ ಸ್ಪರ್ಶೇಂದ್ರಿಯ ಜ್ಞಾನದ ನರಗಳಾಗಿವೆ. ಈ ಮೆದುಳುಬಳ್ಳಿಗೆ ಪೆಟ್ಟುತಗಲಿ ಕಡಿದು ಹೋದರೆ ಅದರ ಕೆಳಭಾಗದಲ್ಲಿರುವ ಐಚ್ಛಿಕ ಸ್ನಾಯುಗಳು ಸ್ಪರ್ಶೇಂದ್ರಿಯ

ಜ್ಞಾನವಿಲ್ಲದೆ, ತಮ್ಮ ಕೆಲಸಗಳನ್ನು ಮಾಡಲಾರದೆ ನಿರಾಲಂಬ ಸ್ಥಿತಿಯಲ್ಲಿ ಇರುವುವು. ಮೆದುಳಿಗೆ ಸ್ಪರ್ಶೇಂದ್ರಿಯದಿಂದ ವರ್ತಮಾನವನ್ನು ಕೊಟ್ಟು ಮೆದುಳಿನ ಆಜ್ಞೆಯನ್ನು ದೇಹದಲ್ಲಿ ವ್ಯಾಪಿಸಿರುವ ಐಚ್ಛಿಕ ಸ್ನಾಯುಗಳಿಗೆ ತಂದು ಕೊಡುವ ಕೆಲಸವು ಈ ಅಂಗಕ್ಕೆ ಇದೆ. ಹಲವು ಸಲ ಇದು ಮೆದುಳಿನ ಆಜ್ಞೆಯನ್ನು ಪಡೆಯದೆ ತನಗೆ ಜ್ಞಾನವಾಹಿ ನರಗಳ ಮೂಲಕ ಬಂದ ಸಮಾಚಾರವನ್ನು ನೆಟ್ಟಗೆ ಆ ಸ್ನಾಯುಗಳಿಗೆ ತಿಳಿಸಿ ಬಿಡುತ್ತದೆ. ರಾತ್ರೆಯಲ್ಲಿ ನಿದ್ದೆ ಬಿದ್ದಾಗ ನುಸಿಯಾಗಲಿ, ತಗಣೆಯಾಗಲಿ ಕಚ್ಚಿದರೆ ನಾವು ನಿದ್ರೆಯಿಂದ ಎಚ್ಚರವಾಗದಿದ್ದರೂ ನಮ್ಮ ಕೈ ಆ ನುಸಿಯನ್ನಾಗಲಿ, ತಗಣೆಯನ್ನಾಗಲಿ ಅಟ್ಟಿ ಬಿಡಲು ನೋಡುತ್ತದೆ. ನಮ್ಮ ಕಾಲಿಗಾಗಲಿ, ಮೈಯ ಯಾವ ಭಾಗಕ್ಕಾಗಲಿ ಚಕ್ಕಲಕುಲಿಯನ್ನು ಮಾಡಿದಾಗ ನಮ್ಮ ಮೆದುಳಿಗೆ ಗೊತ್ತಾಗದಿದ್ದರೂ ನಾವು ನಮ್ಮ ಕಾಲನ್ನೋ, ಚಕ್ಕಲಕುಲಿ ಮಾಡಿದ ಅವಯವವನ್ನೋ ಹಿಂತೆಗೆಯುತ್ತೇವೆ. ಇದಕ್ಕೆ **ಪರಾವರ್ತನ ವ್ಯಾಪಾರ**ವೆನ್ನುತ್ತೇವೆ. ಇಲ್ಲಿ ದೊಡ್ಡ ಮೆದುಳಾಗಲಿ, ಸಣ್ಣ ಮೆದುಳಾಗಲಿ, ಮಣಿಸಿರವಾಗಲಿ ಯಾವುದೊಂದೂ ಕೆಲಸವನ್ನು ಮಾಡುವುದಿಲ್ಲ. ನಮ್ಮ ದೇಹದಲ್ಲಿ ನಮಗೆ ಗೊತ್ತಿಲ್ಲದೆ ಈ ಬಗೆಯ ಹಲವು ಕೆಲಸಗಳು ನಿರಾತಂಕವಾಗಿ ಸಾಗುತ್ತವೆ. ಕಣ್ಣಿನಲ್ಲಿ ಏನಾದರೂ ಬೀಳಲ್ಲಿಕ್ಕಿದ್ದಾಗ ರೆಪ್ಪೆಗಳು ಫಕ್ಕನೆ ಮುಚ್ಚಿಕೊಳ್ಳುವುದು ಈ ಪರಾವರ್ತನ ಕ್ರಮದ ಒಂದು ದೃಷ್ಟಾಂತವಾಗಿದೆ.

ಜೀವಿತಾಧಿಷ್ಠಾನ ನರಮಂಡಲ:— ಮೇಲೆ ಹೇಳಿದಂತೆ ಮೆದುಳಿನ ಮತ್ತು ಕಶೇರುಕಾರಜ್ಜುವಿನ ನರಮಂಡಲವಲ್ಲದೆ ಇನ್ನೊಂದು, ಸ್ವತಂತ್ರ ವರ್ತನೆಯನ್ನು ಕೈಕೊಂಡು ಕಶೇರುಕಾಸ್ತಂಭದ ಪ್ರತಿಯೊಂದು ಪಾರ್ಶ್ವದಲ್ಲಿಯೂ ಉದ್ದಕ್ಕೂ ಚಾಚಿರುವ ಗ್ರಂಥಿಗಳಿಂದ ಹೊರಟು, ಬಲೆಯೋಪಾದಿಯಲ್ಲಿ ವಿಸ್ತರಿಸಿರುವುದಲ್ಲದೆ, ಕಶೇರುಕಾಸ್ತಂಭದಿಂದ ಹೊರಡುವ ಜ್ಞಾನವಾಹಿ ನರಗಳೊಡನೆಯೂ ಸೇರಿಕೊಂಡಿದೆ. ಈ ಬಲೆಯು ದೇಹದ ಅಂತರ್ ಪ್ರದೇಶದಲ್ಲಿರುವ ಹೃದಯಕಮಲ, ಶ್ವಾಸಕೋಶಗಳು, ಅನ್ನಕೋಶ, ಕರುಳು, ಇವುಗಳ ಸ್ನಾಯುಗಳ ಸುತ್ತಲೂ, ಮತ್ತು ಸೂಕ್ಷ್ಮವಾದ ಶುದ್ಧ ರಕ್ತನಾಳಗಳು, ಲೋಮನಾಳಗಳು, ಮುಂತಾದವುಗಳಿಗೂ ವ್ಯಾಪಿಸಿ

ಕೊಂಡಿದೆ. ಹೀಗಾಗಿ ಈ ಅಂಗಗಳ ಸಾಮಾನ್ಯ ಕಾರ್ಯಗಳನ್ನು ನಡಿಸುವ ಕಾಲದಲ್ಲಿ ಈ ನರಮಂಡಲವು ಸ್ವತಂತ್ರವಾಗಿದ್ದರೂ, ಏನೊಂದು ಬಗೆಯ ವಿಶೇಷ ರೀತಿಯ ಅಕ್ರಮವು ಮೇಲಿನ ಅಂಗಗಳಲ್ಲಿ ಉಂಟಾದ ಕಾಲದಲ್ಲಿ ಆ ಕುರಿತು ಕಶೇರುಕಾರಜ್ಜುವಿನ ಜ್ಞಾನವಾಹಿನರಗಳಿಗೆ ತಿಳಿಸಿ, ಅವುಗಳ ಮೂಲಕ ಮೆದುಳಿಗೆ ವರ್ತಮಾನ ಮುಟ್ಟಿಸುತ್ತದೆ. ಈ ನರಮಂಡಲಕ್ಕೆ ಜೀವಿತಾಧಿಷ್ಠಾನ ನರಮಂಡಲವೆನ್ನುತ್ತಾರೆ. ಸಾಮಾನ್ಯ ನರಮಂಡಲವು ಸಾಮಾನ್ಯ ತಂತಿ ಇಲಾಖೆಯ ರಚನೆ ಎನ್ನುವುದಾದರೆ ಈ ಜೀವಿತಾಧಿಷ್ಠಾನ ನರಮಂಡಲವನ್ನು ರೈಲ್ವೆ ಇಲಾಖೆಯ ತಂತಿ ರಚನೆ ಎನ್ನಬಹುದು. ರೈಲ್ವೆ ಇಲಾಖೆಯ ತಂತಿ ಇಲಾಖೆಯು ಸ್ವತಂತ್ರವಾಗಿ ರೈಲ್ವೆ ಸಂಬಂಧವಾದ ವರ್ತಮಾನಗಳನ್ನು ತಿಳಿಸುವುದಕ್ಕಾಗಿ ರಚಿಸಲ್ಪಟ್ಟಿದ್ದರೂ ಅದರಲ್ಲಿರುವ ಪ್ರಮುಖ ಆಫೀಸುಗಳಿಂದ ಸಾಮಾನ್ಯ ತಂತಿ ಇಲಾಖೆಯ ಆಫೀಸುಗಳಿಗೆ ವರ್ತಮಾನ ಕೊಡುವುದಕ್ಕೆ ಏರ್ಪಾಡು ಇದೆ. ಹೀಗಿದ್ದು ಈ ರೈಲ್ವೆ ಕಂಪೆನಿಯ ಆಫೀಸಿನಿಂದ ಜನರಲ್ ತಂತಿ ಆಫೀಸಿಗೆ ವರ್ತಮಾನ ಕಳುಹಿಸಿ ಪ್ರತ್ಯುತ್ತರವನ್ನು ತರಿಸಲು ಸಾಧ್ಯವಾಗುತ್ತದೆ. ಅದೇ ರೀತಿಯಲ್ಲಿ ಜೀವಿತಾಧಿಷ್ಠಾನ ನರಮಂಡಲದ ಮೂಲಕ ಮೆದುಳಿಗೂ ವರ್ತಮಾನಗಳು ಬರುತ್ತಿವೆ.

ಮೇಲಿನ ವಿವರಣೆಯಿಂದ ಈ ನರಮಂಡಲ, ಕಶೇರುಕಾರಜ್ಜು ಮೆದುಳು ಇವುಗಳ ಕೆಲಸವು ಅಮೂಲ್ಯವಾದುದರಿಂದ, ಅವುಗಳಿಗೆ ತಟ್ಟನೆ ಅಪಾಯ ತಗಲದಂತೆ ಅವನ್ನು ಎಲುಬಿನ ಕವಚದೊಳಗೆ ಭದ್ರವಾಗಿರಿಸಿವೆ. ತಂತಿಗಳು ನಮಗೆ ಬಾಹ್ಯದಲ್ಲಿ ಕಾಣುವುದಾದರೂ ತಂತಿ ವರ್ತಮಾನಗಳ ಕೆಲಸವು ಒಂದು ಸ್ಥಾನದಿಂದ ಇನ್ನೊಂದು ಸ್ಥಾನಕ್ಕೆ ಹೋಗುವುದಕ್ಕೆ ಆಗತ್ಯವಿರುವ ವಿದ್ಯುಚ್ಛಕ್ತಿಯ ಯಂತ್ರಸಾಮಗ್ರಿಯನ್ನು ಭದ್ರವಾದ ಕೋಣೆಗಳಲ್ಲಿ ಕ್ರಮಪಡಿಸಿ ಇಟ್ಟಂತೆ ಇವುಗಳ ರಚನೆಯು ಇದೆ.

ಸ್ಥೂಲಮಾನದಿಂದ ಹೇಳುವುದಾದರೆ ಬುದ್ಧಿಯು ದೇಹವೆಂಬ ಕಾರ್ಖಾನೆಯ ಯಜಮಾನನಾಗಿ ಮನಸ್ಸೆಂಬ ತನ್ನ ಗುಮಾಸ್ತನೊಂದಿಗೆ ಮೆದುಳಲ್ಲಿ ವಾಸವಾಗಿರುವಸಂತಲೂ, ಗುಮಾಸ್ತನು ತಂತಿ ವರ್ತಮಾನಗಳನ್ನು ಆಗಾಗ ತರಿಸಿ ಅವುಗಳಲ್ಲಿ ವಿಶೇಷ ಸಮಾಚಾರಗಳೇನಾದರೂ

ಇದ್ದರೆ ಪ್ರತ್ಯುತ್ತರಕ್ಕೆ ಅಪ್ಪಣೆಯನ್ನು ಯಜಮಾನನಿಂದ ಪಡೆಯುತ್ತಾನೆಂತಲೂ ತಿಳಿಯಬೇಕು.

ಜ್ಞಾನೇಂದ್ರಿಯಗಳ ಪೈಕಿ ಕಣ್ಣು, ಕಿವಿ, ಮೂಗು, ನಾಲಗೆ ಮೆದುಳಿಗೆ ಸಮೀಪವಿದ್ದು, ದೇಹರಕ್ಷಣೆಗೂ ಅಂಗಪೋಷಣೆಗೂ ಬೇಕಾದ ಜ್ಞಾನಸಂಗ್ರಹದ ಕೆಲಸವನ್ನು ನಿರ್ವಹಿಸುತ್ತಿರುವುದರಿಂದ ಅವು ಬಹು ಚುರುಕಾಗಿದ್ದು ತಮ್ಮ ಕೆಲಸವನ್ನು ಜಾಗ್ರತೆಯಾಗಿ ನಡಿಸುವಂತೆಯೂ, ಮತ್ತು ಎದೆಗುಂಡಿಗೆ, ಶ್ವಾಸಕೋಶಗಳು, ಅನ್ನಕೋಶ, ಕಾಳಜ, ರಕ್ತನಾಳಗಳು ಇವುಗಳ ಕೆಲಸವು ಸರಾಗ ನಡಿಯುವಂತೆಯೂ 10 ಜತೆನರಗಳು ಮೆದುಳಿನ ಅಡಿಭಾಗದಿಂದಲೇ ಹೊರಟು ಈ ಅಂಗಾಂಗಗಳಿಗೆ ವ್ಯಾಪಿಸಿವೆ ಎಂದು ಹಿಂದೆ ಹೇಳಿದೆವು. ಉಳಿದ ಎರಡು ಜತೆಯು ಕಶೇರುಕಾಸ್ತಂಭದೊಳಗಿನ ಬಳ್ಳಿಯ 31 ಕಶೇರುಕಾಜನ್ಯ ಜತೆ ನರಗಳ ಮೂಲಕ ಸ್ಪರ್ಶೇಂದ್ರಿಯದ ವಿಸ್ತಾರವಾದ ಪ್ರದೇಶದಿಂದ ಜ್ಞಾನವನ್ನು ಮೆದುಳಿಗೆ ತರುತ್ತಿವೆ. ಸ್ಪರ್ಶೇಂದ್ರಿಯದ ವಿಸ್ತಾರವು ದೊಡ್ಡದಿದ್ದು ಅದರ ಸಂಪೂರ್ಣ ವರ್ತಮಾನವನ್ನು ಮೆದುಳಿಗೆ ತಲಪಿಸಿ ಅಪ್ಪಣೆಯನ್ನು ಪಡೆಯುವುದು ಸಾಧ್ಯವಲ್ಲದ್ದರಿಂದ ಚಿಲ್ಲರೆ ವಿಷಯಗಳ ಇತ್ಯರ್ಥವನ್ನು ಮೆದುಳಿಗೆ ತಿಳಿಸುವ ಮೊದಲೇ ನಿಕಾಲೆ ಮಾಡುವ ಅಧಿಕಾರವು ಕಶೇರುಕಾಸ್ತಂಭದ ಮೆದುಳುಬಳ್ಳಿಗೆ ಇದೆ. ಹಾಗೆ ನಿಕಾಲೆ ಮಾಡಿದೊಡನೆ ಮಾತ್ರ ಆ ವಿಷಯವನ್ನು ಮೆದುಳಿಗೆ ವರದಿ ಕೊಡಬೇಕು. ಅದನ್ನು ಮೆದುಳು ಚಿಲ್ಲರೆ ಸಂಗತಿ ಎಂದು ತಿಳಿದು ವಿಲೆ ಇಡಬಹುದು; ಅಥವಾ ಮೆದುಳುಬಳ್ಳಿಯ ಅಪ್ಪಣೆಯನ್ನು ವಿಮರ್ಶಿಸಿ ಪ್ರತ್ಯೇಕ ಅಪ್ಪಣೆಯನ್ನು ಆಯಾ ಸ್ಥಾನಕ್ಕೆ ಕಳುಹಿಸಬಹುದು. ಉದಾಹರಣೆಯಾಗಿ ಚಿತ್ತಾಕರ್ಷಕವಾದ ಕಥೆಯೊಂದನ್ನು ಓದುತ್ತಾ ಇದ್ದಾಗ ಮೈಮೇಲೆ ಏನೊ ಹರಿದಾಡುವಂತೆ ತೋರಿ ಅದನ್ನು ನೋಡದನೆ ಕೈಯಿಂದ ಒರಸಿ ಒತ್ತಟ್ಟಿಗೆ ಕಿತ್ತು ಬಿಸಾಡಬಹುದು. ಈ ವಿಚಾರವು ಮೆದುಳಿಗೆ ತಿಳಿಯುವ ಮುಂಚೆಯೇ ಆ ಹರಿದಾಡಿದ ವಸ್ತುವಿನ ಸ್ಪರ್ಶದಿಂದ ಉಂಟಾದ ಜ್ಞಾನದ ಪರಿಣಾಮವಾಗುವುದು. ತಟ್ಟನೆ ಈ ಪರಾವರ್ತನ ಕಾರ್ಯದ ಏರ್ಪಾಡು ಮೆದುಳಿಗೂ ತಲಪುತ್ತದೆ. ಆಗ 'ಅದೇನೆಂದು ನೋಡು' ಎಂಬ ಅಪ್ಪಣೆಯು ಕಣ್ಣಿಗೆ ಬರುತ್ತದೆ. ವಸ್ತುವನ್ನು ನೋಡು

ವಂತೆ ಕೈ ಪುಸ್ತಕವನ್ನು ಒಂದು ಬದಿಗೆ ಹಿಡಿದು ಆ ವಸ್ತುವನ್ನು ಕಣ್ಣು ಹುಡುಕುತ್ತದೆ. 'ಅದು ಶತಪದಿ' ಎಂದು ಗೊತ್ತಾದೊಡನೆ ಜಗ್ಗನೆದ್ದು, ಅದನ್ನು ದೂರಕ್ಕೆ ಓಡಿಸಿ ಬಿಡುವಂತೆ ಬುದ್ಧಿಯು ಪ್ರೇರೇಪಿಸುತ್ತದೆ. ಇಲ್ಲಿ ಪರಾವರ್ತನ ಕಾರ್ಯದ ಪುನರ್ವಿಮರ್ಶೆ ಆಯಿತೆನ್ನಬೇಕು. ಈ ಪರಾವರ್ತನ ಕಾರ್ಯವು ಸ್ಪರ್ಶೇಂದ್ರಿಯದಲ್ಲಿ ಮಾತ್ರವೇ ಅಲ್ಲ, ಎದೆಗುಂಡಿಗೆ, ಶ್ವಾಸಕೋಶ, ಅನ್ನಕೋಶ, ಕಾಳಜ ಮತ್ತು ರಕ್ತನಾಳಗಳ ಕಾರ್ಯದಲ್ಲಿಯೂ ಕಂಡು ಬರುತ್ತಿದೆ. ಉದಾಹರಣೆಯಾಗಿ ಅಜೀರ್ಣದಿಂದ ಹೊಟ್ಟೆಯಲ್ಲಿ ಪಿತ್ಥರಸವು ಹೆಚ್ಚಾಗಿದ್ದಾಗ ತನ್ನಷ್ಟಕ್ಕೆ ದವಡೆಯೊಳಗಿನ ಗ್ರಂಥಿಗಳಿಂದ ಜೊಲ್ಲು ಹೊರಡುತ್ತದೆ. ಗಂಟಲು ಅಗಲವಾಗಿ ತೆರೆದು ವಾಂತಿಯಾಗುವುದಕ್ಕೆ ಪ್ರಯತ್ನ ನಡೆಯುತ್ತದೆ. ಅದೇ ರೀತಿಯಲ್ಲಿ ರುಚಿಕರವಾದ ವಸ್ತುವನ್ನು ಕಂಡೊಡನೆ ಅಥವಾ ಅದರ ವಿವರವನ್ನು ಕೇಳಿದೊಡನೆ ಬಾಯಿಯೊಳಗೆ ಜೊಲ್ಲು ಸುರಿಯುತ್ತದೆ. ಇದು ಅನೈಚ್ಛಿಕವಾಗಿದ್ದು ತನ್ನಷ್ಟಕ್ಕೆ ಆಗುವ ಪರಾವರ್ತನವಾಗಿದೆ.

ಈ ನರಗಳಾದರೂ ಬರೇ ತಂತುಗಳಾಗಿಲ್ಲ. ಅವುಗಳಲ್ಲಿ ಸಣ್ಣ ಅಣುಗಳೂ ತಂತುಗಳೂ ಇವೆ. ಅಣುಗಳು ಅಲ್ಲಲ್ಲಿ ಅಂಚಿನಲ್ಲಿ ಕವಲೊಡೆದು ನರ ಸಾಮುಗ್ರಿಗಳಿಂದ ವಿರಚಿತವಾಗಿವೆ. ಈ ಕವಲುಗಳಲ್ಲಿ ತಂತುಗಳು ಹೊರಡುತ್ತವೆ. ವಾಹಕ ಕಾರ್ಯವನ್ನು ಈ ತಂತುಗಳೂ ಬಾಹ್ಯ ವಸ್ತುಗಳ ವರ್ತಮಾನ ಸಂಗ್ರಹಿಸುವ ಮತ್ತು ಕಳುಹಿಸುವ ಕಾರ್ಯವನ್ನು ಈ ಅಣುಗಳೂ ಮಾಡುತ್ತಿವೆ. ಈ ಅಣುಗಳು ಚಿಕ್ಕ ತಂತಿ ಆಫೀಸುಗಳೆಂತಲೇ ಹೇಳಬಹುದು. ತಂತುಗಳು ತಂತಿಯ ಕಂಬಿಗಳಾಗಿವೆ. ಇವು ಲಕ್ಷೋಪಲಕ್ಷವಾಗಿ ಇಡೀ ದೇಹದಲ್ಲಿ ವ್ಯಾಪಿಸಿರುವುದರಿಂದ ಇವುಗಳ ಕೆಲಸವು ಎಷ್ಟು ಚುರುಕಾಗಿ ನಡೆಯುತ್ತದೆಂದು ತಿಳಿಯಬಹುದು. ಇವು ಅಲ್ಲಲ್ಲಿ ಕೂಡಿ ಒಂದು ದೊಡ್ಡ ತಂತಿ ಆಫೀಸಿನಂತೆ ಗ್ರಂಥಿಯಾಗಿ ಇರುತ್ತವೆ.

ದೊಡ್ಡ ಮೆದುಳಿನಲ್ಲಿಯೂ ಕ್ರಿಯಾವಾಹಿ ಮತ್ತು ಜ್ಞಾನವಾಹಿ ಆಫೀಸುಗಳು ಇವೆ. ದೊಡ್ಡ ಮೆದುಳಿನ ಮೇಲಂಚಿನಲ್ಲಿ ಕ್ರಿಯಾವಾಹಿ ಆಫೀಸುಗಳು ಇವೆ. ಇದಲ್ಲದೆ ಮೆದುಳಿನ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಇಂದ್ರಿಯಗಳ ಮೇಲೆ ಅಧಿಕಾರ ನಡಿಸುವ ಆಫೀಸುಗಳಿವೆ. ಆಯಾಯ

ಭಾಗಕ್ಕೆ ಪೆಟ್ಟು ತಗಲಿದರೆ ಮಾತ್ರವೇ ಆ ಇಂದ್ರಿಯದ ಕೆಲಸವು ನಿಂತು ಹೋಗುತ್ತದೆ. ನಾವು ಬಿದ್ದು ತಲೆಬುರುಡೆಯ ಹಿಂಬದಿಗೆ ಪೆಟ್ಟು ತಗಲಿದರೆ ಕಣ್ಣುಕತ್ತಲೆ ಬಂದು ಕಣ್ಣೆದುರಿಗೆ ನಕ್ಷತ್ರ ಕಂಡಂತಾಗುವುದಕ್ಕೆ ಇದೇ ಕಾರಣ. ಒಬ್ಬನ ನಾಲಗೆಯ ಮೇಲಣ ಅಧಿಕಾರ ನಡೆಸುವ ಆಫೀಸು ಹಾಳಾದರೆ ಮಾತಾಡಲು ನಾಲಗೆ ಮಗಚುವುದಿಲ್ಲ. ಆದರೆ ಆತನ ಕಿವಿಯು ಮತ್ತು ಕೈಯ ಕಡೆಗೆ ವ್ಯಾಪಿಸುವ ನರಗಳ ಆಫೀಸುಗಳು ಚೇತನಾವಸ್ಥೆಯಲ್ಲಿರುವುದರಿಂದ ಆತನಿಗೆ ಇತರರು ಆಡಿದ್ದು ಕೇಳಿಸುತ್ತದೆ, ಆತನು ಉತ್ತರವನ್ನು ಬರೆದು ತೋರಿಸಲು ಸಾಧ್ಯವಿದೆ.

ಅಲ್ಪ ಪ್ರಾಣಿಗಳಲ್ಲಿ ದೊಡ್ಡ ಮೆದುಳು ಮನುಷ್ಯನ ಮೆದುಳಿನಷ್ಟು ಬಲಿತುಕೊಳ್ಳುವುದಿಲ್ಲ. ಹೀಗಾಗಿ ಅನೇಕಾನೇಕ ಕೆಲಸಗಳು ಮೇಲೆ ಹೇಳಿದ ಈ ಗ್ರಂಥಿಗಳಿಂದಲೆ ಸಾಗುತ್ತಿವೆ. ಆದರೆ ಮನುಷ್ಯನಲ್ಲಿ ಅವನ ಮಾನಸಿಕ ಮತ್ತು ದೇಹದ ವ್ಯಾಪಾರಗಳು ವಿಶೇಷ ರೀತಿಯವಿರುವುದರಿಂದ ದೊಡ್ಡ ಮೆದುಳು ಎಲ್ಲಾ ಕೆಲಸಗಳನ್ನು ತಾನೊಬ್ಬನೇ ವಹಿಸಿಕೊಳ್ಳುವುದಿಲ್ಲ. ಸರ್ವಾಧಿಕಾರವನ್ನು ಅದು ತಾನೇ ಇಟ್ಟುಕೊಂಡರೂ ಚಿಕ್ಕ ಮೆದುಳು, ಮಣಿಸಿರ, ಮತ್ತು ಕಶೇರುಕಾರಜ್ಜುವಿಗೆ ಕೆಲವಂಶ ಸ್ವಾತಂತ್ರ್ಯವನ್ನು ಕೊಟ್ಟಿದೆ. ಅಪಾಯಕರವಾದ ಶತ್ರುವೊಬ್ಬನು ಬಂದನೆಂಬ ಬೋಧೆಯಾದೊಡನೆ ಬುದ್ಧಿಯು ದೊಡ್ಡಮೆದುಳಿನಲ್ಲಿ ವಿಚಾರ ನಡಿಸಿ ಚಿಕ್ಕ ಮೆದುಳಿಗೆ ಸೂಚನೆ ಕೊಡುತ್ತದೆ. ಆಗ ಅದು ಕೈಯ ಅಥವಾ ಕಾಲುಗಳ ಸ್ನಾಯುಗಳಿಗೆ ಎಚ್ಚರಕೊಟ್ಟು, ಆ ಶತ್ರುಬಾಧೆ ತಪ್ಪಿಸಿಕೊಳ್ಳುವ ಹಂಚಿಕೆಯನ್ನು ಮಾಡುತ್ತದೆ. ತನ್ನಲ್ಲಿರುವ ಶಿಟ್ಟನ್ನು ಹೊರಗೆ ತೋರ್ಪಡಿಸುವಂತೆ ಮಣಿಸಿರಕ್ಕೆ ಅಪ್ಪಣೆಯನ್ನು ಕೊಡುತ್ತದೆ. ಆಗ ಮುಖದ ಮೇಲೆ ಇರುವ ರಕ್ತನಾಳಗಳು ವಿಕಾಸವಾಗಿ ಮುಖವು ಕೆಂಪಗೇರುತ್ತದೆ; ಕಣ್ಣು ಕೆರಳುತ್ತದೆ; ಎದೆ ಗುಂಡಿಗೆಯು ವೇಗವಾಗಿ ಬಡೆಯುತ್ತದೆ, ಶ್ವಾಸೋಚ್ಛ್ವಾಸಗಳು ಬೇಗಬೇಗನೆ ಜರಗುತ್ತವೆ. ಇದಕ್ಕೆಲ್ಲ ಮಣಿಸಿರವೇ ಜವಾಬ್ದಾರಿಯಾಗಿದೆ.

ಮೇಲೆ ಹೇಳಿದ ಅಣುಗಳು ದೊಡ್ಡ ಮೆದುಳು, ಸಣ್ಣ ಮೆದುಳು, ಮಣಿಸಿರ ಮತ್ತು ಮೆದುಳುಬಳ್ಳಿಯಲ್ಲಿ ಧಾರಾಳವಾಗಿದ್ದು, ಅವವುಗಳ ಕೆಲಸಮಾಡಿದ ಹಾಗೆ ಸವೆದು ಬಡವಾಗುತ್ತವೆ. ಇವಕ್ಕೆ ಆಹಾರವು

ಬೇಕು. ಈ ಆಹಾರವು ರಕ್ತನಾಳಗಳಿಂದ ಈ ಅಣುಗಳಿಗೆ ಬರುತ್ತದೆ. ದೇಹದ ರಕ್ತದಲ್ಲಿ $\frac{1}{5}$ನೆ ಅಂಶವು ಮೆದುಳಿಗೆ ಚಲಿಸುತ್ತದೆ. ನಾವು ಕಷ್ಟತರವಾದ ಆಲೋಚನೆ ಮಾಡುತ್ತಿರುವಾಗ ಮೆದುಳಿಗೆ ಹರಿಯುವ ನಾಳಗಳು ವಿಕಾಸವಾಗಿ, ರಕ್ತವು ಧಾರಾಳವಾಗಿ ಅಲ್ಲಿಗೆ ಪ್ರವಹಿಸುವುದರಿಂದ ಈ ನಾಳಗಳು ಊದಿದಂತೆ ಕಾಣಿಸುತ್ತವೆ. ನಿದ್ರೆ ಹತ್ತಿದಾಗ ಮೆದುಳಿಗೆ ರಕ್ತವು ವಿಶೇಷವಾಗಿ ಪ್ರವಹಿಸುವುದಿಲ್ಲ. ಮೆದುಳಿಗೆ ರಕ್ತವು ಪ್ರವಹಿಸದೆ ಇದ್ದಾಗ ನಾವು ತೂಕಡಿಸುತ್ತೇವೆ. ಹೊಟ್ಟೆ ತುಂಬಾ ಉಂಡಾಗ ತೂಕಡಿಸುವುದಕ್ಕೆ ಈ ಪ್ರವಾಹವು ಮೆದುಳಿಗೆ ಹೋಗುವಂಥಾದ್ದು ಕಡಿಮೆಯಾದುದೇ ಕಾರಣ. ಹಗಲಲ್ಲಿ ಮೆದುಳಿನ ಕೆಲಸದಿಂದ ಸವೆದು ಕೃಶವಾದ ಈ ಅಣುಗಳು ನಿದ್ದೆಯ ಕಾಲದಲ್ಲಿ ಆಹಾರ ಹೀರಿ ನವಚೇತನವನ್ನು ಪಡೆಯುತ್ತವೆ. ಇದರಿಂದಲೇ ಕಷ್ಟತರವಾದ ವಿಷಯಗಳನ್ನು ಕಲಿಯುವುದು ನಿದ್ದೆಯ ವಿಶ್ರಾಂತಿಯನ್ನು ಹೊಂದಿದ ಮೇಲೆ ಮುಖ್ಯವಾಗಿ ಬೆಳಗ್ಗಿನ ಹೊತ್ತು ಸುಲಭವಾಗುತ್ತದೆ. ಮೆದುಳಿನ ಬೇರೆ ಬೇರೆ ಭಾಗಗಳಿಗೆ ಬೇರೆ ಬೇರೆ ಅಧಿಕಾರವಿರುವುದರಿಂದ ಅಂಥ ಅಧಿಕಾರನಿರ್ವಾಹದ ಸಮಯದಲ್ಲಿ ಸವೆದ ಅಣುಗಳಿಗೆ ವಿಶ್ರಾಂತಿಕೊಡುವುದಕ್ಕೆ ನಿದ್ದೆ ಮಾಡುವುದು ಮಾತ್ರವೇ ಒಂದು ಉಪಾಯವಲ್ಲ, ಇತರ ವಿಧಾನಗಳೂ ಇವೆ. ಮಾನಸಿಕ ವ್ಯಾಪಾರಗಳಿಂದ ಸ್ವಲ್ಪ ಹೊತ್ತು ಮನಸ್ಸು ದಣಿದು ಇನ್ನು ಮುಂದೆ ಕೆಲಸಮಾಡಲು ಒಪ್ಪದೆ ಇದ್ದಾಗ ಅದಕ್ಕೆ ವಿಶ್ರಾಂತಿ ಕೊಡುವುದಕ್ಕೆ ವ್ಯಾಯಾಮ, ಸಂಗೀತ ಮುಂತಾದ ಬೇರೊಂದು ವೃತ್ತಿಯನ್ನು ಕೈಕೊಳ್ಳಲೂ ಬಹುದು. ಈ ವಿಷಯವನ್ನು ಮುಂದೆ ಇನ್ನೊಮ್ಮೆ ಇನ್ನೊಂದು ಸಂದರ್ಭದಲ್ಲಿ ಎತ್ತಿಕೊಳ್ಳಲಾಗುವುದು.

ಸ್ಥೂಲ, ಸೂಕ್ಷ್ಮ, ಕಾರಣ ದೇಹಗಳು.

6ನೆಯ ಅಧ್ಯಾಯ.

ಹಿಂದಿನ ಅಧ್ಯಾಯದಲ್ಲಿ ನರಮಂಡಲ ಮತ್ತು ಮೆದುಳಿನ ರಚನೆ ಮತ್ತು ಅವುಗಳಲ್ಲಿರುವ ಬೇರೆ ಬೇರೆ ಉಪಅಂಗಗಳ ಶ್ರಮವಿಭಾಗವನ್ನು ಸ್ವಲ್ಪ ಮಟ್ಟಿಗೆ ವಿವರಿಸಿದೆವು. ಅವುಗಳ ರಚನೆಯು ಅತಿ ವಿಚಿತ್ರವಾದುದು. ಮನುಷ್ಯ ಪ್ರಾಣಿಯ ಮೆದುಳಿನ ರಚನೆಯಲ್ಲಿಯೂ ಪಶ್ವಾದಿಗಳ ಮೆದುಳಿನ ರಚನೆಯಲ್ಲಿಯೂ, ಹಾಗೆಯೇ ಕಾಡು ಮನುಷ್ಯರ ಮತ್ತು ವಿದ್ಯಾವಂತರಾಗಿ ಚುರುಕುಬುದ್ಧಿಯುಳ್ಳವರ ಮೆದುಳಿನ ರಚನೆಯಲ್ಲಿಯೂ ವಿಶೇಷ ವ್ಯತ್ಯಾಸವಿದೆ. ಈ ರಚನೆಯಿಂದ ಜ್ಞಾನ ಸಂಪಾದನೆಯ ಕಾರ್ಯವು ಹೇಗೆ ಸಾಗುತ್ತಿದೆ ಎಂದು ಈಗ ವಿಚಾರಿಸೋಣ.

ಬುದ್ಧಿಯು ಮೆದುಳಿನ ಒಂದು ಕಾರ್ಯವೆಂಬುದು ಸರ್ವರಿಗೂ ತಿಳಿದ ವಿಷಯ. 'ಒಬ್ಬನಿಗೆ ತಲೆ ಕೆಟ್ಟುಹೋಗಿದೆ,' 'ಬುದ್ಧಿ ಭ್ರಂಶವಾಗಿದೆ' 'ಅವನ ಮೆದುಳಿನಲ್ಲಿ ಹತ್ತಿ ಇಲ್ಲ' ಎನ್ನುವಾಗ ಮೆದುಳಿನ ಭಾಗವು ಹತ್ತಿಯಂತೆ ಮೆತ್ತಗಾದ ಬಿಳುಪಾದ ವಸ್ತುವಿನಿಂದ ಕೂಡಿದೆ ಎಂಬ ಅಭಿಪ್ರಾಯವು ಜನಸಾಮಾನ್ಯರಲ್ಲಿಯೂ ಇದೆಯೆನ್ನಬಹುದು. ಆದರೆ ಅವನು 'ಕೆಚ್ಚೆದೆಯವನು,' 'ಅವನ ಹೃದಯವು ಕರಗಿ ನೀರಾಯಿತು,' 'ಕಲ್ಲೆದೆ' ಇತ್ಯಾದಿ ಪದಪ್ರಯೋಗಗಳಿಂದ ಹೃದಯವು ಭೀತಿ, ಸಂತೋಷ, ದಯೆ, ಲಜ್ಜೆ ಮುಂತಾದ ವಿಕಾರಗಳ ಸ್ಥಾನವೆಂತ ಹೇಳುವ ವಾಡಿಕೆಯಾಗಿದೆ ಎಂದು ತಿಳಿಯಬೇಕು. ಎದೆಗುಂಡಿಗೆಯ ಬಡೆದಾಟದಲ್ಲಿ ಈ ವಿಕಾರಗಳ ನಿಮಿತ್ತ ವ್ಯತ್ಯಾಸಗಳು ಉಂಟಾಗುವ ಕಾರಣದಿಂದಲೇ ಈ ಬಗೆಯ ಲೋಕೋಕ್ತಿಗೆ ಕಾರಣವಾಗಿದೆ. ವಸ್ತುತಃ ಈ ವಿಕಾರಗಳು ಮೆದುಳಿನಲ್ಲಿಯೇ ಆಗುತ್ತವೆ. ಇವು ಉಂಟಾಗುವುದಕ್ಕೆ ಜ್ಞಾನೇಂದ್ರಿಯಗಳು ದಾರಿ. ಜ್ಞಾನೇಂದ್ರಿಯಗಳಿಂದ ಒಳಕ್ಕೆ ಬಂದ ಜ್ಞಾನವು ಈ ವಿಕಾರಗಳ ಕಾರಣವಾಗಿದೆ ಎಂಬದನ್ನು ಈ ಅಧ್ಯಾಯದಲ್ಲಿ ವಿವರಿಸಲು ಇರುವೆವು.

ತೋಟದಲ್ಲಿ ನಾಲ್ಕೈದು ಮಂದಿ ಸಂಚರಿಸುತಿದ್ದಾರೆ, ಅವರ ಪೈಕಿ ನೀವೂ ಒಬ್ಬರೆಂದು ಭಾವಿಸಿರಿ. ಸಂಚರಿಸುವವರಲ್ಲಿ ಒಬ್ಬನು ಎಲ್ಲರಿ

ಗಿಂತಲೂ ಸ್ವಲ್ಪ ಮುಂದೆ ನಡೆದು 'ಇಗೋ ಹಾವು' ಎಂದು ಗಟ್ಟಿಯಾಗಿ ಕೂಗಿದನು. ಆಗ ನಿಮ್ಮ ಮನಸ್ಸಿನಲ್ಲಿ ಆಗುವ ವೃತ್ತಿ ವ್ಯಾಪಾರಗಳನ್ನು ಒಂದೊಂದಾಗಿ ಚರ್ಚಿಸೋಣ. 'ಇಗೋ ಹಾವು' ಎಂಬ ಶಬ್ದಗಳು ನಿಮ್ಮ ಗೆಳೆಯನ ಬಾಯಿಯಿಂದ ಹೊರಬಿದ್ದೊಡನೆ ಆ ಶಬ್ದದಿಂದ ವಾಯುವಿನಲ್ಲಿ ಚಲನಾತರಂಗಗಳು ಉಂಟಾಗಿ, ಅವು ನಿಮ್ಮ ಕಿವಿಯ ಮದ್ದಳೆಗೆ ಬಡೆಯುತ್ತವೆ. ಅಲ್ಲಿ ಪಂಚೇಂದ್ರಿಯಗಳಲ್ಲಿ ಒಂದಾದ ಶಬ್ದೇಂದ್ರಿಯವು ಇದೆ. ಅದಕ್ಕೆ ಈ ವಾಯುವಿನ ತೆರೆಗಳ ಸ್ಪರ್ಶವಾಗುತ್ತದೆ. ಸ್ಪರ್ಶವಾದೊಡನೆ ಅದು ನಿಮಗೆ ಗೊತ್ತಾಯಿತು ಎಂದು ತಿಳಿಯಬಾರದು. ಆ ಗೆಳೆಯನು ಒಂದೆರಡು ಸಲ 'ಹಾವು ಹಾವು' ಎಂದು ಕೂಗಿದ ಮೇಲೆ ಮಾತ್ರವೇ ನಿಮಗೆ ಅದು ಕೇಳಿಸಿತು ಎಂದು ನೀವು ಹೇಳಿದರೆ, ಮೊದಲನೆ ಶಬ್ದವು ಹೊರಟ ಒಡನೆಯೆ ಆ ತರಂಗಗಳು ನಿಮ್ಮ ಕಿವಿಯ ಮದ್ದಳೆಗೆ ಹೊಡೆಯುತ್ತಲೇ ಇದ್ದರೂ ಮೊದಲು ಅವು ನಿಮಗೆ ಗೋಚರವಾಗಲಿಲ್ಲ, ಅದರ ಅರಿವು ನಿಮಗಾಗಲಿಲ್ಲ. ಹಾಗಾದರೆ ಮದ್ದಳೆಗೆ ಈ ತರಂಗಗಳು ಬಡೆದೊಡನೆ ಅರಿವು ಆಗಬೇಕೆಂದಿಲ್ಲವೆಂದಾಯಿತು. ಜ್ಞಾನೇಂದ್ರಿಯಕ್ಕೆ ಸ್ಪರ್ಶವಾದೊಡನೆ ನಿಮಗೆ ಅರಿವಾಗುವುದಿಲ್ಲ. ಬಾಗಿಲು ತಟ್ಟಿದೊಡನೆ ನೀವು ಒಳಗೆ ಪ್ರವೇಶ ಮಾಡಿದಂತಾಗಲಿಲ್ಲ. ಬಾಗಿಲು ತಟ್ಟಿದ ಶಬ್ದವು ಒಳಕ್ಕೆ ಕೇಳಿಸಬೇಕು, ಆಗ ಒಳಗಿದ್ದವರು ಕದವನ್ನು ತೆರೆಯುತ್ತಾರೆ, ಮತ್ತು ನೀವು ಒಳಕ್ಕೆ ಪ್ರವೇಶ ಮಾಡುತ್ತೀರಿ. ಅದೇ ರೀತಿಯಲ್ಲಿ ಕಿವಿಯ ಶಬ್ದೇಂದ್ರಿಯದಲ್ಲಿ ಹೊರಗಿನ ವಾಯುತರಂಗಗಳ ಸ್ಪರ್ಶವಾದೊಡನೆಯೇ ಅರಿವಾಗುವುದಿಲ್ಲ. ಶಬ್ದೇಂದ್ರಿಯದಲ್ಲಿ ಅಂತ್ಯವಾಗುವ ತಂತಿ ಆಫೀಸಿನಲ್ಲಿರುವ ಅಣುವಿಗೆ ತಗಲಿ ಅಲ್ಲಿಂದ ಅದು ನರಗಳ ಮೂಲಕ ಮೆದುಳಿಗೆ ಮುಟ್ಟಬೇಕು. ಆಗಲೇ ಅರಿವಾಯಿತು.

ಕಿವಿಯೊಳಗೆ ಹೋದುದು 'ಹಾವು' ಎಂಬ ಶಬ್ದದಿಂದ ವಾಯುವಿನಿಂದ ಉಂಟಾದ ತೆರೆಗಳು ಮಾತ್ರ. 'ಹಾವು ಎಂದರೇನು' ಎಂಬ ಅನುಭವವು ನಿಮಗೆ ಮೊದಲೇ ಆಗಿಲ್ಲವಾದರೆ ಆ ತೆರೆಗಳು ಮೆದುಳಿನ ವರೆಗೆ ವರ್ತಮಾನ ಕಳುಹಿಸಿದರೂ ನೀವು ತಟಸ್ಥರಾಗಿ ಇರಬಹುದು. ಅಥವಾ 'ಅದೇನು' ಎಂದು ತಿಳಿಯುವ ಬಗ್ಗೆ ಕುತೂಹಲಿತರಾಗಬಹುದು. ಆಗ

ಆ ಶಬ್ದದಿಂದ ಸೂಚಿತವಾಗುವ ವಸ್ತುವಾಗಲಿ ಅಭಿಪ್ರಾಯವಾಗಲಿ ಏನು ಎಂದು ಗೊತ್ತುಹಚ್ಚುವುದಕ್ಕೆ ನಿಮ್ಮ ಇಂದ್ರಿಯಗಳನ್ನು ಪುನಃ ಆ ಶಬ್ದ ಬರುವ ಕಡೆಗೆ ಆಡಿಸುತ್ತೀರಿ. ಮನಸ್ಸಿನ ಬೇರೆ ಆಲೋಚನೆಗಳನ್ನು ಒಮ್ಮೆಗೆ ತಡೆಹಾಕಿ, ಆ ಶಬ್ದದ ಕಡೆಗೆನೆ ಗಮನಕೊಡುತ್ತೀರಿ. ಆಗ 'ಹಾವು' ಎಂದು ಕೂಗಿದವನು ಯಾವ ಕಡೆಗೆ ತನ್ನ ಕೈಬೆರಳನ್ನು ತೋರಿಸುತ್ತಾನೆ ಎಂಬದನ್ನು ನೀವು ಕಣ್ಣುಗಳಿಂದ ನೋಡುತ್ತೀರಿ. ನಿಮ್ಮ ಗೆಳೆಯನು ಆ ವಸ್ತುವನ್ನು ಕುರಿತು ಹೇಳುವುದೆಲ್ಲ ಕಿವಿಯಿಂದ ಕೇಳುತ್ತೀರಿ. ಆ ವಸ್ತುವಿನ ಕಡೆಗೆ ಸ್ವಲ್ಪಹೊತ್ತು ನೋಡಿ ಅದರ ಅಂಗಾಂಗಗಳ ಪರಿಚಯವನ್ನು ಮಾಡಿಕೊಳ್ಳುತ್ತೀರಿ. ಆ ಮೇಲೆ 'ಅದು ವಿಷಜಂತು, ಅದು ಕಚ್ಚಿದರೆ ಪ್ರಾಣಿಗಳು ಸಾಯುತ್ತವೆ' ಎಂಬ ವಿಷಯವನ್ನು ಕೇಳಿ ನೀವು ಅಲ್ಲಿಂದ ಓಡಿಹೋಗಲಿಕ್ಕೆ ನೋಡುತ್ತೀರಿ, ಮತ್ತು ಕಾಲಿಗೆ ಬುದ್ಧಿ ಹೇಳುತ್ತೀರಿ.

ಮೊದಲಿ ನಿಮಗೆ 'ಹಾವು' ಎಂಬದೇನು ಎಂಬ ಪರಿಚಯವಿದ್ದರೆ 'ಹಾವು' ಎಂಬ ಶಬ್ದವು ಕಿವಿಗೆ ಬಿದ್ದೊಡನೆ 'ಎಲ್ಲಿ ಎಲ್ಲಿ?' ಎಂದು ಕೂಗಿ ನಿಮ್ಮ ಗೆಳೆಯನ ಮಾತು ನಿಜವೊ ಎಂದು ಪರೀಕ್ಷಿಸುತ್ತೀರಿ. ಆಗ ಅದು ನಿಜವಾಗಿಯೂ ಹಾವಾದರೆ ನಿಮ್ಮ ಜೀವ ಉಳಿಸುವುದಕ್ಕಾಗಿ ಅಲ್ಲಿಂದ ಓಡುತ್ತೀರಿ. ಒಂದೊಂದು ಸಲ ಬರೆ ಶಬ್ದ ಕೇಳಿದೊಡನೆ ಭಯದಿಂದ ನೀವು ಓಡತೊಡಗಬಹುದು. ಆಗ ಮೆಲ್ಲಗೆ ನಿಮ್ಮಲ್ಲಿ ಸಂದೇಹವುಂಟಾಗಿ ಹಿಂದಿರುಗಿ ಆ ವಸ್ತುವನ್ನು ಪುನಃ ನೋಡಿದಾಗ 'ಅದಕ್ಕೆ ಚಲನೆಯಿಲ್ಲ, ಹಾವಿನಂತೆ ಬರೆ ಆಕಾರ ಬಣ್ಣ ಮಾತ್ರವಿದೆ,' ಎಂದು ಗೊತ್ತಾಗಿ ಸಮೀಪಕ್ಕೆ ಬಂದು ಅದನ್ನು ಮುಟ್ಟಿನೋಡಿ, 'ಅದು ಮಣ್ಣಿನಿಂದ ಹಾವಿನಂತೆ ಮಾಡಿದ ಪ್ರತಿಮೆ' ಎಂದು ತಿಳಿದು, ಮೊದಲು ಉಂಟಾದ ಭಯವನ್ನು ನೀಗಿ, ಕೈತಟ್ಟಿ ನೆಗಾಡಲು ತೊಡಗುತ್ತೀರಿ,

ಇಲ್ಲಿ 'ಹಾವು' ಎಂಬ ಶಬ್ದವು ಕಿವಿಗೆ ಬಿದ್ದೊಡನೆ ಪ್ರಾರಂಭಿಸಿ, ನೀವು ಕೈತಟ್ಟಿ ನೆಗಾಡಲು ತೊಡಗುವ ವರೆಗೆ ಆದ ಹಲವು ಕಾರ್ಯಪರಂಪರೆಗಳನ್ನು ವಿವರಿಸಿದೆವು. ಇವುಗಳಲ್ಲಿ ಕೆಲವು ಜ್ಞಾನೇಂದ್ರಿಗಳ ವ್ಯಾಪಾರಗಳು; ಇನ್ನೂ ಕೆಲವು ಮನಸ್ಸು ಮತ್ತು ಬುದ್ಧಿಯ ವ್ಯಾಪಾರಗಳು; ಉಳಿದವು

ಬಾಹ್ಯ ಇಂದ್ರಿಯಗಳಾದ ಸ್ನಾಯುಗಳ ವ್ಯಾಪಾರಗಳು. ಇವುಗಳಿಗೆ ಪರಸ್ಪರ ಸಂಬಂಧವನ್ನು ಬೆಳಿಸಲಿಕ್ಕೆ ಜ್ಞಾನವಾಹಿನರಗಳೂ ಕ್ರಿಯಾವಾಹಿನರಗಳೂ ಉಪಯುಕ್ತವಾಗಿವೆ. ಈ ಕಾರ್ಯಪರಂಪರೆಗಳನ್ನು ಈಗ ಇನ್ನೂ ಸೂಕ್ಷ್ಮದೃಷ್ಟಿಯಿಂದ ಟೀಕಿಸಬೇಕಾಗಿದೆ.

ಸ್ಥೂಲ, ಸೂಕ್ಷ್ಮದೇಹ:—ಜ್ಞಾನವಾಹಿ ಕ್ರಿಯಾವಾಹಿ ಅಣುಗಳು, ತಂತುಗಳು, ಮೆದುಳು ಬಳ್ಳಿ, ಮಣಿಸಿರ, ಚಿಕ್ಕ ಮೆದುಳು, ದೊಡ್ಡ ಮೆದುಳು, ಇವೆಲ್ಲ ಪಂಚೇಂದ್ರಿಯಗಳಿಂದ ಗೊತ್ತುಹಚ್ಚುವ ಪದಾರ್ಥಗಳು. ಆದರೆ ಮೆದುಳಿನಲ್ಲಿ ವಾಸವಾಗಿರುವ ಮನಸ್ಸು ಎಂಬದು ಹಾಗೆ ಇಂದ್ರಿಯಗೋಚರವಲ್ಲ. ಅದಕ್ಕಾಗಿಯೇ ಅಂತಃಕರಣ ಎಂಬ ಮಾತು ಮನಸ್ಸಿಗೆ ಪ್ರಯೋಗಿಸಲ್ಪಡುತ್ತದೆ. ಅಂತಃಕರಣವೆಂದರೆ ಒಳಗಿನ ಇಂದ್ರಿಯವೆಂಬ ಅರ್ಥ. ಪಂಚೇಂದ್ರಿಯಗಳು ಬಾಹ್ಯ ಇಂದ್ರಿಯಗಳೆಂದೂ ಮನಸ್ಸು ಅಂತರ್ ಇಂದ್ರಿಯವೆಂದೂ ಅಭಿಪ್ರಾಯದಿಂದ ಈ ಮಾತು ರೂಢಿಗೆ ಬಂತು. ಈ ಅಂತಃಕರಣವನ್ನು ಸ್ಥೂಲಮಾನದಿಂದ ಮನ, ಬುದ್ಧಿ ಎಂದು ಎರಡು ವಿಭಾಗಗಳಾಗಿ ಮಾಡಿರುವೆವು. ಇನ್ನೊಂದು ರೀತಿಯಾಗಿ ಹೇಳುವುದಾದರೆ ಪಂಚೇಂದ್ರಿಯಗಳೂ, ಇಂದ್ರಿಯಾಣುಗಳೂ, ಮೆದುಳು ಬಳ್ಳಿ, ಮಣಿಸಿರ, ಚಿಕ್ಕ ಮೆದುಳು, ದೊಡ್ಡ ಮೆದುಳು ಇವು ಸ್ಥೂಲ ಅಥವಾ ಜಡದೇಹವೆಂತಲೂ, ಮನ, ಬುದ್ಧಿ ಇವು ಸೂಕ್ಷ್ಮದೇಹವೆಂತಲೂ ಹೇಳಬಹುದು.

ಕಾರಣ ದೇಹ:—ಇವಷ್ಟೆ ಅಲ್ಲದೆ ಇನ್ನೊಂದು ದೇಹವೂ ಇದೆ. ಈ ವಿಷಯವನ್ನು 'ಗೀತಾರಹಸ್ಯ' ದಲ್ಲಿ ಹೀಗೆಯೆ ವರ್ಣಿಸಿದೆ:—

"ಜಡಶರೀರದಲ್ಲಿ ಪ್ರಾಣರೂಪವಾದ ಚೇತನ ಅಥವಾ ಚಲನವಲನಗಳಿಲ್ಲದ್ದಿದ್ದರೆ, ಮನಬುದ್ಧಿಗಳು ಇದ್ದರೂ ಅಷ್ಟೆ, ಇಲ್ಲದಿದ್ದರೂ ಅಷ್ಟೆ; ಅರ್ಥಾತ್, ಮೇಲೆ ಹೇಳಿದ ಪದಾರ್ಥಗಳಲ್ಲದೆ ಚೇತನವೆಂಬುದೊಂದು ತತ್ವವನ್ನು ಶರೀರದಲ್ಲಿಯೇ ಸೇರಿಸಬೇಕು. . . . . . . ಚೇತನವೆಂದರೆ ಜಡದೇಹದಲ್ಲಿ ಕಂಡು ಬರುವ ಪ್ರಾಣದ ಅಲೆದಾಟ, ಚೇಷ್ಟೆ, ಅಥವಾ ಜೀವಿತಾವಸ್ಥೆಯ ವ್ಯಾಪಾರ ಎಂಬಷ್ಟೆ ಅರ್ಥವು ಇಲ್ಲಿ ವಿವಕ್ಷಿತವಾಗಿದೆ."

ಈ ಪ್ರಾಣದ ಅಲೆದಾಟ ಮಾತ್ರವಲ್ಲ, 'ಇದು ತನ್ನದು, ಇದು ಪರರದು' ಎಂಬವನ್ನು ಗೊತ್ತುಹಚ್ಚಿ ವಿಂಗಡಿಸುವ ಶಕ್ತಿಯು ಈ 'ಚೇತನಾ' ಎಂಬ ಶಬ್ದದಲ್ಲಿ ಅಡಗುತ್ತದೆ. ಉದಾಹರಣೆಯಾಗಿ ನಾವು ನಿದ್ದೆಹೋದಾಗ

ಜಡದೇಹವು, ಮನಬುದ್ಧಿಗಳು ಅಲ್ಲೆ ಇವೆ. ಬಾಹ್ಯೇಂದ್ರಿಯಗಳನ್ನು ಆಡಿಸದಿದ್ದರೂ ಶ್ವಾಸ ಎದೆಗುಂಡಿಗೆಯ ಬಡೆದಾಟಗಳು ಸಾಗುತ್ತವೆ. ಆದ್ದರಿಂದ ನಾವು ಜೀವಂತವಾಗಿದ್ದೇವೆ ಎಂದರೂ ನಮ್ಮ ಸುತ್ತುಮುತ್ತಲೂ ಏನು ಆಗುತ್ತದೆ ಎಂದು ನಮಗೆ ತಿಳಿವಿಲ್ಲ. ಗಾಢ ನಿದ್ದೆಯಲ್ಲಿದ್ದಾಗ ಮೆದುಳಿಗೆ ಹೋಗುವ ರಕ್ತಪ್ರವಾಹವು ಬಹಳ ಕಡಿಮೆ. ಕೆಲಸದಿಂದ ಸೋತುಹೋದ ಮೆದುಳಿನ ಅಣುಗಳು ವಿಶ್ರಾಂತಿಯನ್ನು ಹೊಂದುವವು. ಆದರೆ ಒಂದೊಂದು ಕಾಲದಲ್ಲಿ ಸುತ್ತುಮುತ್ತಲಿನ ವಿಚಾರವು ನಮಗೆ ಗೋಚರವಾಗದಿದ್ದರೂ ರಕ್ತಪ್ರವಾಹ ಕನಿಷ್ಠಮಿತಿಗಿಂತ ಸ್ವಲ್ಪ ಹೆಚ್ಚಾದಾಗ ಈ ಮೆದುಳಿನ ಅಣುಗಳು ವಿಶ್ರಾಂತಿ ಹೊಂದುವ ಬದಲಾಗಿ ಮನಸ್ಸಿನಲ್ಲಿ ನೂತನ ಸೃಷ್ಟಿಯನ್ನೆ ಕಲ್ಪಿಸುತ್ತವೆ, ಅಂದರೆ ನಾವು ಕನಸು ಕಾಣುತ್ತೇವೆ. ಆ ಕಾಲದಲ್ಲಿಯೂ ಮೆದುಳಿನ ಕೆಲಸವು ವಿಚಿತ್ರವಾಗಿ ಸಾಗಬೇಕಾದರೆ ಅದಕ್ಕೆ ಪ್ರತ್ಯೇಕ ಚಾಲಕನೊಬ್ಬನು ಇರಬೇಕೆಂದು ಸ್ಪಷ್ಟವಾಗುತ್ತದೆ. ನಾವು ಪೆಟ್ಟು ತಗಲಿ ಪ್ರಜ್ಞೆ ತಪ್ಪಿ ಬಿದ್ದಾಗ, ನಮ್ಮ ಸುತ್ತಲಿನ ಪ್ರದೇಶ ದಲ್ಲಿ ಆಗುವುದೇನೆಂದು ಗೊತ್ತಾಗದಷ್ಟು ಬಲಹೀನ ಸ್ಥಿತಿಯಲ್ಲಿದ್ದಾಗ ಅಥವಾ ಅಖಂಡ ನಿದ್ರಾವಸ್ಥೆಯಲ್ಲಿದ್ದಾಗ ನಮ್ಮ ಪ್ರಾಣದ ಅಲೆದಾಟವನ್ನು ಮಾತ್ರ ನಡಿಸುತಿದ್ದು, ಅದರಿಂದ ನಾವು ಜೀವಂತವಾಗಿದ್ದೇವೆ ಎಂದು ಸ್ಪಷ್ಟ ಗೊಳಿಸುವ ಚಾಲಕನೆ ಈ ಚೈತನ್ಯವು; ಇದೇ ಆತ್ಮ ಅಥವಾ ಜೀವಾತ್ಮ. ಇದರಲ್ಲಿ ಪ್ರಾಣಧಾರಕ ಕಾರ್ಯ ಮಾತ್ರವಲ್ಲ, ನಮ್ಮ ಜಾಗ್ರತಾವಸ್ಥೆಯಲ್ಲಿ 'ಇದು ನನ್ನದು ಇದು ಪರರದು' ಎಂದು ವಿಭಜಿಸುವ ಶಕ್ತಿಯೂ ಇವೆ. ಇಂಥಾ ಸ್ಥಿತಿಗೆ **ಧೃತಿ**ಯೆಂದು ಹೆಸರು. 'ಇದು ನನ್ನದು ಇದು ಪರರದು' ಎಂದು ಗೊತ್ತುಹಚ್ಚುವ ಕ್ರಿಯೆಗೆ **ಅಹಂಕಾರ**ವೆನ್ನುತ್ತಾರೆ. ಅಹಂಕಾರವು ಧೃತಿಯ ಒಂದು ಗುಣ. ಈ ಧೃತಿಯನ್ನು **ಕಾರಣಶರೀರ**ವೆಂದರೂ ಎನ್ನ ಬಹುದು. ಯಾಕಂದರೆ ಧೃತಿಯಿದ್ದುದರಿಂದಲೇ ಸ್ಥೂಲ ಮತ್ತು ಸೂಕ್ಷ್ಮ ದೇಹಗಳ ಕೆಲಸವು ನಡಿಯುತ್ತದೆ. ಹೀಗೆ ಮನುಷ್ಯನ ದೇಹದಲ್ಲಿ ಸ್ಥೂಲ, ಸೂಕ್ಷ್ಮ, ಕಾರಣಶರೀರಗಳೆಂಬ ಮೂರು ಭಾಗಗಳಿವೆ. ಇವು ಮೂರು ಕೂಡಿದ್ದರೆ ಮಾತ್ರವೇ ಮನುಷ್ಯನ ದೇಹದ ಕಾರ್ಯಕ್ರಮಗಳು ಸರಾಗ ವಾಗಿ ನಡೆಯುತ್ತವೆ; ಲೋಕಾನುಭವವು, ಸುಖದುಃಖಗಳು ಆತ್ಮನಿಗೆ ಉಂಟಾಗುತ್ತವೆ.

ಮನಸ್ಸಿನ ಕಾರ್ಯಕ್ರಮ.

ಬಾಹ್ಯವಸ್ತುಗಳ ಪರಿಚಯು.

7ನೆ ಅಧ್ಯಾಯ

ಇಂದ್ರಿಯ ಸಂಸ್ಕಾರ (Sensation):—ಹಿಂದಿನ ಒಂದು ಅಧ್ಯಾಯದಲ್ಲಿ ಸ್ಥೂಲದೇಹದ ರಚನೆ ಮತ್ತು ಕಾರ್ಯಕ್ರಮವನ್ನು ಹೇಳಿದ್ದಾಯಿತು. ಇಲ್ಲಿ ಮನಸ್ಸಿನ ಕಾರ್ಯಕ್ರಮಗಳನ್ನು ಸವಿಸ್ತಾರವಾಗಿ ಟೀಕಿಸಬೇಕಾಗಿದೆ. ಈ ವಿಷಯದಲ್ಲಿ ಜರ್ಮನ ತತ್ವಜ್ಞನಾದ ಜ್ಹೊನ್ ಫ್ರೆಡರಿಕ ಹೆರ್ಬಾರ್ಟ ಎಂಬವನು ಹೀಗಂದಿದ್ದಾನೆ:—"ಜನನಕಾಲದಲ್ಲಿ ಮಗುವಿನ ಮೆದುಳು ಒಂದು ಮಣ್ಣುಮುದ್ದೆಯಂತೆ ಇದೆ. ಅದರಲ್ಲಿ ಅಣುಗಳೂ ತಂತುಗಳೂ ಇದ್ದರೂ ಈ ಅಣುಗಳಲ್ಲಿ ಒಂದು ಇನ್ನೊಂದರಂತೆಯೆ ಇದೆ. ಭಿನ್ನರುಚಿಗಳೂ, ಪೂರ್ವವಾಸನೆಗಳೂ, ವಿವಿಧ ಶಕ್ತಿಗಳೂ ಅವುಗಳಲ್ಲಿ ತಲೆದೋರಿರುವುದಿಲ್ಲ; ಅಂದರೆ ಮಹಾ ಪಂಡಿತನೂ ಕುಶಾಗ್ರ ಬುದ್ಧಿಯವನೂ ಆದ ತತ್ವಜ್ಞನ ಮೆದುಳೂ, ಕಾಡು ಮನುಷ್ಯನ ಮೆದುಳೂ ಅವರಿಬ್ಬರೂ ಹುಟ್ಟಿದಾಗ ಒಂದೇ ಅವಸ್ಥೆಯಲ್ಲಿದ್ದವು ಎಂದು ಅವನು ಹೇಳುವ ಮಾತಿನ ಅರ್ಥ. ಹೀಗನ್ನುವಾಗ ಆ ಬೇರೆ ಬೇರೆ ಮನುಷ್ಯರಲ್ಲಿ ಮುಂದೆ ತೋರಿಬರುವ ಶಕ್ತಿಗಳು ಅಲ್ಲಿ ಇದ್ದಿಲ್ಲವೆಂದು ಅರ್ಥವಲ್ಲ. ಬೇರೆ ಬೇರೆ ಬೀಜಗಳಿವೆ. ಅವುಗಳು ಬಾಹ್ಯ ಆಕಾರದ ಬಣ್ಣಗಳಲ್ಲಿ ಭಿನ್ನ ಭಿನ್ನವಾಗಿರಬಹುದು. ಅವುಗಳೊಳಗೆ ಅಡಗಿರುವ ಶಕ್ತಿಗಳು ಬೀಜವಿದ್ದಾಗ ಕಂಡು ಬರಲಾರವು. ಅವನ್ನು ಬಿತ್ತಿದ್ದಾಗಲೇ ಅವುಗಳಲ್ಲಿರುವ ಒಂದು ಅಂಶವು ಪ್ರತ್ಯೇಕಿಸಿ ಬೇರಾಗಿ ನೆಲಕ್ಕೆ ಇಳಿಯುತ್ತದೆ. ಇನ್ನೊಂದು ತಾಳು ಆಗುತ್ತದೆ. ಈ ತಾಳಿನಿಂದಲೆ ಒಂದು ಬೀಜದಲ್ಲಿ ಒಂದೇ ಎಲೆ ಹುಟ್ಟುತ್ತವೆ. ಇನ್ನೊಂದು ದ್ವಿದಳವಾಗಿದೆ. ಆದರೆ ಅದು ಹೀಗೆಯೇ ಆದೀತು ಎಂದು ಆ ಬೀಜದೊಳಗಿನ ಪದಾರ್ಥವನ್ನು ಪರೀಕ್ಷಿಸಿ ಹೇಳಲಾರೆವು. ಅಷ್ಟೇ ಅಲ್ಲ. ಬೀಜದ ಮೊಳಿಕೆಯಲ್ಲಿ ಬೇರಾಗಿ ಹುಟ್ಟುವ ಭಾಗವು ತಾಳು ಆಗಲಾರದು,

ತಾಳು ಆಗತಕ್ಕ ಭಾಗವು ಬೇರಾಗದು. ಆದರೆ ಈ ವೊಳಿಕೆಯಲ್ಲಿ ಕವಲೊಡೆಯುವ ಪದಾರ್ಥವು ಬೀಜದಲ್ಲಿ ಏಕರೂಪವಾಗಿ ಇದೆ. ಅದೇ ರೀತಿಯಲ್ಲಿ ಮೆದುಳಿನಲ್ಲಿರುವ ಅಣುಗಳು ಏಕರೂಪವಾಗಿ ನಿರಾಕಾರ ಸ್ವರೂಪವಾಗಿವೆ. ಕ್ರಮೇಣ ಒಂದು ಭಾಗವು ಶ್ರೋತ್ರೇಂದ್ರಿಯದಿಂದ, ಇನ್ನೊಂದು ಚಕ್ಷ್ವೇಂದ್ರಿಯದಿಂದ, ಹೀಗೆ ಬೇರೆ ಬೇರೆಯಾಗಿ ಅನುಭವಗಳನ್ನು ಪಡೆದು, ವ್ಯವಸಾಯ ಬಲದಿಂದ ಒಂದೊಂದು ಭಾಗವು ಒಂದೊಂದು ಬಗೆಯ ಅನುಭವವನ್ನು ಮಾತ್ರ ಪಡೆಯಲು ಶಕ್ತವಾಗುತ್ತದೆ. ಆಯಾಯ ಇಂದ್ರಿಯದಲ್ಲಿ ಬಾಹ್ಯ ವಸ್ತುಗಳಿಂದ ಆದ ಬಿಂಬವು ತಂತುಗಳ ಮೂಲಕ ಮೆದುಳಿನಲ್ಲಿ ಆ ಇಂದ್ರಿಯದ ನರಗಳು ಮುಟ್ಟುವ ಅಣುಗಳ ಮೇಲೆ ಪ್ರತಿಬಿಂಬವನ್ನು ಉಂಟುಮಾಡುತ್ತದೆ. ಬಾಹ್ಯ ವಸ್ತುಗಳಿಂದ ಇಂದ್ರಿಯಗಳ ಅಣುಗಳಲ್ಲಿ ಆದ ಬಿಂಬವು **ಇಂದ್ರಿಯ ಸಂಸ್ಕಾರ**ವೆನಿಸುತ್ತದೆ. ಇಂದ್ರಿಯ ಸಂಸ್ಕಾರವಾಗಬೇಕಾದರೆ ಒಂದು ಇಂದ್ರಿಯವು ತನ್ನಲ್ಲಿ ಆದ ಸ್ಪರ್ಶವನ್ನು ಮೆದುಳಿಗೆ ಮುಟ್ಟಿಸಿ ಅದರ ಅಪ್ಪಣೆ ಪಡೆದು ಬಾಗಿಲು ತೆರೆಯುತ್ತದೆ. ಆಗ ಇಂದ್ರಿಯ ಸಂಸ್ಕಾರಕ್ಕೆ ಎಡೆಯಾಗುತ್ತದೆ. ಒಂದು ತಂತಿ ಆಫೀಸಿನವನು ಇನ್ನೊಂದು ತಂತಿ ಆಫೀಸಿನವನಿಗೆ ಮೊದಲು ಕರೆದು ತನ್ನ ವರ್ತಮಾನವನ್ನು ಎತ್ತಿಕೊ ಎಂದು ಹೇಳಿದಂತೆ ಬಾಹ್ಯ ಇಂದ್ರಿಯದ ಸ್ಪರ್ಶದಿಂದ ಮೆದುಳಿನಲ್ಲಿ ಆ ಇಂದ್ರಿಯಕ್ಕೆ ಸಂಬಂಧಿಸಿದ ಭಾಗವು ಜಾಗೃತವಾಗುತ್ತದೆ. ಆಗ ಇಂದ್ರಿಯದ ಅಣುಗಳಲ್ಲಿ ಆದ ಬಿಂಬವು ಮೆದುಳಿನಲ್ಲಿ ಪ್ರತಿಬಿಂಬಿಸುತ್ತದೆ. ಈ ಇಂದ್ರಿಯ ಸಂಸ್ಕಾರವೇ ಜ್ಞಾನದ ಮೂಲ. ಅಲ್ಲಿಂದ ಮುಂದೆ ಏನಾಗುತ್ತದೆ ನೋಡೋಣ.

ಇಂದ್ರಿಯ ಸಾಕ್ಷಾತ್ಕಾರ (Perception):—ನಮ್ಮ ತೋಟದಲ್ಲಿ ಒಂದು ಗಿಡವು ಹೂ ಬಿಟ್ಟಿದೆ. ಅದನ್ನು ನಾವು ನೋಡುತ್ತೇವೆ. ಆಗ ಹೂವಿನ ಮೇಲೆ ಬಿದ್ದ ಸೂರ್ಯನ ಪ್ರಕಾಶವು ಪ್ರತಿಫಲಿಸಿ ನಮ್ಮ ಕಣ್ಣು ಗುಡ್ಡೆಗಳನ್ನು ಪ್ರವೇಶಿಸುತ್ತದೆ. ಹಾಗೆ ಪ್ರವೇಶಮಾಡಬೇಕಾದರೆ ಅದು ಕಣ್ಣುಗುಡ್ಡೆಯ ಹಿಂದೆ ಇರುವ ಚಕ್ಷು ಇಂದ್ರಿಯವನ್ನು ಸ್ಪರ್ಶಿಸಿ, ಅಣುಗಳಿಂದ ತಂತುಗಳ ಮೂಲಕ ಮೆದುಳಿನಲ್ಲಿ ಚಕ್ಷು ಇಂದ್ರಿಯಕ್ಕೆ ಸಂಬಂಧಪಟ್ಟ ಅಣುಗಳನ್ನು ಎಚ್ಚರಿಸುತ್ತದೆ. ಆ ಮೇಲೆ ಆ ಹೂವಿನ ಆಕಾರದ

ಬಿಂಬವೊಂದು, ಬಣ್ಣದ ಬಿಂಬವೊಂದು ಇವೆರಡು ಪ್ರತ್ಯಪ್ರತ್ಯೇಕವಾಗಿ ಮೆದುಳಿನಲ್ಲಿ ಪ್ರತಿಬಿಂಬಿಸುತ್ತವೆ. ಹಾಗೆಯೇ ಘ್ರಾಣೇಂದ್ರಿಯವು ಹೂವಿನ ಪರಿಮಳದ ಬಿಂಬವನ್ನು ಘ್ರಾಣೇಂದ್ರಿಯಕ್ಕೆ ಸಂಬಂಧಿಸಿದ ಮೆದುಳಿನ ಭಾಗದಲ್ಲಿ ಪ್ರತಿಬಿಂಬಿಸುತ್ತದೆ. ಕೈ ಅದನ್ನು ಮುಟ್ಟಿ ನೋಡಿದಾಗ 'ಅದಕ್ಕೆ ಅಡಿಭಾಗದಲ್ಲಿ ಮುಳ್ಳು ಇದೆ,' ಎಂದು 'ಅದರ ಎಲೆಗಳು ಅಂಚಿನಲ್ಲಿ ಗರಗಸದಂತೆ ಇವೆ' ಎಂದು, ಸ್ಪರ್ಶೇಂದ್ರಿಯದಲ್ಲಿ ಆದ ಬಿಂಬವನ್ನು ಮೆದುಳಿನ ಸ್ಪರ್ಶೇಂದ್ರಿಯ ಭಾಗದಲ್ಲಿ ಪ್ರತಿಬಿಂಬಿಸುತ್ತದೆ. ಪ್ರಥಕ್ ಪ್ರಥಕ್ಕಾಗಿ ಸಂಗ್ರಹವಾದ ಈ ಪ್ರತಿಬಿಂಬಗಳಿಗೆ ಪರಸ್ಪರ ಜೋಡಣೆಮಾಡಿ ಪ್ರತಿಬಿಂಬಗಳ ಒಂದು ಸಮುದಾಯವನ್ನು ಆ ಹೂವಿಗೆ ಸಂಬಂಧಿಸಿ ಮೆದುಳಿನಲ್ಲಿ ಮಾಡಿಕೊಳ್ಳುತ್ತದೆ. ಈ ಕಾರ್ಯಕ್ಕೆ **ಇಂದ್ರಿಯ ಸಾಕ್ಷಾತ್ಕಾರ**ವೆನ್ನುತ್ತಾರೆ. ಈ ಸಮುದಾಯದಲ್ಲಿ ಅನಂತರ ಯಾವುದಾದರೊಂದು ಪ್ರತಿಬಿಂಬವು ಮೆದುಳಿನಲ್ಲಿ ಜಾಗೃತವಾದರೆ ಅದು ಬೇರೆ ಪ್ರತಿಬಿಂಬಗಳನ್ನು ಎಚ್ಚರಿಸುತ್ತದೆ.

ಸಣ್ಣ ಮಕ್ಕಳಲ್ಲಿ ಇಂದ್ರಿಯ ಸಂಸ್ಕಾರದ ಬಲವೇ ಹೆಚ್ಚು. ಖಾಲಿಯಾದ ಮೆದುಳಿನಲ್ಲಿ ಬಿಂಬಗಳನ್ನು ಪ್ರತಿಬಿಂಬಿಸುವುದು ಸುಲಭ. ಅವರು ಬೆಳೆದ ಮೇಲೆ ಅಲ್ಲಿ ಪ್ರತಿಬಿಂಬಗಳ ಸಂಖ್ಯೆಯು ಹೆಚ್ಚಿದ್ದು, ಹಲವು ಬಿಂಬಗಳು ಮೆದುಳಿಗೆ ಪ್ರವೇಶಮಾಡಲು ಹೊಡೆದಾಡಿಕೊಳ್ಳುವಾಗ, ಯಾವುದರ ಸಾಮರ್ಥ್ಯವು ಹೆಚ್ಚಾಯಿತೋ ಅದೇ ಒಳಗೆ ನುಗ್ಗಿ, ಅಲ್ಲಿ ಮೊದಲೇ ಇರುವ ಪ್ರತಿಬಿಂಬವನ್ನು ಜಾಗೃತಮಾಡುತ್ತದೆ. ಇಂದ್ರಿಯ ಸಂಸ್ಕಾರದಲ್ಲಿ ಒಂದು ಕೊನೆಯಲ್ಲಿ ಬಾಹ್ಯದಿಂದ ಬಿಂಬವು ಇನ್ನೊಂದು ಕೊನೆಯಲ್ಲಿ ಅದರ ಪ್ರತಿಬಿಂಬವು ಹೀಗೆ ಎರಡು ಕಾರ್ಯಗಳು ಇವೆ. ಒಂದೊಂದು ಸಲ ಈ ಬಿಂಬ ಪ್ರತಿಬಿಂಬಗಳಲ್ಲಿ ವ್ಯತ್ಯಾಸವಾಗುವುದೂ ಇದೆ. ಆಗ ಅದರಿಂದ ಕೂಡಿದ ಇಂದ್ರಿಯ ಸಾಕ್ಷಾತ್ಕಾರದಿಂದ ಆದ ಪ್ರತಿಬಿಂಬ ಸಮುದಾಯದಲ್ಲಿಯೂ ವ್ಯತ್ಯಾಸವಾಗುತ್ತದೆ. ಹುಲ್ಲು ಉದ್ದವಾಗಿ ಬೆಳೆದಿರುವ ಮತ್ತು ಸಣ್ಣ ಗಿಡ ಪೊದೆಗಳಿಂದ ತುಂಬಿದ ಸ್ಥಳದಲ್ಲಿ ಕತ್ತಲಲ್ಲಿ ಸರಸರನೆ ಶಬ್ದವಾಗಿ ಒಂದು ಬಳ್ಳಿಯು ನಮ್ಮ ಕಾಲಿಗೆ ಸಿಕ್ಕೊಂಡಿತು ಎನ್ನೋಣ. ಅಲ್ಲಿ ಹಾವುಗಳು ಸುಳಿದಾಡುತ್ತವೆಂದು ನಾವು ಕೇಳಿದರೆ ಈ ಬಳ್ಳಿಯೇ ಹಾವೆಂದು

ನಂಬಿ ಅರಚಿಕೊಂಡು, ಬಳ್ಳಿಯ ಮುಳ್ಳುಗಳು ಚುಚ್ಚಿದಾಗ ಹಾವು ಕಚ್ಚಿದಂತೆ ವ್ಯಥೆಪಡುವುದುಂಟು. ಅದೇ ರೀತಿಯಲ್ಲಿ ನಡುರಾತ್ರೆಯಲ್ಲಿ ನಿರ್ಜನ ಪ್ರದೇಶದಲ್ಲಿ ಸಂಚರಿಸುವಾಗ ನಸು ಬೆಳದಿಂಗಳಿನ ಪ್ರಕಾಶವು ಅಸ್ಪಷ್ಟವಾಗಿ ಯಾವುದೊಂದು ಪೊದೆಯ ಮೇಲೆ ಬಿದ್ದು, ಆ ಪೊದೆಯು ಮೆಲ್ಲಗೆ ಅಲುಗುವಾಗ ಅಲ್ಲಿ ಭೂತ ಪಿಶಾಚಿಗಳನ್ನು ಕಂಡಂತೆ ಭಾಸವಾಗಿ ದಿಗಿಲು ಹುಟ್ಟುವುದು ಉಂಟು. ಇದಕ್ಕೆಲ್ಲ ಆ ಬಿಂಬ ಪ್ರತಿಬಿಂಬಗಳಲ್ಲಿ ವ್ಯತ್ಯಾಸವುಂಟಾದುದೇ ಕಾರಣವಾಗಿದೆ.

ಭಾವನೆ (Concept):—ಮೇಲೆ ಹೇಳಿದ ದೃಷ್ಟಾಂತದಲ್ಲಿ ಕಂಡ ಹೂವಿನಂತೆ ಇನ್ನೊಂದು ಹೂವನ್ನು ನಾವು ನೋಡಿದೆವೆನ್ನೋಣ. ಅದರ ಬಣ್ಣವು ಮೊದಲಿನ ಹೂವಿನಂತಿಲ್ಲ; ಆಕಾರವೂ ವಾಸನೆಯೂ ಭೇದವಿಲ್ಲ. ಆದರೂ ಈ ಹೊಸ ಹೂವಿನ ಹೊಸ ಒಂದು ಪ್ರತಿಬಿಂಬ ಸಮುದಾಯವು ನಮ್ಮ ಮನಸ್ಸಿನಲ್ಲಿ ಆಗುತ್ತದೆ. ಹೊಸ ಸಮುದಾಯಗಳನ್ನು ಹಳೇ ಅಂದರೆ ಮೊದಲು ಇದ್ದ ಸಮುದಾಯಗಳಲ್ಲಿ ಸೇರಿಸಿ ಆ ಹೂವಿನ ಪ್ರತಿಬಿಂಬಗಳ ನೂತನ ಒಂದು ಸಮುದಾಯವನ್ನು ವಿರಚಿಸುತ್ತೇವೆ. ಇದಕ್ಕೆ **ಭಾವನೆ** ಎನ್ನುತ್ತೇವೆ. ಇಲ್ಲಿ ನಮಗೆ ಆ ಹೂವಿನ ಭಾವನೆಯಾಯಿತು ಎನ್ನುವಾಗ ಅದರ ವಿವಿಧ ದೃಷ್ಟಾಂತಗಳಲ್ಲಿ ಕಂಡ ಮತ್ತು ಎಲ್ಲದರಲ್ಲಿಯೂ ಸಾಮಾನ್ಯವಾಗಿ ಇರುವ ಲಕ್ಷಣಗಳನ್ನು ಜತೆಗೊಳಿಸಿ ಒಂದಾಗಿ ಮಾಡಿದೆವು. ಈ ಭಾವನೆಯಲ್ಲಿ ವಸ್ತುವು ಕಣ್ಣೆದುರಿಗೆ ಅಥವಾ ಇತರ ಇಂದ್ರಿಯಗಳ ಎದುರಿಗೆ ಬರಬೇಕಾದ್ದಿಲ್ಲ. ಆ ವಸ್ತುವಿನ ಮುಖ್ಯ ಲಕ್ಷಣಗಳ ಒಂದು ಸಮುದಾಯದ ಅಭಿಪ್ರಾಯವು ಮನಸ್ಸಿನಲ್ಲಿ ನೆಲೆ ನಿಲ್ಲುತ್ತದೆ.

ಹೀಗಾಗಿ ಬಾಹ್ಯವಸ್ತುಗಳ ಜ್ಞಾನವಾಗಬೇಕಾದರೆ ಇಂದ್ರಿಯಗಳೇ ಬಾಗಿಲುಗಳು; ಈ ಇಂದ್ರಿಯಗಳಲ್ಲಿ ಆದ ಸಂಸ್ಕಾರಗಳು ಅಥವಾ ಬಿಂಬಗಳು ಜ್ಞಾನದ ಮೂಲ; ಈ ಸಂಸ್ಕಾರಗಳು ಮೆದುಳಿನಲ್ಲಿ ಪ್ರತಿಬಿಂಬಿಸಿ ಅಂಥ ಪ್ರತಿಬಿಂಬಗಳು ಆ ವಸ್ತುಗಳೊಂದಿಗೆ ಜೋಡಣೆಯಾಗಿ ಉಂಟಾದ ಪ್ರತಿಬಿಂಬ ಸಮುದಾಯಗಳು ಇಂದ್ರಿಯ ಸಾಕ್ಷಾತ್ಕಾರದ ಪರಿಣಾಮವಾಗಿವೆ. ಇಂಥ ವಿವಿಧ ಸಾಕ್ಷಾತ್ಕಾರಗಳಿಂದ ನಮಗೆ ಒಂದು ವಸ್ತುವಿನ ಭಾವನೆಯು ಮನಸ್ಸಿನಲ್ಲಿ ನೆಲೆನಿಲ್ಲುತ್ತದೆ. ಹೀಗಿರುವುದರಿಂದ ಜ್ಞಾನದ

ಪೂರ್ಣತೆಯಾಗಬೇಕಾದರೆ ಫ್ರೊಬೆಲನು ಹೇಳಿದಂತೆ ಇಂದ್ರಿಯಗಳನ್ನು ಆ ವಸ್ತುಗಳ ಮೇಲೆ ಆಡಿಸಿದರೆ ಮಾತ್ರ ಸಾಧ್ಯವಾದೀತು ಎಂಬ ಮಾತಿನ ಅರ್ಥವು ವ್ಯಕ್ತವಾಗುವುದು. ಈ ಭಾವನೆಯಾದ ಮೇಲೆ ಅದನ್ನು ಇನ್ನೊಂದರಿಂದ ಪ್ರತ್ಯೇಕಿಸಲಿಕ್ಕೆ ಅದಕ್ಕೊಂದು ಹೆಸರನ್ನು ಕೊಡುತ್ತೇವೆ. ಮೇಲಿನ ದೃಷ್ಟಾಂತದಲ್ಲಿ ಕಂಡ ಹೂವನ್ನೂ ಅದೇ ಬಗೆಯ ಇತರ ಹೂವುಗಳನ್ನೂ ನೋಡಿ ಪರೀಕ್ಷಿಸಿ ಅವುಗಳ ಆಕಾರವು ಒಂದೇ, ಅವುಗಳ ಬಣ್ಣ ಬೇರೆ ಬೇರೆ ಇರಬಹುದು, ಅದರಲ್ಲಿ ತುಂಬಾ ಎಸಳುಗಳಿವೆ, ಆ ಎಸಳುಗಳ ಆಕಾರವು ಇಂಥದ್ದೆ ಇದೆ, ಅದರ ಪರಿಮಳವು ಇಂಥದ್ದೆ ಇದೆ ಎಂದು ಪರಿಚಯಮಾಡಿಕೊಂಡ ಮೇಲೆ ಅದನ್ನು ಬೇರೆ ಜಾತಿಯ ಹೂವುಗಳಿಂದ ಪ್ರತ್ಯೇಕಿಸಲು ಅನುಕೂಲವಾಗುವಂತೆ ಅದಕ್ಕೆ 'ಗುಲಾಬಿಯ ಹೂ' ಎಂದು ಹೆಸರಿಟ್ಟೆವು. ಭಾವನೆಯು ಸಂಪೂರ್ಣವಾಗಿ ಮನಸ್ಸಿನಲ್ಲಿ ರಚನೆಯಾದ ಮೇಲೆ ಅದಕ್ಕೆ ಪ್ರತ್ಯೇಕ ಗುರುತನ್ನು ಇಡುವುದು ಅತಿ ಅಗತ್ಯ. ಇಲ್ಲವಾದರೆ ಆ ವಸ್ತುವು ನಮ್ಮ ಇಂದ್ರಿಯಗಳ ಮುಂದೆ ಇಲ್ಲದ ವೇಳೆಯಲ್ಲಿ ಅದರ ಪ್ರತಿಬಿಂಬವನ್ನು ಮನಸ್ಸಿನಲ್ಲಿ ಜಾಗೃತಿ ಹುಟ್ಟಿಸಲು ಸಾಧ್ಯವಾಗಲಾರದು. ಹೆಸರಿಟ್ಟ ಮೇಲೆ ಆ ಹೆಸರು ಕಿವಿಗೆ ಬಿದ್ದೊಡನೆ ಅಥವಾ ಅದನ್ನು ಓದಿದೊಡನೆ ಆ ವಸ್ತುವಿಗೆ ಸಂಬಂಧಪಟ್ಟ ಪ್ರಮುಖವಾದ ಬಿಂಬಗಳು ನಮ್ಮ ಮನಸ್ಸಿನ ಎದುರಿಗೆ ಬಂದು ನಿಲ್ಲುತ್ತವೆ. ಜಾದೂ ಮಾಡುವವನು ಇಸ್ಪೇಟದ ಎಲೆಗಳನ್ನು ಒಂದು ಕರಡಿಗೆಯಲ್ಲಿ ಒಂದರ ಹಿಂದೆ ಒಂದಾಗಿ ಇಟ್ಟು, 'ಹಾಸು ಬಾ, ರಾಜಾ ಬಾ' ಎಂದು ಹೇಳಿದಾಗ ಆದೇ ಎಲೆಯು ಮೇಲಕ್ಕೆ ಎದ್ದು ಬರುವಂತೆ ಆ ಹೆಸರು ಕರೆದಾಗ ಈ ಭಾವನೆಗಳು ನಮ್ಮ ಮನಸ್ಸಿನಲ್ಲಿ ಜಾಗೃತವಾಗುತ್ತವೆ.

ಕಲ್ಪನಾತರಂಗಗಳೂ ಸ್ಮರಣಾಶಕ್ತಿಯೂ.

೪ನೆಯ ಅಧ್ಯಾಯ



ಹಿಂದಿನ ಪುಟಗಳಲ್ಲಿ ಇಂದ್ರಿಯ ಸಂಸ್ಕಾರ, ಇಂದ್ರಿಯ ಸಾಕ್ಷಾತ್ಕಾರ, ಭಾವನೆ ಎಂಬ ಮಾತುಗಳಿಂದ ಸೂಚಿತವಾಗುವುದೇನೆಂದು ವಿವರಿಸಿದೆವು. ಇದಲ್ಲದೆ ಬಾಹ್ಯ ವಸ್ತುಗಳಿಂದ ಇಂದ್ರಿಯಗಳ ಮೂಲಕ ಮನಸ್ಸಿನಲ್ಲಿ ಪ್ರತಿಬಿಂಬಗಳಾಗುವ ವರೆಗೆ, ಹುಟ್ಟಿದ ಮಗುವಿನ ಮನಸ್ಸು ನಿರ್ಗುಣ ಸ್ವರೂಪವಾಗಿದೆ ಎಂತಲೂ ಹೇಳಿದೆವು. ಬಾಲ್ಯದಲ್ಲಿ ಇಂದ್ರಿಯಸಂಸ್ಕಾರಗಳ ಕೆಲಸವೇ ವಿಶೇಷವಾಗಿ ಜರಗುತ್ತದೆ, ಮತ್ತು ಪ್ರತಿಬಿಂಬಗಳು ಎಲ್ಲಾ ಇಂದ್ರಿಯಗಳ ಮೂಲಕ ಮನಸ್ಸಿನಲ್ಲಿ ಆಗುತ್ತಲೆ ಇವೆ ಎಂತಲೂ ಹೇಳಿದೆವು. ಒಮ್ಮೆ ಒಂದು ವಸ್ತುವಿನ ಪ್ರತಿಬಿಂಬವು ಒಂದು ಇಂದ್ರಿಯದ ಮೂಲಕ ಆಗಿ, ಅದರೊಂದಿಗೆ ಇತರ ಇಂದ್ರಿಯಗಳ ಮೂಲಕ ಆದ ಪ್ರತಿಬಿಂಬಗಳು ಒಟ್ಟುಗೂಡಿ ಆ ವಸ್ತುವಿನ ಭಾವನೆ ಆಗುತ್ತದೆಂತಲೂ ಆದಷ್ಟು ಹೆಚ್ಚಿಗೆ ಇಂದ್ರಿಯಗಳನ್ನು ಒಂದು ವಸ್ತುವಿನ ಮೇಲೆ ಆಡಿಸಿ ಆದ ಪ್ರತಿಬಿಂಬ ಸಮುದಾಯವು ಒಂದು ಭಾವನೆಯಾಗುತ್ತದೆಂತಲೂ ಹೇಳಿದೆವು. ಇದರೊಂದಿಗೆ ಅದೇ ವಸ್ತುವಿಗೆ ಸಂಬಂಧಪಟ್ಟ ಬೇರೆ ಭಾವನೆಗಳು ಪದೆಪದೇ ಸಂಯೋಜನೆಯಾಗುವುದರಿಂದ ಭಾವನೆಯ ಸ್ಪಷ್ಟತೆಯೂ ವಿಸ್ತಾರವೂ ಹೆಚ್ಚುತ್ತಿದೆ. 'ಕುರುಡರೂ ಆನೆಯೂ' ಎಂಬ ಕಥೆಯಲ್ಲಿ ಒಂದೊಂದು ಭಾಗವನ್ನು ಸ್ಪರ್ಶಿಸಿದ ಕುರುಡನು ತನಗೆ ಬೇಕಾದ ರೀತಿಯಲ್ಲಿ ಆನೆಯನ್ನು ವರ್ಣಿಸಿದನು. ಅವರಿಗೆ ಕಣ್ಣಿಲ್ಲದ್ದರಿಂದಲೂ ಅವರು ಆನೆಯ ಎಲ್ಲಾ ಅಂಗಗಳನ್ನು ಸಮಗ್ರವಾಗಿ ಪರೀಕ್ಷಿಸದ್ದರಿಂದಲೂ ಅವರ ಭಾವನೆಯು ಅಪೂರ್ಣವಾಯಿತು. ಭಾವನೆಯು ಒಂದೇ ಸಲ ಸಂಪೂರ್ಣವಾಗುವುದಿಲ್ಲ. ನಾವು ತೋಟದಲ್ಲಿ ಒಂದು ಗುಲಾಬಿಯ ಗಿಡವು ಹೂ ಬಿಟ್ಟುದನ್ನು ನೋಡುತ್ತೇವೆ. ಆ ಹೂವಿನ ಬಣ್ಣವು ಗುಲಾಬಿ ಇದ್ದರೆ ಗುಲಾಬಿಯ ಹೂವಿಗೆ ಯಾವಾಗಲೂ ಗುಲಾಬಿಯ ಬಣ್ಣವೆ ಇದೆ ಎಂದು ಭಾವಿಸುತ್ತೇವೆ. ಇನ್ನೊಂದು ತೋಟದಲ್ಲಿ

ಬೇರೆ ಬೇರೆ ಬಣ್ಣದ ಗುಲಾಬಿ ಹೂಗಳನ್ನು ನೋಡಿ ಅವನ್ನು ಮೊದಲಿನ ಹೂವಿನೊಂದಿಗೆ ಸರಿಹೋಲಿಸಿ ಇವುಗಳಲ್ಲಿ ಬಣ್ಣವೊಂದಲ್ಲದೆ ಇತರ ಎಲ್ಲಾ ವಿಷಯಗಳಲ್ಲಿ ಸಮಾನತ್ವವಿದೆ, ಗುಲಾಬಿಯಲ್ಲಿ ಬಗೆಬಗೆಯ ಬಣ್ಣದವು ಇವೆ, ಅವೆಲ್ಲ ಒಂದೇ ಜಾತಿಗೆ ಸೇರಿದವು ಎಂದು ತಿಳಿಯುತ್ತೇವೆ. ಹಾಗೆಯೆ ಇನ್ನೊಂದು ಕಡೆಯಲ್ಲಿ ಬೇರೆ ಎಲ್ಲಾ ಲಕ್ಷಣಗಳಿಂದ ಯುಕ್ತವಾಗಿದ್ದು ಸುವಾಸನೆಯೆ ಇಲ್ಲದ ಗುಲಾಬಿ ಹೂವನ್ನು ಕಾಣುತ್ತೇವೆ. ಇದು ಕಾಡು ಗುಲಾಬಿ ಎನ್ನುತ್ತೇವೆ. ಅಂತೂ ಅವನ್ನೆಲ್ಲ ಗುಲಾಬಿಯ ವರ್ಗಕ್ಕೆನೇ ಸೇರಿಸುತ್ತೇವೆ. ಇದೇ ರೀತಿಯಲ್ಲಿ ನಮ್ಮ ಭಾವನೆಗಳು ವಿಸ್ತಾರವಾಗಿ ಭಾವನಾಸಮುದಾಯವಾಗುತ್ತದೆ. ಇದಕ್ಕೆ **ಕಲ್ಪನೆ**ಯೆನ್ನುತ್ತೇವೆ (Ideas). ಕಲ್ಪನೆಯಲ್ಲಿ ಇಂದ್ರಿಯ ಸಂಸ್ಕಾರ, ಇಂದ್ರಿಯ ಸಾಕ್ಷಾತ್ಕಾರ, ಭಾವನೆ ಇವೆಲ್ಲ ಕಲೆತುಕೊಂಡಿವೆ.

'ಮನಸ್ಸಿನಲ್ಲಿ ಕಲ್ಪನಾತರಂಗಗಳು ಏಳುತ್ತವೆ' ಎಂದು ಕವಿಗಳು ಅಲಂಕಾರಯುಕ್ತವಾಗಿ ಹೇಳುತ್ತಾರೆ. ಈ 'ತರಂಗ' ಎಂಬ ಶಬ್ದ ಉಪಯೋಗಿಸುವುದರಿಂದ, ಅಥವಾ ಕಲ್ಪನಾಪ್ರವಾಹವೆಂದು ಚಮತ್ಕಾರವಾಗಿ ಹೇಳುವುದರಿಂದ, ಕಲ್ಪನೆಯು ದ್ರವರೂಪವೆಂದು ಭಾವಿಸಲಾಗದು. ವಾಯುವಿನಲ್ಲಿಯೂ ತರಂಗಗಳು ಇವೆಯೆಂದು ವಿಜ್ಞಾನಶಾಸ್ತ್ರಜ್ಞರು ಅನ್ನುತ್ತಾರೆ. ಇಲ್ಲಿ ತರಂಗವೆಂಬ ಶಬ್ದದ ಟೀಕೆ ಮಾಡಬೇಕಾಗಿದೆ. ತರಂಗಗಳು ದ್ರವ ಅಥವಾ ವಾಯುಪದಾರ್ಥದಲ್ಲಿ ಬೇರೊಂದು ವಸ್ತುವಿನ ಮೂಲಕ ಆಗುತ್ತವೆ. ನೀರು, ಅಥವಾ ಕಡಲಿನಲ್ಲಿ ತೆರೆ ಏಳಬೇಕಾದರೆ ಅದಕ್ಕೆ ವಾಯು ಬಂದು ದೂಡಬೇಕು. ವಾಯುಚಲನೆಯಿಂದಲೇ ತೆರೆಯುಂಟಾಗುತ್ತದೆ. ವಾಯು ತರಂಗಗಳು ಉಂಟಾಗಲಿಕ್ಕೆ ವಾಯುವನ್ನೂ ಚಲಿಸುವ ಅಥವಾ ಕದಡುವ ಪ್ರತ್ಯೇಕ ವಸ್ತು ಬೇಕು. ಗಂಟೆ ಬಾರಿಸಿದಾಗ, ತುತೂರಿ ಊದಿದಾಗ, ಗಂಟೆಯ ಪೆಟ್ಟಾಗಲಿ ತುತೂರಿಯೊಳಗೆ ನಾವು ಬಾಯಿಯಿಂದ ಊದಿದ ವಾಯುವಾಗಲಿ ಹೊರಗಿನ ವಾಯುವಿನಲ್ಲಿ ತೆರೆಗಳನ್ನು ಏಳಿಸುತ್ತವೆ. ತೆರೆಯಲ್ಲಿ ಏರೊಂದು ತಗ್ಗೊಂದು ಇದೆ. ಏರು ನೀರಿನ ಮಟ್ಟಕ್ಕಿಂತ ಎತ್ತರವಾಗಿದೆ. ತಗ್ಗು ನೀರಿನ ಮಟ್ಟಕ್ಕಿಂತ ತಗ್ಗಾಗಿದೆ. ಹೀಗೆ ಇರಲು ಕಾರಣವೇನೆಂದರೆ, ಒಂದು ಕಡೆ ಉಬ್ಬುವಾಗ ಆ ಉಬ್ಬು ಉಂಟುಮಾಡಲಿಕ್ಕೆ ತಗ್ಗು

ಅಥವಾ ಹಳ್ಳದಿಂದ ನೀರು ಮೇಲಕ್ಕೆ ಬರಬೇಕು. ಇದನ್ನು ಅಗಲವೂ



ಉದ್ದವೂ ಇರುವ ಒಂದು ಬಟ್ಟೆಯನ್ನು ಅದರ ಎರಡು ಕೊನೆಗಳಲ್ಲಿ ವಿಸ್ತರಿಸಿ ಹಿಡಿದು ತೆರೆ ಎಬ್ಬಿಸುವಾಗ ಸ್ಪಷ್ಟಮಾಡಿಕೊಳ್ಳಬಹುದು. ಇದೇ ರೀತಿಯಲ್ಲಿ ಮನಸ್ಸಿನಲ್ಲಿ ಕೆಲವು ಕಲ್ಪನೆಗಳು ಮೇಲಕ್ಕೂ ಕೆಲವು ಕೆಳಕ್ಕೂ ಇದ್ದು ಗುಂಪಾಗಿವೆ. ಇವುಗಳಲ್ಲಿ ತಗ್ಗಿನಲ್ಲಿರುವವು ಸಾರ್ವದಾ ತಗ್ಗಿನಲ್ಲಿರುವು ದಿಲ್ಲ; ಏರಿನಲ್ಲಿರುವವು ಸಾರ್ವದಾ ಏರಿನಲ್ಲಿರುವುದಿಲ್ಲ. ತಗ್ಗಿನಲ್ಲಿರುವವು ಏರಿನಲ್ಲಿಯೂ ಏರಿನಲ್ಲಿರುವವು ತಗ್ಗಿನಲ್ಲಿಯೂ ಬರುತ್ತಲೇ ಇವೆ, ಎಂಬುದು ಈ ತರಂಗವೆಂಬ ಶಬ್ದದಿಂದ ಸ್ಪಷ್ಟವಾಗುತ್ತದೆ. ಏರಿನಲ್ಲಿರುವ ಭಾವನೆಗಳು ತಮ್ಮನ್ನು ತೋರಿಸಿಕೊಳ್ಳುತ್ತವೆ, ಕೆಳಗೆ ಇರುವವು ಮನಸ್ಸಿನಲ್ಲಿ ಅಸ್ಪಷ್ಟವಾ ಗಿವೆ. ಒಬ್ಬನನ್ನು ಕಂಡಾಗ ಹಲವು ಸಮಯದ ಹಿಂದೆ ಮೊದಲೊಮ್ಮೆ ಅವನನ್ನು ಕಂಡಿದ್ದು ಅವನ ಹೆಸರು ನಮಗೆ ನೆನಪಿಗೆ ಬಾರದಿದ್ದರೆ 'ಗಂಟಲ ಲ್ಲಿದೆ, ಬಾಯಿಗೆ ಬರುವುದಿಲ್ಲ' ಎಂದು ಅಲಂಕಾರಯುಕ್ತವಾಗಿ ಹೇಳುವ ಅಭಿಪ್ರಾಯವು ಇದೇ. ಆ ಕಲ್ಪನೆಯು ಮನಸ್ಸಿನಲ್ಲಿದ್ದರೂ ಅದು ಅಡಿಯಲ್ಲಿ ಬಿದ್ದಿರುವುದರಿಂದ ಅದರ ಪ್ರತಿಬಿಂಬವು ಸ್ಪಷ್ಟವಾಗಿರುವುದಿಲ್ಲ. ಕೊಂಚ ಸಮಯದ ಮೇಲೆ ಆ ಬಿಂಬವು ಮೇಲೆದ್ದು ನಮ್ಮ ಮನಸೇಂದ್ರಿಯದಲ್ಲಿ ಸ್ಪಷ್ಟ ವಾಗಿ ಕಾಣಿಸುತ್ತದೆ. ಹಿಂದೆ ಇಸ್ಪಿಟಿನ ಎಲೆಯನ್ನು ಮೇಲಕ್ಕೆ ಬರುವಂತೆ ಅಪ್ಪಣೆಮಾಡಿದ ಜಾದೂವಿನ ದೃಷ್ಟಾಂತವನ್ನು ಕೊಟ್ಟೆವು. ಅಲ್ಲಿ 'ಡೈಮಾನ ಜಾಕಿ ಮೇಲೆ ಬರಲಿ' ಎಂದು ಶಬ್ದವು ಜಾದೂವಿನ ಬಾಯಿಯಿಂದ ಹೊರ ಟೊಡನೆ ಅದೇ ಎಲೆಯು ಮೇಲೆ ಹಾರುವಂತೆ ಇಂದ್ರಿಯಸಂಸ್ಕಾರದಿಂದ ಯಾವ ಕಲ್ಪನೆಯು ಜಾಗೃತವಾಗುತ್ತದೊ ಅದೇ ಮೇಲಕ್ಕೆ ಏಳುತ್ತದೆ; ಇತರ ಕಲ್ಪನೆಗಳು ಅಡಿಗೆ ಬೀಳುತ್ತವೆ. ಈಗ ಇದನ್ನು ಬರೆಯುವಾಗ ನಮ್ಮ ಮೆದುಳಿನಲ್ಲಿ ಹಲವು ಕಲ್ಪನೆಗಳು ಇದ್ದಿರಬಹುದು. ಒಂದು ಕಡೆ ಆಫೀಸಿನ ಗಡಿಯಾರವು ಗಂಟೆ ಹೊಡೆಯಿತು. ಅದು ನಮಗೆ ಕೇಳಿಸಿದೆ.

ಇನ್ನೊಂದು ಕಡೆ ದವಡೆಯ ಹಲ್ಲೊಂದು ನೋವಿನಿಂದ ಪೀಡಿಸುತ್ತಿದೆ. ಹೊರಗೆ ಶಾಲೆಯ ಮೈದಾನದಲ್ಲಿ ಮಕ್ಕಳು ಚೆಂಡಾಡುವ ಗದ್ದಲವು ಕೇಳಿಸುತ್ತದೆ. ಅದರೊಂದಿಗೆ ಈ ಅಧ್ಯಾಯವನ್ನು ಬರೆಯುವುದಕ್ಕೆ ಬೇಕಾದ ಗ್ರಂಥಗಳನ್ನು ಮೇಜಿನ ಮೇಲೆ ತೆರೆದಿಟ್ಟು, ಅವುಗಳ ಮೇಲೆ ನಮ್ಮ ಮನಸ್ಸು ನೆಲೆ ನಿಂತಿದೆ. ಗಂಟಲು ಸ್ವಲ್ಪ ಆರಿದಂತೆ ತಿಳಿಯುತ್ತದೆ. ಇಷ್ಟೆಲ್ಲ ವಿವಿಧ ಕಲ್ಪನೆಗಳು ನಮ್ಮ ಮನೋಪಟಲದಲ್ಲಿದ್ದರೂ ಅವುಗಳ ಸ್ಪಷ್ಟತೆ ಏಕಪ್ರಕಾರ ವಾಗಿಲ್ಲ. ಗಂಟೆ ಎಷ್ಟು ಹೊಡೆಯಿತೆಂದು ಗೋಚರಿಸಲಿಲ್ಲ. ಹಲ್ಲು ನೋವಿದ್ದರೂ ಅದರ ಕಡೆಗೆ ವಿಶೇಷ ಗಮನವಿಲ್ಲ. ಮಕ್ಕಳ ಗದ್ದಲ ಸ್ವರದಲ್ಲಿ ಯಾರ ಸ್ವರ ಕೇಳಿಸುತ್ತದೆಂದೂ ಗಮನಕೊಟ್ಟಿಲ್ಲ. ಮನಸ್ಸು ಈ ಅಧ್ಯಾಯ ವನ್ನು ಬರೆಯುವುದಕ್ಕೆ ಬೇಕಾದ ಮಾತುಗಳನ್ನು ಪೋಣಿಸುವುದರಲ್ಲಿ ಮಗ್ನವಾಗಿದೆ. ಆದ್ದರಿಂದ ಅದು ಮಾತ್ರ ಮನೋಪಟಲದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಅದರ ಸೂಚನೆಗೆ ಅನುಸಾರವಾಗಿ ಲೇಖನಿಯು ಕಾಗದದ ಮೇಲೆ ಓಡುತ್ತದೆ. ಹೀಗೆ ಏಕಕಾಲದಲ್ಲಿ ಮನಸೇಂದ್ರಿಯವನ್ನು ಹಲವು ಕಲ್ಪನೆಗಳು ವ್ಯಾಪಿಸಿದ್ದರೂ ಅವುಗಳಲ್ಲಿ ಸ್ಪಷ್ಟವಾಗಿ ಗೋಚರ ವಾಗುವುದು ಈ ಅಧ್ಯಾಯವನ್ನು ಬರೆಯುವ ವಿಚಾರವೇ ಆಗಿದೆ. ಮನೋ ಪಟಲವನ್ನು ಒಂದು ವೃತ್ತವಾಗಿ ಎಣಿಸಿ ಅದರಲ್ಲಿರುವ ಕಲ್ಪನೆಗಳು ವೃತ್ತದ ಅಂಚಿನಿಂದ ಕೇಂದ್ರಸ್ಥಾನಕ್ಕೆ ಬರಲು ದುಮುಕುತ್ತಿರುವಾಗ ಆ ಕಾಲದಲ್ಲಿ ಯಾವ ಬ್ರಾಹ್ಯಸಂಸ್ಕಾರಗಳು ನಮ್ಮ ಮನಸ್ಸನ್ನು ಆಕರ್ಷಿಸಿ ದವೊ ಆ ಕಲನ್ಪೆಗಳು ಮಾತ್ರ ಕೇಂದ್ರಸ್ಥಾನವನ್ನು ಸೇರಿ, ಉಳಿದವು ಅಂಚು ಗಳಿಗೆ ಅಥವಾ ಪರಿಧಿಯ ಕಡೆಗೆ ತಳ್ಳಲ್ಪಡುತ್ತವೆಂದು ಮನಶ್ಶಾಸ್ತ್ರಜ್ಞರು ಹೇಳುತ್ತಾರೆ. ಹೀಗೆ ಕೇಂದ್ರಸ್ಥಾನವನ್ನು ಸೇರಿದ ಭಾವನೆಯು ಆ ಸಮಯ ದಲ್ಲಿ ಮನೋಪಟಲವನ್ನು ವ್ಯಾಪಿಸಿ ಹಿಡಿಯುತ್ತದೆ.

ಹಲವರು ಅಗಲಕಿರಿದಾದ ಒಂದು ಬಾಗಿಲಿನೊಳಗೆ ಪ್ರವೇಶಿಸಲು ದುಮುಕುತ್ತಾರೆನ್ನೋಣ. ಆಗ ಬಲಶಾಲಿಯಾದವನೊಬ್ಬನು ಅವರೆಲ್ಲ ರನ್ನು ಎಡಕ್ಕೂ ಬಲಕ್ಕೂ ತಳ್ಳಿ, ತನಗೊಂದು ದಾರಿ ಮಾಡಿಕೊಂಡು ಒಳಗೆ ಪ್ರವೇಶಮಾಡಿ, ಬಾಗಿಲನ್ನು ಅಡ್ಡಕಟ್ಟಿ ನಿಲ್ಲುವುದರಿಂದ, ಇತರರನ್ನು ಮರೆ ಪಡಿಸುವಂತೆ ಈ ಭಾವನೆಗಳ ಕಾರ್ಯಕ್ರಮವು ಸಾಗುತ್ತದೆ. ಅವರೆ

ತಾತ್ಕಾಲಿಕವಾಗಿ ಹಾಗೆ ಬಲವು ಸಿಗಬೇಕಾದರೆ ಆ ಕಲ್ಪಯು ಇಂದ್ರಿಯನೆ ಸಂಸ್ಕಾರದಿಂದ ಜಾಗ್ರೃತವಾಗಿ ಅದರಲ್ಲಿ ನಮ್ಮ ಮನಸ್ಸು ಸೆರೆಯಾಗಬೇಕು. ಕಲ್ಪನೆಗಳಲ್ಲಿ ಈ ಬಗೆಯ ಪೋಟಾಪೋಟಿಯು ಇದ್ದೇ ಇದೆ. ಮತ್ತು ಬಹಳ ಸಮಯದ ವರೆಗೆ ಒಂದೇ ಭಾವನೆಯು ನಮ್ಮ ಮನಸನ್ನು ಸೆರೆ ಹಿಡಿಯುವುದಿಲ್ಲ. ನಮ್ಮ ಮನೆಯಲ್ಲಿ ಒಬ್ಬನಿಗೆ ಅಸ್ವಸ್ಥವಿದ್ದು ಪೇಟೆ ಯಿಂದ ನಾವು ಔಷಧಿಯನ್ನು ತರಲಿಕ್ಕೆ ಹೊರಟಿದ್ದೇವೆ ಎನ್ನೋಣ. ಮೆಟ್ಟಲು ಇಳಿದು ಬೀದಿಯು ತಿರುಗುವಲ್ಲಿಗೆ ಮುಟ್ಟುವಷ್ಟರಲ್ಲಿ ದೊಡ್ಡ ಶಬ್ದವೂ ಕೇಳಿಸುತ್ತದೆ, ಜನರ ಸಂದಣಿಯೂ ಕೂಡಿದೆ ಎಂದು ಅದೇ ನೆಂದು ನೋಡಲು ನಮ್ಮ ಮನಸ್ಸು ತವಕಗೊಳ್ಳುತ್ತದೆ. ಆಗ ಔಷ ಧಿಯ ಮರವೆಯಾಗಿ ನಾವು ಅಲ್ಲಿ ಆಡುವ ಡೊಂಬರ ಆಟವನ್ನು ನೋಡುತ್ತ ನಿಲ್ಲುತ್ತೇವೆ. ಆಟ ಮುಗಿಯುವ ವರೆಗೆ ಅಥವಾ ಔಷಧ, ರೋಗ, ಡಾಕ್ಟರರು ಮುಂತಾದ ಯಾವುದೊಂದು ಕಲ್ಪನೆಯು ಜಾಗೃತವಾಗುವ ವರೆಗೆ ನಾವು ಅಲ್ಲಿಯೇ ತಡೆದು ಬಿಡುತ್ತೇವೆ. ಅಂಥಾ ಕಲ್ಪನೆಗಳಲ್ಲಿ ಯಾವುದಾದರೊಂದು ಅನಂತರ ಎಚ್ಚರವಾಗಲೂ ಬಹುದು. ಅಥವಾ ಡೊಂಬನು ಆಟ ಮುಗಿಯುವ ಮೊದಲು 'ದುಡ್ಡು ಕೊಡಿರಿ' ಎಂದು ತನ್ನ ಹರಿವಾಣವನ್ನು ಹಿಡಿದು ಜನರ ಮುಂದೆ ಸುತ್ತಾಡುವಾಗ ನಾವು ಕಿಶೆಯಲ್ಲಿ ಕೈ ಹಾಕಿದರೆ ಮದ್ದಿನ ಸೀಸೆ ಕೈಗೆ ತಗಲಿ ಮದ್ದಿನ ನೆನಪು ಬರುತ್ತದೆ. ಮನಸ್ಸಿನಲ್ಲಿ ಒಮ್ಮೆ ಆಗಿದ್ದ ಬಿಂಬವಾದರೂ ಬಾಹ್ಯ ವಸ್ತುವಿನ ಸಂಸ್ಕಾರ ದಿಂದಲೆ ಮನಸ್ಸಿನಲ್ಲಿ ಜಾಗೃತವಾಗುತ್ತದೆ.

ಕಲ್ಪನಾ ಜಾಗೃತಿ:—ಈ ರೀತಿಯಲ್ಲಿ ಜಾಗೃತಿಯಾಗುವುದಕ್ಕೂ ಒಂದು ಬಗೆಯ ವ್ಯವಸ್ಥೆಯಿದೆ. ಬಾಹ್ಯ ವಸ್ತುವಿನಿಂದ ಆದ ಇಂದ್ರಿಯ ಸಂಸ್ಕಾರವು ಮನಸ್ಸಿನಲ್ಲಿ ಒಂದು ಕಲ್ಪನೆಯನ್ನು ಒಮ್ಮೆ ಜಾಗೃತಿಮಾಡಿದರೆ ಅದರೊಂದಿಗೆ ಸಾಲುಸಾಲಾಗಿ ಹಲವು ಕಲ್ಪನೆಗಳು ಮನಸ್ಸಿನಲ್ಲಿ ಏಳುವವು. ಹೀಗಾಗಬೇಕಾದರೆ ಆಗಾಗ ಉಂಟಾದ ಕಲ್ಪನೆಗಳಲ್ಲಿ ಒಂದಕ್ಕೊಂದು ಸಂಬಂಧವಿರುವವುಗಳೇ ಒಟ್ಟಿಗೆ ಕೂಡಿಕೊಂಡು ಒಂದು ಸರಪಣಿಯ ಗೊಣಸುಗಳಂತೆ ಒಂದಕ್ಕೊಂದು ಸಂಬಂಧವನ್ನು ಬಿಗಿದುಕೊಂಡಿರುತ್ತವೆ. ಅವುಗಳಲ್ಲಿ ಒಂದು ಮೇಲಕ್ಕೆ ಬಂದರೆ ಅದರೊಂದಿಗೆ ಒಂದರನಂತರ

ಒಂದು ಗೊಣಸಾಗಿ ಇದಿ ಕಲ್ಪನೆಯು ಸರಪಣಿಯೇ ಮೇಲಕ್ಕೆ ಬಂದು ನಿಲ್ಲುತ್ತದೆ. ಇದಕ್ಕೆ ಒಂದು ದೃಷ್ಟಾಂತವನ್ನು ಕೊಡೋಣ.

1924ನೆ ಇಸವಿಯ ಒಗಸ್ಟ ತಿಂಗಳಲ್ಲಿ ನಿಮ್ಮ ಜಿಲ್ಲೆಯಲ್ಲಿ ಮಳೆಯು ಅತಿರೇಕವಾಗಿ ಸುರಿದು, ನೇತ್ರಾವತಿ ನದಿಯಲ್ಲಿಯೂ ಇತರ ಚಿಕ್ಕ ದೊಡ್ಡ ನದಿಗಳಲ್ಲಿ ವಿಪರೀತ ನೆರೆ ಬಂದು, ದಡದಲ್ಲಿರುವ ಅನೇಕ ಊರುಗಳಲ್ಲಿ ಮನೆಮಾರು ದನಕರು ನಾಶವಾಗಿ ಜನರಿಗೆ ಕಷ್ಟ ಬಂದೊದಗಿತ್ತು. ಅದು ಈಗಲೂ ಮರವೆಯಾಗಲಿಲ್ಲ. ವರ್ತಮಾನ ಪತ್ರಿಕೆಯಲ್ಲಿ ಯಾವುದೊಂದು ನದಿಯಲ್ಲಿ ನೀರು ಉಕ್ಕಿ ಬಂದು ದಡದ ಮನೆಗಳು ಕುಸಿದು ಬಿದ್ದು ಜೀವ ನಾಶವಾಯಿತು ಎಂದು ಓದಿದಾಗ ಪಾಣೆಮಂಗಳೂರು ಬಂಟವಾಳ ಊರುಗಳಲ್ಲಿ ಆದ ನೆರೆ ಹಾವಳಿಯ ಚಿತ್ರವು ಒಮ್ಮೆಗೆನೆ ನಮ್ಮ ಮನೋಪಟಲದಲ್ಲಿ ವಿಶದವಾಗಿ ಕಾಣಿಸಿಕೊಳ್ಳುವುದು. ಆಗ ಪಾಣೆಮಂಗಳೂರು ಬಂಟವಾಳ ಊರುಗಳಲ್ಲಿಯೇ ವಾಸಮಾಡಿದವರಿಗೆ ಅಂಥ ನೆರೆ ಹಾವಳಿಯ ಕಾಲದಲ್ಲ ಯಾರ ಮನೆಯ ಹೆಂಗಸರು ಮಕ್ಕಳು ದಿಗಿಲಿನಿಂದ ಓಡಿ ಹೋದರು, ಹೇಗೆ ಜೀವ ಉಳಿಸಿಕೊಂಡರು, ಎಷ್ಟು ಸಮಯಕ್ಕೆ ನೀರು ಉಕ್ಕಿ ಬರಲು ಪ್ರಾರಂಭವಾಯಿತು, ಎಷ್ಟು ರಾತ್ರಿಯ ವರೆಗೆ ಜನರೆಲ್ಲ ಎತ್ತರವಾದ ಸ್ಥಳಗಳಲ್ಲಿ ಊಟಕ್ಕಿಲ್ಲದೆಯೂ ಹೊದ್ದುಕೊಳ್ಳುವ ಬಟ್ಟೆ ಬರಿ ಇಲ್ಲದೆಯೂ ಗೋಳಾಡುತಿದ್ದರು ಎಂಬ ಚಿತ್ರವು ಈಗಲೇ ನಡೆಯುತ್ತದೋ ಎಂಬಂತೆ ಸ್ಪಷ್ಟವಾಗಿ ಸಂಪೂರ್ಣ ವಿವರ ಸಹಿತವಾಗಿ ಕಣ್ಣ ಮುಂದೆ ನಿಲ್ಲುವುದು. ಈ ಚಿತ್ರವನ್ನು ಹೀಗೆ ಜಾಗೃತಮಾಡಲಿಕ್ಕೆ ನಾವು ಈಗ ವರ್ತಮಾನ ಪತ್ರಿಕೆಯಲ್ಲಿ ಓದಿದ ಪರವೂರಿನ ಸಮಾಚಾರವೇ ಕಾರಣವಾಯಿತು. ಹೀಗೆ ಕಲ್ಪನಾಶೃಂಖಲೆಯ ಒಂದು ಗೊಣಸನ್ನು ಮೇಲಿ ಎತ್ತಲಿಕ್ಕೆ ಮಾತ್ರವೇ ಬಾಹ್ಯ ಇಂದ್ರಿಯದಿಂದ ಒಳಕ್ಕೆ ಬರುವ ಒಂದು ಭಾವನೆಯು ಸಹಾಯಕವಾಗುತ್ತದೆ. ಅನಂತರ ಇದೀ ಸಂಕೋಲೆಯನ್ನು ಕ್ರಮವಾಗಿ ಮೇಲೆತ್ತಿದಂತಾಗುತ್ತದೆ.

ಈ ರೀತಿಯಲ್ಲಿ ಜಾಗೃತವಾಗುವ ಕ್ರಮಕ್ಕೆ ಒಬ್ಬ ಲಾಕ್ಷಣಿಕರು ಕೆಲವು ಸೂತ್ರಗಳನ್ನು ಮಾಡಿದ್ದಾರೆ:—

1. ಒಂದು ಕಲ್ಪನೆಗೂ ಇನ್ನೊಂದಕ್ಕೂ ಪರಸ್ಪರ ಸಮಾನತ್ವವಿರಬೇಕು:— ಈ ಹೊತ್ತು ನಾವು ಒಂದು ನೂತನ ಕಲ್ಪನೆಯನ್ನು ಮನಸ್ಸಿನಲ್ಲಿ ಮಾಡುವಾಗ ಅದು ಅದಕ್ಕೆ ಸಮಾನವಿರುವ ಒಂದು ಹಳೆ ಕಲ್ಪನೆಯನ್ನು ಎಚ್ಚರಿಸುತ್ತದೆ. ಇದಕ್ಕೆ ಮೇಲಿನ ನೆರೆಯ ದೃಷ್ಟಾಂತವನ್ನು ಹೇಳಬಹುದು.

2. ಒಂದು ಕಲ್ಪನೆಯು ಇನ್ನೊಂದಕ್ಕೆ ಸರಿ ವಿರುದ್ಧವಾಗಲೂ ಬಹುದು:— ಈ ರಾತ್ರೆ ಒಂದು ನಾಟಕದಲ್ಲಿ ಕುಡಿಕತನದಿಂದ ಸಾಲದಲ್ಲಿ ಮುಳುಗಿ ತ್ರಿವಿಧ ತಾಪವನ್ನು ಅನುಭವಿಸುವವನ ಸಂಕಷ್ಟಗಳನ್ನು ನಾವು ಕಂಡಾಗ ನಮ್ಮಲ್ಲಿ ಅಂಥ ದುರ್ವ್ಯಸನವು ಅಂಟಿಕೊಳ್ಳದೆ ನಾವು ಸುಖವಾಗಿದ್ದೇವೆ ಎಂದು ಕಾಣಬಹುದು. ಅಥವಾ ಇನ್ನೊಂದು ನಾಟಕದಲ್ಲಿ ಒಬ್ಬನ ಪತ್ನಿಯು ತನ್ನ ದುರಾಚಾರದಿಂದ ತನ್ನ ಪತಿಯ ಮನೆಯನ್ನು ಸ್ಮಶಾನದಂತೆ ಮಾಡಿದ ಚಿತ್ರವು ಕಣ್ಣೆದುರಿಗೆ ನಟಿಸಲ್ಪಡುವಾಗ ನಮ್ಮ ಮನೆತನದಲ್ಲಿ ನಮಗೆ ಇದ್ದ ಸುಖದ ಚಿತ್ರವೂ ಅದರೊಂದಿಗೆ ಎದ್ದು ನಿಂತು ಮನಸ್ಸಿನಲ್ಲಿ ಸುಖವಾಗಬಹುದು. ಹಾಗೆಯೇ ಕೆಲವರಿಗೆ ಸಿನೆಮಾ, ನಾಟಕ ಮುಂತಾದವುಗಳಲ್ಲಿ ಮಹಾ ಕುಹಕಿಗಳು ವಿವಿಧ ಚಮತ್ಕಾರಿಕ ಸಾಹಸಗಳಿಂದ ದೊಡ್ಡ ದರೋಡೆಗಳನ್ನು ಮಾಡಿ, ಸರಕಾರದ ಅಧಿಕಾರಿಗಳಿಗೆ ಮಂಕು ಚೆಲ್ಲಿ, ಸಭ್ಯ ಮನುಷ್ಯನಂತೆ ಐಹಿಕ ಸುಖಗಳನ್ನು ಭೋಗಿಸುವಾಗ, ನಾವು ದಿನವಹಿ ಹಲವು ರೀತಿಯಿಂದ ದೇಹವೂ ಮೆದುಳೂ ದಣಿಸಿ ಕಷ್ಟಪಟ್ಟರೂ ಉಡುವುದಕ್ಕೆ ಸರಿಯಾದ ಬಟ್ಟೆ ಇಲ್ಲ, ತಿನ್ನುವುದಕ್ಕೆ ಸರಿಯಾದ ತಿಂಡಿ ಇಲ್ಲ ಎಂಬುದು ಮನಸ್ಸಿನಲ್ಲಿ ಹೊಳೆದು ಅಂಥ ಜೀವನದ ಮೇಲೆ ಒಂದು ಬಗೆಯ ತಾತ್ಸಾರವು ಉಂಟಾಗಬಹುದು.

3. ಒಂದು ಕಲ್ಪನೆಯು ಇನ್ನೊಂದರ ಅನಂತರ ಮೇಲೆ ಹೇಳಿದ ಸಂಕೋಲೆಯ ಕೊಣಿಸುಗಳಂತೆ ಇರೋಣ:— ಇಂಥ ಕಲ್ಪನೆಗಳಲ್ಲಿ ಒಂದಕ್ಕೊಂದು ಸಂಬಂಧವಿರಬೇಕೆಂತ ಇಲ್ಲ. ಅವು ಒಂದರ ನಂತರ ಒಂದಾಗಿ ನಡೆದಿದ್ದರೆ ಸಾಕಾಗುತ್ತದೆ. ಉದಾಹರಣೆಯಾಗಿ ನಮಗೆ ಪ್ರಾಯವಾಗುತ್ತ ಮರವೆ ಹೆಚ್ಚಾಗುತ್ತಿದೆ ಎನ್ನೋಣ. ದೂರವಿರುವ ಜಿಲ್ಲಾ ಕೋರ್ಟಿಗೆ ಸಾಕ್ಷಿ ನುಡಿಯಲಿಕ್ಕೆ ಹೋಗುವಾಗ ಪ್ರಯಾಣದ ಅವಸರದಲ್ಲಿ ನಮ್ಮ ಉಟ್ಟ ಬಟ್ಟೆಯ ಒಂದು ಸೆರಗಿನ ತುದಿಗೆ ಒಂದು ಗಂಟನ್ನು ಹಾಕಿಕೊಳ್ಳು

ತ್ತೇವೆ. ಅಲ್ಲಿ ಸಾಕ್ಷಿ ನುಡಿದಾದ ಮೇಲೆ ಪೇಟೆಗೆ ಹೋಗಿ ಪವನಿನ ಬೆಲೆ ಏನು ಎಂದು ತಿಳಿದು 2 ಪವನು ತರಬೇಕೆಂದು ನಮ್ಮ ಮಗಳು ಹೇಳಿರುವ ಳೆಂದು ನೆನಪು ಹುಟ್ಟಿಸಲಿಕ್ಕೆ ಈ ಗಂಟನ್ನು ಹಾಕಿಕೊಂಡಿದ್ದೇವೆ. ಈ ಗಂಟು ನಮ್ಮ ಕೈಗೆ ಒತ್ತುವಾಗ ಪವನು ತರಬೇಕೆಂಬ ಮಾತನ್ನು ಸ್ಮರಣೆಗೆ ತರುತ್ತದೆ. ಗಂಟಿಗೂ ಪವನಿಗೂ ಅರ್ಥಾತ್ ಸಂಬಂಧವಿಲ್ಲದಿದ್ದರೂ ಪವನು ತರಬೇಕೆಂಬ ಮಾತಿನ ಹಿಂದೆಯೇ ಗಂಟು ಹಾಕಿಕೊಂಡ ಕಾಲ ಸಾಮಿಪ್ಯವೇ ಅದರ ಸ್ಮರಣೆಗೆ ಸಹಾಯಕವಾಗುತ್ತದೆ. ಅಕ್ಷರಮಾಲೆಯು ಬಾಯಿಪಾಠವು ಈ ಕ್ರಮದಲ್ಲಿ ಸೇರುತ್ತದೆ.

4. ಕಲ್ಪನೆಗಳು ಏಕಕಾಲದಲ್ಲಿ ಉಂಟಾಗೋಣ:— ಇವುಗಳಲ್ಲಿಯೂ ಪರಸ್ಪರ ಕೃತಕ ಸಂಬಂಧವೇ ಇರುತ್ತದೆ. ಒಮ್ಮೆ ಮೋಟರ್ ಬಂಡಿಯು ನಮ್ಮನ್ನು ಹಾದುವಾಗ ನಾವು ಡ್ರೈವರನ ಅಜಾಗ್ರತೆಯಿಂದ ಬಂಡಿಯು ಅಡಿಗೆ ಬಿದ್ದು ಪ್ರಾಣ ಕಳಕೊಳ್ಳುವ ಸಂದರ್ಭವಿದ್ದು ಯಾರೊ ಪುಣ್ಯಾತ್ಮರು ನಮ್ಮನ್ನು ಈಚೆಗೆ ಎಳೆದು ಜೀವ ಉಳಿಸಿದರೆನ್ನೋಣ. ಪ್ರತಿ ಸಲ ಮೋಟರ್ ಬರುವಾಗ ಹೀಗೆ ಪ್ರಾಣಾಪಾಯು ಬರಬೇಕೆಂದಿಲ್ಲ. ಆದರೆ ಮುಂದೆ ಕೆಲವು ಕಾಲದ ವರೆಗೆ ಮೋಟರಿನ ತುತೂರಿಯು ಶಬ್ದ ಕೇಳಿ ದೊಡನೆ ಎದೆ ದಡದಡೆನ್ನಿಸುತ್ತದೆ. ನಾವು ಕೂಡಲೇ ಚರಂಡಿಗೆ ಒತ್ತಾಗಿ ನಿಂತು ಬಿಡುತ್ತೇವೆ.

ಸ್ಮರಣಾಶಕ್ತಿ:— ಹೀಗೆ ಬಾಹ್ಯ ವಸ್ತುಗಳ ನೂತನ ಪರಿಚಯು ದಿಂದ ಹಳೇ ಅನುಭವಗಳು ಅಥವಾ ಪ್ರತಿಬಿಂಬಗಳು ಮನೋಪಟಲದಲ್ಲಿ ಮೂಡುವ ಮಾನಸಿಕ ಶಕ್ತಿಗೆ **ಸ್ಮರಣಾಶಕ್ತಿ** ಎನ್ನುತ್ತಾರೆ. ಈ ಶಕ್ತಿಯು ಮನಸ್ಸಿಗೆ ಇಲ್ಲದಿದ್ದರೆ ಒಮ್ಮೆ ಮಾಡಿದ ಪರಿಚಯುಗಳು ಆ ಮೇಲೆ ಅಳಿಸಿ ಹೋದಂತಾಗಿ ಕಲ್ಪನಾವೃದ್ಧಿಗೆ ಅವಕಾಶವಿರುತ್ತಿರಲಿಲ್ಲ. ಕಲ್ಪನೆಗಳು ಹೊಸ ಕಲ್ಪನೆಗಳೊಡನೆ ಸಂಬಂಧ ಬೆಳಿಸಿ ವಿಸ್ತಾರವೂ ಸ್ಪಷ್ಟವೂ ಆಗ ಬೇಕಾದರೆ ಈ ಪ್ರತಿಬಿಂಬಗಳ ಸಮುದಾಯುವು ಹೆಚ್ಚುತ್ತಲೆ ಇರಬೇಕು. ಪರಸ್ಪರ ಸಂಬಂಧವುಳ್ಳ ಪ್ರತಿಬಿಂಬಗಳು ಮೂಲ ಬಿಂಬ ವಿಸ್ತಾರಕ್ಕೆ ಸಹಾಯಕವಾಗುತ್ತವೆ. ಪರಸ್ಪರ ಸಂಬಂಧವಿಲ್ಲದವುಗಳನ್ನು ಅನೇಕ ಸಲ ಕಲ್ಪನೆಗಳು ತಮ್ಮ ಕೂಟಕ್ಕೆ ಸೇರಿಸಿಕೊಳ್ಳದೆ ಇಂದ್ರಿಯು ಪಟಲದಿಂದ ತಳ್ಳಿ

ಹಾಕುತ್ತವೆ. ಹೀಗಾಗಿ ಅವು ಕಳಚಿಬಿದ್ದು ಮಾಯವಾಗುತ್ತವೆ. ಸ್ಮರಣಾ ಶಕ್ತಿಯ ಕಾರ್ಯಕ್ರಮವು ಹೀಗಿದೆ:—(1) ನೂತನವಾಗಿ ಬರುವ ಕಲ್ಪನಾ ಪ್ರತಿಬಿಂಬಗಳು ಸುಲಭ ಗ್ರಾಹ್ಯವಾಗಬೇಕು. (2) ಸ್ಪಷ್ಟವಾದ ಕಲ್ಪನೆಗಳು ಆಗಬೇಕು. (3) ಅವು ಚೆನ್ನಾಗಿ ಮನಸ್ಸಿನಲ್ಲಿ ನಾಟಿಕೊಂಡಿರಬೇಕು. (4) ಅವನ್ನು ಸುಲಭವಾಗಿ ಕೆರಳಿಸಲು ಸಾಧ್ಯವಾಗಬೇಕು. (5) ಅವುಗಳ ವ್ಯಾಪ್ತಿಯು ದೊಡ್ಡದಿರಬೇಕು. ಇವನ್ನು ಒಂದೊಂದನ್ನೆ ಈಗ ಸ್ವಲ್ಪ ವಿಸ್ತಾರವಾಗಿ ಹೇಳೋಣ.

1. **ಕಲ್ಪನಾಬಿಂಬಗಳು ಸುಲಭ ಗ್ರಾಹ್ಯವಾಗಬೇಕು:**—ಎಂದರೆ ಯಾರ ಮನಸ್ಸಿನಲ್ಲಿ ಅವು ಮುದ್ರೆಯೊತ್ತಬೇಕೊ ಅಂಥವನ ಮಾನಸಿಕ ಶಕ್ತಿಗೆ ಗ್ರಹಿಸುವಷ್ಟು ಸುಲಭವಾಗಬೇಕು. ಮೋಡಗಳಿಂದ ವಿದ್ಯುತ್ ಶಕ್ತಿಯು ಒಂದುಗೂಡಿ ಆದ ಮಿಂಚು ವಾಯುಮಂಡಲದ ವಾಯುವಿನ ಕೆಲವಂಶವನ್ನು ಸುಟ್ಟುಬಿಡುವುದರಿಂದ ಅಲ್ಲಿ ಬರಿದಾದ ಸ್ಥಳವನ್ನು ತುಂಬಲಿಕ್ಕೆ ದುಮುಕುವ ಗಾಳಿಯಿಂದ ಗುಡುಗು ಉಂಟಾಗುತ್ತದೆಂದು 8 ವರ್ಷದ ಹುಡುಗನಿಗಾಗಲಿ ಏನೂ ತಿಳಿಯದ ಹಳ್ಳಿಗನಿಗಾಗಲಿ ವಿವರಿಸಿದರೆ ಅಂಥಾ ಕಲ್ಪನೆಯನ್ನು ಮಾಡಲು ಅವರ ಮಾನಸಿಕ ಶಕ್ತಿಯು ಸಾಲದು. ಅದಕ್ಕೆ ಬೇಕಾದ ಪೂರ್ವ ಸಂಸ್ಕಾರಗಳು ಅವರ ಮನಸ್ಸಿನಲ್ಲಿ ಆಗಿಲ್ಲ. ವಿದ್ಯುತ್‌ಶಕ್ತಿಯ ಪ್ರಭಾವವೇನೆಂದು ಅವರು ತಿಳಿಯಲಿಲ್ಲ, ಅಂಥವರಿಗೆ ಈ ವಿಷಯದ ನಿಜವಾದ ಜ್ಞಾನವಾಗುವುದಿಲ್ಲ. ನಾವು ಬರೆದ ವಾಕ್ಯವನ್ನು ಪುಸ್ತಕದಲ್ಲಿ ಅಥವಾ ಬೋರ್ಡಿನ ಮೇಲೆ ಓದಿಕೊಂಡು ಮಾತ್ರ ಆ ಶಬ್ದಗಳು ಒಂದರ ನಂತರ ಒಂದಾಗಿ ಬರುವ ರೀತಿಯಲ್ಲಿ ಆ ಅಲ್ಪ ಮತಿಗಳ ಮನಸ್ಸಿನಲ್ಲಿ ಆ ಶಬ್ದಗಳ ಕಲ್ಪನೆಯಾಗಿದೆ. ಅಲ್ಲದೆ ಆ ಶಬ್ದಗಳಲ್ಲಿರುವ ಅಭಿಪ್ರಾಯದ ಕಲ್ಪನೆಯಾಗಲಿಲ್ಲ. ಇಂಥ ಬಾಹ್ಯ ಯೋಜನೆಯಲ್ಲಿ ಒಂದು ಗೊಣಸು ಸಿಕ್ಕು ಬಿದ್ದರೆ ಇಡೀ ಸರಪಳಿಯು ಸಿಕ್ಕು ಬಿದ್ದಂತಾಗಿ ಅನರ್ಥವಾಗುತ್ತದೆ. ಅರ್ಥ ತಿಳಿಯದೆ ಮಗ್ಗಿ ಪಾಠ ಮಾಡಿಸಿದ ಮಗುವಿಗೆ $8 \times 1 = 8$ ಇತ್ಯಾದಿಯಿಂದ $8 \times 10 = 80$ ವರೆಗೆ ಸರಿಯಾಗಿ ಮುಂದಕ್ಕೂ ಹಿಂದಕ್ಕೂ ಹೇಳಲು ಬರುತ್ತದೆ. ಮಧ್ಯೆ ಇರುವ $8 \times 5 = ?$ ಎಂದು ಪ್ರಶ್ನೆಗೆ ಉತ್ತರ ಹೊರಡಲಾರದು. ಇದಕ್ಕೆ 8×5 ಎಂಬ

ಸಂಜ್ಞೆಗಳ ಸರಿಯಾದ ಅಭಿಪ್ರಾಯವು ಕಲ್ಪನೆಯಲ್ಲಿ ಇಲ್ಲದುದೇ ಕಾರಣ. ಇದನ್ನು ಇನ್ನೊಂದು ರೀತಿಯಾಗಿ ಉದಹರಿಸಬಹುದು. ಚಿಕ್ಕ ಮಕ್ಕಳಿಗೆ ಚೈತ್ರ ವೈಶಾಖ ಇತ್ಯಾದಿಗಳನ್ನೂ ಅಶ್ವಿನ್ಯಾದಿ ನಕ್ಷತ್ರಗಳ ಹೆಸರುಗಳನ್ನೂ ಬಾಯಿಪಾಠಮಾಡಿಸುತ್ತೇವೆ. ಹಲವು ಸಲ ಮಕ್ಕಳು ಅವನ್ನು ನಮ್ಮೆದುರಿಗೆ ಹೇಳುವಾಗ, ತಿಂಗಳುಗಳಲ್ಲಿ ಮತ್ತು ನಕ್ಷತ್ರಗಳಲ್ಲಿರುವ ಹೆಸರುಗಳಿಂದ ಗಲಿಬಿಲಿಯಾಗಿ ನಕ್ಷತ್ರಗಳ ಹೆಸರುಗಳನ್ನು ಹೇಳುವಾಗ ಜ್ಯೇಷ್ಠ ಆದ ಮೇಲೆ ಆಷಾಢ ಶ್ರಾವಣ ಎಂದು ಹೇಳಿ ಮುಗಿಸುವುದುಂಟು.

2. **ಸ್ಪಷ್ಟವಾದ ಕಲ್ಪನೆಗಳು ಆಗಬೇಕು:**— ಇದನ್ನು 'ಕುರುಡರೂ ಆನೆಯೂ' ಎಂಬ ಕಥೆಯು ವಿವರಿಸುತ್ತದೆ. ಭಾವನೆಗಳು ಆದಷ್ಟು ಹೆಚ್ಚಿನ ಇಂದ್ರಿಯಗಳ ಮೂಲಕ ಆದವುಗಳಿರಬೇಕು. ಇಂದ್ರಿಯಗಳನ್ನು ವಸ್ತುಗಳ ಮೇಲೆ ಆಡಿಸುವಾಗ ಅವಸರ ಮಾಡಿದರೆ ಅಥವಾ ಒಂದೆರಡು ಇಂದ್ರಿಯಗಳನ್ನು ಮಾತ್ರವೇ ಆಡಿಸುವುದರಿಂದ ಆಗುವ ಅನುಭವವು ಅಪೂರ್ಣವಿರುತ್ತದೆ. ಇದಕ್ಕಾಗಿಯೇ ಮಕ್ಕಳಿಗೆ ಪ್ರತಿಯೊಂದು ವಸ್ತುವಿನ ಜ್ಞಾನ ಸಂಪೂರ್ಣತೆಯಾಗುವುದಕ್ಕೆ ಅದರ ಮೇಲೆ ತಮ್ಮ ಎಲ್ಲಾ ಜ್ಞಾನೇಂದ್ರಿಯಗಳನ್ನು ಉಪಯೋಗಿಸಬೇಕು ಎನ್ನುತ್ತೇವೆ. ಮಗುವು ಒಂದು ಪದ್ಯವನ್ನು ಬಾಯಿಪಾಠ ಮಾಡುವಾಗ ಅದನ್ನು ಗಟ್ಟಿಯಾಗಿ ಓದುತ್ತದೆ. ಆಗ ಕಿವಿಯಿಂದಲೂ ನಾಲಗೆಯಿಂದಲೂ ಕಣ್ಣಿನಿಂದಲೂ ಅಂದರೆ ಮೂರು ಇಂದ್ರಿಯಗಳ ಮೂಲಕ ಆ ಪದ್ಯದ ಶಬ್ದಗಳ ಕ್ರಮವು ಒತ್ತುವುದರಿಂದ ಆ ಶಬ್ದಗಳು ಸುಲಭವಾಗಿ ಮನಸ್ಸಿನಲ್ಲಿ ಮುದ್ರೆಯೊತ್ತುತ್ತವೆ. ಇಂಗ್ಲಿಷ ಭಾಷೆಯ ಶಬ್ದಗಳನ್ನು ಓದುವಾಗ ಅಕ್ಷರ ಜೋಡಣೆಗೆ ಸರಿಯಾಗಿ ಗಮನಕೊಟ್ಟು ಇಲ್ಲವಾದರೆ, ಅಂಥಾ ಶಬ್ದಗಳನ್ನು ಬರೆಯುವಾಗ ತಪ್ಪು ಅಕ್ಷರಗಳು ಬೀಳುವುದಕ್ಕೆ ಈ ಅಸ್ಪಷ್ಟವಾದ ಬಿಂಬಗಳೆ ಕಾರಣವಾಗಿವೆ.

3. **ಬಿಂಬಗಳು ಮನಸ್ಸಿನಲ್ಲಿ ಚೆನ್ನಾಗಿ ನಾಟಿಕೊಂಡಿರಬೇಕು:**— ಇವಕ್ಕೆ ಪುನರಾವರ್ತನೆಯೆ ಸಹಾಯಕವಾಗಿವೆ. ಪದೇ ಪದೇ ಒಂದು ಬಿಂಬದ ಮೇಲೆ ಇಂದ್ರಿಯಗಳನ್ನು ಆಡಿಸುವುದರಿಂದ ಆ ಬಿಂಬವು ಚೆನ್ನಾಗಿ ಮುದ್ರೆಯೊತ್ತಿದಂತಾಗಿ ಬೇಗನೇ ಅಳಿಸಿ ಹೋಗುವುದಿಲ್ಲ.

4. **ಬಿಂಬಗಳನ್ನು ಸುಲಭವಾಗಿ ಕೆರಳಿಸಲು ಸಾಧ್ಯವಾಗಬೇಕು:—** ಕಾಲ ಹೋದ ಹಾಗೆ ಹೊಸ ಬಿಂಬಗಳು ತುಂಬುವುದರಿಂದ ಹಳೇ ಬಿಂಬಗಳು ಮಾಯವಾಗುವ ಸಂಭವವಿದೆ ಹಲವು ಕಾಲದ ಹಿಂದೆ ನೋಡಿದ ಮನುಷ್ಯನ ಅಥವಾ ಸ್ಥಳದ ಬಿಂಬವು ಮನಸ್ಸಿನಲ್ಲಿ ಅಳಿದುಹೋಗಬಹುದು. ಪುನರಾವರ್ತನೆಯೇ ಹಾಗೆ ಅಳಿದುಹೋಗದಂತೆ ಸಹಾಯಕವಾಗಿದೆ.

5. **ಕಲ್ಪನಾವ್ಯಾಪ್ತಿಯು ದೊಡ್ಡದಿರಬೇಕು:—** ಒಂದು ಕಲ್ಪನೆಯು ವಿಸ್ತಾರವಾಗಬೇಕಾದರೆ ಅದಕ್ಕೆ ಸಂಬಂಧಪಡುವ ಹಲವು ಕಲ್ಪನೆಗಳು ಅದರಲ್ಲಿ ಸೇರಿರಬೇಕು ಎಂದು ಹಿಂದೆ ಹೇಳಿದೆವು. ಹೀಗೆ ವಿಸ್ತಾರವಾಗುವುದರಿಂದ ಅದರ ಯಾವುದಾದರೊಂದು ಕೊನೆಯು ಜಾಗ್ರೃತವಾಗಿ ಇಡೀ ಕಲ್ಪನೆಯು ಜಾಗ್ರೃತವಾಗುತ್ತದೆ.

ಕಲ್ಪನಾ ಸಮುದಾಯಗಳಿಗೆ ಪರಸ್ಪರ ಸಂಬಂಧ ಕಟ್ಟುವುದರಿಂದ ಸ್ಮರಣಾಶಕ್ತಿಗೆ ಸಿಗುವ ಬೆಂಬಲವು ನೈಸರ್ಗಿಕವಾಗಿದೆ. ಆದರೆ ಹಲವು ಹೆಸರುಗಳನ್ನು ಬಾಯಿಪಾಠ ಮಾಡಿಕೊಂಡು ಇರಬೇಕಾದ ಸಂದರ್ಭದಲ್ಲಿ ಕೆಲವು ಸಲ ಆ ಶಬ್ದಗಳ ಮೊದಲನೆ ಅಕ್ಷರಗಳನ್ನು ಜೋಡಿಸಿ ಒಂದು ವಿಚಿತ್ರ ವಸ್ತುವಿನ ಅಥವಾ ಕ್ರಿಯೆಯ ಹೆಸರಾಗಿ ನೆನಪಿನಲ್ಲಿಟ್ಟುಕೊಳ್ಳುವುದುಂಟು. ವಾಯುವ್ಯ, ಈಶಾನ್ಯ, ಆಗ್ನೇಯ, ನೈರುತ್ಯ ಎಂಬ ದಿಕ್ಕುಗಳು ಯಾವವೆಂದು ಸ್ಮರಣೆಯಲ್ಲಿಡಬೇಕಾದರೆ ಆ ಶಬ್ದಗಳ ಮೊದಲನೆ ಅಕ್ಷರಗಳಾದ **ವಾ ಈ ಆ ನೆ** ಎಂಬ ಅಕ್ಷರಗಳನ್ನು ಅಥವಾ ಕಾವ್ಯದಲ್ಲಿ ಒಂದೊಂದು ಚರಣದ ಗಣಗಳ ಹೆಸರುಗಳನ್ನು ಕೂಡಿಸಿ ಮಾಡಿದ ಶ್ಲೋಕಗಳನ್ನು ಬಾಯಿಪಾಠ ಮಾಡಿಸುವುದೂ ಉಂಟು. ಇಂಥವುಗಳು ಸ್ಮರಣಾಶಕ್ತಿಗೆ ಕೃತಕ ಊರುಗೋಲುಗಳು.

ಜ್ಞಾನದ ಬೆಳವಣಿಗೆ

9ನೆಯ ಅಧ್ಯಾಯ

ವೇದನಾ, ಜ್ಞಾನ:—ಹಿಂದೆ ಹೇಳಿದಂತೆ ಪ್ರತಿಬಿಂಬಗಳ ಸಮುದಾಯವೆಂಬದು ಒಂದು ಕೋಣೆಯಲ್ಲಿರುವ ಕುರ್ಚಿ, ಮೇಜು, ಕನ್ನಡಿ, ಕಪಾಟು, ಪೆಟ್ಟಿಗೆ ಮುಂತಾದ ಸಾಮುಗ್ರಿಗಳಂತೆ ಜ್ಞಾನದ ಸಾಮುಗ್ರಿಗಳು ಎಂತ ಹೆರ್ಬಾರ್ಟನು ಹೇಳಿದ್ದಾನೆ. ಪತ್ತೆದಾರಿ ನೊವೆಲುಗಳಲ್ಲಿ ಸರ್ ಎ. ಕೊನನ್ ಡೊಯ್ಲ್ ಎಂಬವನ ಗ್ರಂಥಗಳು ಬಹಳ ಪ್ರಖ್ಯಾತಿಗೆ ಬಂದಿವೆ. ಅವುಗಳಲ್ಲಿ ಶರಲೊಕ್ ಹೊಮ್ಸ ಎಂಬವನು ಒಬ್ಬ ಜಗವಿಖ್ಯಾತ ಪತ್ತೇದಾರನು. ಅವನು ತನ್ನ ಮನೋವೃತ್ತಿಗಳನ್ನು ವರ್ಣಿಸುವಾಗ 'ನನ್ನ ಮನಸ್ಸಿನಲ್ಲಿ ಅನವಶ್ಯಕವಾದ ಸಾಮುಗ್ರಿಗಳನ್ನು ಒಟ್ಟಿಕೊಂಡು ಇಡುವುದಿಲ್ಲ, ಬೇಕಾದಷ್ಟು ವಿಷಯಗಳು ಮಾತ್ರ ಫಕ್ಕನೆ ಕೈಗೆ ಎಟಕುವಂತೆ ಅಲ್ಲಲ್ಲಿ ಹೆಸರುಪಟ್ಟಿ ಹಚ್ಚಿ ಇಟ್ಟಿರುವೆನು' ಎಂದು ಚಮತ್ಕಾರಿಕವಾಗಿ ಹೇಳುತ್ತಾನೆ. ಈ ಎರಡು ಅಭಿಪ್ರಾಯುಗಳಿಂದಲೂ ಈ ಪ್ರತಿಬಿಂಬಗಳೆಂಬ ಸಾಮುಗ್ರಿಗಳು ಮುಂದೆ ಉಪಯೋಗಕ್ಕೆ ಸಿಗುವಂತೆ ಕ್ರಮಪಡಿಸಿ ಇಡಬೇಕು, ಅವನ್ನು ರಾಶಿಯಾಗಿ ಒಂದರ ಮೇಲೊಂದು ಅವ್ಯವಸ್ಥಿತ ಕ್ರಮದಲ್ಲಿಟ್ಟರೆ ಅವನ್ನು ಫಕ್ಕನೆ ಎತ್ತಿಕೊಳ್ಳಲು ಸಾಧ್ಯವಿಲ್ಲ ಎಂಬ ಅರ್ಥವನ್ನು ಮಾಡಿಕೊಳ್ಳಬೇಕು. ಈ ಪ್ರತಿಬಿಂಬಗಳಿಗೆ ಬಾಹ್ಯವಸ್ತುಗಳ ಪರಿಚಯುವನ್ನು ಮನಸ್ಸಿಗೆ ಮಾಡಿಕೊಡುವ ಶಕ್ತಿ ಇರುವುದರಿಂದ ಅಂಥ ಶಕ್ತಿಗೆ **ವೇದನಾಶಕ್ತಿ** ಎನ್ನುತ್ತಾರೆ. ಈ ಪ್ರಜ್ಞಾಶಕ್ತಿಯಿಂದ ಆದ ಪ್ರತಿಬಿಂಬಗಳ ಸಂಸ್ಕಾರವಾಗಿ ಅವು ವ್ಯಾಪ್ತವಾದಂತೆ ನಮಗೆ ಜ್ಞಾನವಾಗುತ್ತದೆ ಅಂದರೆ ನಮ್ಮ ತಿಳಿವಳಿಕೆಯ ಮೊತ್ತವು ಹೆಚ್ಚುತ್ತದೆ. ವೇದನಾಶಕ್ತಿಗೂ ಜ್ಞಾನಕ್ಕೂ ಪರಸ್ಪರ ಸಂಬಂಧವಿದೆ. ಒಂದು ಇನ್ನೊಂದನ್ನು ವೃದ್ಧಿಸುವುದಕ್ಕೆ ಸಹಾಯಕವಾಗುತ್ತದೆ. ವೇದನಾಶಕ್ತಿ ಮನಸ್ಸಿನಲ್ಲಿ ಹೆಚ್ಚಿದಂತೆ ಹೊಸ ಪ್ರತಿಬಿಂಬಗಳು ಅಥವಾ ಭಾವನೆಗಳು ಹೆಚ್ಚಿ ಅವುಗಳಿಂದ ಮನಸ್ಸಿನ ವಿಕಾಸವಾಗುತ್ತದೆ, ಅಂದರೆ ಜ್ಞಾನವು ಹೆಚ್ಚುತ್ತದೆ. ಜ್ಞಾನವು ಹೆಚ್ಚಿದಂತೆ ವೇದನಾಶಕ್ತಿಯೂ ಹೆಚ್ಚುತ್ತದೆ.

ಜ್ಞಾನವು ಹೆಚ್ಚುತಿದ್ದರೂ ಅದನ್ನು ಪ್ರಯೋಗಕ್ಕೆ ಬೇಕಾದಾಗ ತಗು ವಂತೆ ಅದು **ಸ್ಮರಣೆಗೆ** ಬರಬೇಕು. ಅಂದರೆ ನಮ್ಮ ಸ್ಮರಣಾಶಕ್ತಿಯನ್ನು ವರ್ಧಿಸಬೇಕು ಎಂಬದನ್ನು ಹಿಂದೆ ಸೂಚಿಸಿದ್ದೇವೆ. ಸ್ಮರಣಾಶಕ್ತಿಯನ್ನು ವರ್ಧಿಸಿದರೂ ನಮ್ಮ ಮನಸ್ಸಿನಲ್ಲಿ ಏಳುವ ಪ್ರತಿಬಿಂಬಗಳು ಆಯಾಯ ಕಾಲ ದಲ್ಲಿ ಅವುಗಳಿಗೆ ಇರುವ ಸಾಮರ್ಥ್ಯದ ಬಲದಿಂದ ಇತರ ಪ್ರತಿಬಿಂಬಗಳನ್ನು ಮನೋಪಟಲದ ಮೇಲಕ್ಕೆ ಬರಲೀಸದೆ ಅಮುಕಿ ಕೆಳಕ್ಕೆ ಒತ್ತುತ್ತವೆ. ನಾವು ದೇವಸ್ಥಾನಕ್ಕೆ ಹೋದಾಗ ಅಲ್ಲಿ ಪೂಜಾ ಕಾಲದಲ್ಲಿ ನಮಗೆ ಮನೆಯ ಸಂಕಷ್ಟಗಳು ತೀರಾ ಮರೆತು ಹೋಗಿ, ತುಸು ಸಮಯವಾದರೂ ನಮ್ಮ ಮನಸ್ಸಿನಲ್ಲಿ ಇರುವ ಭಕ್ತಿ ಕಲ್ಪನೆಯು ನಮ್ಮ ಮನಸ್ಸನ್ನು ಸೆರೆ ಹಿಡಿಯುತ್ತದೆ. ದೇವರು ತನ್ನ ಭಕ್ತರ ಸೆರೆಯಾಳಾಗಿದ್ದಾನೆ ಎಂಬ ತತ್ವಾರ್ಥವೂ ಇದೇ. ಸಾರ್ವದಾ ಭಕ್ತರು ಅವನ ಚಿಂತನೆಯಲ್ಲಿ ಮಗ್ನರಾಗಿ ದ್ದರೆ, ಆ ಭಕ್ತಿಯ ಕಲ್ಪನೆಯು ಅವರ ಮನೋಪಟಲವನ್ನು ವ್ಯಾಪಿಸಿ ಬೇರೆ ಯಾವ ಕಲ್ಪನೆಯನ್ನೂ ಮೇಲಕ್ಕೆ ಏಳಲು ಬಿಡುವುದಿಲ್ಲ. 'ಮನಸ್ಸಿನ ಬೇಸರಿಕೆಯನ್ನು ಕಳೆಯಲು ಒಂದು ಕಥೆ ಹೇಳೊ' ಅನ್ನುತ್ತೇವೆ. ಆ ಕಥೆಯು ಚಿತ್ತಾಕರ್ಷಕವಾಗಿದ್ದರೆ ನಮ್ಮ ಮನಸ್ಸಿನಲ್ಲಿ ಎದ್ದಿರುವ ಎಲ್ಲಾ ವ್ಯಥೆಗಳನ್ನು ಮನೋಪಟಲದಿಂದ ಕೆಳಕ್ಕೆ ತಳ್ಳಿಬಿಡುತ್ತದೆ. ಆ ವ್ಯಥೆಯ ವಿಸ್ಮರಣೆಯು ನಮಗೆ ಆಗುತ್ತದೆ. ಅಭ್ಯಾಸ ಬಲದಿಂದ ಹೀಗೆ ಕೆಲವು ಕಲ್ಪನೆಗಳನ್ನು ಮಾತ್ರ ನಾವು ಸಾರ್ವದಾ ನಮ್ಮ ಮನೋಪಟಲದಲ್ಲಿ ಜಾಗೃತಮಾಡಬಹುದು. ಭಕ್ತರ ದೃಷ್ಟಾಂತವನ್ನು ಮೇಲೆ ಹೇಳಿದೆವು. ಗಣಿತ ಶಾಸ್ತ್ರಜ್ಞನು ಗಣಿತದ ಪ್ರಶ್ನೆಗಳು ಕೈಸೇರಿದೊಡನೆ ಅವುಗಳ ಉತ್ತರ ಕಂಡುಹಿಡಿಯುವ ಕಾಲದಲ್ಲಿ ಅವನಿಗೆ ಬಾಹ್ಯ ಇತರ ವಿಷಯುಗಳ ಪರಿಚ ಯವೇ ಆಗುವುದಿಲ್ಲ. ಅವನು ಗಣಿತದಲ್ಲಿಯೇ ಮಗ್ನನಾಗಿದ್ದಾನೆ ಎಂದು ಇದಕ್ಕೆ ಹೇಳುತ್ತಾರೆ. ಆ ಕಾಲದಲ್ಲಿ ಹೊಟ್ಟೆ ಹಸಿವು ಬಾಧಿಸುವುದಿಲ್ಲ, ಹೊತ್ತು ಹೋದುದು ಗೊತ್ತಾಗುವುದಿಲ್ಲ ಇತ್ಯಾದಿ ಇತ್ಯಾದಿ. ಸಸ್ಯ ಶಾಸ್ತ್ರ ಜ್ಞನು ವಿಚಿತ್ರವಾದ ಒಂದು ಹೂವನ್ನು ಕಂಡನು ಎನ್ನೋಣ. ಅದೇ ಹೂವಿನ ಅಂದವನ್ನಾಗಲಿ ಪರಿಮಳವನ್ನಾಗಲಿ ಕುರಿತು ನಾವು ಅವ ನೊಂದಿಗೆ ಸಂತೋಷಪಡಬಹುದು. ಆದರೆ ಸಸ್ಯಶಾಸ್ತ್ರಜ್ಞನು ಅದಷ್ಟ ರಿಂದಲೆ ತೃಪ್ತಿಪಡುವುದಿಲ್ಲ. ಅವನು ಅದರ ಪರಿಶೋಧನೆ ಮಾಡಿ ಅದರ

ವರ್ಗೀಕರಣ ಮಾಡುವುದಕ್ಕಾಗಲಿ ಅದರ ಗುಣಪರಿಚಯ ಮಾಡುವುದಕ್ಕಾಗಲಿ ಸಾಧನೆಮಾಡುತ್ತಾನೆ. ಇಲ್ಲಿ ಅವನ ಪೂರ್ವಜ್ಞಾನವು ಅವನ ಪರಿಶೋಧನೆಯ ಇಚ್ಛೆಯನ್ನು ಕೆರಳಿಸುತ್ತದೆ. ವರ್ತಕನಿಗೆ ಯಾವುದೊಂದು ನೂತನ ವಿಷಯವನ್ನು ಕಂಡರೆ ಅದರಿಂದ ದುಡ್ಡು ಹೇಗೆ ಮಾಡುವುದು ಎಂಬ ಚಿಂತನೆಯೆ ಬರುತ್ತದೆ. ಇದರಲ್ಲಿ ಪೂರ್ವಜ್ಞಾನವೇ ಅವನ ಕಲ್ಪನಾ ಶಕ್ತಿಯನ್ನು ಸೆರೆಹಿಡಿಯುತ್ತದೆ. ಕೆಲವೊಂದು ವೇಳೆ ಆ ಭಾವನೆಯು ತನ್ನ ವೈಚಿತ್ರ್ಯದಿಂದ ಅವನ ಜ್ಞಾನವನ್ನು ಸೆರೆಹಿಡಿಯುವುದುಂಟು. ಫಕ್ಕನೆ ಕಾಡುದಾರಿಯಲ್ಲಿ ನಾವು ಹುಲಿಯನ್ನು ಎದುರು ಕಂಡೆವು ಎನ್ನೋಣ. ಹುಲಿಯಿಂದ ನಮ್ಮ ಪ್ರಾಣಕ್ಕೆ ಅಪಾಯ ಬಂದೀತು ಎಂಬ ಕಲ್ಪನೆಯು ನಮ್ಮ ಮನೋಪಟಲವನ್ನು ಸೆರೆಹಿಡಿದು ಹುಲಿಯನ್ನು ಕೊಲ್ಲುವುದಕ್ಕೆಂದು ಕೈಯಲ್ಲಿ ಹಿಡಿದ ಕೋವಿಯು ಕೆಳಗೆ ಬಿದ್ದುಹೋಗುತ್ತದೆ. ನಾವು ಏನು ಮಾಡಬೇಕೆಂದು ತೋಚದೆ ತಟಸ್ಥರಾಗಿಬಿಡುತ್ತೇವೆ. ಕೋವಿ ಸುಡುವ ಜ್ಞಾನವು ನಮಗೆ ಚೆನ್ನಾಗಿದ್ದರೂ ಆ ಕಾಲದಲ್ಲಿ ಅದು ವಿಸ್ಮರಣೆಯಾಗುತ್ತದೆ. ನಮಗೆ ಈಸುವ ಅಭ್ಯಾಸವು ಚೆನ್ನಾಗಿದ್ದರೂ ನಾವು ಕುಳಿತಿರುವ ಹಡಗು ಫಕ್ಕನೆ ಮುಳುಗಿದರೆ ಗಾಬರಿಯಲ್ಲಿ ನಮ್ಮ ಪ್ರಾಣನಾಶವಾಗಬಹುದು. ಇದಕ್ಕೆ ನಮ್ಮಲ್ಲಿ ಉಂಟಾದ ಭೀತಿಯು ನಮ್ಮ ದಿಕ್ಕುಗಾಣಿಸದೆ ನಮ್ಮ ಪೂರ್ವಜ್ಞಾನವನ್ನು ವಿಸ್ಮೃತಿಗೊಳಿಸುವುದೆ ಕಾರಣವಾಗಿದೆ. ವಿಸ್ಮೃತಿಯಾಗಿದೆ ಎನ್ನುವಾಗ ಆ ಪೂರ್ವಕಲ್ಪನೆಗಳು ನಾಶವಾದವು ಎಂಬ ಅಭಿಪ್ರಾಯವಲ್ಲ; ಅವು ಕೆಲಸಕ್ಕೆ ಬಾರದ ಪದಾರ್ಥವಾಗಿದ್ದು ಅಡಿಗೆ ಬೀಳುತ್ತವೆ.

ನಮ್ಮ ಜ್ಞಾನವು ವೃದ್ಧಿಯಾದ ಹಾಗೆ ನಮ್ಮ ಕಲ್ಪನೆಗಳ ರೂಪು ಮಾರ್ಪಡುವುದೂ ಇದೆ. ನಾವು ಇನ್ನೂ ಚಿಕ್ಕವರಿರುವಾಗ ಭೂಮಿಯು ಗೋಲಾಕಾರವಾಗಿದೆ ಎಂಬ ಕಲ್ಪನೆಯು ನಮಗೆ ಹತ್ತಲಾರದು. ಎಷ್ಟು ದೂರದ ವರೆಗೆ ಹೋದರೂ ಏರು ತಗ್ಗುಗಳು ಇರುವ ಕಲ್ಪನೆಯೊಂದೇ ಅಲ್ಲದೆ ಅದು ಅಷ್ಟು ದೊಡ್ಡದಿರುವುದರಿಂದ ಅದರ ಪರಿಧಿಯು ಸರಳರೇಖೆಯಂತಿದೆ ಎಂದು ನಮ್ಮ ಭಾವನೆಯಿದೆ. ಅಷ್ಟೆ ಅಲ್ಲ. ಭೂಮಿಯು ಸ್ಥಿರವಾಗಿದೆ, ಅದರ ಸುತ್ತಲೂ ಸೂರ್ಯಚಂದ್ರ ನಕ್ಷತ್ರಾದಿಗಳೂ ಮೂಡಿ, ನೆತ್ತಿಗೆ ಬಂದು, ಕಂತುವಂತೆ ಕಾಣುವುದರಿಂದ ಅವು ಭೂಮಿಯ ಸುತ್ತಲೂ

ತಿರುಗುತ್ತವೆಂದೇ ನಮ್ಮ ಭಾವನೆಯಿರುವುದು. ಮುಂದೆ ನಮ್ಮ ಜ್ಞಾನವು ಬೆಳವಣಿಗೆಯಾದ ಹಾಗೆ ಭೂಮಿಯು ಸೂರ್ಯನ ಸುತ್ತಲೂ ತಿರುಗುತ್ತದೆ ಎಂಬದರ ಕಾರಣಗಳು ನಮಗೆ ಸ್ಪಷ್ಟವಾಗುತ್ತವೆ. ಅದರ ಕಾರಣಗಳ ಕಲ್ಪನೆಯು ನಮ್ಮ ಮನಸ್ಸನ್ನು ಹಿಡಿಯುತ್ತದೆ. ಆಗ ಮೊದಲಿನ ಕಲ್ಪನೆಯು ತಪ್ಪಾಗಿದೆ ಎಂದು ತಿಳಿದುಕೊಳ್ಳುತ್ತೇವೆ. ಹೀಗೆಯೇ ನಮ್ಮ ಜ್ಞಾನದ ಮೊತ್ತವು ಹೆಚ್ಚಿದ ಹಾಗೆ ನಮ್ಮ ಕಲ್ಪನೆಗಳಲ್ಲಿ ಪರಿವರ್ತನೆಯಾಗುತ್ತದೆ. ಇನ್ನೊಂದು ಮಾತಿದೆ. ಮನುಷ್ಯನ ಜ್ಞಾನ ಮತ್ತು ಕಲ್ಪನಾಶಕ್ತಿಯು ಚೆನ್ನಾಗಿ ಬೆಳೆದವೆಂದರೆ ತನ್ನ ಇಂದ್ರಿಯಗಳಿಂದ ಗೊತ್ತುಹಚ್ಚಲು ಸಾಧ್ಯವಿಲ್ಲದ ವಿಷಯಗಳನ್ನು ಆತನು ಗೊತ್ತುಮಾಡಿಕೊಳ್ಳುತ್ತಾನೆ, "ಕವಿಕಂಡದ್ದು ರವಿ ಕಾಣಲಿಲ್ಲ" ಎಂಬ ಮಾತಿನ ಅಭಿಪ್ರಾಯವಾದರೂ ಇದೇ. ಅವನ ಕಲ್ಪನಾಸಂಯೋಗದಿಂದ ಅವನು ಅನೇಕ ವಿಷಯಗಳನ್ನು ತನ್ನ 'ಜ್ಞಾನದೃಷ್ಟಿ' ಯಿಂದಲೇ ಗೊತ್ತುಮಾಡಿಕೊಳ್ಳುತ್ತಾನೆ.

ಇಷ್ಟನ್ನು ಹೇಳಿದ ಮೇಲೆ ಜ್ಞಾನವಾಗುವ ವಿಧಾನಗಳನ್ನು ಇನ್ನೊಮ್ಮೆ ಸಂಕ್ಷೇಪವಾಗಿ ಇಲ್ಲಿ ಪುನರಾವರ್ತಿಸುವೆವು:—

(1) ಜ್ಞಾನೇಂದ್ರಿಯಗಳು ಬಾಹ್ಯವಸ್ತುಗಳ ಸ್ಪರ್ಶದಿಂದ ಬಿಂಬವನ್ನು ಮಾಡಿಕೊಳ್ಳುತ್ತವೆ.

(2) ಈ ಬಿಂಬಗಳು ಜ್ಞಾನೇಂದ್ರಿಯಗಳ ಅಣುಗಳಲ್ಲಿ ಉಂಟಾಗಿ ಅವನ್ನು ತಂತುಗಳ ಮೂಲಕ ಮೆದುಳಿನ ಅಣುಗಳಲ್ಲಿ ಪ್ರತಿಬಿಂಬಿಸುತ್ತವೆ.

(3) ಮೆದುಳಿನಲ್ಲಿ ಪ್ರತಿಬಿಂಬಿಸಬೇಕಾದರೆ ಜ್ಞಾನೇಂದ್ರಿಯಗಳು ಮೆದುಳಿದ ಅಣುಗಳನ್ನು ಜಾಗರೂಕವಾಗಿ ಮಾಡಿ, ಆ ಮೇಲೆ ಜ್ಞಾನೇಂದ್ರಿಯಗಳಲ್ಲಿ ಬಿಂಬಗಳನ್ನು ಮಾಡುತ್ತವೆ. ಇದಕ್ಕೆ ಇಂದ್ರಿಯಸಂಸ್ಕಾರವೆನ್ನುತ್ತೇವೆ.

(4) ಇಂದ್ರಿಯಸಂಸ್ಕಾರದಿಂದ ಮೆದುಳಿನಲ್ಲಿ ಆದ ಪ್ರತಿಬಿಂಬಗಳು ಆಯಾ ಇಂದ್ರಿಯಕ್ಕೆ ಸಂಬಂಧಪಟ್ಟ ಮೆದುಳಿನ ಭಾಗದಲ್ಲಿ ಮಾತ್ರ ಮೊದಲು ಆಗುತ್ತವೆ.

(5) ಅಂಥ ಬೇರೆ ಬೇರೆ ಇಂದ್ರಿಯಗಳಿಂದ ಇಂದ್ರಿಯಸಾಕ್ಷಾತ್ಕಾರ ವಾಗಿ ಆದ ಪ್ರತಿಬಿಂಬಗಳು ಒಂದನ್ನೊಂದು ಕೂಡುತ್ತವೆ.

(6) ಹೀಗೆ ಸಂಯೋಗವಾದ ಪ್ರತಿಬಿಂಬಗಳಿಂದ ಬಾಹ್ಯವಸ್ತುವಿನ ಭಾವನೆಯು ಉಂಟಾಗುತ್ತದೆ.

(7) ಇಂಥ ಭಾವನೆಯು ಹೊಸ ಭಾವನೆಗಳನ್ನು ಒಂದುಗೂಡಿಸಿ ಆ ವಸ್ತುವಿನ ಪ್ರತಿಬಿಂಬಗಳ ಮತ್ತು ಅವಕ್ಕೆ ಸಂಬಂಧಪಟ್ಟ ಇತರ ವಿಷಯಗಳ ಸಂಯೋಜನೆಯಿಂದ ಕಲ್ಪನೆಯು ಮನಸ್ಸಿನಲ್ಲಿ ಉಂಟಾಗುತ್ತದೆ.

(8) ಇಂಥ ಕಲ್ಪನೆಗಳು ಎಳೆ ಮಗುವಿನ ಮನಸ್ಸಿನಲ್ಲಿ ಬಹಳ ಚೆನ್ನಾಗಿ ಆಗುತ್ತವೆ. ಯಾಕಂದರೆ ಹುಟ್ಟಿದ ಮಗುವಿನ ಮನಸ್ಸು ಭಾವನಾರಹಿತವಾಗಿ ಮನೋಪಟಲವು ಬರಿದಾಗಿರುತ್ತದೆ. ಬರಿದಾದ ಸ್ಲೇಟಿನ ಅಥವಾ ಕಾಗದದ ಮೇಲೆ ಬರೆದ ಚಿತ್ರಗಳು ಸ್ಪಷ್ಟವಾಗುವಂತೆ ಮಕ್ಕಳ ಮನೋಪಟಲದಲ್ಲಿ ಅವು ಬಲವಾಗಿ ಮುದ್ರೆಯೊತ್ತುತ್ತವೆ.

(9) ಬೆಳೆದ ಮನುಷ್ಯನಲ್ಲಿ ಕಲ್ಪನಾ ಸಮುದಾಯಗಳು ವಿಸ್ತಾರವಾಗಿಯೂ ಬಹುಸಂಖ್ಯಾಕವಾಗಿಯೂ ಇರುವುದರಿಂದ ಅವುಗಳಲ್ಲಿ ಮನೋಪಟಲದ ಮೇಲೆ ಎಲ್ಲವೂ ಸಾರ್ವದಾ ನಿಲ್ಲಲಾರವು. ಯಾವವು ಮೇಲೆ ಬರಬೇಕೆಂದು ಒಂದು ಬಗೆಯ ಪೋಟಾಪೋಟಿಯು ಇದೆ. ಆಗ ಬಾಹ್ಯವಸ್ತುಗಳಿಂದ ಬಂದ ಹೊಸಬಿಂಬಗಳು ಯಾವವನ್ನು ಜಾಗ್ರತಗೊಳಿಸುತ್ತವೆಯೊ ಅವು ಮಾತ್ರ ಮೇಲಕ್ಕೇಳುತ್ತವೆ. ಉಳಿದವು ಕೆಳಕ್ಕೆ ತಳ್ಳಲ್ಪಡುತ್ತವೆ. ಮೇಲಕ್ಕೇಳುವ ಶಕ್ತಿಗೆ ಸ್ಮರಣಾಶಕ್ತಿ ಎನ್ನುತ್ತೇವೆ. ಕೆಳಗೆ ತಳ್ಳಲ್ಪಟ್ಟು ಸ್ವಲ್ಪ ಸಮಯದ ವರೆಗೆ ಮೇಲಕ್ಕೇಳದಿದ್ದರೆ ಆಗ ಕಲ್ಪನೆಯು ವಿಸ್ಮೃತಿಯಾಯಿತೆನ್ನುತ್ತೇವೆ.

(10) ಕೆಲವು ಮನುಷ್ಯರಲ್ಲಿ ಕೆಲವು ವಿಧದ ಕಲ್ಪನೆಗಳು ಬಹಳ ಬೇಗನೆ ಮೇಲಕ್ಕೇಳುತ್ತವೆ. ಕೆಲವರಲ್ಲಿ ಬೇರೆ ವಿಧದ ಕಲ್ಪನೆಗಳು ಬೇಗನೆ ತಲೆ ಎತ್ತುತ್ತವೆ.

(11) ಯಾವ ಕಲ್ಪನೆಗಳು ಬೇಕಾದ ಹಾಗೆ ಮೇಲಕ್ಕೇಳಬೇಕೊ ಅಂಥವುಗಳನ್ನು ಸ್ವೇಚ್ಛೆಯಿಂದ ಜಾಗೃತಿಮಾಡುವುದಕ್ಕೆ ಸ್ಮರಣಾಶಕ್ತಿಯ ಅಧ್ಯವಸಾಯ ಅಥವಾ ಅಭ್ಯಾಸವೆನ್ನುತ್ತೇವೆ. ಕೆಲವು ಕಲ್ಪನೆಗಳು ತಮ್ಮಲ್ಲಿರುವ ಸ್ವತಂತ್ರಶಕ್ತಿಯ ಬಲದಿಂದಲೇ ಮೇಲಕ್ಕೆದ್ದು, ಇತರ ಕಲ್ಪನೆಗಳನ್ನು ತಲೆ ಎತ್ತಲು ಬಿಡುವುದಿಲ್ಲ. ಅವು ಇಂದ್ರಿಯಪಟಲವನ್ನು ಆಕ್ರಮಿಸಿಕೊಳ್ಳುತ್ತವೆ.

(12) ಕಲ್ಪನೆಗಳ ಸಮುದಾಯವು ವ್ಯವಸ್ಥೆಯಿಂದ ಒಂದಕ್ಕೊಂದು ಸಂಯೋಗವಾಗುವ ಕಾರಣದಿಂದ ಒಂದು ಕಲ್ಪನೆಯನ್ನು ಮನೋಪಟಲದ ಮೇಲೆ ಎಬ್ಬಿಸಿದರೆ ಅದಕ್ಕೆ ಸಂಬಂಧವಾದ ವಿವಿಧ ಕಲ್ಪನೆಗಳು ಸರಪಣಿಯ ಗೊಣಸನ್ನು ಹಿಡಿದು ಎಳೆದಂತೆ ಕ್ರಮವಾಗಿ ಮೇಲಕ್ಕೇಳುತ್ತವೆ. ಈ ಬಗೆಯ ಶಕ್ತಿಗೆ ವೇದನಾಶಕ್ತಿಯೆನ್ನುತ್ತೇವೆ.

(13) ವೇದನಾಶಕ್ತಿಯು ಬೆಳೆದು ವ್ಯವಸ್ಥಿತವಾಗಿ ಉಂಟಾಗುವ ಅನುಭವವೇ ಜ್ಞಾನ.

ವಿಚಾರ ಮತ್ತು ನಿರ್ಣಯ

(ಬುದ್ಧಿಯ ಕಾರ್ಯಗಳು)

10ನೆಯ ಅಧ್ಯಾಯ

ಇಂದ್ರಿಯ ಸಾಕ್ಷಾತ್ಕಾರವಾದೊಡನೆ ಅಂದರೆ ಬಾಹ್ಯವಸ್ತುವಿನ ಬಿಂಬವು ಮೆದುಳಿನ ಅಣುಗಳಲ್ಲಿ ಮುದ್ರೆಯೊತ್ತಿದೊಡನೆ ಆ ವಸ್ತುವಿನ ಭಾವನೆಯು ಮನಸ್ಸಿನಲ್ಲಿ ಆಗುತ್ತದೆ ಎಂದು ಹೇಳಿದೆವು. ಅಂದರೆ 'ಇದು ಏನು' ಎಂಬ ಪ್ರಶ್ನೆಗೆ ಅಲ್ಲಿ ಉತ್ತರವು ಹುಟ್ಟುತ್ತದೆ. ಇದು ದನ, ಕರು, ಆನೆ, ಆಟ, ಇತ್ಯಾದಿ ಹಲವು ಪ್ರತಿಬಿಂಬಗಳು ಮೊದಲು ಸ್ಥೂಲರೂಪವಾಗಿ ನಮ್ಮಲ್ಲಿ ಉಂಟಾಗುತ್ತವೆ. ಒಬ್ಬ ಚಿತ್ರಕಾರನು ಒಂದು ವಸ್ತುವಿನ ಅಥವಾ ಒಂದು ಕಲ್ಪನೆಯ ಚಿತ್ರ

ವನ್ನು ಪಟದಲ್ಲಿ ಚಿತ್ರಿಸುವಾಗ ಮೊದಲು ಸ್ಥೂಲರೂಪದಲ್ಲಿ ಅದರ ಆಕಾರ ವನ್ನು ಮಾಡುತ್ತಾನೆ. ಆ ಮೇಲೆ ಅಲ್ಲಲ್ಲಿ ನಡುವೆ ಬೇರೆ ಬೇರೆ ಗೆರೆಗಳನ್ನು ಬರೆದು, ಅವುಗಳ ಪ್ರತ್ಯಪ್ರತ್ಯೇಕ ಭಾಗಗಳನ್ನು ಸ್ಪಷ್ಟಗೊಳಿಸುತ್ತಾನೆ. ಆವೆಯ ಮಣ್ಣಿನಿಂದ ಪ್ರತಿಮೆಯನ್ನು ಮಾಡುವವನು ಮೊದಲು ಸ್ಥೂಲ ಮಾನದಿಂದ ವಸ್ತುವಿನ ಆಕೃತಿಯನ್ನು ಮಾಡಿ, ಅನಂತರ ಬೇರೆ ಬೇರೆ ಅಂಗಗಳನ್ನು ಪ್ರತ್ಯೇಕವಾಗಿ ಗೊತ್ತಾಗುವಂತೆ ಕೊರೆದು, ಅವುಗಳ ದಾವಮಾ ಶಯುಗಳನ್ನು ಸರಿಪಡಿಸುತ್ತಾನೆ. ಅದೇ ರೀತಿಯಲ್ಲಿ ನಮ್ಮ ಮನಸ್ಸಿನಲ್ಲಿ ಮೊದಲು ಸ್ಥೂಲಮಾನದಿಂದ ಇಡೀ ವಸ್ತುವಿನ ಆಕಾರವು ಅಸ್ಪಷ್ಟವಾಗಿ ಆಗುತ್ತದೆ. ಅನಂತರ ಆ ವಸ್ತುವಿನ ಬೇರೆ ಬೇರೆ ಅಂಗಗಳ ಪರಿಚಯು, ಗುಣಗಳ ಪರಿಚಯು ಇವನ್ನು ನಾವು ಮಾಡಿಕೊಳ್ಳುತ್ತೇವೆ. ಸ್ಥೂಲಮಾನ ದಿಂದ ಆದ ಪ್ರತಿಬಿಂಬಗಳಲ್ಲದೆ ಪ್ರತಿ ಅಂಗ, ಗುಣ, ಲಕ್ಷಣ ಇವುಗಳ ಪ್ರತ್ಯಪ್ರತ್ಯೇಕ ಭಾವನೆಗಳನ್ನು ಮಾಡುವ ಕಾರ್ಯಕ್ಕೆ **ಪ್ರಥಕ್ಕರಣ** ಎನ್ನು ತ್ತೇವೆ. ಅಂಥ ಪ್ರತಿಬಿಂಬಗಳನ್ನು ಪುನಃ ಜೋಡಿಸಿ ಒಂದು ಭಾವನೆಯನ್ನು ಮಾಡುವಾಗ **ಸಂಸ್ಕರಣ**ವಾಗುತ್ತದೆ. ಈ ಪ್ರಥಕ್ಕರಣದಲ್ಲಿಯೂ ಪ್ರತಿ ಒಂದು ಸಲ 'ಇದು ದನ, ಇದು ದನದ ಕೊಂಬು, ದನದ ಬಾಲದಲ್ಲಿ ಗೊಂಡೆ ಇದೆ, ದನದ ಗೊರಸು ಸೀಳಾಗಿದೆ', ಇತ್ಯಾದಿ ಪ್ರತಿಬಿಂಬಗಳು ಪ್ರಥಕ್ಕ್ ಪ್ರಥಕ್ಕಾಗಿ ಮನಸ್ಸಿನಲ್ಲಿ ಉಂಟಾಗಿ, ಅವನ್ನು ಒಟ್ಟುಕೂಡಿಸಿದ ಮೇಲೆ 'ಇದು ದನ' ಎಂಬ ಸ್ಪಷ್ಟವಾದ ಭಾವನೆಯು ನಮ್ಮಲ್ಲಿ ಆಗುತ್ತದೆ. 'ಇದು ದನದ ಕೊಂಬು, ಇದು ದನ' ಇಂತಹ ಪ್ರತಿಯೊಂದು ವಾಕ್ಯವು ಒಂದು ನಿರ್ಣಯ. ಈ ಬಗೆಯ ನಿರ್ಣಯುಗಳನ್ನೆ ಜತೆಗೊಳಿಸಿ ನಾವು ಒಂದು ಭಾವನೆಯನ್ನೂ, ಅಂಥ ಹಲವು ಭಾವನೆಗಳನ್ನು ಜತೆಗೊಳಿಸಿ, ಕ್ರಮಪಡಿಸಿ, ಒಂದು ಕಲ್ಪನೆ ಯನ್ನು ಮಾಡಿಕೊಳ್ಳುತ್ತೇವೆ. ಈ ನಿರ್ಣಯುಗಳು ಆಗುತಿದ್ದ ಹಾಗೆ ಅವುಗಳ ತುಲನಾಕಾರ್ಯವೂ ನಡೆಯುತ್ತಿದೆ. "ಈ ದನದ ಮೈಬಣ್ಣ ಕಪ್ಪು" 'ಈ ದನದ ಮೈಬಣ್ಣ ಬಿಳಿದು' ಇತ್ಯಾದಿ ನಿರ್ಣಯುಗಳನ್ನು ಮುಂದಿಟ್ಟು, ದನದ ಲಕ್ಷಣ ಮತ್ತು ಸ್ವರೂಪವನ್ನು ಗೊತ್ತುಹಚ್ಚುವಾಗ, ಬಣ್ಣ ವ್ಯತ್ಯಾಸವು ದನದ ಕಲ್ಪನೆಯನ್ನು ಮಾಡಿಕೊಳ್ಳುವುದಕ್ಕೆ ಅತ್ಯಾವಶ್ಯಕ ವಲ್ಲ ಎಂದು ನಿರ್ಣಯಿಸಬೇಕಾದರೆ ಈ ಬಗೆಯ ತುಲನೆಯು ಬೇಕಾಗು ತ್ತದೆ. ಇಂಥ ತುಲನಾಕಾರ್ಯಕ್ಕೆ **ವಿಚಾರ** ಅಥವಾ **ವಿಮರ್ಶೆ** ಎನ್ನು

ತ್ತೇವೆ. ಭಾವನೆ ಕಲ್ಪನೆಗಳ ಸಂಪೂರ್ಣತೆ ಮತ್ತು ಸ್ಪಷ್ಟತೆಯಾಗುವಾಗ ಈ ನಿರ್ಣಯ ಮತ್ತು ವಿಚಾರಕಾರ್ಯಗಳು ಸಾಗುತ್ತಲೆ ಇವೆ. ಇಂಥ ನಿರ್ಣಯ ಮತ್ತು ವಿಚಾರ ಕಾರ್ಯವು ಆಗಲೆ ಹುಟ್ಟಿದ ಮಗುವಿನ ಎಳೆ ಮೆದುಳಿನಲ್ಲಿ ಕಂಡುಬರುವುದಿಲ್ಲ. ಅದು ಹುಟ್ಟಿದಾಗಲೆ ಅಳತೊಡಗುತ್ತದೆ. ಆಗ ಅದು ಮೊದಲಿದ್ದ ಉಷ್ಣಪ್ರದೇಶದಿಂದ ಶೀತವಾತಾವರಣದಲ್ಲಿ ಪ್ರವೇಶಮಾಡಿದುದರಿಂದ ಆದ ಅಸೌಖ್ಯವನ್ನು ತೋರ್ಪಡಿಸುತ್ತದೆ. ಆಗ 'ಇದು ಉಷ್ಣ, ಇದು ಶೀತ' ಎಂಬದನ್ನು ಪರಾವರ್ತನ ಕ್ರಮದಿಂದ ಅದು ಗೊತ್ತುಹಚ್ಚುತ್ತದೆ. ತಾಯಿ ಅಥವಾ ದಾದಿಯು ಅದನ್ನು ತನ್ನ ಮೈಗೆ ಒತ್ತಿ ಹಿಡಿದಾಗ, ದೇಹದ ಉಷ್ಣದಿಂದ ಅದಕ್ಕೆ ಸುಖವಾಗಿ, ಅದು ಅಳುವನ್ನು ನಿಲ್ಲಿಸುತ್ತದೆ, ತೂಕಡಿಸುತ್ತದೆ. ಅಲ್ಲಿಯೂ ಅದು ಪರಾವರ್ತನ ಕ್ರಮದ ನಿದರ್ಶನವಾಗಿದೆ. ಆಗ ಆ ಮಗುವಿನ ಸ್ಪರ್ಶೇಂದ್ರಿಯ ಮಾತ್ರವೇ ಇಂದ್ರಿಯ ಸಂಸ್ಕಾರಮಾಡುವ ಶಕ್ತಿಯುಳ್ಳದ್ದು. ಕಣ್ಣುಬಿಟ್ಟು ಅದು ಬಿರಬಿರನೆ ನೋಡುತ್ತಾ ನೋಡುತ್ತಾ ಬಾಹ್ಯಪ್ರಕಾಶವನ್ನು ಮರೆಗೊಳಿಸುವ ನೆರಳು ಅದರ ಕಣ್ಣುಗುಡ್ಡೆಯ ಮೇಲೆ ಪದೆ ಪದೆ ಬೀಳುತಿದ್ದಾಗ, ಕಾಲಕ್ರಮದಲ್ಲಿ ಈ ಛಾಯೆಗೂ ತನಗೆ ಶಾಖದಿಂದುಂಟಾಗುವ ಸುಖದ ಭಾವನೆಗೂ ಜತೆಗೊಳಿಸುತ್ತದೆ. ಕ್ರಮೇಣ ಅದು ಆ ಛಾಯೆಯು ಚಲಿಸುವ ಕಡೆಗೆ ತನ್ನ ಕಣ್ಣುಗುಡ್ಡಗಳನ್ನು ಚಲಿಸುತ್ತದೆ. ಮುಂದೆ ಅದು ಆ ಛಾಯೆಯ ಪ್ರತಿಬಿಂಬವನ್ನು ಮಾಡಿಕೊಂಡು, ಅದನ್ನು ಬೇಕಾದಾಗ ತನ್ನ ಮನೋಪಟಲದಲ್ಲಿ ಎಚ್ಚರಿಸಬಲ್ಲುದು. ಆಗ ಅದು ತಾಯಿಯ ಪ್ರತಿಬಿಂಬವನ್ನು ಮನಸ್ಸಿನಲ್ಲಿ ಮಾಡಿಕೊಳ್ಳುವುದರಿಂದ ತಾಯಿ ಅಥವಾ ದಾದಿ ಎತ್ತಿದೊಡನೆ ಅಳು ನಿಲ್ಲಿಸುತ್ತದೆ. ಕಾಲಕ್ರಮದಲ್ಲಿ ಅದರ ಶಬ್ದೇಂದ್ರಿಯವು ಶಕ್ತಿಹೊಂದಿ, ತಾಯಿಯ ಸ್ವರವನ್ನು ಕೇಳಿದೊಡನೆ ಆ ಸ್ವರವಿದ್ದ ಕಡೆಗೆ ದೃಷ್ಟಿಯನ್ನು ತಿರುಗಿಸುತ್ತದೆ. ತಾಯಿಯಂತಿರುವ ಕೆಲವು ಇತರರನ್ನು ಕಂಡಾಗಲೂ ಅದು ನಗುತ್ತದೆ, ತನ್ನ ಸುಖವನ್ನು ತೋರ್ಪಡಿಸುತ್ತದೆ, ಅವರು ಕರೆದರೆ 'ಹಿಡಿ' ಎಂದು ಪುಟ್ಟಕೈಗಳನ್ನು ಚಾಚುತ್ತದೆ. ಇಲ್ಲಿ ಆ ಕೈಗಳನ್ನು ಚಾಚುವುದಕ್ಕೆ ಮತ್ತು 'ಹಿಡಿಯಬೇಕು' ಎಂಬ ಕಲ್ಪನೆಗೆ ಅದು ಗಂಟಿಕ್ಕಿದೆ ಎನ್ನಬೇಕು. ಮುಂದೆ ಅಪರಿಚಿತರನ್ನು ಕಂಡು ಲಜ್ಜೆ ಅಥವಾ ಭಯದಿಂದ ತಾಯಿಯ ಸೆರಗಿನಲ್ಲಿ ಮುಖವನ್ನು ಮರೆಯಿಸುವಾಗ, ಅದರ ಕಲ್ಪನೆಗಳಲ್ಲಿ

ವಿಶೇಷ ವಿಸ್ತರಣೆಯಾಗಿದೆ ಎಂದು ತಿಳಿಯಬೇಕು. ಆ ಮೇಲೆ ಒಂದೊಂದೇ ಜ್ಞಾನೇಂದ್ರಿಯದಿಂದ ಪಡೆದ ಅನುಭವಗಳನ್ನು ಜತೆಗೂಳಿಸಿ, ತನ್ನ ಸ್ವಂತ ಗಂಟಲಿನ ಸ್ವರಗಳಿಂದ ಅದು ಹೆಸರಿಡುತ್ತದೆ. 'ತಾತಾ, ಪಾಪಾ, ಮಾಮಾ ಪೆ,' ಎಂದು ಸುಲಭ ಶಬ್ದಗಳನ್ನು ಉಚ್ಚರಿಸುವಾಗ ಅದರ ಮನಸ್ಸಿನಲ್ಲಿ ಉಂಟಾದ ಕಲ್ಪನೆಗಳನ್ನು ಪ್ರತ್ಯೇಕಿಸಿ, ಅವಕ್ಕೆ ಹೆಸರಿಡುವ ಕಾರ್ಯವು ಸರಾಗವಾಗಿ ನಡೆಯುತ್ತಲೆ ಇದೆ. ಆ ಮೇಲೆ ಕೆಲವು ಕಲ್ಪನೆಗಳನ್ನು ಇತರರಿಂದ ಸ್ವೀಕರಿಸುತ್ತದೆ. ಕೆಲವನ್ನು ತಾನೇ ಜತೆಗೂಳಿಸುತ್ತದೆ. ತಾನು ತಾಯಿಯೆಂದು ಭಾವಿಸಿ ಗೊಂಬೆಗೆ ತಿಂಡಿಕೊಡುವಾಗಲೂ, ಮಾಯಿಸು ವಾಗಲೂ, ತೊಟ್ಟಿಲಲ್ಲಿ ತೂಗುವಾಗಲೂ, ಮಗುವಿಗೆ ತೊಡೆಗಳ ಮೇಲೆ ಮಲಗಿಸಿ ಜೋಗುಳ ಹಾಡುವಾಗಲೂ ಹೆಣ್ಣು ಮಗುವಿನ ಕಲ್ಪನಾಶಕ್ತಿಯು ಚೆನ್ನಾಗಿ ಬೆಳೆಯ ತೊಡಗಿದೆ ಎನ್ನಬೇಕು. ಗಂಡುಮಗುವು ಒಂದು ಕೋಲನ್ನು ತೊಡೆಗಳ ನಡುವೆ ಸಿಕ್ಕಿಸಿಕೊಂಡು, ಅದನ್ನು ಕುದುರೆಯೆಂದು ಚಪ್ಪರಿಸುವಾಗಲೂ, ಅದರ ಮನೋಪಟಲದಲ್ಲಿ ಆ ಕೋಲನ್ನು ಕಂಡೊಡನೆ ಜಾಗೃತವಾದ ಕಲ್ಪನೆಯು ಇತರ ಎಲ್ಲಾ ಕಲ್ಪನೆಗಳನ್ನು ಕೊಂಚ ಸಮಯದ ವರೆಗೆ ಅಡಿಗೆ ತಳ್ಳಿಬಿಡುತ್ತದೆಂದು ಸ್ಪಷ್ಟವಾಗುತ್ತದೆ. ಒಂದು ಹೆಣ್ಣು ಮಗುವನ್ನು ತಂದೆಯು 'ಅಜ್ಜಿ!' ಎಂದು ಕರೆದು, ಸ್ವಲ್ಪ ಹೊತ್ತು ಅದರೊಡನೆ ಸಂಭಾಷಣೆ ಮಾಡಿದಾಗ, ಆ ಮಗು ಅಜ್ಜಿಯ ಸ್ವರವನ್ನೆ ಅನುಕರಿಸಿ ನಡೆ ನುಡಿಗಳನ್ನು ತೋರಿಸಿದ ಒಂದು ದೃಷ್ಟಾಂತವು ನಮ್ಮ ಅನುಭವದಲ್ಲಿದೆ. ಹೀಗೆ ಮನೋಪಟಲವನ್ನು ಸೆರೆಹಿಡಿಯುವ ಕಾಲವು ಮಾತ್ರ ಮಕ್ಕಳಲ್ಲಿ ಬಹಳ ಹೊತ್ತು ಇರುವುದಿಲ್ಲ. ಆದರೆ ಆ ಕಾಲದಲ್ಲಿ ಮಾತ್ರ ಇತರ ಎಲ್ಲಾ ವಿಷಯಗಳ ಸಂಪೂರ್ಣ ಮರವೆಯಾಗುತ್ತದೆ. ಚಂಡಿಹಿಡಿದು ಅಳುತಿದ್ದ ಮಗುವಿಗೆ ಅದು ಕೇಳುವ ವಸ್ತುವಿನ ವಿಸ್ಮರಣೆಯಾಗಲಿಕ್ಕೆ 'ಇಗೋ ಮೋಟರ್ ಬಂತು' ಎಂದು ಹೇಳಿದಾಗ, ಮೊದಲಿನ ವಸ್ತುವಿನ ವಿಚಾರವನ್ನೆ ಬಿಟ್ಟು, ಅದು ಮೋಟರಿನ ತುತೂರಿಯ 'ಪೊಂ ಪೊಂ' ಎಂಬ ಶಬ್ದವನ್ನು ಅನುಕರಿಸತೊಡಗುತ್ತದೆ. ರಾಮನು ಚಂದ್ರನನ್ನು ಕೊಡೆಂದು ಹಟಹಿಡಿ ದಾಗ, ಕನ್ನಡಿಯಲ್ಲಿ ಚಂದ್ರನ ಬಿಂಬವನ್ನು ತೋರಿಸಿ ಸುಮಂತನು ಆ ಕೂಸಿಗೆ ಸಮುದಾಯಿಸಿದನು ಎನ್ನುವುದರಲ್ಲಿ ಮಗುವಿನ ಕಲ್ಪನಾಶಕ್ತಿಗೆ ಮೇರೆಯೂ ಇಲ್ಲ, ವಿಚಾರಶಕ್ತಿಯೂ ನಿರ್ಣಯಶಕ್ತಿಯೂ ಸಂಪೂರ್ಣ ಬೆಳೆ

ಯುಲೂ ಇಲ್ಲವೆನ್ನಬೇಕು. ಆಕಾಶದಲ್ಲಿರುವ ಚಂದ್ರನು ತನ್ನ ಕೈಗೆ ಸಿಕ್ಕ ಲಾರನು ಎಂಬಷ್ಟು ವಿಚಾರವೂ ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬವು ಚಂದ್ರನಲ್ಲವೆಂಬ ವಿಚಾರವೂ ಆ ಮಗುವಿನಲ್ಲಿ ಹುಟ್ಟಿರಲಿಲ್ಲ. ಅಂದರೆ ಅದರ ಮನಸ್ಸಿನ ಕೆಲಸಗಳು ನಡೆಯುತ್ತಿದ್ದರೂ ವಿಚಾರ ಮತ್ತು ವಿಮರ್ಶೆಯ ಕೆಲಸವನ್ನು ನಡೆಸುವ **ಬುದ್ಧಿ** ಎಂಬ ಅಂತರ್ ಇಂದ್ರಿಯದ ಶಕ್ತಿಗಳು ಇನ್ನೂ ಬೆಳೆಯಲಿಲ್ಲ. ಬುದ್ಧಿ ಎಂಬದು ಸ್ಥೂಲಮಾನದಲ್ಲಿ ಮೆದುಳಿನ ಒಂದು ಕಾರ್ಯವೆಂದರೂ, ಹಿಂದೆ ಹೇಳಿದಂತೆ ಮನಸ್ಸು ತಂದೊಪ್ಪಿಸಿದ ರುಜು ವಾತುಗಳನ್ನು (ಕಲ್ಪನೆಗಳನ್ನು) ತುಲನೆ ಮಾಡಿ, ಅವುಗಳ ತೀರ್ಮಾನವನ್ನು ಕೊಡುವ ನ್ಯಾಯಾಧೀಶನ ಕೆಲಸವನ್ನು ವಹಿಸುತ್ತದೆ ಎಂದು 'ಗೀತಾ ರಹಸ್ಯ'ದಲ್ಲಿ ಹೇಳಿದ ಅಭಿಪ್ರಾಯವಾದರೂ ಇದೆ.

ಮನಸ್ಸಿಗೂ ಬುದ್ಧಿಗೂ ಸಂಬಂಧ:—ಇದನ್ನು 'ಗೀತಾರಹಸ್ಯ'ದಲ್ಲಿ ಹೀಗೆ ಹೇಳಿದೆ:—"ಈ ಚಿಕ್ಕ ಮನಸ್ಸೆ ವಕೀಲನಂತೆ ಈ ಮಾತು ಹೀಗಿದೆ (ಸಂಕಲ್ಪ), ಅದು ಹೀಗಿಲ್ಲ (ವಿಕಲ್ಪ) ಇತ್ಯಾದಿ ಕಲ್ಪನೆಗಳನ್ನು ಬುದ್ಧಿಯ ಮುಂದೆ ನಿರ್ಣಯಕ್ಕಾಗಿ ಮಂಡಿಸುತ್ತದೆ. ಆದುದರಿಂದ ಇದಕ್ಕೆ ಸಂಕಲ್ಪ ವಿಕಲ್ಪಾತ್ಮಕ ಅಂದರೆ ಯಾವದೊಂದು ನಿರ್ಣಯವನ್ನು ಕೊಡದೆ ಕೇವಲ ಕಲ್ಪನೆಗಳನ್ನು ಮಾತ್ರವೇ ಮಾಡುವ ಇಂದ್ರಿಯ ವೆನ್ನುತ್ತಾರೆ . . . . ಆದರೆ ಈ ರೀತಿಯಾಗಿ ವಕೀಲರಂತೆ ತನ್ನ ಕಲ್ಪನೆಗಳನ್ನು ನಿರ್ಣಯಕ್ಕಾಗಿ ಬುದ್ಧಿಯ ಮುಂದೆ ಇಡುವುದೊಂದೆ ಮನಸ್ಸಿನ ಕೆಲಸವಲ್ಲ; ಬುದ್ಧಿಯು ಒಳಿತು ಹೀನಗಳನ್ನು ನಿರ್ಣಯಿಸಿದ ಬಳಿಕ ಬುದ್ಧಿಗೆ ಸರಿ ದೋರಿದ ಕೆಲಸವನ್ನು ಕರ್ಮೇಂದ್ರಿಯಗಳಿಂದ ಮಾಡಿಸುವ ಕೆಲಸವನ್ನು ಅಂದರೆ ನಾರ್ಝುರನ ಕೆಲಸವನ್ನು ಕೂಡಾ ಮನಸ್ಸಿಗೆ ಮಾಡಬೇಕಾಗುತ್ತದೆ . . . . ನಮ್ಮ ಕಲ್ಪನೆಗಳ ಸಾರಾಸಾರ ವಿಚಾರವನ್ನು ಮನಸ್ಸು ಮಾಡುವುದಿಲ್ಲ. ಈ ಬಗ್ಗೆ ಸಾರಾಸಾರ ವಿಚಾರವನ್ನು ಮಾಡಿ ಆತ್ಮಕ್ಕೆ ಪದಾರ್ಥಗಳ ಯಥಾರ್ಥ ಜ್ಞಾನವನ್ನು ಮಾಡಿಕೊಡುವುದು, ಇಲ್ಲವೆ ಇಂಥ ವಸ್ತುವು ಇಂಥದಿರುತ್ತದೆ; ಇತ್ಯಾದಿಗಳನ್ನು ನಿಶ್ಚಯಿ ಸುವುದು, ಮತ್ತು ತರ್ಕದಿಂದ ಕಾರ್ಯಕಾರಣ ಸಂಬಂಧವನ್ನು ನೋಡಿ ಯಾವುದೊಂದು ನಿಶ್ಚಿತವಾದ ಅನುಮಾನವನ್ನು ಇಲ್ಲವೆ ಕಾರ್ಯಾಕಾರ್ಯ ನಿರ್ಣಯವನ್ನು ಮಾಡುವುದು ಇವೆಲ್ಲ ಬುದ್ಧಿಯ ವ್ಯಾಪಾರಗಳು." ಇದರಿಂದ ತುಲನೆ ಮಾಡುವುದು, ನಿರ್ಣಯ ಮಾಡುವುದು ಇವು ಬುದ್ಧಿಯ ವ್ಯಾಪಾರಗಳು ಎಂಬದು ಸ್ಪಷ್ಟವಾಗುತ್ತದೆ. ಕಲ್ಪನಾಸಮುದಾಯವು ಹೆಚ್ಚಾಗುತ್ತ, ವಿಚಾರಗಳು ಕಷ್ಟತರವಾಗುತ್ತ ಬಂದಾಗ, ಇದು ಒಳ್ಳೆಯದು ಇದು ಕೆಟ್ಟದು ಎಂದು ನಿರ್ಣಯವಮಾಡುವ

ಕೆಲಸವು ಸುಲಭವಲ್ಲ. ಆದ್ದರಿಂದ ಇದಕ್ಕೆ ಅಭ್ಯಾಸ ಬಲವೂ ಬೇಕು. ಒಬ್ಬನಿಗೆ ಒಳ್ಳೆಯದೆಂದು ತೋರುವ ಕೆಲವು ಕಲ್ಪನೆಗಳು ಇನ್ನೊಬ್ಬನಿಗೆ ಅಸಹ್ಯವಾಗಿ ಕಾಣಬಹುದು. ಕಲ್ಪನೆಗಳು ಜಾಗೃತವಾದಂತೆ ಮನುಷ್ಯನ ಮನಸ್ಸಿನಲ್ಲಿ ಯಾವ ವಿಧದ ಮನೋವೃತ್ತಿಗಳು ಜಾಗೃತವಾಗುತ್ತವೊ ಅವುಗಳ ಮೇಲೆ ನಿರ್ಣಯಗಳ ಸ್ಥಿತಿಯು ಹೊಂದಿದೆ. ಕಟುಕನಿಗೆ ತಾನು ಕಡಿಯಲು ಸಿದ್ಧಪಡಿಸಿದ ಟಗರಿನ ಕೂಗು ಸಂತೋಷ ಅಥವಾ ಕ್ರೋಧವನ್ನು ಹುಟ್ಟಿಸಬಹುದು; ಅದೇ ಕೂಗು ನಮ್ಮಲ್ಲಿ ಕರುಣೆಯನ್ನು ಹುಟ್ಟಿಸಬಹುದು. ಅಸಭ್ಯನಾದ ಕುಡಿಕನು ಮತ್ತು ಏರಿದಾಗ ಹೊಲಸು ಮಾತುಗಳನ್ನು ಆಡುತ್ತ ಸಂತೋಷದಿಂದ ನೆಗಾಡಬಹುದು; ಆ ಮಾತುಗಳು ನಮ್ಮ ಕಿವಿಗಳಲ್ಲಿ ಬಿದ್ದಾಗ ಒಂದು ಬಗೆಯ ಲಜ್ಜೆಯನ್ನು ಅಥವಾ ಆ ಕುಡಿಕನ ಕಡೆಗೆ ಸಂತಾಪವನ್ನು ಎಬ್ಬಿಸಬಹುದು. ಹೀಗೆ ಆಯಾಯ ಕಾಲದಲ್ಲಿ ಎದ್ದೇಳುವ ಮನೋವೃತ್ತಿಗಳ ಮೇಲೆ ನಮ್ಮ ನಿರ್ಣಯಗಳು ಹೊಂದಿವೆ. ಬುದ್ಧಿಯಲ್ಲಿ ಸದಸದ್ ವಿವೇಕವೆಂಬದು ಉಚ್ಚ ತರಗತಿಯದು. ಇದನ್ನೆ ಮನಸ್ಸಾಕ್ಷಿಯೆನ್ನುತ್ತಾರೆ. ನ್ಯಾಯಾನ್ಯಾಯ, ಧರ್ಮ ಅಧರ್ಮ ಇವುಗಳ ಸಂಪೂರ್ಣಜ್ಞಾನವಿದ್ದು, ಮನೋವೃತ್ತಿಗಳ ಮೇಲೆ ಅಂಕುಶವನ್ನು ಇಟ್ಟು, ಅವನ್ನು ಯಾವಾಗಲೂ ಸರಿಯಾದ ಮಾರ್ಗದಲ್ಲಿ ಮತ್ತು ಮೇರೆತಪ್ಪದ ಹಾಗೆ ನಡೆಸುವ ಬುದ್ಧಿಯು ಬೆಳೆಯುಲಿಕ್ಕೆ ಹೆಚ್ಚಿನ ವ್ಯವಸಾಯುವು ಬೇಕಾಗುತ್ತದೆ. ಇದರ ಬಗೆಯನ್ನು ಗೊತ್ತುಹಚ್ಚಬೇಕಾದರೆ ಮನೋವೃತ್ತಿಗಳು ಎಂದರೇನು, ಅವು ಮನಸ್ಸಿನಲ್ಲಿ ಮಾಡುವ ಕೆಲಸವೇನು, ಅವುಗಳ ಪರಿಣಾಮುವು ಬುದ್ಧಿಯ ಮೇಲೆ ಏನು ಉಂಟಾಗುತ್ತದೆ. ಅದರಿಂದ ಬುದ್ಧಿಯನ್ನು ಹೇಗೆ ವರ್ಗೀಕರಣ ಮಾಡಬಹುದು ಎಂಬ ವಿಚಾರವನ್ನು ಮುಂದಿನ ಅಧ್ಯಾಯದಲ್ಲಿ ಎತ್ತಿಕೊಳ್ಳುವೆವು.

ಮನೋವೃತ್ತಿಗಳೂ ಮನೋವಿಕಾರಗಳೂ

11ನೆಯ ಅಧ್ಯಾಯ

ಬುದ್ಧಿಯು ಸಾರಾಸಾರ ವಿಚಾರಮಾಡಿ ತನ್ನ ನಿರ್ಣಯಗಳನ್ನು ಕೊಡುತ್ತದೆ, ಆದಕ್ಕೆ ವಿಚಾರದ ಬಗ್ಗೆ ಅನುಕೂಲವಾಗುವಂತೆ ಮನಸ್ಸು ಕಲ್ಪನೆಗಳನ್ನು ಬುದ್ಧಿಯ ಮುಂದೆ ಇಡುವ ಗುಮಾಸ್ತನ ಕೆಲಸವನ್ನು ವಹಿಸುತ್ತದೆ, ಬುದ್ಧಿಯ ನಿರ್ಣಯಗಳನ್ನು ಕರ್ಮೇಂದ್ರಿಯಗಳಿಗೆ ತಿಳಿಸಿ ಅಗತ್ಯವಿರುವ ಕಾರ್ಯವನ್ನು ಬುದ್ಧಿಯ ಪ್ರೇರೇಪಣೆಯಿಂದ ಮಾಡುವ ನಾಝರನ ಕೆಲಸವನ್ನೂ ಮನಸ್ಸು ವಹಿಸುತ್ತದೆ ಎಂದೂ ನಾವು ಹಿಂದೆ ಹೇಳಿದೆವು. ಮನಸ್ಸಿನಲ್ಲಿ ಜಾಗೃತವಾಗುವ ಪ್ರತಿಬಿಂಬಗಳು (ಕಲ್ಪನೆ) ಎಲ್ಲರಲ್ಲಿಯೂ ಏಕಪ್ರಕಾರವಾಗಿಲ್ಲ. ಕೆಲವರಿಗೆ ಸಂತೋಷವನ್ನೂ ಮುದವನ್ನೂ ಹುಟ್ಟಿಸುವ ಕಲ್ಪನೆಗಳು ಇತರರಲ್ಲಿ ವ್ಯಸನವನ್ನಾಗಲಿ ಕನಿಕರವನ್ನಾಗಲಿ ಹೊರಡಿಸುವವು ಎಂದೂ ನಾವು ಹೇಳಿದೆವು. ಸಾಮಾನ್ಯವಾಗಿ ಆಡುವ ಮಾತಿನಲ್ಲಿ 'ನಮ್ಮ ಹೊಟ್ಟೆಯ ಕರುಳು ಕರಗಿತು,' 'ಕಣ್ಣು ಕೆಂಪಗೆ ಮಾಡಿದನು' 'ಎದೆ ಧಸಕ್ಕೆನ್ನಿಸಿತು' 'ಹುಬ್ಬು ಗಂಟಿಕ್ಕಿದನು,' ಒಂದು ವರ್ತಮಾನ ಕೇಳಿ 'ಹೌಹಾರಿ ನೆಗೆದು ಬಿದ್ದನು' ಇತ್ಯಾದಿ ಅಲಂಕಾರಯುಕ್ತವಾಗಿ ಆಡುತ್ತೇವೆ. ಇವುಗಳಲ್ಲಿ ನಮ್ಮ ಮನಸ್ಸಿನೊಳಗೆ ಜಾಗೃತವಾದ ಮನೋವಿಕಾರಗಳ ಬಾಹ್ಯಲಕ್ಷಣಗಳು, ಪರಿಣಾಮಗಳು ನಮ್ಮ ಮಾತುಗಳಲ್ಲಿ ವರ್ಣಿಸಲ್ಪಟ್ಟಿವೆ. ಇಂಥ ಲಕ್ಷಣಗಳಿಗೆ ಕಾರಣವಾದ ಮನೋವಿಕಾರಗಳನ್ನು ನಾವು ಇಲ್ಲಿ ಎತ್ತಿಕೊಳ್ಳುವೆವು.

ಮನೋವಿಕಾರಗಳೆಂದರೇನು ?:—ಬಹಳ ಕಾಲದಿಂದ ಕಾಣದೆ ಇದ್ದ ಪೂರ್ವ ಪರಿಚಿತನೊಬ್ಬನನ್ನು ಕಂಡಾಗ ನಮಗೆ ತುಂಬಾ ಸಂತೋಷ ಉಂಟಾಗುತ್ತದೆ. ಮನೆಯಲ್ಲಿ ಅಸ್ವಸ್ಥವು ಯಾರಿಗಾದರೂ ತಲೆದೋರಿದಾಗ ನಮ್ಮ ಮನಸ್ಸು ಸ್ವಸ್ಥವಾಗಿಲ್ಲ. ರಾತ್ರಿಕಾಲದಲ್ಲಿ ಕತ್ತಲೆಯಲ್ಲಿ ನಡೆಯುವಾಗ ಏನಾದರೂ ಕಾಲಿಗೆ ಸುತ್ತಿಕೊಂಡರೆ ನಾವು ಭಯದಿಂದ ಬೆಚ್ಚಿ ಬೀಳುತ್ತೇವೆ. ನಮ್ಮನ್ನು ಕಷ್ಟಕಾಲದಲ್ಲಿ ಕಾಪಾಡಿದ ಒಬ್ಬ ಗೃಹಸ್ಥನನ್ನು ಕಂಡಾಗ, ಅವನಿಗೆ ನಾವು ಉಪಕಾರಸ್ಮರಣೆಯನ್ನು ತೋರಿಸುತ್ತೇವೆ.

ನಮ್ಮನ್ನು ಹೊಡೆಯಲು ಪೋಕ್ರಿ ಸ್ವಭಾವದವರು ಯಾರಾದರೂ ಬಂದರೆ ನಾವು ಅವರಿಗೆ ಧೈರ್ಯದಿಂದ ಎದುರಿಸಲೂ ಬಹುದು. ಇಲ್ಲಿ ಕಾಣಿಸಿದ ದೃಷ್ಟಾಂತಗಳಲ್ಲಿ ನಮ್ಮ ಮನಸ್ಸಿನಲ್ಲಿ ಯಾವ ಗುಣಗಳು ಜಾಗೃತ ವಾಗುತ್ತವೊ ಅವನ್ನು ಮನೋವಿಕಾರ ಅಥವಾ ಮನೋವೃತ್ತಿಗಳೆನ್ನುತ್ತೇವೆ. ಇವು ಮನಸ್ಸಿನಲ್ಲಿ ಎಚ್ಚತ್ತು ಮನೋಪಟಲವನ್ನು ವ್ಯಾಪಿಸಿದಾಗ, ಅವುಗಳು ಬಾಹ್ಯ ವಸ್ತುಗಳಿಂದ ಆದ ಪ್ರತಿಬಿಂಬಗಳ ಪರಿಚಯವನ್ನು ಬುದ್ಧಿಯ ನಿರ್ಣಯಕ್ಕೆ ಒಪ್ಪಿಸುತ್ತವೆ. ಕೆಲವೊಂದು ವೇಳೆ ಅವುಗಳ ಬಲವು ಹೆಚ್ಚಾದರೆ ಬುದ್ಧಿಯು ಏನು ಮಾಡಬೇಕೆಂದು ತೋರದೆ ತಟಸ್ಥವಾಗಿರುವುದು ಉಂಟು. ಅಕಸ್ಮಾತ್ತಾಗಿ ಕಾಡಿನ ದಾರಿಯಲ್ಲಿ ಒಂದು ಹುಲಿಯು ನಮಗೆ ಗಂಟುಬಿದ್ದರೆ ಏನು ಮಾಡಬೇಕೆಂದು ನಮಗೆ ತೋರುವುದಿಲ್ಲ. ಆಗ ಬುದ್ಧಿಯು ತನ್ನ ಕಾರ್ಯವನ್ನು ಮಾಡುವ ಶಕ್ತಿಯಿಲ್ಲದೆ ಭಯವೆಂಬ ಮನೋವಿಕಾರದ ಸೆರೆಯಾಗುವುದುಂಟು. ಅಕಸ್ಮಾತ್ತಾಗಿ ಲಕ್ಷ ರೂಪಾಯಿಯ ಗಂಟು ಸೋದ್ತಿಯಲ್ಲಿ ಸಿಕ್ಕಿತು ಎಂಬ ವಾರ್ತೆಯನ್ನು ಕೇಳಿ ಆಶ್ಚರ್ಯವೂ ಸಂತೋಷವೂ ಉಕ್ಕೇರಿ ಬುದ್ಧಿಯು ತಟಸ್ಥವಾಗುವುದು ಮಾತ್ರವಲ್ಲ, ಅದರ ಪರಿಣಾಮವು ಎದೆಗುಂಡಿಗೆಯ ಮೇಲೆ ಆಗಿ ಪ್ರಾಣ ಹೋಗುವುದೂ ಉಂಟು. ಅದೇ ದುಃಖವು ಅಥವಾ ಕೋಪವು ತಲೆಗೆ ಅಡರಿದರೆ ಅಂದರೆ ಮನಸ್ಸನ್ನು ವ್ಯಾಪಿಸಿದರೆ, ಕೆಲವು ಸಮಯದ ವರೆಗೆ ಬುದ್ಧಿಮಾಂದ್ಯವಾಗುವುದೂ ಉಂಟು. ಕೆಲವು ಸಲ ಆ ಉದ್ರೇಕವು ಬುದ್ಧಿಯ ಸೂಚನೆಗಳನ್ನು ಲಕ್ಷ್ಯಕ್ಕೆ ತಾರದೆ, ಅಥವಾ ಬುದ್ಧಿಯೊಡನೆ ತಿಳಿಸಿ ಅದರ ತೀರ್ಮಾನ ಪಡೆಯುವುದಕ್ಕೆ ಅವಕಾಶವನ್ನು ಕೊಡದೆ, ಕರ್ಮೇಂದ್ರಿಯಗಳಿಗೆ ಏನಾದರೊಂದು ಕೆಲಸವನ್ನು ಮಾಡಲು ಒತ್ತಾಯ ಮಾಡುವುದೂ ಉಂಟು. ಕೀಚಕನು ದ್ರೌಪದಿಯನ್ನು ತನ್ನ ಕೈವಶ ಮಾಡಿಕೊಳ್ಳಬೇಕೆಂದು ಯತ್ನಿಸುವಾಗಲೂ, ದುರ್ಯೋಧನನು ಭೀಮನಿಗೆ ವಿಷ ಹಾಕುವುದು ಮುಂತಾಗಿ ಪೀಡಿಸುವಾಗಲೂ, ಒಂದು ಕಡೆಯಲ್ಲಿ ಕಾಮುಕತನವು ಇನ್ನೊಂದು ಕಡೆ ಈರ್ಷೆಯೂ ಮನಸ್ಸನ್ನು ವ್ಯಾಪಿಸಿ, ದುಷ್ಟಕಾರ್ಯಗಳಿಗೆ ಪ್ರೇರೇಪಿಸಿ, ಬುದ್ಧಿಯು ಸಾರಾಸಾರ ವಿಚಾರ ಅಥವಾ ಸದಸದ್ವಿವೇಕದ ಅಂಕುಶಕ್ಕೆ ಒಳಗಾಗಲಿಲ್ಲ. ಮನಸ್ಸನ್ನು ಸೆರೆ ಹಿಡಿದ ಈರ್ಷೆಯೂ ಕಾಮುಕತನವೂ ಮನೋವಿಕಾರಗಳೇ. ಈ ಮನೋವಿಕಾರ

ಗಳು ನಮ್ಮ ಮನಸ್ಸನ್ನು ಒಂದು ಬಾಹ್ಯವಸ್ತುವಿನ ಅಥವಾ ನೋಟದ ಮೇಲೆ ನೆಲೆನಿಲ್ಲಿಸಿ ಅದರ ಜ್ಞಾನವನ್ನು ಮಾಡಿಕೊಳ್ಳಲಿಕ್ಕೆ ಸಹಾಯಕ ವಾಗುತ್ತವೆ. ಇದನ್ನು 'ಗೀತಾರಹಸ್ಯದಲ್ಲಿ ಹೀಗೆ ಉಲ್ಲೇಖಿಸಿದೆ:— "ಬುದ್ಧಿಯು ಒಂದು ಆಯುಧವು; ತನ್ನೆದುರಿಗೆ ಬಂದುದನ್ನು ಅಥವಾ ತಂದುದನ್ನು ಕತ್ತರಿಸುವುದಷ್ಟೆ ಅದರ ಕೆಲಸವು. ಅದರಲ್ಲಿ ಮತ್ತಾವ ಗುಣವೂ ಧರ್ಮವೂ ಇರುವುದಿಲ್ಲ. ಸಂಕಲ್ಪ, ವಾಸನೆ, ಇಚ್ಛೆ, ಸ್ಮೃತಿ, ಶ್ರದ್ಧೆ, ಉತ್ಸಾಹ, ಕಾರುಣ್ಯ, ಕಳವಳ, ಪ್ರೇಮ, ದಯೆ, ಕೃತಜ್ಞತೆ, ಕಾಮ, ಲಜ್ಜೆ, ಆನಂದ, ಭೀತಿ, ರಾಗ, ದ್ವೇಷ, ಲೋಭ, ಮದ, ಮತ್ಸರ, ಕ್ರೋಧ ಇವೆಲ್ಲ ಮನಸ್ಸಿನ ಗುಣಧರ್ಮಗಳೇ. ಈ ಮನೋವೃತ್ತಿಗಳು ಜಾಗೃತವಾದ ಹಾಗೆ ಮನುಷ್ಯನಿಗೆ ಕೆಲಸಮಾಡುವ ಪ್ರವೃತ್ತಿಯುಂಟಾಗುತ್ತದೆ." ಈ ಮಾತುಗಳನ್ನು ಅದೇ ಗ್ರಂಥದಲ್ಲಿ ಹೀಗೆ ಉದಹರಿಸಿದೆ. "ಮನುಷ್ಯನು ಎಷ್ಟೆ ಬುದ್ಧಿವಂತನಿರಲಿ, ಅವನಿಗೆ ಬಡಜನರ ಗೋಳಾಟವು ಎಷ್ಟೇ ಗೊತ್ತಿರಲಿ, ಅವನಲ್ಲಿ ಕಾರುಣ್ಯ ವೃತ್ತಿಯು ಜಾಗೃತವಾಗದಿದ್ದರೆ ಬಡವರಿಗೆ ನೆರವಾಗಬೇಕೆಂಬ ಇಚ್ಛೆಯೇ ಅವನಲ್ಲಿ ಎಂದಿಗೂ ಮೊಳೆಯುವುದಿಲ್ಲ. ಧೈರ್ಯವೇ ಇಲ್ಲದಿದ್ದರೆ ಯುದ್ಧಮಾಡುವ ಇಚ್ಛೆ ಇದ್ದರೂ ಯಾರೂ ಯುದ್ಧಕ್ಕೆ ಟೊಂಕ ಕಟ್ಟುವುದಿಲ್ಲ. ನಾವು ಮಾಡಬಯಸುವ ಕೃತ್ಯಗಳ ಪರಿಣಾಮಗಳನ್ನು ಮಾತ್ರ ಬುದ್ಧಿಯು ತಿಳಿಸುತ್ತಿರುತ್ತದೆ; ಆದರೆ ಇಚ್ಛೆ, ಧೈರ್ಯ ಮುಂತಾದ ಗುಣಗಳು ಬುದ್ಧಿಯ ಧರ್ಮವಲ್ಲದಿರುವುದರಿಂದ ಮನಸ್ಸಿನ ಸಹಾಯವಿಲ್ಲದೆ, ಯಾವ ಇಂದ್ರಿಯವನ್ನೂ ಪ್ರೇರಿಸಲಾರದು." ಬುದ್ಧಿಯು ನ್ಯಾಯಾಧೀಶನೆಂದೂ ಮನಸ್ಸು 'ಅಮಲ್‌ಬಜಾವಣಿ' ಮಾಡುವ ನಾಝುರನೆಂದೂ ಹೇಳಿದ ಮಾತಿನ ಅರ್ಥವಾದರೂ ಇದೇ. ನ್ಯಾಯಾಧೀಶನು ತೀರ್ಮಾನ ಮಾಡಿ ಕೊಡಬಲ್ಲನು. ಅದರ ಜಾರಿ ನಡಿಸುವ ಕಾರ್ಯವು ಇನ್ನೊಬ್ಬನದಿರುತ್ತದೆ. ಇಲ್ಲಿ ಬುದ್ಧಿಯು ಸೂಚನೆಗಳನ್ನು ಜಾರಿಗೆ ತರುವ ಭಾರವು ಮನಸ್ಸಿನದು. ಇನ್ನು "ಬುದ್ಧಿಯನ್ನು ಉಪಯೋಗಿಸಿಕೊಳ್ಳದೆ ಬರಿಯ ಕಾರುಣ್ಯ ವೃತ್ತಿಯಿಂದ ಮಾಡಿದ ದಾನವು ಅಪಾತ್ರದಾನವಾಗಿ ಅದರಿಂದ ಕೆಟ್ಟ ಪರಿಣಾಮವಾಗುವ ಸಂಭವವೂ ಇರುತ್ತದೆ. ಸಾರಾಂಶ, ಬುದ್ಧಿಯ ಸಹಾಯವಿಲ್ಲದಿದ್ದರೆ ಮನೋವೃತ್ತಿಗಳು ಕಣ್ಣು ಕಾಣದಂತಾಗುತ್ತವೆ; ಆದುದರಿಂದ ಮನುಷ್ಯನು ಯಾವುದೊಂದು ಶುದ್ಧವಾದ ಕರ್ಮವನ್ನು ಮಾಡುವ ಕಾಲಕ್ಕೆ ಅವನ ಬುದ್ಧಿಯು ಶುದ್ಧವಾದದ್ದು ಅಂದರೆ ಒಳಿತು ಹೀನಗಳನ್ನು ತಪ್ಪದೆ ತಿಳಿಯುವಂಥದೂ ಮನಸ್ಸು ಬುದ್ಧಿಯ ತಂತ್ರದಿಂದ ನಡೆಯುವಂಥದೂ ಆಗಿರಬೇಕಾಗುತ್ತದೆ." ಹೀಗೆನ್ನುವಾಗ 'ಗೀತಾರಹಸ್ಯ'ವು ಬುದ್ಧಿ ಮತ್ತು ಮನಸ್ಸುಗಳ ನಿಕಟ ಸಂಬಂಧ ಮತ್ತು ಪರಸ್ಪರ ಆಧಾರದ ವಿಷಯವನ್ನು ಸ್ಪಷ್ಟಗೊಳಿಸುತ್ತದೆ. ಈಗ ಮನೋವೃತ್ತಿಗಳ ಪ್ರಾಶಸ್ತ್ಯವು

ಗೊತ್ತಾಗುತ್ತದೆ. ಅವನ್ನು ಪುಟಕ್ಕಿಟ್ಟು ಶುದ್ಧೀಕರಣ ಮಾಡುವುದು ಅಂತಃಕರಣ ಶುದ್ಧಿ ಎನಿಸುವುದು.

ಮನೋವಿಕಾರಗಳಲ್ಲಿ ಪ್ರಭೇದಗಳು:– ಎಲ್ಲರಲ್ಲಿಯೂ ಮೇಲೆ ಹೇಳಿದ ಮನೋವಿಕಾರಗಳು ಏಕಪ್ರಕಾರವಾಗಿ ಕಾಣಿಸಿಕೊಳ್ಳುವುದಿಲ್ಲ. ಒಬ್ಬನು ಉರಿಮೊಗದವನು, ಇನ್ನೊಬ್ಬನು ನಗುಮೋರೆಯುವನು, ಮೂರನೆಯವನಲ್ಲಿ ಕುಟಿಲವೇ ಹೆಚ್ಚು, ಇನ್ನೊಬ್ಬನಲ್ಲಿ ಮದವು ಉಕ್ಕೇರಿದೆ; ಮತ್ತೊಬ್ಬನು ಅಂಜುಬುರುಕ; ಮಗದೊಬ್ಬನಿಗೆ ನಾಲ್ಕು ಜನರ ನೆರೆ ಸಹವಾಸಗಳ ಪ್ರೇಮ ಹೆಚ್ಚು; ಕೆಲವರಲ್ಲಿ ಭೂತದಯೆ ಅವರ ಸರ್ವಕಾರ್ಯಗಳಲ್ಲಿ ತಲೆದೋರುತ್ತಿದೆ; ಇನ್ನು ಕೆಲವು ಮಂದಿ ಉತ್ಸಾಹಭರಿತರು. ಹೀಗೆ ಭಿನ್ನ ಭಿನ್ನ ಪ್ರಕಾರಗಳು ಮನುಷ್ಯರಲ್ಲಿ ಕಂಡು ಬರುತ್ತಿವೆ. ಹೆಬ್ಬಾರ್ಟನು 'ಹುಟ್ಟಿದ ಮಗುವಿನ ಮನಸ್ಸು ಬರಿದಾದ ಪಟಲವಾಗಿದೆ' ಎನ್ನುವಾಗ ಅದರಲ್ಲಿ ಈ ಮನೋವಿಕಾರಗಳ ಲೇಪನವೇ ಇಲ್ಲವೆಂದು ಸಾಧಿಸುವುದಿಲ್ಲ. ಬೀಜದಲ್ಲಿ ಮೊಳಕೆಯಾಗಿ ಬೇರು ಪ್ರತ್ಯೇಕ ತಾಳು ಪ್ರತ್ಯೇಕ, ಎಲೆ ಪ್ರತ್ಯೇಕವಾಗುವ ಸಾಮರ್ಥ್ಯವು ಹೇಗೆ ನಿರಾಕಾರ ಸ್ವರೂಪವಾಗಿ ಅಡಗಿರುತ್ತದೊ ಅದೇ ರೀತಿಯಲ್ಲಿ ಇವು ನಿರಾಕಾರ ಸ್ವರೂಪದಲ್ಲಿವೆ, ಅವನ್ನು ಇಂದ್ರಿಯ ಸಂಸ್ಕಾರದ ಬಿಂಬಗಳಿಂದ ಸಾಕಾರವಾಗಿ ಮಾಡಬೇಕಾಗುತ್ತದೆ ಎಂಬ ಅರ್ಥವನ್ನು ಪ್ರತಿಪಾದಿಸುತ್ತಾನೆ. ಈ ಅಣುರೂಪವಾಗಿ ಇರುವ ಮೂಲ ಗುಣಗಳು ಯಾವವು, ಮಗುವಿನಲ್ಲಿ ಹೇಗೆ ಅವು ಕಾಣಿಸಿಕೊಳ್ಳುತ್ತವೆ, ಮಿಶ್ರಗುಣಗಳು ಯಾವವು, ಅವು ಹೇಗೆ ಅನ್ಯ ಗುಣ ಸಂಪರ್ಕದಿಂದ ರೂಪುಗೊಳ್ಳುತ್ತವೆ, ಎಂಬದನ್ನು ಇಲ್ಲಿ ನಾವು ಚರ್ಚಿಸಬೇಕಾಗಿದೆ.

ಹುಟ್ಟುಗುಣಗಳು (Instincts):—ಸಚೇತನ ವಸ್ತುಗಳಲ್ಲಿ ಅತಿ ಕೀಳು ತರದವುಗಳಿಂದ ಮನುಷ್ಯಾವಸ್ಥೆಯ ವರೆಗಿನ ಏರುಪಾವಟಿಗೆಗಳಲ್ಲಿ ಸಂಗ್ರಹವಾದ ಅನುಭವಗಳನ್ನೆಲ್ಲ ಮನುಷ್ಯನು ಗರ್ಭದಿಂದ ಮೊದಲ್ಗೊಂಡು ಬೆಳೆದ ಮನುಷ್ಯನ ಸ್ಥಿತಿಗೆ ಬರುವ ವರೆಗಿನ ಕಾಲದಲ್ಲಿ ಅನುಭವಿಸುತ್ತಾನೆ ಎಂದು ಪಾಶ್ಚಾತ್ಯ ಶಾಸ್ತ್ರಕಾರರ ಅಭಿಪ್ರಾಯ. ಅಂಥ ಅನುಭವಗಳಲ್ಲಿ ಯಾವವು ಆಯಾ ಪ್ರಾಣಿಗೆ ಅಥವಾ ಸಸ್ಯಕ್ಕೆ ಜೀವನ ಧಾರಣಕ್ಕೆ ಅನು

ಕೂಲವಾಗಿಯೊ ಅವು ಪಾರಂಪರ್ಯವಾಗಿ ಆ ಪ್ರಾಣಿ ಅಥವಾ ಸಸ್ಯದಲ್ಲಿ ನೆಲೆ ನಿಲ್ಲುತ್ತವೆ, ಯಾವವು ಪ್ರತಿಕೂಲವಾಗಿವೆಯೊ ಅವನ್ನು ಆ ಪ್ರಾಣಿ ಅಥವಾ ಸಸ್ಯವು ಅಲ್ಲಲ್ಲಿ ಆಚಾರದಿಂದ ಬಿಟ್ಟು ಬಿಡುವುದರಿಂದ ಅವು ಮುಂದಿನ ಸಂತತಿಯಲ್ಲಿ ಕಾಣಬರುವುದಿಲ್ಲ. ಸರ್ವ ಸಾಮಾನ್ಯವಾಗಿ ಎಲ್ಲಾ ಪ್ರಾಣಿವರ್ಗದಲ್ಲಿಯೂ ಮೂರು ಕ್ರಿಯೆಗಳು ಅವುಗಳ ಆಸ್ತಿಕ್ಯಕ್ಕೂ ಮುಂದೆ ಸಂತಾನಾಭಿವೃದ್ಧಿಗೂ ಅಗತ್ಯವಿವೆ. **ಆಹಾರ, ನಿದ್ರೆ, ಸಂತಾನಾಭಿವೃದ್ಧಿ** ಇವು ಮೂರು ಒಂದಲ್ಲ ಒಂದು ಕ್ರಮದಿಂದ ಎಲ್ಲಾ ಪ್ರಾಣಿ ಸಸ್ಯಾದಿಗಳಲ್ಲಿ ವಿಚಿತ್ರರೀತಿಯಿಂದ ಸಾಗುತ್ತವೆ. ಮಳೆಗಾಲ ಪ್ರಾರಂಭವಾಗುವ ವರೆಗೆ ಕಪ್ಪೆ ಎಲ್ಲಿದೆ ಎಂದು ಗೊತ್ತಾಗುವುದೇ ಇಲ್ಲ. ಎಲ್ಲಿಯೊ ಮಣ್ಣಿನ ಅಡಿಯಲ್ಲಿ ಕಲ್ಲಿನ ಸಂದಿನಲ್ಲಿ ಹಾಯಾಗಿ ನಿದ್ರಿಸುತ್ತದೆ. ಮಳೆ ಬರುವುದೇ ತಡ, ಜಾಗ್ರತವಾಗಿ ಜಲಾಶಯುಗಳಲ್ಲಿ ನೊರೆಯುಂತಿರುವ ಮೊಟ್ಟೆಗಳನ್ನಿಟ್ಟು ಮರಿ ಮಾಡುತ್ತದೆ. ಈ ಕಾಲದಲ್ಲಿ ಈ ಕಪ್ಪೆಗಳನ್ನು ತಿನ್ನಲಿಕ್ಕೆ ಹಕ್ಕಿ ಹಾವು ಮುಂತಾದವುಗಳು ಬಂದು ಎರಗುತ್ತವೆ. ಹೀಗಾಗಿ ಕೆಲವಂಶ ನಷ್ಟವಾದರೂ, ಉಳಿದವು ಅಲ್ಲಲ್ಲಿ ಸೇರಿಕೊಂಡು, ಜಲಾಶಯುಗಳ ನೀರು ಬತ್ತಿಹೋಗುವಷ್ಟರಲ್ಲಿ ಪುನಃ ನಿದ್ದೆ ಹೋಗುತ್ತವೆ. ಆ ಕಾಲದಲ್ಲಿ ಅವಕ್ಕೆ ಆಹಾರವೂ ಪ್ರಾಣವಾಯುವೂ ಅಗತ್ಯವಿರುವುದಿಲ್ಲ. ನೀರು ನಿಲ್ಲುವ ಗಟ್ಟಿ ನೆಲದ ಮೇಲೆ ಒಂದೆರಡು ದಿನಗಳಲ್ಲಿ ಹಾವಸೆ ಕಟ್ಟುತ್ತದೆ. ನೀರು ಇಂಗಿ ಹೋದೊಡನೆ ಅದು ಒಣಗಿ ಸಾಯುತ್ತದೆ. ಅದು ಒಂದು ಬಗೆಯ ಸಸ್ಯವೇ. ಅದರ ಜೀವಾಣುಗಳು ಎಲ್ಲಿವೆ ಎಂದು ಇತರ ಕಾಲದಲ್ಲಿ ಗೊತ್ತುಹಚ್ಚಲು ನಮ್ಮ ಬರೀ ಇಂದ್ರಿಯಗಳಿಗೆ ಸಾಧ್ಯವಲ್ಲ. ಆದರೆ ಆಯಾ ಕಾಲವು ಒದಗುವ ವರೆಗೆ ನೀರಿನಲ್ಲಿಯೊ ಗಾಳಿಯಲ್ಲಿಯೊ ನೆಲದಲ್ಲಿಯೊ ಇದ್ದು ನಿದ್ದೆಹೋಗುತ್ತವೆ. ಆಹಾರ ಸಿಕ್ಕಿದೊಡನೆ ಬಲಿತುಕೊಳ್ಳುತ್ತವೆ, ವೃದ್ಧಿಯಾಗುತ್ತವೆ, ಕೆಲವಂಶ ಸಾಯುತ್ತಿವೆ. ಸೃಷ್ಟಿಯ ಕ್ರಮವೆಲ್ಲ ಇದೇ ರೀತಿಯಿಂದ ಸಾಗುತ್ತದೆ. ಹೀಗಾಗಿ ಈ ಮೂರು ಗುಣಗಳು ಎಲ್ಲಾ ಸಚೇತನಸೃಷ್ಟಿಗೆ ಮೂಲ ಹುಟ್ಟುಗುಣಗಳು ಎಂದು ಹೇಳಬಹುದು. ಇವು ಮೆದುಳಿಲ್ಲದ ಅತ್ಯಲ್ಪ ಪ್ರಾಣಿ ಸಸ್ಯಗಳಲ್ಲಿಯೊ ತಾನಾಗಿ ಅಂದರೆ ಅನ್ಯ ಪ್ರೇರೇಪಣೆ ಇಲ್ಲದೆ ಕಾರ್ಯನಿರ್ವಾಹ ಮಾಡುತ್ತಿವೆ. ಬುದ್ಧಿಶಕ್ತಿಯ ಪ್ರಯೋಗವಿಲ್ಲದೆ ಈ ಕೆಲಸಗಳು ಜರಗುತಿದ್ದರೂ

ಉಚ್ಚಪ್ರಾಣಿಗಳಲ್ಲಿ ಅವುಗಳ ನಿರ್ವಾಹಕ್ಕೆ ಮೆದುಳಿನ ಆಲೋಚನಾಶಕ್ತಿಯು ಪ್ರಯೋಗವಾಗುತ್ತಿದೆ. ಸಚೇತನವರ್ಗವು ಏರುಪಾವಟಿಗೆಗಳಿಗೆ ಹತ್ತಿದ ಹಾಗೆ ಆಲೋಚನಾಶಕ್ತಿಯ ಅಂಕುಶವು ಇವನ್ನು ವ್ಯವಸ್ಥೆಗೊಳಿಸುತ್ತದೆ. ಇಂಥ ಗುಣಗಳಿಗೆ **ಪೂರ್ವವಾಸನೆ**ಗಳೆನ್ನುತ್ತಾರೆ. ಅವು ದೇಹದಲ್ಲಿ ಒಂದು ಬಗೆಯ ಇಚ್ಛೆಯನ್ನು ಹುಟ್ಟಿಸಿ, ಆದರ ಪ್ರತಿಕ್ರಿಯೆಯಾಗಿ ಆ ವಾಸನೆಗಳ ತೃಪ್ತಿಯನ್ನು ಸಾಧಿಸುತ್ತವೆ.

ಸುಖದುಃಖಗಳೂ ತೃಷ್ಣೆಯೂ :—ಪೂರ್ವವಾಸನೆಗಳು ಅವುಗಳ ತೃಪ್ತಿಗೆ ಯತ್ನಿಸುತ್ತವೆ. ಅದೇ ಇಚ್ಛೆಯ ಮೂಲ. ಅದಕ್ಕೆ **ತೃಷ್ಣೆ** ಎನ್ನು ತ್ತಾರೆ. ಈ ಇಚ್ಛೆಯ ತೃಪ್ತಿಯೇ ಸುಖ. ಇಚ್ಛೆಯ ಪ್ರತಿಕೂಲ ವೇದನೆ ಅಥವಾ ಅರಿವು ದುಃಖವೆನ್ನಬಹುದು. ಪ್ರತಿಯೊಂದು ಇಂದ್ರಿಯವು ತನ ಗೊಂದು ಇಚ್ಛೆಯನ್ನು ಹುಟ್ಟುಗುಣವಾಗಿ ಇಟ್ಟುಕೊಳ್ಳುತ್ತದೆ. ಅಂಥಾ ಇಚ್ಛಾಪೂರ್ತಿಯಾದೊಡನೆ ಅದಕ್ಕೆ ಸುಖವಾಗುತ್ತದೆ. ಆಗಲೇ ಹುಟ್ಟಿದ ಮಗುವಿಗೆ ವಾತಾವರಣದಿಂದ ಅಸುಖವುಂಟಾಗುತ್ತದೆ. ಆಗ ಅದು ಅಳು ತ್ತದೆ. ಅದನ್ನು ಎತ್ತಿಕೊಂಡು ನಮ್ಮ ಅಂಗಕ್ಕೆ ಒತ್ತಿ ಹಿಡಿದು, ಅಥವಾ ಬೆಚ್ಚಗಾದ ಹೊದಿಕೆಯಿಂದ ಮುಚ್ಚಿದರೆ ಅದು ಸುಖಹೊಂದಿ ನಿದ್ದೆ ಹೋಗುತ್ತದೆ. ಹಾಗೆಯೇ ಆಹಾರ ಬೇಕಾದಾಗ ಅಳುತ್ತದೆ. ಸಕ್ಕರೆ ನೀರನ್ನು ಬಾಯೊಳಗೆ ಇಟ್ಟೊಡನೆ ಆಹಾರದ ಇಚ್ಛೆಯು ತೀರಿ ಅದು ಪುನಃ ನಿದ್ದೆಹೋಗುತ್ತದೆ. ಸ್ಪರ್ಶೇಂದ್ರಿಯಕ್ಕೆ ಉಷ್ಣ ಶೀತಗಳ ಮಿತಿ, ಚಕ್ಷು ಇಂದ್ರಿಯಕ್ಕೆ ಬೆಳಕಿನ ಮತ್ತು ಕ್ರಮೇಣ ಬಣ್ಣಗಳ ಅರಿವು, ರಸನೇಂದ್ರಿ ಯಕ್ಕೆ ಸಿಹಿ ವಸ್ತುವಿನ ರುಚಿ, ಘ್ರಾಣೇಂದ್ರಿಯಕ್ಕೆ ತೀವ್ರವಲ್ಲದ ಪರಿಮಳ ಶಬ್ದೇಂದ್ರಿಯಕ್ಕೆ ವ್ಯವಸ್ಥಿತ ಕ್ರಮದಲ್ಲಿ ಉಂಟಾಗುವ ಹವಾತರಂಗಗಳ ಸ್ಪರ್ಶ ಇವೆಲ್ಲವುಗಳಿಂದ ಸುಖವುಂಟಾಗುತ್ತದೆ, ಹದ ತಪ್ಪಿದಲ್ಲಿ ಅಸುಖ ಅಥವಾ ದುಃಖವುಂಟಾಗುತ್ತದೆ. ತೃಷ್ಣೆಯ ಮೂಲವನ್ನು ವಿಚಾರಿಸುವು ದಾದರೆ ಪೂರ್ವ ಸ್ಥಿತಿಯಿಂದ ಏನೊಂದು ಬದಲಾವಣೆಯಾದಲ್ಲಿ ಅದು ದೇಹದಲ್ಲಿ ಒಂದು ನೂತನ ಅನುಭವವನ್ನು ಹುಟ್ಟಿಸಿ, ಅದರ ಪ್ರತಿಕ್ರಿಯೆ ಯನ್ನು ಉಂಟುಮಾಡುತ್ತದೆ. ಇದೇ ದುಃಖ ಅಥವಾ ಅಸುಖದ ಪ್ರಥಮ ಪರಿಚಯವೆನ್ನಬಹುದು. ಈ ಪ್ರತಿಕ್ರಿಯೆಯು ಈ ಅಸುಖವನ್ನು ಹೋಗ

ಲಾಡಿಸುವ ಯತ್ನವಾಗಿದೆ. ಪ್ರತಿಕ್ರಿಯೆಯ ಪೂರ್ಣತೆಯಾಗುವ ವರೆಗೆ ಆ ಅಸುಖವು ಹೋಗಲಾರದು. ಮೊತ್ತಮೊದಲು ಇಂದ್ರಿಯಗಳ ಪ್ರಭಾವವೇ ಹೆಚ್ಚುತ್ತ ಬರುವುದರಿಂದ ಇಂದ್ರಿಯ ಸುಖ ಅಥವಾ ಅಸುಖಗಳ ಮೊತ್ತವೇ ಹೆಚ್ಚುತ್ತದೆ. ಮಾನಸಿಕ ಪ್ರವೃತ್ತಿಗಳು ಹೆಚ್ಚುತಿದ್ದ ಹಾಗೆ ಮನಸ್ಸಿನ ಕಲ್ಪನೆಗಳ ಸಮುದಾಯವು ಹೆಚ್ಚಿ, ಸುಖಸೌಕರ್ಯಗಳ ಮಿತಿಯು ಹೆಚ್ಚುತ್ತದೆ. ಚಾಪೆಯಲ್ಲಿ ಅಥವಾ ಬರಿಯ ನೆಲದಲ್ಲಿ ಮಲಗಿ ಅಭ್ಯಾಸವಿದ್ದವನಿಗೆ ಅರಳೆಯ ಹಾಸಿಗೆಯ ಮೇಲೆ ಸುಖ ಹೆಚ್ಚು, ಬೇಸಿಗೆಯಲ್ಲಿ ಕೈ ಬೀಸಣಿಗೆಯಿಂದ ತಂಗಾಳಿಯ ಸುಖಕ್ಕಿಂತಲೂ 'ಪಂಕಾ'ದಿಂದ ಬೀಳುವ ಗಾಳಿ, ಹಾಗೂ ವಿದ್ಯುತ್‌ಶಕ್ತಿಯಿಂದ ಚಲಿಸುವ 'ಸ್ವತಂತ್ರ ಪಂಕಾ'ವಿನ ಸುಖವು ಹೆಚ್ಚು ಎಂದು ಕಾಣುವುದು. ಬಿಸಿಲಲ್ಲಿ ಕಾಲುನಡೆಯಿಂದ ಹೋಗುವವನಿಗೆ ಬರಿಗಾಲಲ್ಲಿ ನಡೆಯುವುದಕ್ಕಿಂತ ಮೆಟ್ಟನ್ನು ಮೆಟ್ಟುವುದು ಸುಖ, ಅದಕ್ಕಿಂತಲೂ ವಾಹನಗಳಲ್ಲಿ, ಮೋಟರ್, ರೈಲು ಬಂಡಿಗಳಲ್ಲಿ ಕುಳಿತು ಪ್ರಯಾಣಮಾಡುವುದು ಇನ್ನಷ್ಟು ಸುಖವೆಂದು ಕಾಣುವುದು. ಇವೆಲ್ಲವೂ ಮಾನಸಿಕ ಕಲ್ಪನೆಗಳ ನಿಮಿತ್ತ ಇಂದ್ರಿಯ ದ್ವಾರಾ ಸುಖದ ಪ್ರಾಪ್ತಿಗಳು. ಆದರೆ ತೀರಾ ಮಾನಸಿಕವಾದ ಸುಖವೂ ಅಂದರೆ ಇಂದ್ರಿಯಗಳಿಂದ ಅನುಭವಿಸದೆ ಬರೆ ಕಲ್ಪನೆಯಿಂದಲೇ ಹೊಂದುವ ಸುಖದುಃಖಗಳೂ ಇವೆ. ಇತರರ ಕಾವ್ಯ, ನಟನೆ, ನಾಟ್ಯ ಇವುಗಳಿಂದ ಕಲ್ಪನೆಗಳು ಮನಸ್ಸಿನಲ್ಲಿ ರೂಪುಗೊಂಡು, ಅದರಿಂದ ಸುಖದುಃಖ ಅನುಭವವಾಗುವುದೂ ಉಂಟು. ಹರಿಶ್ಚಂದ್ರನಿಗೆ ವಿಶ್ವಾಮಿತ್ರನು ಪೀಡಿಸುವುದನ್ನು ನಾಟಕಾದಿಗಳಲ್ಲಿ ಕಂಡಾಗ ಅಥವಾ ಗ್ರಂಥಗಳಲ್ಲಿ ಓದಿದಾಗ, ನಮ್ಮಲ್ಲಿ ಉದ್ಭವಿಸುವ ಉದ್ಗಾರಗಳು ಕಲ್ಪಿತವಾಗಿದ್ದರೂ ನಮ್ಮ ಮನಸ್ಸಿನ ಪಟಲವನ್ನು ವ್ಯಾಪಿಸಿ, ಕಣ್ಣೀರು ಸುರಿಸುವಂತೆ ಮಾಡುವವು. ಕರ್ಣನ ತ್ಯಾಗ, ಅರ್ಜುನನ ಶೌರ್ಯ, ಭೀಮನ ಬಲ ಇವುಗಳು ಮನಸ್ಸಿನಲ್ಲಿ ಹರ್ಷವನ್ನು ಉಂಟುಮಾಡಿ ಹುರಿದುಂಬಿಸುವುವು. ಇವಕ್ಕೆಲ್ಲ ವ್ಯವಸಾಯಬಲವು ಬೇಕಾಗಿದೆ. ಇದಲ್ಲದೆ ಮನುಷ್ಯನು ಯಾವ ಸಂಸರ್ಗದಲ್ಲಿ ಇದ್ದಾನೊ ಅದರಿಂದಲೂ ಅವನ ಮಾನಸಿಕ ಪ್ರವೃತ್ತಿಗಳು ಪರಿವರ್ತನೆಯಾಗುವುದೂ ಉಂಟು. 'ಐಕ್ಹೆನ್‌ಫೆಲ್ಸಿನ ಶ್ರೀಮಂತನಾದ ಹೆನ್ರಿಯು' ಎಂಬ ಕಥೆಯಲ್ಲಿ ಹೆನ್ರಿಯನ್ನು ಕೂಸಾಗಿದ್ದ ಕಾಲದಲ್ಲಿ ಒಬ್ಬಳು ಮುದಿ ಕೊರವಂಜಿಯು ಕದ್ದೊಯ್ದು ತನ್ನ ಕಳ್ಳರ ಗುಂಪು

ವಾಸವಾಗಿದ್ದ ಕತ್ತಲಾದ ಗುಹೆಯಲ್ಲಿ ಸಲಹಿದಳು. ಅವನು ಅವರಿಂದ ತಪ್ಪಿಸಿಕೊಂಡು ಪ್ರಥಮತಃ ಬೆಳಕನ್ನೂ ಸೃಷ್ಟಿಯ ವೈಚಿತ್ರ್ಯವನ್ನೂ ಕಂಡು ಭಯಚಕಿತನಾದನಂತೆ. ಗುಹೆಯಲ್ಲಿ ಅವನ ಸುಖದ ಪರಮಾವಧಿಯೇ ಪ್ರತ್ಯೇಕವಾಗಿತ್ತು. ಹಾಗೆಯೇ ಕಟುಕರವನ ಮಗನು ತನ್ನ ತಂದೆಯು ಕುರಿಯ ಗೋಣನ್ನು ಕೊಯ್ಯುವ ಕಾಲದಲ್ಲಿ ಕಾಣುವ ನೋಟದಿಂದ ತಲ್ಲಣಿಸದೆ ಹರ್ಷದಿಂದ ನೆಗಾಡುತ್ತಿರಬಹುದು. ಅದೇ ನೋಟವು ಇತರರಿಗೆ ಕಣ್ಣಿನಲ್ಲಿ ನೀರನ್ನು ಹೊರಡಿಸಬಹುದು. ಈ ರೀತಿಯಲ್ಲಿ ಒಂದು ಸ್ಥಿತಿಯಲ್ಲಿ ಸುಖವೆಂದು ಕಂಡದ್ದು ಇನ್ನೊಂದು ಸ್ಥಿತಿಯಲ್ಲಿ ಅಸುಖ ಅಥವಾ ದುಃಖವೆಂದು ಕಾಣಬಹುದು. ಇಂಥ ಭಿನ್ನ ಅಭಿಪ್ರಾಯಗಳಿಂದ ಮಾನಸಿಕ ಸುಖದುಃಖಗಳು ಕೆಲವು ವೇಳೆ ಆಯಾಯ ವ್ಯಕ್ತಿಯಲ್ಲಿ ಜಾಗೃತವಾದ ಉದ್ಗಾರಗಳ ಮೇಲೆ ಹೊಂದಿರಬಹುದು. ಇಂಥ ಸುಖದುಃಖಗಳ ಪರಂಪರೆಯು ಹೆಚ್ಚಿದ ಹಾಗೆ ಅವುಗಳ ಮೇಲೆ ವಿಚಾರದ ಅಂಕುಶವು ಹೇಗೆ ಇರಗೊಡಿಸಬೇಕೆಂದು ಸಂದರ್ಭಾನುಸಾರವಾಗಿ ಹೇಳುವೆವು. ಇಲ್ಲಿಗೆ ಇಷ್ಟು ಸಾಕಾಗಿದೆ. ವಾಸನೆಗಳ ಉದ್ದೇಶವು ಸುಖಪ್ರಾಪ್ತಿ, ಸುಖವೆಂದರೆ ಇಂದ್ರಿಯದ ಇಚ್ಛೆಗಳ ತೃಪ್ತಿ; ಅವುಗಳ ತೃಪ್ತಿಯಾಗುವ ವರೆಗೆ ಅಸುಖ ಅಥವಾ ದುಃಖವಿರುತ್ತದೆ. ಇಲ್ಲಿ ಇಂದ್ರಿಯವೆಂಬಲ್ಲಿ ಮನಸ್ಸೆಂಬ ಅಂತರ್ ಇಂದ್ರಿಯಕ್ಕೂ ಈ ಸುಖದುಃಖಗಳ ಟೀಕೆಯು ವ್ಯಾಪ್ತವಾಗುವುದು.

ಪೂರ್ವವಾಸನೆ, ಪ್ರಜ್ಞೆ, ಮನೋವಿಕಾರ, ಅಹಂಕಾರ:—ವಾಸನೆಗಳು ಹುಟ್ಟಾರಭ್ಯ ಬೀಜರೂಪದಲ್ಲಿ ಮನೋಪಟಲದಲ್ಲಿದ್ದು, ಅವುಗಳಿಗೆ ಬಾಹ್ಯ ವಸ್ತುಸ್ಪರ್ಶದಿಂದ ಉಂಟಾದ ಪ್ರತಿಕ್ರಿಯೆಯೆ ಜಾಗೃತಿಯನ್ನುಂಟು ಮಾಡುತ್ತದೆ. ಆದರೆ ವಾಸನೆಗಳಲ್ಲಿ ವಿಚಾರಶಕ್ತಿಯ ಅನುಲೇಪನವಿಲ್ಲ. ಕಾಲಕ್ರಮದಲ್ಲಿ ಪ್ರಜ್ಞೆಯು ಈ ವಾಸನೆಗಳ ಮೇಲೆ ವಿಚಾರಶಕ್ತಿಯ ಲಗಾಮನ್ನು ಹಾಕುತ್ತದೆ. ಹಕ್ಕಿಯು ತನ್ನ ಮೊಟ್ಟೆಗಳನ್ನು ಇಡುವುದಕ್ಕೆ ಗೂಡನ್ನು ಕಟ್ಟುವಾಗಲೂ, ಜೇನುಹುಳು ತನ್ನ ಚಮತ್ಕಾರವಾದ ಷಟ್ಕೋಣಾಕೃತಿಯ ಅರೆಗಳನ್ನು ಮಾಡುವಾಗಲೂ, ಅಲ್ಲಿ ಸ್ವಭಾವವೇ ಅಥವಾ ಪೂರ್ವ ವಾಸನೆಯೇ ಅದಕ್ಕೆ ಪ್ರೇರೇಪಿಸುತ್ತದೆ ಅಲ್ಲದೆ ವಿಚಾರಶಕ್ತಿಯ ಸುಳಿವು ಅಲ್ಲಿಲ್ಲ. ಆದರೆ ಮನುಷ್ಯನು ತನ್ನ ಸುಖದ ದೃಷ್ಟಿಯಿಂದ ವಿಚಿತ್ರರೀತಿಯ

ಮನೆಯನ್ನು ಕಟ್ಟುವಾಗ ತನ್ನ ಸುಖದ ಮಿತಿಯಾವುದು, ಅದನ್ನು ಹೇಗೆ ಕೈಗೂಡಿಸಬೇಕು ಎಂಬದನ್ನು ಲಕ್ಷ್ಯದಲ್ಲಿಟ್ಟು ವರ್ತಿಸುತ್ತಾನೆ. ಪೂರ್ವ ವಾಸನೆಗಳಲ್ಲಿ ಮೂರು ಕ್ರಿಯೆಗಳಿವೆ. ಪ್ರಜ್ಞೆ ಅಂದರೆ ಬಾಹ್ಯವಸ್ತು ಸ್ಪರ್ಶದ ತಿಳಿವಳಿಕೆ, ಅದರಿಂದ ಆಗುವ ಮನೋವಿಕಾರ, ಅದಕ್ಕೆ ಅಧಿಕಾರವನ್ನು ನಡಿಸಿ 'ಹೀಗೆ ಮಾಡು' ಎಂದು ಹೇಳುವ ಅಹಂಕಾರ. ಆದರೆ ಈ ಮೂರು ಭಾಗಗಳು ಪೂರ್ವವಾಸನೆಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿಲ್ಲ. ಅವು ಅಸ್ಪಷ್ಟವಾಗಿ ತೋರಿಸಿಕೊಳ್ಳುತ್ತವೆ. 'ಬೇಟೇನಾಯಿಯು ಬೆನ್ನಟ್ಟಿ ಬರುವಾಗ ಓಡುವ ಮೊಲವು ನೀರಿಗೆ ಹಾರುವುದೂ ಇಲ್ಲ, ಮರವನ್ನು ಹತ್ತುವುದೂ ಇಲ್ಲ, ಬಿಲವನ್ನೆ ಹುಡುಕಿಕೊಳ್ಳುತ್ತದೆ; ಅಥವಾ ತನ್ನ ಬಿಲದಂತೆ ಇರುವ ಇನ್ನೊಂದು ಮನೆಯನ್ನು ಸೇರಲಿಕ್ಕೆ ಯತ್ನಿಸುತ್ತದೆ. ಶತಪದಿಯನ್ನು ಕೋಲಿನಿಂದ ಮುಟ್ಟಿದಾಗಲೇ ಅದು ಸುರುಳಿಯಾಗಿ ಬಿದ್ದುಕೊಳ್ಳುತ್ತದೆ. ತಾನು ಹಾಗೆ ಮಾಡುತ್ತದೆಂಬ ತಿಳಿವಳಿಕೆ ಅದಕ್ಕೆ ಇಲ್ಲ. ಸ್ವಭಾವತಃ ಅದು ಹಾಗೆ ಮಾಡುತ್ತದೆ.

ವಿವಿಧ ಮನೋವಿಕಾರಗಳಿಗೆ ಅನುಗುಣವಾದ **ಅಂಗವಿಕಾರ**ಗಳಿವೆ. ಶತಪದಿಯು ಸುರುಳಿಯಾಗಿ ಬೀಳುವುದು ಒಂದು ಬಗೆಯ ಅಂಗವಿಕಾರ. ಆಹಾರ ಬೇಕಾದಾಗ ಬೇರೆ ಬೇರೆ ಪ್ರಾಣಿಗಳು ಅದರ ತೃಷ್ಣೆಯನ್ನು ವಿವಿಧ ರೀತಿಯಲ್ಲಿ ತೋರ್ಪಡಿಸುತ್ತವೆ. ನಿದ್ರೆ ಹೋಗುವಾಗಲಂತೂ ಅವುಗಳ ತಟಸ್ಥಾವಸ್ಥೆಯೇ ಅಂಗವಿಕಾರ. ಇಂಥ ಅಂಗವಿಕಾರಗಳನ್ನು ಪ್ರತ್ಯ ಪ್ರತ್ಯೇಕ ಮನೋವಿಕಾರಗಳ ಟೀಕೆಯ ಕಾಲದಲ್ಲಿಯೇ ವಿವರಿಸಲಾಗುವುದು.

ಹುಟ್ಟುಗುಣಗಳು

(ವ್ಯಕ್ತಿಪರ)

12ನೆಯ ಅಧ್ಯಾಯ

ಹುಟ್ಟುಗುಣಗಳನ್ನು ಮೂರು ವಿಧಗಳಾಗಿ ವರ್ಗೀಕರಿಸಬಹುದು. (1) ವ್ಯಕ್ತಿಯ ಸುಖ ಅಥವಾ ದುಃಖಕ್ಕೆ ಕಾರಕಗಳಾದುವು (2) ವ್ಯಕ್ತಿಗೂ ಸಮಾಜಕ್ಕೂ ಅನುಬಂಧಿಸುವವು (3) ವ್ಯಕ್ತಿಗೂ ಬಾಹ್ಯ ವಾತಾವರಣಕ್ಕೂ ಸಂಬಂಧ ಪಟ್ಟವು. ಈ ಅಧ್ಯಾಯದಲ್ಲಿ ಮೊದಲನೆಯ ವರ್ಗವನ್ನು ಎತ್ತಿಕೊಳ್ಳಲಾಗುವುದು.

ಭಯ :—ಆಹಾರ, ನಿದ್ರೆ, ಸಂತಾನವೃದ್ಧಿ, ತೃಷ್ಣೆ ಇವುಗಳೊಂದಿಗೆ ಭಯವನ್ನೂ ಒಂದು ಪೂರ್ವವಾಸನೆಯಾಗಿ ತಿಳಿದುಕೊಳ್ಳಬೇಕು. ಅತ್ಯಲ್ಪ ಪ್ರಾಣಿಗಳಲ್ಲಿಯೂ ಇದು ಕಾಣಿಸಿಕೊಳ್ಳುತ್ತದೆ. ನಾಚಿಕೆಮುಳ್ಳಿನ ಗಿಡವು ಅದನ್ನೊಂದು ಕೋಲಿನಿಂದ ಸ್ಪರ್ಶಿಸಿದಾಗ ತನ್ನ ಎಲೆಗಳನ್ನು ಒತ್ತೊತ್ತಾಗಿರಿಸಿ ಮುದುರಿಕೊಳ್ಳುತ್ತದೆ. ಶಂಕಹುಳವು ತನ್ನ ಚಿಪ್ಪಿನ ಕವಚದೊಳಗೆ ಸಂಕೋಚವಾಗಿ ಬಿದ್ದುಕೊಳ್ಳುತ್ತದೆ. ಇವಕ್ಕೂ ಬಾಹ್ಯ ಇಂದ್ರಿಯಸ್ಪರ್ಶದ ಪ್ರತಿಕ್ರಿಯೆಯೇ ಕಾರಣವು. ಮಗುವು ಅಪರಿಚಿತರನ್ನು ನೋಡಿದಾಗ ಮೋರೆ ತಿರುಗಿಸುವುದು, ಅಥವಾ ತನ್ನ ತಾಯಿಯ ಸೆರಗಿನಲ್ಲಿ ಮೋರೆಯನ್ನು ಮುಚ್ಚಿಕೊಳ್ಳುವುದು—ಇವೆಲ್ಲ ಭಯದ ವಿಕಾರಗಳು. ಮಗುವಿಗೆ ಓಡುವಷ್ಟು ಶಕ್ತಿಯಾದೊಡನೆ ಭಯದ ನಿಮಿತ್ತ ಅದು ಅಡಗಿಕೊಳ್ಳುತ್ತದೆ. ಇದರಲ್ಲಿ ಅಂಗರಕ್ಷಣೆಯೇ ಈ ಪ್ರಯತ್ನಗಳಿಗೆ ಕಾರಣವು. ಭಯವು ಬಾಹ್ಯ ಅಂಗವಿಕಾರಗಳಿಂದ ಕಾಣಿಸಿಕೊಳ್ಳುತ್ತದೆ. ಭಯದ ಪ್ರಥಮ ಸಂಸ್ಕಾರದಲ್ಲಿ ಅಂಗ ಚಟುವಟಿಕೆಯು ತಟಸ್ಥವಾಗುತ್ತದೆ. ಎದೆಗುಂಡಿಗೆಯ ಬಡಿದಾಟವು ನಿಧಾನವಾಗುತ್ತದೆ; ಶ್ವಾಸೋಚ್ಛ್ವಾಸಗಳ ಕೆಲಸಗಳೂ ಮೆಲ್ಲಗೆ ನಡೆಯುತ್ತವೆ. ಆದರೆ ಭಯದಿಂದ ಎರಡನೇ ಸಂಸ್ಕಾರವಾಗಿ ಮಗು ಓಡುವ ಯತ್ನದಲ್ಲಿ ಶ್ವಾಸೋಚ್ಛ್ವಾಸಗಳ ಕೆಲಸವೂ ಎದೆಗುಂಡಿಗೆಯ ಬಡಿದಾಟವೂ ಹೆಚ್ಚಾದರೂ ಅದು ಸಾಮಾನ್ಯ ಸ್ಥಿತಿಯನ್ನು ಮೀರುತ್ತದೆ; ಎದೆಗುಂಡಿಗೆ

ಯಲ್ಲಿ ಒಂದು ಬಗೆಯ ಪೀಡನವು ಕಂಡುಬರುತ್ತದೆ; ಶ್ವಾಸೋಚ್ಛ್ವಾಸಗಳ ಕೆಲಸವು ದೀರ್ಘವಾಗದೆ, ಚುರುಕಾಗಿ ತೀವ್ರಗತಿಯಿಂದ ನಡೆಯುತ್ತದೆ. ಉಬ್ಬಸವು ಉಂಟಾಗುತ್ತದಲ್ಲದೆ ಅದು ಸಾಮಾನ್ಯ ಶ್ವಾಸೋಚ್ಛ್ವಾಸಗಳ ಕ್ರಮವನ್ನು ಅನುಸರಿಸುವುದಿಲ್ಲ. ಉಪಾಧ್ಯಾಯನ ಹೆಚ್ಚಿನ ಭಯಕ್ಕೆ ಹೆದರಿ ತಟಸ್ಥವಾಗಿರುವ ಮಗುವಿನ ಮನಸ್ಸಿನಲ್ಲಿ ಎಲ್ಲಾ ಕಲ್ಪನೆಗಳು ತಾತ್ಕಾಲಿಕವಾಗಿ ಮಾಯವಾಗುತ್ತವೆ. ಅದು ಕಣ್ಣವೆ ಇಕ್ಕದೆ ಬಿರಬಿರನೆ ನೋಡುವಾಗಲೂ ಅದರ ಮುಖದ ಮೇಲೆ ರಕ್ತಛಾಯೆ ಇಲ್ಲದೆ ನೀಲ ಬಣ್ಣವಾದಾಗಲೂ ಈ ಬಾಹ್ಯ ಅಂಗವಿಕಾರಗಳಿಂದ ಅದರ ಮನೋವೃತ್ತಿಗಳ ನಿರಾಲಂಬತೆಯನ್ನು ನಾವು ಗೊತ್ತುಹಚ್ಚಬಲ್ಲೆವು. ಅಲ್ಪ ಪ್ರಾಣಿಗಳಲ್ಲಿಯೂ ಈ ಬಗೆಯ ತಾಟಸ್ಥ್ಯವು ಕಂಡುಬರುತ್ತದೆ. ಹಾವಿನ ಹೆಡೆಯು ಬಿಚ್ಚಿದು ದನ್ನು ಕಂಡಾಗ ಕೆಲವು ಜಾತಿಯ ಹಕ್ಕಿಗಳು ಕದಲದೆ ಅದನ್ನೆ ನೋಡಿಕೊಂಡು ಬಿದ್ದು ಬಿಡುತ್ತವಂತೆ. ರಾತ್ರೆಯ ಕತ್ತಲಲ್ಲಿ ಭೂತಪಿಶಾಚಿಗಳನ್ನು ಕಂಡಂತಾಗಿ ಫಕ್ಕನೆ ಸ್ಮೃತಿತಪ್ಪವಾಗಲೂ ಕೆಲವು ಸಲ ಮರಣಪ್ರಾಪ್ತಿಯಾಗುವಾಗಲೂ ಈ ಭಯವೆಂಬ ಮನೋವಿಕಾರದ ವ್ಯಾಪ್ತಿಯು ಇತರ ಎಲ್ಲಾ ಕಲ್ಪನೆಗಳನ್ನು ಮನೋಪಟಲದ ಆಳಕ್ಕೆ ತಳ್ಳಿ ಬಿಡುವುದೂ, ಎದೆ ಗುಂಡಿಗೆಯು ಸರಾಗವಾಗಿ ಕೆಲಸ ನಡೆಸದೆ ಉಸುರು ಕಟ್ಟಿಹೋಗುವುದೂ, ದೇಹದ ರೋಮಗಳೆಲ್ಲ ನೆಟ್ಟಗೆ ನಿಲ್ಲುವುದೂ, ಮೈಮೇಲೆ ತಣ್ಣೀರು ಎರಚಿದಂತಾಗುವುದೂ ಮುಂತಾದ ವಿವಿಧ ಅಂಗವಿಕಾರಗಳನ್ನು ತೋರ್ಪಡಿಸುತ್ತದೆ.

ನಾವು ಅತಿ ಎತ್ತರವಾದ ಗೋಪುರದ ಮೇಲೆ ನಿಂತು ಕೆಳಕ್ಕೆ ಇಣಿಕಿ ನೋಡಿದರೆ ಒಂದೊಂದು ಸಲ ಕಣ್ಣುಕತ್ತಲೆ ಬರುವುದುಂಟು. ನಾವು ನಿಂತ ಸ್ಥಳವು ಭದ್ರವಾಗಿದ್ದರೂ ಅಲ್ಲಿಂದ ಕೆಳಗೆ ಬಿದ್ದೇವೊ, ಬಿದ್ದರೆ ನಮ್ಮ ಗತಿ ಏನಾದೀತು ಎಂಬ ಭಯವೇ ಇದಕ್ಕೆ ಕಾರಣವಾಗಿದೆ. ಅತಿ ರಭಸ ದಿಂದ ರೈಲುಬಂಡಿ ಹೋಗುವ ಸಮಯದಲ್ಲಿ ಆ ಕಂಬಿಗಳ ಹೊರಗೆ ನಿಂತ ರೆಯೂ ಹೀಗೆ ಶಿರೋಭ್ರಮಣವಾಗಿ ಪ್ರಾಣ ಕಳೆದುಕೊಳ್ಳುವುದೂ ಉಂಟು. ಹೀಗೆ ಮೂಲತಃ ಭಯವು ಅಂಗರಕ್ಷಣೆಯ ಉದ್ದೇಶದಿಂದ ಎಲ್ಲಾ ಪ್ರಾಣಿ ಗಳಲ್ಲಿಯೂ ಹುಟ್ಟುಗುಣವಾಗಿಯೇ ಇದೆ. ಅವ್ಯಕ್ತಸ್ವರೂಪವಾದ ಅಪಾಯು ಗಳು ಅಂದರೆ ಭೂತಪಿಶಾಚಿಗಳ ಬಾಧೆ ಮುಂತಾದುವುಗಳ ಭಯವು,

ನಾಗರಿಕತೆಯಿಲ್ಲದ ಮನುಷ್ಯನಲ್ಲಿ ಪ್ರಕೃತಿಯಲ್ಲಿ ತನಗೆ ಕಾರಣ ಗೊತ್ತು ಹಚ್ಚಲಾಗದ ಯಾವುದೊಂದು ಸಂಗತಿಯಲ್ಲಿ ಬರೇ ಊಹನೆಗಳಿಂದ ಕಲ್ಪಿಸಿಕೊಳ್ಳುವ ಭಯವು, ಇವೆಲ್ಲ ಮಕ್ಕಳಲ್ಲಿ ಕೂಡಾ ಇನ್ನೊಂದು ರೂಪವಾಗಿ ಕಂಡು ಬರುತ್ತಿವೆ. ಗುಮ್ಮ ಬಂದನೆಂದು ಮಕ್ಕಳು ಭಯಪಡುವ ಕಾರಣವು ಗುಮ್ಮನ ಅವ್ಯಕ್ತ ಮತ್ತು ಊಹನಾತೀತವಾದ ಆಕಾರವೆ ಸರಿ. ಕತ್ತಲೆಯಲ್ಲಿ ನಿರ್ಜನಪ್ರದೇಶದಲ್ಲಿ, ಸ್ಮಶಾನಗಳಲ್ಲಿ, ಸಂಚರಿಸುವುದಕ್ಕೆ ಈ ಭಯವೇ ಕಾಲು ಬಾರದಂತೆ ಮಾಡುತ್ತದೆ. ಜವುಗುಪ್ರದೇಶಗಳಲ್ಲಿ ಒಂದೊಂದು ಸಲ ನಡುರಾತ್ರೆಯಲ್ಲಿ ಕಾಣುವ ಬೆಳಕು 'ಕೊಳ್ಳಿ ಪಿಶಾಚಿ' ಎಂದು ಕಲ್ಪಿಸಿಕೊಂಡು ಜನರು ದಿಗಿಲಾದ ದೃಷ್ಟಾಂತಗಳು ಹಲವು ಇವೆ.

ಹೀಗಾಗಿ ಈ ಹುಟ್ಟುಗುಣವನ್ನು ತೀರಾ ಅಣಗಿಸುವುದು ಅಸಾಧ್ಯವೇ ಸರಿ. 'ಹುಟ್ಟುಗುಣ ಗಟ್ಟಹತ್ತಿದರೂ ಬಿಡದು' ಎಂಬ ಮಾತಿನ ಅರ್ಥವಾದರೂ ಇದೇ. ಒಂದು ವೇಳೆ ಸಾಧ್ಯವೆಂತಾದರೂ ಅದನ್ನು ಯತ್ನಿಸುವುದು ಯೋಗ್ಯವೂ ಅಲ್ಲ. ನಿರ್ಭೀತನಾದ ಮನುಷ್ಯನಲ್ಲಿ 'ಸಮಾಜದಲ್ಲಿ ನನಗೆ ಏನಂದಾರು?' ಎಂಬ ಭಯವಾದರೂ ಇಲ್ಲದಿದ್ದರೆ ಅವನು ಯಾವ ದುಷ್ಕೃತ್ಯಕ್ಕೂ ಹೆದರಲಿಕ್ಕಿಲ್ಲ. ಕಾನೂನಿನ ನಿರ್ಬಂಧದಿಂದ ಉಂಟಾಗುವ ಭೀತಿಯಲ್ಲಿ ಬಹಳ ಮಟ್ಟಿಗೆ ದೇಹಕ್ಕೆ ಪೀಡೆಯುಂಟಾದೀತು ಎಂಬದಕ್ಕಿಂತಲೂ ಮಾನಕ್ಕೆ ಕೊರತೆ ಬಂದೀತು ಎಂಬ ಭೀತಿಯೇ ಮೇಲು. ನೀತಿಯ ನಿರ್ಬಂಧಕ್ಕೆ ಒಳಗಾಗಿ ವರ್ತಿಸುವುದಕ್ಕೆ ಬೇಕಾದ ಭೀತಿಯು ಮತ್ತಷ್ಟು ಉಚ್ಚತರದ್ದಾಗಿದೆ. ಇದಕ್ಕೆ **ಲಜ್ಜೆ** ಅಥವಾ **ನಾಚಿಕೆ** ಎನ್ನುತ್ತಾರೆ. ಇವು ಬೆಳೆಯಬೇಕಾದರೆ ಮನುಷ್ಯನಲ್ಲಿ ವಿಚಾರಶಕ್ತಿಯೂ ಪ್ರಜ್ಞಾಶಕ್ತಿಯೂ ಉಂಟಾಗಬೇಕು. ಸಾಮಾನ್ಯ ಮಾತಿನಲ್ಲಿ 'ಈ ಕೆಲಸ ಮಾಡಿದರೆ ದೇವರು ಮುನಿದಾರು' ಎಂದು ಹೇಳುವುದು ಈ ನೀತಿಯುಕ್ತ ಭಯವೆ ಎಂದು ತಿಳಿಯಬೇಕು.

ಚಿಕ್ಕ ಮಕ್ಕಳಲ್ಲಿ ಹಿರಿಯರ ಕಡೆಗೆ ಅಥವಾ ಉಪಾಧ್ಯಾಯನ ಕಡೆಗೆ ಮಿತಿಮೀರಿ ಭೀತಿಯುಂಟಾದರೆ ಅಂಥ ಮಕ್ಕಳು ತಮ್ಮ ನಿಜಸ್ವಭಾವವನ್ನು ಅವರಿಂದ ಮರೆಪಡಿಸಲು ನೋಡುತ್ತವೆ. ಅಂಥ ಭೀತಿಯನ್ನು ಪ್ರೋತ್ಸಾಹಿಸಬಾರದು. ಮಕ್ಕಳ ಗುಣಸ್ವಭಾವಗಳ ಸರಿಯಾದ ತಿಳವಳಿಕೆ

ಯಾದರೆ ಮಾತ್ರವೇ ನಾವು ಅವರನ್ನು ಸರಿದಾರಿಗೆ ತಿದ್ದಲು ಸಾಧ್ಯವಿದೆ ಎಂಬದನ್ನು ಮರೆಯಬಾರದು.

ಕೋಪ:—ಭಯಪ್ರಾಪ್ತಿಯಾದಲ್ಲಿ ಎಲ್ಲರೂ ಏಕರೀತಿಯಾಗಿ ತಟಸ್ಥರಾಗುವುದಿಲ್ಲ. ಕೆಲವರು ಓಡಿ ಹೋಗಿ ಆ ಭಯದ ಪೀಡೆಯನ್ನು ತಪ್ಪಿಸಿಕೊಳ್ಳಲು ಯತ್ನಿಸುತ್ತಾರೆ. ಇನ್ನೂ ಕೆಲವರಲ್ಲಿ ಅಂಥ ಭಯಕಾರಕ ಸಂಗತಿಯನ್ನು ಎದುರಿಸಲಿಕ್ಕೆ ತಮ್ಮ ಸಾಮರ್ಥ್ಯವು ಸಾಕಷ್ಟು ಇದೆ ಎಂಬ ಜ್ಞಾನವಾದರೆ ಅವರ ಮನೋವಿಕಾರವು ಬೇರೆಯೇ ಆಗುತ್ತದೆ. ಅವರು ಸಿಟ್ಟುಗೊಳ್ಳುತ್ತಾರೆ. ಇಂಥ ಕೋಪಕ್ಕೆ ಇರುವ ಅಂಗವಿಕಾರವು ಭಯದ ಅಂಗವಿಕಾರಕ್ಕಿಂತ ತೀರಾ ವಿರೋಧ ಕ್ರಮದಲ್ಲಿದೆ. ಕಣ್ಣು ತೀವ್ರ ದೃಷ್ಟಿಯಿಂದೊಡಗೂಡಿ ರೆಪ್ಪೆಗಳು ಸಾಮಾನ್ಯ ಸ್ಥಿತಿಯಲ್ಲಿದ್ದಂತೆ ಮುದುರಿಕೊಳ್ಳುವುದಿಲ್ಲ; ಹುಬ್ಬು ಗಂಟಿಕ್ಕುತ್ತದೆ; ಮುಖವು ಕೆಂಪಗಾಗುತ್ತದೆ; ಎದೆಗುಂಡಿಗೆಯ ಬಡಿತವು ಹೆಚ್ಚು ಸಲ ಕೇಳಿಸುತ್ತದೆ; ಶ್ವಾಸೋಚ್ಛ್ವಾಸಗಳು ಬೇಗಬೇಗನೆ ಆಗುವಂತೆ ಮೂಗಿನ ಸೊಳ್ಳೆಗಳು ಅರಳಿಕೊಳ್ಳುತ್ತವೆ; ಸ್ನಾಯುಗಳು ಒರಟಾಗುತ್ತವೆ; ಹಲ್ಲು ಕಚ್ಚುತ್ತೇವೆ; ಅಥವಾ ತುಟಿಕಚ್ಚುತ್ತೇವೆ. ಕೆಲವರಿಗೆ ನಾಲಿಗೆ ಬಿಗಿದು ಬಿಡುತ್ತದೆ, ಇನ್ನೂ ಕೆಲವರಲ್ಲಿ ಸ್ವರವೇ ಬದಲಾಯಿಸಿ ಬಿರುನುಡಿಗಳು ಹೊರಡುತ್ತವೆ. ಇಂಥ ಬಗೆ ಬಗೆಯ ವಿಕಾರಗಳನ್ನು ನಾವು ಅಲ್ಪ ಪ್ರಾಣಿಗಳಲ್ಲಿಯೂ ಕಾಣಬಹುದು. ಹಾವು ಹೆಡೆಯನ್ನು ಬಿಚ್ಚಿ ಭುಸುಗುಟ್ಟುತ್ತದೆ. ನಾಯಿ ಹಲ್ಲು ಕಿರಿಯುತ್ತದೆ. ಬೆಕ್ಕು ಹುಲಿಗಳು ಬಾಲವನ್ನು ನೆಟ್ಟಗೆ ಬಿರುಸಾಗಿ ಎತ್ತಿ ಮೀಸೆಗಳನ್ನು ನೆಟ್ಟಗೆ ಮಾಡಿ ಕರಾಳ ದೃಷ್ಟಿಯಿಂದ ನೋಡುತ್ತವೆ. ಆನೆಯು ಸೊಂಡಿಲನ್ನು ಎತ್ತಿ ಮುಂಗಾಲನ್ನು ಎತ್ತುತ್ತದೆ. ಮುಖ್ಯವಾಗಿ ಶತ್ರುವಿನ ಮೇಲೆ ಬೀಳಲಿಕ್ಕೆ ಬೇಕಾದ ಸ್ನಾಯುಗಳ ದೃಢತ್ವವು ಕೋಪದ ಮೂಲ ಅಂಗವಿಕಾರವೆನ್ನಬಹುದು. ಇದರಿಂದ ಬಾಹ್ಯರಕ್ತನಾಳಗಳಲ್ಲಿ ರಕ್ತವು ಹೆಚ್ಚು ಪ್ರವಹಿಸಿ ಮೈಯ ಉಷ್ಣವು ಹೆಚ್ಚುವುದು. ಈ ಅಭಿಪ್ರಾಯವನ್ನೆ 'ಸಿಟ್ಟಿನಿಂದ ಮೈಉರಿಯಿತು' ಎಂದು ಸೂಚಿಸುತ್ತಾರೆ.

ಆತ್ಮರಕ್ಷಣೆಯ ನಿಮಿತ್ತ ಹುಟ್ಟುಗುಣವಾಗಿ ಬಂದಿರುವ ಈ ಗುಣವನ್ನು ತಗ್ಗಿಸುವುದು ಸಾಧ್ಯವಲ್ಲ. ಕೆಲವರು ಸಿಟ್ಟಿನಿಂದ ತಮೋಗುಣವನ್ನು

ಹೋದುತ್ತಾರೆ, ಅಂದರೆ ನಿರಾಲಂಬ ಅವಸ್ಥೆಯನ್ನು ಕೈಕೊಳ್ಳುತ್ತಾರೆ. ಇನ್ನೂ ಕೆಲವರಲ್ಲಿ ಇದು **ರಾಜಸ**ವಾಗಿದ್ದು ಶತ್ರುವನ್ನು ಎದುರಿಸಲಿಕ್ಕೆ ಪ್ರೇರೇಪಿಸುತ್ತದೆ. ಇನ್ನೂ ಕೆಲವರು **ಸಾತ್ವಿಕ** ವೃತ್ತಿಯನ್ನು ತಳೆದು, ಕೋಪಕ್ಕೆ ವಿಚಾರಶಕ್ತಿಯ ಲಗಾಮನ್ನು ಬಿಗಿದು, ತಾಳ್ಮೆ ಅಥವಾ ಸಹಿಷ್ಣುತೆಯನ್ನು ಅವಲಂಬಿಸುತ್ತಾರೆ. ರಾಜಸವೃತ್ತಿಯೇ ಅಭ್ಯಾಸವಾಗಿದ್ದವರು ಸಿಟ್ಟು ತಾಳಿಕೊಳ್ಳಲಾರದೆ **ರೌದ್ರ**ವನ್ನು ಅಂದರೆ ವಿಶೇಷ ರೀತಿಯ ಅಂಗವಿಕಾರವನ್ನು ತೋರ್ಪಡಿಸುತ್ತಾರೆ. **ಕ್ರೋಧ**ದಲ್ಲಿ ಅಂಗವಿಕಾರವು ಅಹಂಕಾರದ ಕೈವಶವಾಗಿದ್ದು ಹೊರಗೆ ವಿಶೇಷ ರೀತಿಯಿಂದ ತೋರ್ಪಡಿಸದಿದ್ದರೂ, ಕ್ರಿಯೆಯನ್ನು ಮುಂದೊತ್ತಿಬಿಡುತ್ತದೆ. ಈ ಸಾತ್ವಿಕ, ರಾಜಸ, ತಾಮಸ ವೃತ್ತಿಗಳು ಕೆಲವರಲ್ಲಿ ಹುಟ್ಟುಗುಣನಾಗಿ ಬಂದಿವೆ. ಅಂಥವರಲ್ಲಿ ಸಾತ್ವಿಕ ಕ್ರಮವನ್ನು ನೆಲೆಗೊಳಿಸುವುದಕ್ಕೆ ವಿಚಾರಶಕ್ತಿಯನ್ನು ಬೆಳೆಯಿಸಿ, ಸಾರಾಸಾರ ವಿವೇಕವನ್ನು ತಂದು ಕೊಳ್ಳುವಂತೆ ಅಭ್ಯಾಸ ಮಾಡಿಸುವುದು ರಕ್ಷಕರ ಮತ್ತು ಉಪಾಧ್ಯಾಯರ ಕರ್ತವ್ಯ.

ಮೂಲತಃ ಕೋಪವು ಪ್ರಾಣರಕ್ಷಣೆಯ ನಿಮಿತ್ತ ಉಂಟಾದ ಮನೋವಿಕಾರವಾಗಿದ್ದು ಅಸುಖ ಅಥವಾ ದುಃಖದ ಪ್ರಾಪ್ತಿಯ ಅಥವಾ ಸಂಭವದಿಂದ ತಲೆದೋರಿದರೂ, ಕ್ರಮೇಣ ಅದರಲ್ಲಿಯೂ ಇತರ ವಾಸನೆಗಳಲ್ಲಿದ್ದಂತೆ ಪ್ರಜ್ಞೆ ಮತ್ತು ಅಹಂಕಾರವು ಬೆರತುಕೊಳ್ಳುತ್ತವೆ. ಅಹಂಕಾರವು ಇಲ್ಲಿ 'ಹೀಗೆ ಮಾಡು' ಎಂದು ಪ್ರೇರೇಪಿಸುತ್ತದೆ. ಪ್ರಜ್ಞೆಯು ಸುಖದುಃಖಗಳ ಸರಿಯಾದ ಕಲ್ಪನೆಗಳನ್ನು ಸಿದ್ಧಪಡಿಸಿ ಕೊಡುತ್ತದೆ. ವಿಚಾರವು ಲಗಾಮನ್ನು ಬಿಗಿದು ಬುದ್ಧಿಯ ವಶಕ್ಕೆ ಈ ಮನೋವಿಕಾರವನ್ನು ಒಪ್ಪಿಸಿ ಕೊಡುತ್ತದೆ. ಲಗಾಮಿನ ಬಿಗುಪು ಕಡಿಮೆಯಾದರೆ ಬುದ್ಧಿಯು ಏನೂ ಮಾಡಲು ತೋರದೆ ಅಹಂಕಾರದ ಪ್ರಾಶಸ್ತ್ಯವನ್ನು ಹೆಚ್ಚಿಸುತ್ತದೆ ಅಹಂಕಾರವನ್ನು ವಿವೇಕವು ದಂಗುಬಡೆದು ಬಿಟ್ಟಲ್ಲಿ ಕೋಪವು ಶಾಂತವಾಗಿ ಮನಸ್ಸಿಗೆ ಸುಖವುಂಟಾಗುತ್ತದೆ. ಕೆಲವೊಂದು ವೇಳೆ ತನ್ನ ರಾಜಸವೃತ್ತಿಗೋಸ್ಕರ ಮನುಷ್ಯನು **ಪಶ್ಚಾತ್ತಾಪ** ಅಂದರೆ ಕಾರ್ಯದ ಅನಂತರ ತನ್ನಿಮಿತ್ತ ಉಂಟಾಗುವ ಮಾನಸಿಕ ದುಃಖ ಅಥವಾ ವ್ಯಥೆಯಿಂದ ಕಳವಳಗೊಳ್ಳುತ್ತಾನೆ. ಕೋಪವನ್ನು ತೀರಾ ಅಣಗಿಸಗೊಡದೆ,

ಇತರರ ಅನ್ಯಾಯ ವೃತ್ತಿಗಳ ಕಡೆಗ ಸಂತಾಪ ಹುಟ್ಟುವ ರೀತಿಯಲ್ಲಿ ಮನಸ್ಸನ್ನು ತಿದ್ದಿಕೊಡುವುದು ಒಳ್ಳೆಯದು. ಇಂಥ ಸಂತಾಪವು ಸಮಾಜದ ಒಳಿತಕ್ಕೆ ಹಿತಕಾರಿಯಾಗುತ್ತದೆ.

ಆದರೆ ಕೆಲವು ಸಲ ಬಾಹ್ಯವಿಕಾರವನ್ನು ತೋರ್ಪಡಿಸದೆ ಕೋಪವನ್ನು ಮನಸ್ಸಿನಲ್ಲಿಯೆ ಇಂಗಿಸಿಕೊಳ್ಳುವುದುಂಟು. ಆಗ ಅದು 'ವ್ಯಾಳದಂಗನಯುವೊ' ಎಂದು ಕವಿಯು ಹೇಳುವಂತೆ ಬಾಹ್ಯಸ್ಥಿತಿಯಲ್ಲಿ ಕಾಣಿಸಿಕೊಳ್ಳುವುದಿಲ್ಲ. ಬೂದಿಯೊಳಗೆ ಇದ್ದ ಕೆಂಡದಂತೆ ಒಳಗಿಂದೊಳಗೆ ಮನಸ್ಸಿನಲ್ಲಿ ಕುದಿಯುತ್ತದೆ. **ದ್ವೇಷ** ಎಂಬದು ಈ ಬಗೆಯ ಕೋಪ. ದ್ವೇಷವು ಒಂದೊಂದು ಸಲ ಉಕ್ಕೇರಿದಾಗ, ಯಾವುದೊಂದು ಕಠಿಣ ರೀತಿಯಿಂದ ಮುಯ್ಯಿ ತೀರಿಸಲಿಕ್ಕೆ ಪ್ರೇರೇಪಿಸುವುದುಂಟು. ಇಲ್ಲವಾದರೆ ತೀಕ್ಷ್ಣವಾದ ತಾತ್ಸಾರಗರ್ಭಿತವಾದ ಮಾತುಗಳಿಂದ ತನ್ನ ಹಗೆಯುವನ ಮನಸ್ಸನ್ನು ನೋಯಿಸುವುದು.

ಮಕ್ಕಳಿಗೆ ಕಾಗೆ ಗುಬ್ಬಿಯ ಕಥೆಯಲ್ಲಿ ಗುಬ್ಬಕ್ಕನ ಮರಿಗಳನ್ನು ಕಾಗೆಯು ನುಂಗಿತು ಎಂದು ಕೇಳುವಾಗ ಮನಸ್ಸಿನಲ್ಲಿ ಉರಿಯೂ ಅನುತಾಪವೂ ಉದ್ರೇಕವಾಗುತ್ತವೆ. ಬಿಸಿಯಾದ ಕಲ್ಲಿನ ಸುತ್ತಲೂ ಸುತ್ತಿದ ಬೆಣ್ಣೆ ಉಂಡೆಯನ್ನು ನುಂಗಿ ಕಾಗೆಯು ಮರಿಗಳನ್ನು ಕಾರಿಬಿಟ್ಟಿತು ಎಂದು ಕೇಳಿದೊಡನೆ ಮರಿಗಳ ಕಷ್ಟಗಳ ಕಡೆಗೆ ಅನುತಾಪಪಡುತಿದ್ದ ಮಕ್ಕಳ ಮನಸ್ಸಿಗೆ ಸುಖವಾಗುತ್ತದೆ. ಇಂಥ ಅನುತಾಪವು ಸಮಾಜದ ವ್ಯವಸ್ಥೆಗೆ ಬಲವಾಗಿರುವುದರಿಂದ ಮಕ್ಕಳಿಗೆ ಈ ಮನೋವೃತ್ತಿಯನ್ನು ಪುಷ್ಟಿಗೊಳಿಸಬೇಕು.

ಆತ್ಮಪ್ರತಿಷ್ಠೆ ಮತ್ತು ಆತ್ಮನಿಗ್ರಹ:— ಇವು ಒಂದಕ್ಕೊಂದು ವಿರೋಧವಾದ ಮನೋವಿಕಾರಗಳು. ಇವು ಮನುಷ್ಯನ ಜೀವಕಾಲದಲ್ಲಿ ಅವನು ಕೂಸಾಗಿದ್ದಲ್ಲಿಂದ ಕಂಡು ಬಂದು, ಮುಂದೆ ಪ್ರತಿಯೊಂದು ಕ್ರಿಯೆಯಲ್ಲಿಯೂ ಕಾಣಿಸಿಕೊಳ್ಳುತ್ತವೆ. 'ಇಗೊ ನಾನು ಇದನ್ನು ಮಾಡಿದೆ, ನಾನು ಅದನ್ನು ಮಾಡಿದೆ' ಎಂದು ಹೇಳುವ ಮಗುವಿನಲ್ಲಿ ಈ ಆತ್ಮಪ್ರತಿಷ್ಠೆಯ ಮೂಲ ರೂಪವು ಕಂಡುಬರುತ್ತದೆ. ಇವು ಭಯ ಮತ್ತು ಕೋಪಗಳಿಗೆ ಸಂಬಂಧವುಳ್ಳವು ಮತ್ತು ಅವುಗಳ ಪರಿಣಾಮವಾಗಿವೆ. ಕೋಳಿಯು ತನ್ನ

ಅಂಗಳದಲ್ಲಿ ಬಂದ ಇನ್ನೊಂದು ಹುಂಜವನ್ನು ಗೆದ್ದು, ತಾನು ಗಾಂಭೀರ್ಯ ದಿಂದ ಅಂಗಳದಲ್ಲಿ ಹೆಜ್ಜೆ ಇಡುತ್ತ ಕೂಗುವುದರಲ್ಲಿ ಈ ಆತ್ಮಪ್ರತಿಷ್ಠೆಯು ಕಾಣುತ್ತದೆ. ನಾಯಿಯು ತನ್ನ ಯಜಮಾನನ ಅಂಗಳಕ್ಕೆ ಬಂದ ಇತರ ಪ್ರಾಣಿಗಳನ್ನು ಕಂಡು ಬೊಗಳಿ, ಅವನ್ನು ಓಡಿಸಿದ ಮೇಲೆ, ಅದು ಬೊಗ ಳುವ ಸ್ವರವೇ ಬೇರೆ. ಇಲ್ಲಿ ಆತ್ಮಪ್ರತಿಷ್ಠೆ ಅಥವ ತಾನು ಗೆದ್ದೆ ಎಂಬ ಅಹಂಕಾರವು ಕಂಡುಬರುತ್ತದೆ. ಕೋಪ ಮತ್ತು ಭಯವು ಇತರ ವಸ್ತು ಗಳ ಮೇಲೆ ನಮ್ಮ ಕಾರ್ಯಗಳನ್ನು ಪ್ರೇರೇಪಿಸುತ್ತವೆ. ಆದರೆ ಆತ್ಮ ಪ್ರತಿಷ್ಠೆಯಲ್ಲಿ ಪರಿಣಾಮವು ನಮ್ಮ ಮೇಲೆಯೆ ಇದೆ. ಮೀಸೆ ತಿರುವಿ, ತನ್ನ ಎದೆಯನ್ನು ತಾನು ತಟ್ಟಿಕೊಳ್ಳುವುದು ಈ ಬಗೆಯ ಹೆಮ್ಮೆಯ ಪ್ರಭಾವ. ಇದೇ ಮುಂದೆ **ಮದ, ಗರ್ವ, ದುರಹಂಕಾರ**ಗಳಿಗೆ ಎಡೆ ಕೊಡುತ್ತದೆ. ತನ್ನ ಕೀರ್ತಿಯನ್ನು ತಾನೆ ಹೊಗಳಿಕೊಂಡು ಇತರರನ್ನು ಹೀಯಾಳಿಸುವುದು ಈ ದುಷ್ಟವೃತ್ತಿಗಳ ಚಿಹ್ನೆ. ಇವು ತಾರುಣ್ಯಾವಸ್ಥೆ ಯಲ್ಲಿ ಪುಷ್ಟಿಗೊಳ್ಳುತ್ತವೆ. ಇದರಲ್ಲಿಯೂ ಪ್ರಜ್ಞೆ, ಮನೋವಿಕಾರ, ಅಹಂಕಾರಗಳಿದ್ದರೂ, ಕಡೆಯದು ಬಹಳವಾಗಿ ಕಾಣಿಸಿಕೊಳ್ಳುತ್ತದೆ.

ಪೋಟಾಪೋಟಿಯಲ್ಲಿ ತಾನು ಉನ್ನತ ಸ್ಥಾನವನ್ನು ಪಡೆಯಬೇಕೆಂಬ ಇಚ್ಛೆ ಇದೆ. ಇದು ಸಮಾಜಕ್ಕೆ ಬೇಕಾದ ಗುಣ. ಆದರೆ ಅದು **ಸ್ಪರ್ಧೆ** ಯಾಗಿದ್ದರೆ ಇತರರನ್ನು ತನ್ನ ಇಚ್ಛಾಪೂರ್ತಿಗೆ ಬಲಿಹಾಕಲು ನೋಡುವು ದಿಲ್ಲ. ಹಾಗೆ ಇತರರನ್ನು ಬಲಿಹಾಕುವ ಯತ್ನ ನಡಿಸಿದರೆ ಆಗ ಅದು **ಮತ್ಸರ**ವಾಗುತ್ತದೆ. ಸ್ವರಕ್ಷಣೆಯ ಕಾಂಕ್ಷೆ ಅಥವಾ ಆತ್ಮಪ್ರೇಮವು ಇವಕ್ಕೆ ಮೂಲವಾದರೂ ಇವೆರಡರ ಪರಿಣಾಮದಲ್ಲಿ ಅಜಗಜಾಂತರವಿದೆ. ತಾನು ಇನ್ನೊಬ್ಬನಿಗಿಂತಲೂ ಮಿಗಿಲಾಗಬೇಕೆಂಬ ಕುತೂಹಲವಿದ್ದರೆ ಪ್ರತಿ ಯೊಬ್ಬನು ತನ್ನ ಜ್ಞಾನ ಸಾಮರ್ಥ್ಯಗಳನ್ನು ಪ್ರಯೋಗಕ್ಕೆ ತಂದು, ಅದರಿಂದ ಸಮಾಜದ ಸುಖದ ಮೊತ್ತವು ಹೆಚ್ಚಾಗಲಿಕ್ಕೆ ಎಡೆಯಿದೆ. ತಾನು ಮಿಗಿ ಲಾಗಬೇಕೆಂದು ಯತ್ನಿಸುವ ವಿದ್ಯಾರ್ಥಿಯು ಚೆನ್ನಾಗಿ ಓದಿಕೊಂಡು ಕಷ್ಟ ಪಡುತ್ತಾನೆ. ಇದಕ್ಕೆ ಅವನಿಗೆ ಪ್ರೇರೇಪಣೆ ಸಿಗುವುದು ಈ ಸ್ಪರ್ಧೆಯ ಗುಣ ದಿಂದಲೇ. ವಿದ್ಯಾರ್ಥಿಯು ತಾನು ಮಿಗಿಲಾಗಬೇಕೆಂಬ ಅವಲಪಿಕೆಯಿಂದ ತುಂಬಿದರೆ ಅವನಲ್ಲಿ **ಉತ್ಸಾಹವು** ಬರುತ್ತದೆ; ಸಾಧನೆಗೆ ಪುಟವಿಟ್ಟಂತಾಗು ತ್ತದೆ. ಅದಕ್ಕೆ ಬದಲಾಗಿ ಆ ವಿದ್ಯಾರ್ಥಿಯು ತನ್ನೊಂದಿಗೆ ಯಾರೂ ಸರಿ

ಸಾಟಿಯಿಲ್ಲವೆಂದು ತೋರ್ಪಡಿಸುವುದಕ್ಕೆ ತನ್ನ ಪ್ರತಿಸ್ಪರ್ಧಿತರಿಗೆ ಏನೊಂದು ಬಗೆಯ ಹಾನಿಯಾಗುವಂತೆ ಮಾಡುವುದು ಕೊನೆಗೆ ಬಾಧಕವಾಗಿ ಇತ್ತಟ್ಟಿಗೂ ನಾಶಕಾರಕವಾಗುತ್ತದೆ. ದುರ್ಯೋಧನನು ಭೀಮನಿಗಿಂತ ತಾನು ಯುದ್ಧಪಾಂಡಿತ್ಯದಲ್ಲಿ ಮಿಗಿಲಾದವನೆಂದು ಕೀರ್ತಿಪಡೆಯಬೇಕೆಂದಿದ್ದನು. ಆದರೆ ಭೀಮನು ತನಗಿಂತಲೂ ಕೀರ್ತಿಯನ್ನು ಪಡೆದನೆಂದಾಗ ಅವನಿಗೆ ಸಹಿಸಲಾಗಲಿಲ್ಲ. ಭೀಮನನ್ನು ಹೇಗೂ ಕೊಲ್ಲಬೇಕೆಂದು ಹವಣಿಸಿದನು. ಅದು ಸಾಗದೆ ಕೊನೆಗೆ ಇಡೀ ಪಾಂಡವ ವಂಶವನ್ನೆ ನಾಶಪಡಿಸಬೇಕೆಂದು ಮತ್ಸರದಿಂದ ತುಂಬಿದನು. ಈ ಹೊಟ್ಟೆಯುರಿಯನ್ನು ತಗ್ಗಿಸಲು ಅವನ ಗರ್ವವು ಬಿಡಲಿಲ್ಲ. ಕೊನೆಗೆ ಪಾಂಡವರ ನಾಶವಾಗುವ ಬದಲಾಗಿ ಅವನ ಕುಲವೇ ಅಳಿಯಿತು. ಮತ್ಸರ ಈರ್ಷೆಗಳಲ್ಲಿ ಇತರರ ಸುಖವನ್ನು ನೋಡಿ, ಇತರರ ಗೆಲುವನ್ನು ನೋಡಿ ಸಹಿಸಲು ಬರುವುದಿಲ್ಲ. ಇಂಥ ಗುಣಗಳನ್ನು ಅಣಗಿಸಲು ನಾವು ಯತ್ನಿಸಬೇಕು. ಮತ್ತು ವಿಚಾರದಿಂದ ಅವುಗಳನ್ನು ನಿರ್ಬಂಧಿಸಿ ಬಿಡಬೇಕು. ಇದಕ್ಕಾಗಿ 'ತಾನು, ಪರರು' ಎಂಬ ಭೇದವೆಣಿಸದಂತೆ ಮತ್ತು ಇತರರ ಕಷ್ಟಗಳಲ್ಲಿ ಅನುತಾಪವು ಜಾಗೃತವಾಗುವಂತೆ ಅಭ್ಯಾಸ ಮಾಡಿಸಬೇಕು. **ಗರ್ವ** ಅಥವಾ **ಮದ**ದಲ್ಲಿ ಅಹಂಕಾರದ ವ್ಯಾಪ್ತಿ ಅಂದರೆ '**ನಾನು**' ಎಂಬ ಆತ್ಮಪ್ರತಿಷ್ಠೆಯೆ ಹೆಚ್ಚಾಗಿರುವುದರಿಂದ ಗರ್ವಕ್ಕೆ ಅಹಂಕಾರ ಎಂಬದನ್ನು ಸಮಾನಾರ್ಥದಲ್ಲಿ ವಾಡಿಕೆಯಾಗಿ ಪ್ರಯೋಗಿಸುತ್ತಾರೆ.

ಆತ್ಮನಿಗ್ರಹದಲ್ಲಿ ಎರಡು ವಿಧಗಳಿವೆ. ತನ್ನ ಸಾಮರ್ಥ್ಯದ ಮೇಲೆ ತನಗೆನೆ ವಿಶ್ವಾಸವಿಲ್ಲದೆ ಯಾವಾಗಲೂ ಕುಗ್ಗಿಕೊಂಡಿರುವುದು ಒಂದು ವಿಧಾನ. ಇದು ಬಹು ಬೇಗನೆ ಹೊಟ್ಟೆಕಿಚ್ಚಿಗೆ ಅವಕಾಶವನ್ನು ಕೊಡುತ್ತದೆ. ಆದರೆ ತನ್ನ ಅಹಂಕಾರ ಅಥವಾ ಗರ್ವದ ಮನೋವೃತ್ತಿಯ ಮೇಲೆ ವಿವೇಕದ ಪ್ರಯೋಗ ಮಾಡಿ ಆ ಅಹಂಕಾರವನ್ನು ದಮನ ಮಾಡಲು ಯತ್ನಿಸುವುದಕ್ಕೆ ಅತಿಶಯ ಬುದ್ಧಿವಿಕಾಸವು ಬೇಕಾಗುತ್ತದೆ. ಇದು ಇನ್ನೊಂದು ವಿಧಾನ. ಸುಖ ಬಂದಾಗ ಹಿಗ್ಗುವುದೂ ಕಷ್ಟ ಬಂದಾಗ ತಗ್ಗುವುದೂ ವಿವೇಕಿಯ ಲಕ್ಷಣವಲ್ಲವೆನ್ನುವುದರ ಅಭಿಪ್ರಾಯವು ಇದೇ. ಅಂಥವನು ನೆವನ ಮಾತ್ರದಲ್ಲಿ ಮನೋವಿಕಾರಗಳಲ್ಲಿ ಉಂಟಾಗುವ

ಈ ಏರು ತಗ್ಗುಗಳಿಗೆ ಅವಕಾಶ ಕೊಡದೆ ಸಮತಾವಾದವನ್ನು ಅವಲಂಬಿಸುತ್ತಾನೆ. ಅಂಥ ಮನೋವೃತ್ತಿಯು ಮುಂದೆ ಆತ್ಮನಿಗ್ರಹವೆಂದು ಸಾಮಾನ್ಯವಾಗಿ ಅನ್ನಿಸಿಕೊಳ್ಳುವ ಸ್ವಾರ್ಥತ್ಯಾಗವಾಗಿ ಪರಿಣಮಿಸುತ್ತದೆ.

ಈ ಆತ್ಮಪ್ರತಿಷ್ಠೆಯೂ ಆತ್ಮನಿಗ್ರಹವೂ ಇನ್ನೊಂದು ರೂಪನ್ನು ಕೆಲವೊಂದು ವೇಳೆ ಹೊಂದುತ್ತವೆ. ತನಗಿಂತ ಮೇಲಾಗಿದ್ದವರಿಗೆ ಮುಖಸ್ತುತಿಯನ್ನು ಮಾಡಿ ಅವರ ಕಾಲು ನೆಕ್ಕುವುದೂ ತನಗಿಂತ ಕೀಳಾಗಿದ್ದವರ ಕಡೆಗೆ ತಾತ್ಸಾರವನ್ನು ತೋರ್ಪಡಿಸಿ ಅವರಿಗೆ ತುಳಿಯುವುದೂ ಇವೆರಡು ಗುಣಗಳನ್ನು ಅನೇಕರಲ್ಲಿ ಕಾಣಬಹುದು. ಇಂಥ ಗುಣಗಳಿಗೆ ಅವಕಾಶ ಕೊಡದಂತೆ ಮಕ್ಕಳನ್ನು ತಿದ್ದುವುದು ಅಗತ್ಯ. ಅತ್ಮಪ್ರತಿಷ್ಠೆಯನ್ನು ವ್ಯಕ್ತಿಸ್ವಾತಂತ್ರ್ಯದ ಕಡೆಗೆ ತಿರುಗಿಸುವುದು ಶಿಕ್ಷಣ ಬಲದಿಂದಲೇ ಸಾಗಬೇಕಾಗಿದೆ. ಹಾಗೆ ಮಾಡದಿದ್ದರೆ ಇತರರನ್ನು ತಗ್ಗಿಸಿ ಅವರ ಸ್ವಾತಂತ್ರ್ಯವನ್ನು ಮುರಿಯಲಿಕ್ಕೆ ಅದು ಮುಂದರಿಸುತ್ತದೆ. ಇದು ಸಮಾಜಕ್ಕೆ ಅಹಿತಕಾರಿಯಾಗಿದೆ.

ಹುಟ್ಟುಗುಣಗಳು
(ಸಮಾಜಧಾರಕ).
13ನೆಯ ಅಧ್ಯಾಯ

ಮಾತೃಸ್ನೇಹ, ಪ್ರೇಮ, ದಯೆ ಇತ್ಯಾದಿ:– ಆತ್ಮಪ್ರೇಮ ಮೂಲಗುಣ. ಇದು ಆತ್ಮಪ್ರತಿಷ್ಠೆಯ ಮೂಲವಾಗಿದೆ ಎಂದು ಮೇಲೆ ಹೇಳಿದೆವು. ಅಂಥ ಆತ್ಮಪ್ರೇಮವು ಮೊದಲು ತನ್ನ ಸುಖ ತನ್ನ ದುಃಖ ಇವುಗಳನ್ನು ಮಾತ್ರ ಮನಸ್ಸಿನ ಮುಂದೆ ಇಡುತ್ತದೆ. ಆ ಮೇಲೆ ಅದು ತನಗೆ ಸುಖಕಾರಕವಾದ ವಸ್ತುವಿನ ಮೇಲೆ ಈ ಪ್ರೇಮದ ಪಾಶವನ್ನು ಬಿಗಿಯುತ್ತದೆ. ಆಗಲೆ ಹುಟ್ಟಿದ ಕರು ತಾಯಿಯಾದ ದನವು ನೆಕ್ಕುತ್ತಿದ್ದ ಹಾಗೆ

ಚೇತನಗೊಂಡು ಎದ್ದು ನಿಲ್ಲುತ್ತದೆ; ತನ್ನ ತಾಯಿಯ ಆಶ್ರಯವನ್ನು ಸೇರುತ್ತದೆ. ಆಗಲೇ ಅದು ತನ್ನ ತಾಯಿಯ ಹಾಲನ್ನು ಕುಡಿದು ಹೊಟ್ಟೆ ತಣಿದ ಮೇಲೆ ತನಗೆ ಇಂದ್ರಿಯ ತೃಪ್ತಿಮಾಡಿದ ತಾಯಿಯ ಮೇಲೆ ಪ್ರೇಮವಿಟ್ಟು ಅದನ್ನು ಒಂದಿಷ್ಟು ಅಗಲಿದಾಗ 'ಭೆ' ಎಂದು ಕೂಗುತ್ತದೆ. ಹಕ್ಕಿಯು ಮೊಟ್ಟೆ ಇಟ್ಟು ಮರಿಮಾಡಿದ ಮೇಲೆ ಆ ಮರಿಗಳು ತಾಯಿಯ ಗುಟುಕಿನಿಂದ ಆಹಾರೇಚ್ಛೆಯನ್ನು ತೃಪ್ತಿಮಾಡುತ್ತವೆ. ಆ ಮೇಲೆ ಆ ತೃಪ್ತಿಗೂ ಅದಕ್ಕೆ ಕಾರಕವಾದ ತಾಯಿಗೂ ಸಂಬಂಧ ಕಟ್ಟಿ ಬರೇ ಪೂರ್ವವಾಸನೆಯಿಂದಲೇ ತಮ್ಮ ತಾಯಿಯನ್ನು ಗುರುತಿಸಿ ಅದರೊಡನೆ ಆಹಾರ ಬೇಡಿ, ಪುಟ್ಟ ಕೊಕ್ಕುಗಳನ್ನು ಚಾಚುತ್ತವೆ. ಇದು ಸ್ವಭಾವತಃ ಆಗುವ ಋಣಾನುಬಂಧವೆನ್ನುತ್ತಾರೆ. ಕ್ರೂರವಾದ ಹುಲಿ ಬೆಕ್ಕು ಮುಂತಾದ ಪ್ರಾಣಿಗಳು ಕೂಡಾ ತಮ್ಮ ಮರಿಗಳು ಆಹಾರವನ್ನು ಸ್ವತಂತ್ರವಾಗಿ ಸಂಪಾದಿಸಲು ಶಕ್ತವಾಗುವ ವರೆಗೆ ಅವುಗಳ ಆರೈಕೆ ನೋಡಿ ಅವುಗಳ ಜೀವಕ್ಕೆ ಅಪಾಯ ಬಾರದಂತೆ ಅವನ್ನು ಸಿಕ್ಕಿದಲ್ಲಿ ಎತ್ತಿಕೊಂಡು ಹೋಗಿ ಅಡಗಿಸಿಡುತ್ತವೆ. ಈ ಬಗೆಯ ಮಾತೃಸ್ನೇಹವೇ ಹಕ್ಕಿಗಳಿಗೆ ಮೊಟ್ಟೆ ಇಡುವ ಕಾಲಕ್ಕೆ ಸರಿಯಾಗಿ ಮೆತ್ತಗೆ ತುಪ್ಪುಳದಿಂದ ಹಾಸಿದ ವಿಚಿತ್ರ ಗೂಡುಗಳನ್ನು ಕಟ್ಟಲಿಕ್ಕೂ ಮೊಟ್ಟೆಯೊಡೆಯುವ ವರೆಗೆ ಅವಕ್ಕೆ ಕಾವು ಕೊಡಲಿಕ್ಕೂ ಪ್ರೇರೇಪಣೆ ಮಾಡುತ್ತದೆ. ಅವುಗಳಿಗೆ ತಮ್ಮ ಕಾರ್ಯದ ಉದ್ದೇಶವೇನೆಂದು ಗೊತ್ತು ಹಚ್ಚುವ ಪ್ರಜ್ಞಾಶಕ್ತಿಯಿಲ್ಲವಾದ್ದರಿಂದ ಈ ಕೆಲಸವು ಬರೆ ಹುಟ್ಟುಗುಣವಾಗಿಯೆ ಸಾಗುತ್ತದೆನ್ನಬೇಕು. ಆದರೆ ಪಶುಗಳಲ್ಲಿಯೂ ಇತರ ಕ್ಷುಲ್ಲಕ ಪ್ರಾಣಿಗಳಲ್ಲಿಯೂ ಇದು ತಾತ್ಕಾಲಿಕವಾಗಿದ್ದು 'ಮರಿಗೆ ಇದು ತನ್ನ ತಾಯಿ, ತಾಯಿಗೆ ಇದು ತನ್ನ ಮರಿ' ಎಂಬ ಸ್ಮರಣೆಯು ಬಹಳ ಕಾಲದ ವರೆಗೆ ಇರುವುದಿಲ್ಲ.

ಈ ಪರಸ್ಪರ ಪ್ರೇಮವೇ ಮುಂದೆ **ಅನುತಾಪ, ಪ್ರೀತಿ, ದಯೆ, ಕೃತಜ್ಞತೆ, ಭೂತದಯೆ, ಸಹಾನುಭೂತಿ** ಮುಂತಾದ ರೂಪಗಳನ್ನು ಹೊಂದುತ್ತದೆ. **ಪ್ರೀತಿಯು** ಸಮಾನಸ್ಥಾನದಲ್ಲಿರುವವರೊಳಗೆ ಇರುವ ಪ್ರೇಮ. **ದಯೆ** ಅಥವಾ **ಕರುಣೆಯು** ತನಗಿಂತಲೂ ಕೀಳು ಸ್ಥಿತಿಯವರಿಗೆ ತೋರಿಸುವ ಪ್ರೇಮ. ಕೃತಜ್ಞತೆಯು ತನಗಿಂತಲೂ ಮೇಲು ತರಗತಿಯಲ್ಲಿದ್ದವರು

ತೋರಿಸಿದ ಪ್ರೇಮದ ಪ್ರತಿಯಾಗಿ ಕಾರ್ಯರೂಪದಿಂದ ತೋರಿಸುವ ಉಪಕಾರಸ್ಮರಣೆ. **ಅನುತಾಪವು** ಕಾರ್ಯರೂಪವಾಗಿ ತೋರಿಸಿಕೊಳ್ಳದಿದ್ದರೂ ಮನಸ್ಸಿನಲ್ಲಿ ಕರುಣೆಯನ್ನು ಜಾಗೃತಿ ಮಾಡುತ್ತದೆ. ಇವಿಷ್ಟರಲ್ಲಿಯೂ ತನ್ನ ಸುಖಕ್ಕೆ ಕಾರಕರಾದವರನ್ನು ಕುರಿತು ಭಾವನೆಯು ಒಳಗಿಂದೊಳಗೆ ಇದೆ. **ಭೂತದಯೆಯೆಂಬಲ್ಲಿ** ತೋರಿಸುವ ಪ್ರೇಮವು ಏನೊಂದು ಉಪಕಾರವನ್ನು ತನ್ನ ಕಾರ್ಯದ ಪ್ರತಿಯಾಗಿ ಹಾರೈಸುವುದಿಲ್ಲ. ಆದರೆ ಮನಸ್ಸನ್ನು ಇತರರ ಕಷ್ಟಗಳ ಕಡೆಗೆ ಆಕರ್ಷಿಸುತ್ತದೆ. **ಸಹಾನುಭೂತಿಯು** ಅಂಥ ಮನೋವೃತ್ತಿಯನ್ನು ಕಾರ್ಯರೂಪವಾಗಿ ತೋರಿಸಲಿಕ್ಕೆ ಮುಂದರಿಸುತ್ತದೆ.

ಈ ಗುಣಗಳು ಸಮಾಜಹಿತಕ್ಕಾಗಿಯೇ ಇರುವುದರಿಂದ ಅವನ್ನು ಮನಸ್ಸಿನಲ್ಲಿ ನೆಲೆಗೊಳಿಸುವುದಕ್ಕೆ ಯತ್ನಿಸಬೇಕು. ಯಾಕಂದರೆ ಇತರರ ಕಷ್ಟಗಳ ವೇದನೆಯು ನಮಗೆ ಉಂಟಾದರೂ ಮನೋವೃತ್ತಿಗಳು ಜಾಗೃತವಾಗದಿದ್ದರೆ ಅವು ನಮ್ಮನ್ನು ಯಾವುದೊಂದು ಕಾರ್ಯಕ್ಕೂ ಪ್ರೇರಿಸಲಾರವು. ಹಾಗಿದ್ದರೆ ಸಮಾಜದೊಳಗಿನ ಪರಸ್ಪರ ಸಂಬಂಧವು ಕಡಿದು ಹೋಗಿ ಮನುಷ್ಯನು ಪಶುವೃತ್ತಿಯನ್ನೆ ಕೈಕೊಳ್ಳುವಂತಾಗುವುದು.

ಸಂತಾನಾಭಿವೃದ್ಧಿ :— ಇದು ಮೊದಲು ಬರೆ ಇಂದ್ರಿಯೇಚ್ಛೆಯಾಗಿದ್ದು ಎಲ್ಲಾ ಪ್ರಾಣಿವರ್ಗದಲ್ಲಿಯೂ ಅವುಗಳ ಆಯುಷ್ಕಾಲದ ಕೆಲವಂಶ ದಾಟಿದ ಮೇಲೆ ಮಾತ್ರ ಕಾಣಿಸಿಕೊಳ್ಳುತ್ತದೆ. ಬೆನ್ನೆಲುಬುಳ್ಳ ಎಲ್ಲಾ ಜಂತುಗಳಲ್ಲಿ ಈ ಇಚ್ಛೆಯು ಪರಸ್ಪರ ಆಕರ್ಷಣಶಕ್ತಿಯಾಗಿ ರೂಪುಗೊಳ್ಳುತ್ತದೆ. **ಕಾಮ, ಮೋಹ** ಮುಂತಾದುವುಗಳು ಈ ಇಚ್ಛೆಯ ಬೇರೆ ಬೇರೆ ಸಂಸ್ಕಾರಗಳು. ಇವುಗಳಿಂದ ಸಂಸಾರದ ಮಮತೆಯು ಹುಟ್ಟಿ, ಸಂಸಾರ ಪಾಲನ ಕಾರ್ಯವು ಜರಗುತ್ತದೆ.

ಸಹವಾಸ :— ಕೆಲವು ಪ್ರಾಣಿಗಳು ಒಂಟಿಯಾಗಿರುವುದಿಲ್ಲ. ಅವು ಗುಂಪುಗುಂಪಾಗಿ ಜೀವಿಸುತ್ತವೆ. ಇದರಿಂದಲೇ ಅವು ಒಂಟಿಯಾಗಿ ಮಾಡಲಾರದ ಮತ್ತು ತಮ್ಮ ಶಕ್ತಿಗೆ ಮೀರಿದ ಕೆಲಸವನ್ನು ಮಾಡಲಾಪವು. ಇರುವೆಗಳು ಸಾಲು ಕಟ್ಟಿಕೊಂಡು, ಒಂದು ಕಡೆ ಚೆಲ್ಲಿದ ಸಕ್ಕರೆಯ ಅಣುಗಳನ್ನು ತಮ್ಮ ಬಿಲಕ್ಕೆ ಸಾಗಿಸುವುದೂ, ಕಾಗೆಗಳು ತಿಂಡಿ ಪದಾರ್ಥಗಳನ್ನು

ಕಂಡಾಗ ಕರ್ರೆಂದು ಕೂಗಿ ತಮ್ಮವರನ್ನೆಲ್ಲ ಕರೆಯುವುದೂ, ಜೇನು ಹುಳುಗಳು ಗುಂಪುಕೂಡಿ ಗೂಡುಕಟ್ಟಿ ವಾಸವಾಗಿರುವುದೂ ಈ ಶಕ್ತಿಯ ದೃಷ್ಟಾಂತಗಳು. ಕಡಲಿನಲ್ಲಿ ಹವಳಗಡ್ಡೆಗಳು ಇಂಥ ಅಲ್ಪ ಪ್ರಾಣಿಗಳ ವಿಚಿತ್ರ ರಚನೆಯಾಗಿವೆ. ಬೆನ್ನೆಲುಬುಳ್ಳ ಪ್ರಾಣಿಗಳಲ್ಲಿ ಜಾನುವಾರುಗಳು ಇದೇ ರೀತಿ ಗುಂಪು ಕೂಡಿ ಮೇಯುತ್ತವೆ. ಆನೆಗಳು ಹಿಂಡುಕಟ್ಟಿ ಸಂಚರಿಸುತ್ತವೆ. ಇನ್ನೂ ಇಂಥ ಹಲವು ದೃಷ್ಟಾಂತಗಳನ್ನು ಕೊಡಬಹುದು. ಇವುಗಳಿಗೆಲ್ಲ ಆತ್ಮರಕ್ಷಣೆಯ ಬಗ್ಗೆ ಸ್ವಾಭಾವಿಕವಾಗಿ ಗುಂಪುಕೂಡಿ ಜೀವಿಸುವ ಗುಣವು ಬಂದಿದೆ. ಆತ್ಮರಕ್ಷಣೆಯಗೋಸ್ಕರ ಒಮ್ಮೆ ಜತೆಕೂಡಿ ಉಂಟಾದ ಅನುಭವವು ಒಂದು ಬಗೆಯ ಅನುತಾಪವನ್ನು ಈ ಪ್ರಾಣಿಗಳಲ್ಲಿ ಸೂಕ್ಷ್ಮರೂಪವಾಗಿ ಬೇರೂರಿಸಿದೆನ್ನಬೇಕು.

ಮನುಷ್ಯ ಪ್ರಾಣಿಯಲ್ಲಂತೂ ಮೊದಲು ಸ್ವಂತ ಸುಖದ ಇಚ್ಛೆಯಿಂದ ಬಹು ಬೇಗನೆ ಅಂಕುರಿಸಿದ ಈ ಗುಣವು ಮುಂದೆ ಸಮಾಜವು ಒಟ್ಟುಕೂಡಿ ಇರುವುದಕ್ಕೂ ದಾರಿಯಾಗಿದೆ. ಒಂಟಿಯಾಗಿ ಜೈಲಿನಲ್ಲಿ ವಾಸಮಾಡುವಂತೆ ಕೈದಿಯನ್ನು ಇತರರಿಂದ ಪ್ರತ್ಯೇಕಿಸುವ ನಿಮಿತ್ತ ಅಂಥಾ ಕೈದಿಗೆ ಆಗುವ ಯಾತನೆಯು ಸಾಮಾನ್ಯವಲ್ಲ. ಇದರಲ್ಲಿ ಒಂಟಿಯಾಗಿದ್ದರೆ ತನಗೆ ಎಂಥ ಕಷ್ಟಗಳು ಬಂದಾವೊ ಎಂಬ ಮುಂದಿನ ವಿಚಾರವೂ ಭಯವೂ ಅಡಗಿವೆ. 'ಹತ್ತು ಜನರ ಸಾವು ಒಂದು ಮದುವೆಗೆ ಸಮ' ಎಂಬ ಗಾದೆಯಲ್ಲಿ ಕಷ್ಟಗಳು ಹಲವರಿಗೆ ಏಕಕಾಲದಲ್ಲಿ ಒಮ್ಮೆಗೆ ಬಂದು ಒದಗಿದರೂ ಪರಸ್ಪರ ಅನುತಾಪನಿಂದ ಈ ಕಷ್ಟಗಳ ಕಾಠಿಣ್ಯವು ಕಡಿಮೆಯಾಗುತ್ತದೆಂಬ ಭಾವನೆಯಿದೆ. ಹಲವು ಮಂದಿ ಕೂಡಿದರೆ ಒಂದು ರಸ್ತೆಯಲ್ಲಿ ಕೀರ್ತನೆಗಳನ್ನು ಹಾಡುತ್ತಾ ತಾಳ ಹಾಕುತ್ತ ನರ್ತನ ಮಾಡುವುದಕ್ಕೆ ಹಿಂಜರಿಯುವುದಿಲ್ಲ. ಒಂಟಿಯಾಗಿ ಯಾವನೊಬ್ಬನು ತಿರುಕನಲ್ಲದವನು ಹಾಗೆ ಮಾಡಲಾರನು. ಕುಡಿಕನು ಒಂಟಿಯಾಗಿ ಕುಡಿಯುವುದಕ್ಕಿಂತಲೂ ತನ್ನ ಮಿತ್ರರನ್ನೊಡಗೂಡಿ ಮಧುಸೇವನೆಗೆ ಆಶಿಸುತ್ತಾನೆ. ಈ ಬಗೆಯ ಸಹವಾಸಗುಣ ಇದ್ದುದರಿಂದಲೆ ಮನುಷ್ಯನು ಕಾಡಾಡಿಯಾಗಿ ಇರುವ ಸ್ಥಿತಿಯನ್ನು ತೊಲಗಿ, ಮೊದಲು ಗ್ರಾಮವಾಸಿಯಾಗಿಯೂ ಅನಂತರ ನಗರವಾಸಿಯಾಗಿಯೂ ಇರಲು ಸಾಧಿಸಿದನು. ಒಂದು ನಾಟಕ ಮಾಡು

ವಾಗ ಒಂದು ರಾತ್ರಿಯ ದೃಶ್ಯಕ್ಕೆ 5,000 ರೂಪಾಯಿ ಪಾರಿತೋಷಕ ಕೊಡುತ್ತೇನೆಂದರೂ ಬರೀ ಬೆಂಚು ಕುರ್ಚಿಗಳ ಎದುರಿನಲ್ಲಿ ಆಡಿ ತೋರಿಸಲು ಮನಸ್ಸು ಬಾರದು. ತನ್ನ ಕೃತ್ಯಗಳಿಂದ ಇತರರ ಅಭಿವಂದನೆಗೆ ಪಾತ್ರರಾಗಬೇಕೆಂಬ ಕಾಂಕ್ಷೆಯು ಈ ಸಹವಾಸ ಗುಣದ ಫಲವಾಗಿದ್ದು ಅದಕ್ಕೆ ಇನ್ನೂ ಪುಷ್ಟಿಕೊಡುತ್ತದೆ. ಅನ್ಯರ ಹೊಗಳಿಕೆ ಅಥವಾ ತೆಗಳಿಕೆಗೆ ಮನಸ್ಸು ಹೊಂದಿಕೊಂಡು ಜೀವಿಸುವುದು ಮಧ್ಯಮ ತರಗತಿಯ ಧ್ಯೇಯವಾಗಿದ್ದರೂ ಅದು ಸಮಾಜದ ಕಾರ್ಯಗಳಿಗೆ ಸಹಕಾರಿಯಾಗುತ್ತದೆ; ಉತ್ತೇಜಕವಾಗುತ್ತದೆ. ಈ ಶಕ್ತಿಯನ್ನು ಮಕ್ಕಳಲ್ಲಿ ವರ್ಧಿಸುವ ಕೆಲಸವು ಕಷ್ಟತರದ್ದಲ್ಲ. ಮಕ್ಕಳು ಯಾವಾಗಲೂ ಒಂಟಿಯಾಗಿ ಆಡಲು ಇಚ್ಛಿಸುವುದಿಲ್ಲ. ಅವುಗಳಿಗೆ ಇತರ ಮಕ್ಕಳೊಡನೆ ಒಡನಾಟಕೊಂಡಿರಲು ತುಂಬಾ ಇಷ್ಟವಿದೆ. ಇತರರ ಮೆಚ್ಚಿಗೆಗೆ ಪಾತ್ರನಾಗಬೇಕೆಂಬ ಸದಿಚ್ಛೆ ಕಂಡುಬರುತ್ತದೆ. ಇದು ಸ್ಪರ್ದೆಗೂ ಸಹಾಯಕವಾಗುತ್ತದೆ. ಈ ಸಹವಾಸನಿಂದ ದುಷ್ಟಗುಣಗಳು ಅವುಗಳಲ್ಲಿ ಸೇರಿಕೊಳ್ಳದಂತೆ ಮಾತ್ರ ಎಚ್ಚರವಿಡಬೇಕಾಗಿದೆ. ಬಗೆಬಗೆಯ ಆಟಗಳೆ ಈ ಸಹವಾಸ ಗುಣವನ್ನು ಬಲಪಡಿಸುವ ಉಪಾಯಗಳು.

ಹುಟ್ಟುಗುಣಗಳು

(ವಾತಾವರಣಾನು ಬಂಧ)

14ನೆಯ ಅಧ್ಯಾಯ



ಮೇಲಿನವುಗಳೆಲ್ಲ ವ್ಯಕ್ತಿಗೂ ಸಮಾಜಕ್ಕೂ ಇರುವ ಸಂಬಂಧಕ್ಕೆ ಅನುಕೂಲ ಅಥವಾ ಪ್ರತಿಕೂಲವಾದ ಮನೋವೃತ್ತಿಗಳು. ಇನ್ನೂ ವ್ಯಕ್ತಿಗೂ ಅವನ ಸುತ್ತುಮುತ್ತಲಿನ ಆವರಣದಲ್ಲಿರುವ ವಸ್ತು ನೋಟಗಳಿಗೂ ಸಂಬಂಧಿಸುವ ವೃತ್ತಿಗಳು ಕೆಲವಿವೆ. ಅವನ್ನು ಟೀಕಿಸೋಣ.

ಕುತೂಹಲ :— 'ಇದು ಏನು? ಅದು ಏನು? ಏನು ಸಮಾಚಾರ?' ಎಂಬ ಪ್ರಶ್ನೆಗಳು ಒಬ್ಬರನ್ನೊಬ್ಬರು ಕಂಡಾಗ ಹೊರಡುತ್ತಲೆ ಇವೆ.

ಮಕ್ಕಳು ತಾವು ಕಂಡ ಪ್ರತಿಯೊಂದು ವಸ್ತು ಅಥವಾ ನೋಟದ ವಿಷಯ ದಲ್ಲಿ ಅನುಭವ ಪಡೆಯಲಿಕ್ಕೆ ಕಾಂಕ್ಷಿತರಾಗಿರುವರು. ಇದು ಅವರಲ್ಲಿರುವ ಸ್ವಾಭಾವಿಕ **ಕುತೂಹಲ.** ಹೊಸತೊಂದು ಸಂಗತಿಯು ನಮ್ಮ ಇಂದ್ರಿಯ ಗೋಚರವಾದೊಡನೆ ಅದು ಏನೆಂದು ಕೇಳದೆ ನಮಗೆ ಮನಸ್ಸು ಹಿಡಿಯು ವುದಿಲ್ಲ. ಜ್ಞಾನಕ್ಕೆ ಈ ಬಗೆಯ ಕುತೂಹಲವೇ ತಳಗಲ್ಲು. ಪ್ರಶ್ನೆಯೇ ಅದರ ಬಾಹ್ಯ ಪ್ರತಿಕ್ರಿಯೆ. ಬಗೆಬಗೆಯ ಶಾಸ್ತ್ರಗಳ ಅಭಿವೃದ್ಧಿಯಾಗಲಿಕ್ಕೆ ಮನುಷ್ಯನಲ್ಲಿ ಸ್ವಾಭಾವಿಕವಿರುವ ಈ ಕುತೂಹಲವೇ ಕಾರಣವಾಯಿತು.

ಕೆಲವು ಪ್ರಾಣಿಗಳಲ್ಲಿಯೂ ಈ ಬಗೆಯ ಇಚ್ಛೆಯಿದೆ. ಅಪೂರ್ವ ವಾದ ಒಂದು ಶಬ್ದವನ್ನು ಕೇಳಿದೊಡನೆ ಮೇಯುವ ಎತ್ತು ಕುತ್ತಿಗೆಯನ್ನು ಎತ್ತಿ, ಕಿವಿಗಳನ್ನು ನೆಟ್ಟಗೆ ಮಾಡಿ ಸ್ತಬ್ಧವಾಗಿ ನಿಲ್ಲುತ್ತದೆ. ಬೆಕ್ಕು ಮೊದ ಲಾದ ಪ್ರಾಣಿಗಳು ತಮ್ಮ ಮೀಸೆಗಳಿಂದ ಸ್ಪರ್ಶಿಸಿ, ನೂತನ ವಸ್ತುವೇ ನೆಂದು ಪರಿಚಯ ಮಾಡಿಕೊಳ್ಳುತ್ತವೆ. ಮೂಲತಃ ಇಂಥ ಇಚ್ಛೆಯು ಈ ಪ್ರಾಣಿಗಳಲ್ಲಿ ತಮಗೆ ಆ ವಸ್ತುವಿನಿಂದ ಏನು ಅಪಾಯ ಬರುವುದೊ ಎಂಬ ಕಾರಣದಿಂದ ಉದ್ಭವಿಸಿರುತ್ತದೆ. ಸಣ್ಣ ಮಗು ತನ್ನ ದೃಷ್ಟಿಯ ಮೇಲೆ ತನ್ನ ಎದುರಾಗಿ ಅತ್ತಿತ್ತ ಚಲಿಸುವವರ ನೆರಳು ಬಿದ್ದೊಡನೆ ಕಣ್ಣವೆ ಇಕ್ಕದೆ ನೋಡುತ್ತಿದೆ. ಕೆಲವು ದಿನಗಳಲ್ಲಿ ಆ ನೆರಳು ಚಲಿಸುವ ಕಡೆಗೆ ತನ್ನ ದೃಷ್ಟಿಯನ್ನು ತಿರುಗಿಸುವುದು. ಒಮ್ಮೆ ಅದಕ್ಕೆ ತನ್ನ ಸುಖಕ್ಕೂ ಈ ನೆರಳಿಗೂ ಸಂಬಂಧ ಕಟ್ಟುವ ಜ್ಞಾನವುಂಟಾದ ಮೇಲೆ ಅಪರಿಚಿತರನ್ನು ಕಂಡಾಗ ತಾಯಿ ಅಥವಾ ದಾದಿ ಎಂದು ಅದು ಭ್ರಮಿಸುತ್ತದೆ.

ಈ ಶಕ್ತಿಯು ಉಪಕಾರಿಯಾಗುವುದು ಅದರ ಸದುಪಯೋಗದ ಮೇಲೆ ಹೊಂದಿರುತ್ತದೆ. ಕೆಲವು ಮಕ್ಕಳು ತಮಗೆ ಸಿಕ್ಕಿದ ವಸ್ತುಗಳನ್ನು ಕಾಲುಕೀಲಾಗಿ ವಿಂಗಡಿಸುತ್ತವೆ ಎಂದು ನಾವು ದೂರಿಡುವಾಗ ಮಕ್ಕಳಲ್ಲಿ ಈ ಬಗೆಯ ಕುತೂಹಲದ ಗುಣವಿದೆ, ಅದನ್ನು ತೃಪ್ತಿಪಡಿಸಲು ಆ ಮಗು ಯತ್ನಿಸುತ್ತದೆ ಎಂಬದನ್ನು ನಾವು ಸ್ಮರಣೆಗೆ ತರುವುದಿಲ್ಲ. ಇದರ ಸದುಪ ಯೋಗ ಮಾಡುವಂತೆ ವ್ಯವಸ್ಥೆ ಮಾಡುವುದು ಹಿರಿಯರ ಮತ್ತು ಉಪಾ ಧ್ಯಾಯರ ಕರ್ತವ್ಯವಿದೆ. ಮಕ್ಕಳನ್ನು ಗದರಿಸಿ ಅವುಗಳ ಪ್ರಶ್ನೆಗಳು ಬಾರ ದಂತೆ ಮಾಡಿದರೆ, ಮಕ್ಕಳಲ್ಲಿರುವ ಆ ಶಕ್ತಿಯು ಸಾಕಷ್ಟು ವ್ಯವಸಾಯ

ವಿಲ್ಲದ್ದರಿಂದ **ಸಂಕುಚಿತವಾಗಿ** ಹೋಗುತ್ತದೆ. ಆದರೆ ಕೆಲವು ಮಕ್ಕಳಲ್ಲಿ ಆ ಗುಣದ ವ್ಯವಸ್ಥೆಯಿಲ್ಲದುದರಿಂದ ಕಾಡುಗಿಡದಂತೆ ಬೆಳೆದು ದುಷ್ಪರಿಣಾಮವನ್ನೂ ಉಂಟುಮಾಡುತ್ತದೆ. ಇದು ಇತರರ ಕಾಗದಪತ್ರಗಳನ್ನು ಗುಟ್ಟಾಗಿ ತೆಗೆದು ಓದಿ ನೋಡುವುದು, ಅವರಿಲ್ಲದ ವೇಳೆಯಲ್ಲಿ ಅವರ ವಸ್ತು ಒಡಿವೆಗಳಿಗೆ ಕೈಹಾಕುವುದು ಮತ್ತು ದುರುಪಯೋಗ ಮಾಡುವುದು, ಇತರರು ಗುಟ್ಟಿನಲ್ಲಿ ಮಾತಾಡುವಾಗ ಓರೆಯಾಗಿ ನಿಂತು ಕಿವಿಕೊಡುವುದು ಮುಂತಾದ ದುರ್ಗುಣಗಳಿಗೆ ತವರುಮನೆಯಾಗಿದೆ. ಇದು ಅಹಿತಕಾರಿಯಾದ ವರ್ತನವಾದ್ದರಿಂದ ಅಣಗಿಸಿಬಿಡಲು ಯತ್ನಿಸಬೇಕು. ಆದರೆ ಈ **ಕುತೂಹಲವನ್ನು** ಸರಿಯಾಗಿ ಬೆಳೆಸಿದರೆ ಅದು ಜ್ಞಾನಾರ್ಜನೆಗೆ ಅನುಕೂಲನಾದ ಹಸ್ತಕನಾಗುತ್ತದೆ. ಹಳ್ಳಿಯ ಮನುಷ್ಯನೊಬ್ಬನು 'ಭೂಮಿಯು ಸೂರ್ಯನ ಸುತ್ತಲೂ ತಿರುಗುತ್ತದೆ' ಎಂಬ ಮಾತನ್ನು ಕೇಳಿದೊಡನೆ ಚಕಿತನಾಗಬಹುದು. ನಮ್ಮ ಮಾತನ್ನು ನಂಬದೆ ಇರಬಹುದು. ಅದನ್ನು ಸಮರ್ಥಿಸುವುದಕ್ಕೆ ಕಾರಣಗಳನ್ನು ತಿಳಿಯದೆ ಅಥವಾ ಗ್ರಹಿಸುವ ಶಕ್ತಿಯಿಲ್ಲದೆ ಬೆರಗಾಗಬಹುದು. ಇಲ್ಲಿ **ಸಂದೇಹವು** ಅಥವಾ **ಸಂಶಯವು** ಮೊದಲನೆ ಸಂಗತಿಯಲ್ಲಿ ಅವನು ನಂಬದೆ ಇರುವುದಕ್ಕೆ ಕಾರಣ. ಅವನ ಕಲ್ಪನೆಗಳನ್ನು ಸಂಯೋಜನೆ ಮಾಡುವಾಗ 'ಒಂದು ವಸ್ತು ಆಧಾರವಿಲ್ಲದೆ ನಿಲ್ಲಲಾರದು; ಭೂಮಿಯು ಅಂತರಿಕ್ಷದಲ್ಲಿ ಚಲಿಸವುದಿದ್ದರೆ ಅದು ಬಿದ್ದುಹೋಗದ ಹಾಗೆ ಆಧಾರವು ಯಾವುದು' ಎಂಬ ಪ್ರಶ್ನೆಗೆ ಅವನು ಉತ್ತರ ಕಂಡುಹಿಡಿಯಲಾರದವನಾದನು. 'ಭೂಮಿಯು ಆಕರ್ಷಣ ಶಕ್ತಿಯ ಬಲದಿಂದ ತನ್ನ ಪಥವನ್ನು ಬಿಟ್ಟುಹೋಗಲಾರದು' ಎಂದು ನಾವು ಹೇಳಿದರೆ, ಈ ಅಕರ್ಷಣ ಶಕ್ತಿಯ ಕಲ್ಪನೆಯೇ ಇಲ್ಲದವನು ಅದು ಒಂದು ಬಲವಾದ ಹಗ್ಗವೇ ಎಂದು ಊಹಿಸುವನು. ಯಾತಕ್ಕಂದರೆ ಒಂದು ಹಗ್ಗಕ್ಕೆ ಒಂದು ಕಲ್ಲನ್ನು ತೂಗಿಸಿ ಅದನ್ನು ಬೆರಳಿನ ಸುತ್ತಲೂ ಸುತ್ತುವಂತೆ ಮಾಡಿದರೆ ಆ ಬೆರಳಿಗೆ ಆ ಹಗ್ಗದ ಇನ್ನೊಂದು ತುದಿಯನ್ನು ಕಟ್ಟಿರುವುದರಿಂದ ಅವನು ಆ ಕಲ್ಲು ಕೈಯ ಹಗ್ಗವನ್ನು ಬಿಟ್ಟು ದೂರಕ್ಕೆ ಹಾರಿಹೋಗಲಾರದು ಎಂಬದನ್ನು ಪ್ರತ್ಯಕ್ಷವಾಗಿ ಕಾಣುತ್ತಾನೆ. ಆದ್ದರಿಂದ ಆಕರ್ಷಣಶಕ್ತಿಯೆಂದರೆ ಅದು ಎಷ್ಟು

ದಪ್ಪವಾದ ಹಗ್ಗವಾಗಬಹುದು ಎಂಬಿತ್ಯಾದಿ ಪ್ರಶ್ನೆಗಳು ಅವನ ಮನಸ್ಸಿಗೆ ಬರುವವು. ಆದರೆ ನಮ್ಮ ಪಾಂಡಿತ್ಯದ ಕಡೆಗೆ ಇರುವ ವಿಶ್ವಾಸದ ಬಲದಿಂದ ಅವನು ತನಗೆ ಆ ಮಾತಿನ ಸಂಪೂರ್ಣ ಕಲ್ಪನೆಯಾಗದಿದ್ದರೂ ಅದನ್ನು **ಆಶ್ಚರ್ಯ**ದಿಂದ ಒಪ್ಪಿಕೊಳ್ಳುತ್ತಾನೆ. **ಆಶ್ಚರ್ಯ**ವೆಂದರೆ ಯಾವುದೊಂದು ನೋಟ ಅಥವಾ ಇನ್ನಿತರ ಇಂದ್ರಿಯ ಗೋಚರವಾದ ಸಂಸ್ಕಾರದ ಕಾರಣವನ್ನು ಗೊತ್ತುಹಚ್ಚಲಾರದೆ ಬೆರಗಾಗಿರುವುದೇ. ಅವರೆ ಅವನ ಕಲ್ಪನಾಶಕ್ತಿಯು ಬೆಳೆಯುತ್ತಲಿದ್ದರೆ ಅವನು ಆ ಆಶ್ಚರ್ಯದಿಂದ ಸುಮ್ಮನಾಗದೆ ಅದರ ಗುಟ್ಟುತಿಳಿಯಬೇಕೆಂದು ಪ್ರಯತ್ನಪಡುತ್ತಾನೆ. ಇದು **ಕುತೂಹಲ.** ಇದು ಮುಂದೆ **ಸಂಶೋಧನ ಶಕ್ತಿ**ಯಾಗಿ ಪರಿಣಮಿಸುತ್ತದೆ. ನ್ಯೂಟನ್ನನ ಮೊದಲೂ ಮೇಲಕ್ಕೆ ಬಿಸಾಡಿದ ಕಲ್ಲು ಕೆಳಕ್ಕೆ ಬಂದು ಬೀಳುತಿತ್ತು, ಈಗಲೂ ಬೀಳುತ್ತಿದೆ. ಆದರೆ ಭೂಮಿಯ ಆಕರ್ಷಣ ಶಕ್ತಿಯನ್ನು ಈ ಒಂದೇ ದೃಷ್ಟಾಂತದಿಂದ ಸಾಧನೆಮಾಡಿ ಗೊತ್ತುಹಚ್ಚಿದ ಸಂಶೋಧನ ಶಕ್ತಿಗೆ ಅವನ ಕುತೂಹಲವು ಕಾರಣವಾಯಿತು. ಅದೇ ರೀತಿಯಲ್ಲಿ ವೊಟ್ಟ್, ಹರ್ಶಲ್, ಡಾ। ಬೋಸ್ ಮುಂತಾದ ಹಲವು ಮಹಾ ವಿದ್ವಾಂಸರು ಪ್ರಕೃತಿಯ ಸಂಶೋಧನೆ ಮಾಡುತ್ತಿರುವುದಕ್ಕೆ ಇವರಲ್ಲಿ ವ್ಯವಸ್ಥಿತವಾಗಿ ಬೆಳೆದ ಕುತೂಹಲವು ಸಹಾಯಕವಾಯಿತು. ಕೆಲವೊಂದು ವೇಳೆ ಆಶ್ಚರ್ಯವು ಭಯೋತ್ಪಾದಕವಾಗುವುದುಂಟು. ಸೂರ್ಯ ಗ್ರಹಣದ ಕಾರಣವನ್ನು ತಿಳಿಯದ ಮೂಢನು 'ಇದೇನಾಶ್ಚರ್ಯ! ನಡು ಹಗಲಲ್ಲಿ ಸೂರ್ಯನ ಪ್ರಕಾಶವು ಮಂದವಾಯಿತು. ಇದು ಏನೊ ಕಂಟಕ ಸೂಚಕವು' ಎಂದೆನ್ನುವಾಗ ಕಾರಣ ತಿಳಿಯದ ಒಂದು ಸಂಗತಿಯು ಆತನಲ್ಲಿ ಭಯವನ್ನು ಹಚ್ಚಿ ಬಿಟ್ಟಿತು. ಅದೇ ಆಶ್ಚರ್ಯವು ಕಾರಣವೈಚಿತ್ರ್ಯವನ್ನು ಕಲ್ಪಿಸಿಕೊಳ್ಳಲು ಶಕ್ತವಾದೊಡನೆ ಅದರ ಪ್ರಭಾವಕ್ಕೆ ಮೆಚ್ಚಿ ತಲೆದೂಗಿಸುತ್ತದೆ. ಒಂದು ಒರೆರಿ (Orrery) ಅವನ ಮುಂದಿಟ್ಟು ಭೂಮಿ ಚಂದ್ರರ ಚಲನೆಗಳನ್ನು ಮಾಡಿತೋರಿಸಿ, ಅಲ್ಲಿ ಬೀಳುವ ನೆರಳುಗಳಿಂದ ಗ್ರಹಣವಾಗುತ್ತದೆಂದು ವಿವರಿಸಿದಾಗ, ಅದು ಅವನ ಕಲ್ಪನಾಶಕ್ತಿಗೆ ಗ್ರಾಹ್ಯವಾಗುತ್ತದೆ. ಈ ಕುತೂಹಲವನ್ನು ಸೃಷ್ಟಿವಿಜ್ಞಾನದ ಕಡೆಗೆ ತಿರುಗಿಸಿದರೆ ಸೃಷ್ಟಿವೈಚಿತ್ರ್ಯದ ಅನುಭವದಿಂದ ಸೃಷ್ಟಿಯ ಕರ್ತನಾದವನ ಬಾಹ್ಯ ವಿಕಾರಗಳಿಂದ ಅವನ ಸ್ವರೂಪವನ್ನು ಕಲ್ಪಿಸಿಕೊಳ್ಳಲಿಕ್ಕೂ ಅವನ ಸಾಮರ್ಥ್ಯ

ವನ್ನೂ ವ್ಯವಸ್ಥೆಯನ್ನೂ ನಮ್ಮ ಬುದ್ಧಿಗೆ ಸ್ಫೂರ್ತಿಯಾದ ಹಾಗೆ ಅರಿತು ಆತನನ್ನು ಕೊಂಡಾಡಲಿಕ್ಕೂ ಪ್ರೇರಕವಾಗುತ್ತದೆ. ಆದ್ದರಿಂದ ಹಿರಿಯರೂ ಉಪಾಧ್ಯಾಯರೂ ಮಕ್ಕಳಲ್ಲಿ ಈ ಬಗೆಯ ಕುತೂಹಲಕ್ಕೆ ಸರಿಯಾದ ಮಾರ್ಗವನ್ನು ತಿದ್ದಿಕೊಡಬೇಕಾದುದು ಅಗತ್ಯ.

ಸ್ವಾರ್ಥ:—ಒಂದು ಮಗುವಿನ ಕೈಯಲ್ಲಿ ಒಂದು ರೂಪಾಯಿಯನ್ನು ಕೊಡಿರಿ. 'ಅದರ ಬೆಲೆ ಏನು, ಅದರ ಉಪಯೋಗವೇನು' ಎಂದು ತಿಳಿಯದ ಮಗು ಕೂಡಾ ಆ ರೂಪಾಯಿಯನ್ನು ತಾನಾಗಿ ಹಿಂತಿರುಗಿ ಕೊಡಲಾರದು. ಒಮ್ಮೆ ಕೊಡುವಂತೆ ಕೈ ಚಾಚಿದರೂ ಆ ಕೈಯನ್ನು ಹಿಂದಕ್ಕೆ ಎಳೆಯುತ್ತದೆ. ಅದಕ್ಕೆ ಇನ್ನೊಂದು ವಸ್ತುವನ್ನು ತೋರಿಸಿದೊಡನೆ ಅದನ್ನು ಎತ್ತಿಕೊಳ್ಳಲಿಕ್ಕೆ ಇನ್ನೊಂದು ಕೈಯನ್ನು ಚಾಚುತ್ತದೆ. ಆದರೂ ಮೊದಲಿನ ರೂಪಾಯಿ ಯನ್ನು ಬಿಟ್ಟು ಕೊಡಲೊಲ್ಲದು. ಸ್ವಲ್ಪ ಹೊತ್ತಿನ ಮೇಲೆ ಅದು ತನ್ನ ಮನಸ್ಸನ್ನು ಬೇರೆ ಕಡೆಗೆ ತಿರುಗಿಸಿದರಿಂದ ಈ ವಸ್ತುಗಳ ವಿಸ್ಮೃತಿಯು ಅದಕ್ಕೆ ಉಂಟಾಗುತ್ತದೆ. ಆಗ ಆ ವಸ್ತುಗಳ ನೆನವರಿಕೆಯೇ ಪುನಃ ಆಗು ವುದಿಲ್ಲ. ಇದು ಮಗುವಿನಲ್ಲಿ ಉಂಟಾದ ಸ್ವತ್ತಿನ ಇಚ್ಛೆ. ಯಾವುದೊಂದು ಇಚ್ಛಾಪೂರ್ತಿಗೆ ಕಾರಣವಾದ ವಸ್ತು ತನ್ನದಾಗಿ ಇಟ್ಟುಕೊಳ್ಳಬೇಕೆಂಬ ಇಚ್ಛೆಗೆ ಸ್ವಾರ್ಥ ಎನ್ನುತ್ತಾರೆ. ಇದು ಗಂಡು ಮಕ್ಕಳಲ್ಲಿ ಹೆಣ್ಣು ಮಕ್ಕ ಳಿಗಿಂತ ಹೆಚ್ಚಾಗಿ ಕಂಡು ಬರುತ್ತದೆ. ಕಾರಣವೇನೆಂದರೆ ಅನಾದಿಯಿಂದಲೂ ಸ್ವತ್ತಿನ ಯಜಮಾನನಾಗುವ ಭಾರವು ಪುರುಷನದಾಗಿತ್ತು. ಅದನ್ನು ಕುಟುಂಬದ ಉಪಯೋಗಕ್ಕೆ ಹಚ್ಚುವ ಕೆಲಸವು ಸ್ತ್ರೀಯದಾಗಿತ್ತು. ಸಣ್ಣ ಮಕ್ಕಳು ನಮ್ಮ ದೃಷ್ಟಿಯಲ್ಲಿ ನಿಷ್ಪ್ರಯೋಜನಕವೆಂದೆನ್ನಿಸುವ ಹಲವು ವಸ್ತು ಗಳನ್ನು ತಮ್ಮ ಪೆಟ್ಟಿಗೆಯಲ್ಲೊ ಚೀಲದಲ್ಲೋ ತುಂಬಿಸಿಕೊಳ್ಳುವರು. ಇವು ಗಳ ಪ್ರಯೋಜನವೇನೆಂದು ಅವಕ್ಕೆ ತಿಳಿಯದು. ಸಿಕ್ಕಿದ್ದನ್ನು ತನ್ನದಾಗಿ ಮಾಡಿಕೊಳ್ಳಬೇಕೆಂಬ ಈ ಸ್ವಾಭಾವಿಕ ಇಚ್ಛೆಯು ಈ ವಸ್ತು ಸಂಗ್ರಹಕ್ಕೆ ದಾರಿಯಾಯಿತು. ಪ್ರಾಜ್ಞನಾದ ಉಪಾಧ್ಯಾಯನಾಗಲಿ ರಕ್ಷಕನಾಗಲಿ ಮಕ್ಕಳ ಈ **ಸಂಗ್ರಹಶಕ್ತಿ**ಯನ್ನು ಸದುಪಯೋಗಕ್ಕೆ ಹಾಕಬಹುದು. ಬಾಲ್ಯದಿಂದಲೂ ವಸ್ತುಗಳನ್ನು ಸಂಗ್ರಹಿಸುವುದು, ಅವನ್ನು ಹಾಳಾಗ ದಂತೆ ಕ್ರಮವಾಗಿ ಇಡುವುದು, ಇವು ಒಳ್ಳೆ ಗುಣಗಳು. ಇವನ್ನು ಅಭ್ಯಾಸ ದಿಂದ ಪುಷ್ಟಿಗೊಳಿಸಬೇಕು.

ಈ ಸ್ವಾರ್ಥವು ಹಲವು ಸಲ ಇತರರ ಸ್ವತ್ತನ್ನು ಕಿತ್ತುಕೊಳ್ಳಲಿಕ್ಕೂ ಪ್ರೇರೇಪಿಸುತ್ತದೆ. ಮಕ್ಕಳಲ್ಲಿ ಸಾಮಾನ್ಯವಾಗಿ ಜಗಳಗಳು ಏಳುವುದಕ್ಕೆ ಈ ಸ್ವಾರ್ಥಪರತೆಯೆ ಕಾರಣ. ಅದು ಕಡೆಗೆ **ಲೋಭ**ಕ್ಕೂ ಅವಕಾಶ ಕೊಡುತ್ತದೆ. ಒಮ್ಮೆ ಕೈ ಸೇರಿದ್ದನ್ನು ಸರ್ವಥಾ ಬಿಟ್ಟುಕೊಡ ಕೂಡದೆಂಬ ಅತ್ಯಾತುರವೇ ಲೋಭ. ಇವುಗಳಿಂದ ಸಮಾಜದಲ್ಲಿ ವೈಷಮ್ಯಗಳು ಎದ್ದು ಕಲಹಗಳಿಗೆ ಎಡೆ ಸಿಗುತ್ತದೆ. ಆದರೂ ಸ್ವಾರ್ಥವಿಲ್ಲದೆ ಲೋಕವು ಸಾಗದು. ಅದು ಆತ್ಮಪ್ರತಿಷ್ಠೆ, ಆಹಾರದ ಇಚ್ಛೆ, ಪ್ರೇಮ ಇವುಗಳೊಂದಿಗೆ ಬೆರತುಕೊಂಡಿದ್ದುದರಿಂದ ಸಂಸಾರದ ರಚನೆಯಾಯಿತು, ಅಲ್ಲಿಂದ ಸಮಾಜದ ರಚನೆಯಾಯಿತು. ಹೀಗೆನ್ನುವಾಗ ಈ ಸ್ವಾರ್ಥವು ಇತರರಿಗೆ ಕೇಡುಮಾಡದಷ್ಟಕ್ಕೆ ಸದಸದ್ವಿವೇಕವು ಅದರ ಮೇಲೆ ಅಂಕುಶವನ್ನು ಇಟ್ಟರಾಯಿತು.

ರಚನಾಶಕ್ತಿ :—ಮಗುವು ವಸ್ತು ಸಂಗ್ರಹದಿಂದಲೇ ತೃಪ್ತಿ ಪಡುವುದಿಲ್ಲ. ಅವುಗಳ ಜೋಡಣೆಯಿಂದ ಪ್ರತ್ಯೇಕ ಒಂದು ಸೃಷ್ಟಿಯನ್ನು ಮಾಡಲು ಯತ್ನಿಸುತ್ತದೆ. ಈ ರಚನಾಶಕ್ತಿಯಿಂದಲೇ ಒಂದು ಕಾಲದಲ್ಲಿ ಕಾಡಿನಲ್ಲಿ ಕಾಡಾಡಿಯಾಗಿ ಕಾಡುಪ್ರಾಣಿಗಳೊಂದಿಗೆ ಜೀವಿಸುತಿದ್ದವನು ಇಂದಿಗೆ ಬಗೆ ಬಗೆಯ ಯಂತ್ರೋಪಕರಣಗಳನ್ನು ಒದಗಿಸಿಕೊಳ್ಳಲು ಸಾಧ್ಯವಾಯಿತು. ಈ ರಚನಾಶಕ್ತಿಯ ಕುರುಹುಗಳು ಜೇನುಹುಳದಲ್ಲಿಯೂ ಮಡುವಿನ ದಡದಲ್ಲಿ ವಾಸ ಮಾಡುವ ನೀರಾನೆಯಲ್ಲಿಯೂ, ನೆಲವನ್ನು ಕೊರೆದು ಸುರಂಗಮಾಡಿ ಅದರಲ್ಲಿ ಅವಿತುಕೊಂಡು ಜೀವಿಸುವ ಚಿಕ್ಕ ಮೊಲ ಹೆಗ್ಗಣಗಳಲ್ಲಿ ಕೂಡಾ ಇವೆ. ಜೇಡನು ಬಲೆ ಕಟ್ಟುವುದಾಗಲಿ, ಹಕ್ಕಿಯು ಗೂಡನ್ನು ಕಟ್ಟುವುದಾಗಲಿ ಈ ರಚನಾಶಕ್ತಿಯ ಅಸ್ತಿತ್ವವನ್ನು ತೋರ್ಪಡಿಸುತ್ತದೆ. ಮನುಷ್ಯನು ಮಾತ್ರ ಸ್ವಭಾವಗುಣವಾಗಿರುವ ಇದನ್ನು ತನ್ನ ಬುದ್ಧಿ ಮತ್ತು ಕಲ್ಪನಾಶಕ್ತಿಯ ಬೆಂಬಲದಿಂದ ತನ್ನ ಸೌಕರ್ಯದ ಮೊತ್ತವನ್ನು ಹೆಚ್ಚಿಸಲಿಕ್ಕೆ ವಿನಿಯೋಗಿಸುತ್ತಿದ್ದಾನೆ. ಶಾಲೆಗಳಲ್ಲಿ ಈ ರಚನಾಶಕ್ತಿಗಳಿಗೆ ಅವಕಾಶ ಕೊಡುವುದಿಲ್ಲ ಮಾತ್ರವಲ್ಲ, ಬರೇ ಕಲ್ಪನಾಶಕ್ತಿಗೆ ಪ್ರೋತ್ಸಾಹ ಕೊಡುವ ತವಕದಲ್ಲಿ ಈ ರಚನಾಶಕ್ತಿಯನ್ನು ನಿರ್ಮೂಲಮಾಡುತಿದ್ದಾರೆ. ಇದು ಬಲು ಶೋಚನೀಯ ಸಂಗತಿ.

ಮಕ್ಕಳಿಗೆ ಸ್ವಭಾವಿಕವಾಗಿರುವ ಚಟುವಟಿಕೆಯು ಈ ರಚನಾಶಕ್ತಿಯ ಅಂಗವಿಕಾರವೆನ್ನಬಹುದು. ಅವುಗಳ ಮನಸ್ಸಿನ ಬೆಳವಣಿಗೆಯಲ್ಲಿಯೂ ಈ ರಚನಾಶಕ್ತಿಯ ಪ್ರಭಾವವು ಕ್ಷಣೆಕ್ಷಣೆ ತೋರುತ್ತಲಿದೆ. ಬೇರೆ ಬೇರೆ ಭಾವನೆಗಳನ್ನು ಜತೆಗೊಳಿಸಿ ಅವುಗಳಿಂದ ಪ್ರಥಕ್ ಪ್ರಥಕ್ಕಾಗಿ ಆದ ಜ್ಞಾನವನ್ನು ಜತೆಗೊಳಿಸಿ ಹೊಸ ಕಲ್ಪನೆಮಾಡುವುದು ಈ ರಚನಾಶಕ್ತಿಯ ಕಾರ್ಯವು. ಈ ಚಟುವಟಿಕೆಯು ಬಾಹ್ಯಾಂಗಗಳಲ್ಲಿ ಅಂದರೆ ಕರ್ಮೇಂದ್ರಿಯಗಳಲ್ಲಿ ವಿಶೇಷವಾಗಿ ಕಂಡುಬರುತ್ತಿದೆ. ಈ ಚಟುವಟಿಕೆಯೇ ಆ ಅಂಗಗಳಿಗೆ ಸಾಕಷ್ಟು ಅಭ್ಯಾಸಕೊಟ್ಟು ಅವುಗಳ ಸ್ನಾಯುಗಳಲ್ಲಿ ದಾರ್ಢ್ಯವುಂಟಾಗುವಂತೆ ಮಾಡುತ್ತದೆ. ಮುಂದೆ ಈ ಬಗೆಯ ದಾರ್ಢ್ಯವು ಮನುಷ್ಯನ ಜೀವನೋಪಾಯದ ಕೆಲಸಗಳಲ್ಲಿ ಧಾರಾಳವಾಗಿ ಉಪಯೋಗಿಸುವಂತೆ ಅವನಿಗೆ ಸಹಾಯಕವಾಗುತ್ತದೆ. ಪೆಸ್ಟಲೊಟ್ಸಿಯಾಗಲಿ ಫ್ರೊಬೆಲನಾಗಲಿ ವೃತ್ತಿಗಳನ್ನು ತಮ್ಮ ಪಾಠಶಾಲೆಗಳಲ್ಲಿ ಕಲ್ಪಿಸಿಕೊಡಲಿಕ್ಕೆ ಯತ್ನಿಸಿದುದು ಈ ರಚನಾಶಕ್ತಿಯ ಪ್ರಭಾವವನ್ನು ಅಭ್ಯಾಸ ಬಲದಿಂದ ಹೆಚ್ಚಿಸಲಿಕ್ಕಾಗಿಯೆ ಇದೆ ಎಂಬದು ಈಗ ನಿಮಗೆ ಗೊತ್ತಾಗಬಹುದು. ಕಥಾನಟನೆಯೂ ಆಟಗಳೂ ಮಕ್ಕಳ ಚಟುವಟಿಕೆಗೆ ಉತ್ತಮ ಕ್ಷೇತ್ರಗಳಾಗಿವೆ.

ಈ ಬಗೆಯ ಸಾಧನೆ ಮಾಡದ ಮಕ್ಕಳು ಮುಂದೆ ಬೆಳೆದು, ತಾರುಣ್ಯಾವಸ್ಥೆಯಲ್ಲಿ ಯಾವುದೊಂದು ಕೆಲಸಕ್ಕೆ ಬಾರದ "ಬಣ್ಣದ ಬೀಸಣಿಗೆ" ಗಳಾಗಲಿಕ್ಕೆ ಈ ಬಗೆಯ ಚಟುವಟಿಕೆಗೆ ಶಾಲೆಯಲ್ಲಿ ಸಾಕಷ್ಟು ಅವಕಾಶವಿಲ್ಲದಿದ್ದುದೇ ಕಾರಣವಾಗಿದೆ. ಇಂಥವರಲ್ಲಿ ಹೆಣ್ಣು ಮಕ್ಕಳು ಅಡಿಗೆ ಕೋಣೆಗೆ ಹೋಗಲೊಲ್ಲರು. ಒಲೆಯ ಮೇಲಿರುವ ಪಾತ್ರೆಯನ್ನು ಎತ್ತಿದಾಗ ಅದು ಕೈಯಿಂದ ಜಾರಿ ಬಿದ್ದು ಬಿಸಿ ನೀರು ಮೈಮೇಲೆ ಹಾರಿ ಮೈ ಸುಡುವುದು. ಗಂಡು ಮಕ್ಕಳಿಗೆ ಚೂರಿ ಕೈಬೆರಳನ್ನು ಕಡಿಯುವುದು, ಸೂಜಿ ಕೈಗೆ ಚುಚ್ಚುವುದು, ಇತ್ತಿಂದತ್ತ ಅತ್ತಿಂದಿತ್ತ ಒಂದು ವಸ್ತುವನ್ನು ಎತ್ತಿ ಇಡುವುದು ಕೂಡಾ ಕಷ್ಟವಾಗಿ ಪರಿಣಮಿಸಿ, ಪ್ರತಿಯೊಂದು ಕೆಲಸಕ್ಕೂ ಇತರರ ಕೈ ಹಾರೈಸುವ ಪರಾವಲಂಬಾವಸ್ಥೆಯು ತಲೆದೋರುವುದು.

ಅನುಕರಣಶಕ್ತಿ:—ಇದು ಇತರ ಗುಣಗಳಂತೆ ಹುಟ್ಟುಗುಣಗಳ ಸರ್ವ ಲಕ್ಷಣಗಳಿಂದ ಕೂಡಿಲ್ಲವಾದರೂ ಮನುಷ್ಯನಲ್ಲಿ ಬಾಲ್ಯದಿಂದಲೂ ತೋರಿಬರುವುದರಿಂದ ಅದನ್ನು ಇಲ್ಲಿ ಎತ್ತಿಕೊಳ್ಳದಿರಲು ಸಾಧ್ಯವಿಲ್ಲ. ಹೆಣ್ಣು ಮಗು ತಾಯಿಯು ಕೆಲಸಗಳನ್ನು ಕಂಡು ಅವನ್ನು ನಟಿಸಲಿಕ್ಕೆ ಯತ್ನಿಸುತ್ತದೆ. ಒಂದು ಗೊಂಬೆಯನ್ನು ನೀರಿನಿಂದ ತೊಳೆದು ಚಿಕ್ಕ ತೊಟ್ಟಿಲಲ್ಲಿ ಹಾಕಿ ತೂಗುತ್ತಿದೆ; ಜೋಗುಳ ಹಾಡುತ್ತಿದೆ. ಗುಮ್ಮ ಬಂದನೆಂದು ಬೆದರಿಸುತ್ತದೆ. ಚಿಕ್ಕ ಪಾತ್ರೆಗಳನ್ನು ಸಣ್ಣ ಒಲೆಯ ಮೇಲಿಟ್ಟು ಅಡಿಗೆ ಮಾಡಿ ಇತರ ಮಕ್ಕಳಿಗೆ ಇಕ್ಕುತ್ತದೆ. ಗಂಡು ಮಗುವು ತಂದೆಯಂತೆ ಕುದುರೆ ಸವಾರಿಮಾಡುವುದಕ್ಕೆ ತನ್ನ ತೊಡೆಗಳ ನಡುವೆ ಒಂದು ಕೋಲನ್ನು ಹಿಡಿದು ಅದಕ್ಕೆ ಚಪ್ಪರಿಸುತ್ತದೆ; ಉಪಾಧ್ಯಾಯನಂತೆ ಮನೆಯ ಕಂಬಗಳಿಗೆ ಬೆತ್ತದಿಂದ ಹೊಡದು ಪಾಠ ಹೇಳಿಕೊಡುತ್ತದೆ. ತಂದೆಯ ದೊಡ್ಡ ಅಂಗಿಯನ್ನು ಸಿಕ್ಕಿಸಿಕೊಂಡು ರುಮಾಲನ್ನು ತಲೆಗಿಟ್ಟು, ಅವನ ದೊಡ್ಡ ಮೆಟ್ಟುಗಳನ್ನು ಮೆಟ್ಟಿ, ಆಫೀಸಿಗೆ ಹೋಗುವಂತೆ ನಟಿಸುತ್ತದೆ. ಈ ನಟನೆಯಲ್ಲಿ ಮಕ್ಕಳಿಗೆ ತುಂಬಾ ಪ್ರೇಮವಿದೆ. ಮಕ್ಕಳ ಈ ಶಕ್ತಿಗೆ 'ಮಂಗಚೇಷ್ಟೆ' ಎಂದು ದೂರಿಡುತ್ತಾರೆ. ಆದರೆ ಚಟುವಟಿಕೆಯೊಂದಿಗೆ ಇದನ್ನು ವ್ಯವಸಾಯ ಮಾಡತೊಡಗಿದರೆ ಅವನ ರಚನಾ ಶಕ್ತಿಯು ಬೆಳೆದು, ಅವನ ಕರ್ಮೇಂದ್ರಿಯಗಳ ಸ್ನಾಯುಗಳು ದಾರ್ಢ್ಯವನ್ನು ಹೊಂದುವವು ಎಂಬದನ್ನು ಉಪಾದ್ಯಾಯನು ಲಕ್ಷ್ಯದಲ್ಲಿಡಬೇಕು.

ಮೇಲೆ ಹೇಳಿದ ಮನೋವಿಕಾರಗಳು ಆಯಾ ಇಂದ್ರಿಯ ಸಂಸ್ಕಾರದಿಂದ ಹುಟ್ಟಿ ಚಿಕ್ಕ ಮಕ್ಕಳಲ್ಲಿ ಬೇಗನೇ ಮಾಯವಾಗುತ್ತವೆ. ಇದರಿಂದ ಮಕ್ಕಳ ಮನಸ್ಸು ಚಂಚಲವಾಗಿದೆ ಎನ್ನುತ್ತಾರೆ. ಆದರೆ ಅಭ್ಯಾಸ, ಮತ್ತು ಸಂಸರ್ಗಬಲದಿಂದ ಕೆಲವು ಮನೋವಿಕಾರಗಳು ಬಹಳ ಬೇಗನೆ ಜಾಗ್ರತವಾಗುತ್ತವೆ. ಆಗ ಅದಕ್ಕೆ **ಮನೋವೃತ್ತಿ**ಗಳೆನ್ನಬಹುದು. ಈ ಮನೋವೃತ್ತಿಗಳಿಂದ ಮನುಷ್ಯನ ವರ್ತನದ ಮೇಲೆ ಏನು ಪರಿಣಾಮವಾಗುತ್ತದೆ ಎಂಬುದನ್ನು ಮುಂದೆ ಎತ್ತಿಕೊಳ್ಳಲಿರುವೆವು.

ಪರಂಪರಾಗತ, ಸಹವಾಸ ಗುಣಗಳೂ ಸ್ವಭಾವವೂ

15ನೆಯ ಅಧ್ಯಾಯ

ಹಿಂದಿನ ಅಧ್ಯಾಯದಲ್ಲಿ ವಿಶಿಷ್ಟ ಜಂತುವರ್ಗಕ್ಕೂ ರೂಢವಾಗಿರುವ ವಾಸನೆಗಳನ್ನು ಅಂದರೆ ತೃಷ್ಣೆ, ನಿದ್ರೆ, ಭಯ, ಸಂತಾನೇಚ್ಛೆಗಳನ್ನು ಇತರ ಜಂತುವರ್ಗದಲ್ಲಿ ಬರೇ ಅಂಕುರರೂಪವಾಗಿದ್ದು ಮಾನುಷ ವರ್ಗದಲ್ಲಿ ಸ್ಫೂರ್ತಿಗೆ ಬಂದಿರುವ ಕೋಪ, ಆತ್ಮಪ್ರತಿಷ್ಠೆ, ಆತ್ಮ ನಿಗ್ರಹ ಮತ್ತು ಈ ಗುಣಗಳ ವಿವಿಧ ಪ್ರಕಾರಗಳು ಮುಂತಾದ ವ್ಯಕ್ತಿಪರ ವಾದ ಗುಣಗಳನ್ನೂ, ಮಾತೃಪ್ರೇಮ, ಸಂತಾನೇಚ್ಛೆ, ಮೋಹ, ಸಹವಾಸ, ಮುಂತಾಗಿ ವ್ಯಕ್ತಿಗೂ ಸಮಾಜಕ್ಕೂ ಇರುವ ಸಂಬಂಧವನ್ನು ಬೆಳಿಸುವ ಗುಣಗಳನ್ನೂ ಅವುಗಳ ಇತರ ರೂಪಗಳನ್ನೂ ವ್ಯಕ್ತಿಗೂ ಅವನ ಸುತ್ತು ಮುತ್ತಲಿನ ವಸ್ತು ನೋಟ ಇತ್ಯಾದಿಗಳಿಗೆ ಸಂಬಂಧಪಡುವ ಕುತೂಹಲ, ಆಶ್ಚರ್ಯ, ಸ್ವಾರ್ಥ, ಸಂಗ್ರಹಶಕ್ತಿ, ರಚನಾಶಕ್ತಿ ಮುಂತಾದ ಗುಣ ಗಳನ್ನೂ ಚಟುವಟಿಕೆ ಮತ್ತು ಅನುಕರಣಶಕ್ತಿ ಮುಂತಾದ ಬಾಹ್ಯವಿಕಾರ ಗಳನ್ನೂ ಟೀಕಿಸಿದೆವು. ಅವುಗಳಲ್ಲಿ ಕಾಣಬರುವ ಬಾಹ್ಯ ಅಂಗವಿಕಾರಗಳ ಪರಿಚಯವನ್ನು ಮಾಡಿ ಕೊಟ್ಟೆವು. ಹೀಗೆ ಆನುವಂಶೀಯವಾಗಿ ಬಂದ ಗುಣಗಳು ಭಿನ್ನ ಭಿನ್ನ ದೇಹಪ್ರಕೃತಿಗಳಲ್ಲಿ ಭಿನ್ನ ಭಿನ್ನ ರೀತಿಯಾಗಿ ಸ್ಫೂರ್ತಿಗೆ ಬರುವುದಕ್ಕಿರುವ ಕಾರಣಗಳನ್ನು ಇಲ್ಲಿ ಚರ್ಚಿಸಬೇಕಾಗಿದೆ.

ಒಂದೇ ಮನೆಯಲ್ಲಿ ನಾಲ್ಕು ಜನ ಅಣ್ಣತಮ್ಮಂದಿರು ವಾಸವಾಗಿದ್ದರೆ ಅವರ ಗುಣಸ್ವಭಾವಗಳು ಏಕರೀತಿಯಾಗಿರುವುದಿಲ್ಲ. ಒಬ್ಬನು ನಿಧಾನ ವಾಗಿ ಎಲ್ಲವನ್ನೂ ಪರ್ಯಾಲೋಚಿಸಿ ಕಾರ್ಯನಿರ್ವಾಹ ಮಾಡುತ್ತಿರ ಬಹುದು; ಇನ್ನೊಬ್ಬನು ದುಡುಕು ಸ್ವಭಾವದವನಿರಬಹುದು. ಮೂರನೆ ಯವನು ಕೂತಲ್ಲಿಂದ ಏಳದ ಮಂಕು ಸ್ವಭಾವದವನಿರಬಹುದು. ನಾಲ್ಕನೆ ಯವನು ಧಾರಾಳ ಬುದ್ಧಿಯವನಾಗಿದ್ದು ಎಲ್ಲರ ಕೆಲಸಕ್ಕೂ ನೆರವಾಗು ತ್ತಿರಬಹುದು. ಇಷ್ಟೆ ಅಲ್ಲ; ಒಂದು ಕುಟುಂಬದಲ್ಲಿ ಒಬ್ಬನು ಹುಚ್ಚನಿರ

ಬಹುದು; ಅವನ ಕುಟುಂಬ ಚರಿತ್ರೆಯನ್ನು ಕೇಳಿದರೆ ಅವನ ಪೂರ್ವಜರಲ್ಲಿ ಎರಡು ಅಥವಾ ಮೂರು ತಲೆಗಳ ಹಿಂದಿನವರಲ್ಲಿ ಹಾಗೆಯೆ ಒಬ್ಬನು ಹುಚ್ಚನಿದ್ದನೆಂದು ತಿಳಿದುಬರುವುದು. ತಂದೆ ತಾಯಿಗಳು ತೀರಾ ಮೂಢರೂ ಜಡ ಸ್ವಭಾವದವರೂ ಇದ್ದು, ಅಂಥವರ ಮಕ್ಕಳಲ್ಲಿ ಅತಿಶಯ ಚುರುಕುತನವೂ ತೀಕ್ಷ್ಣ ಬುದ್ಧಿಯೂ ಉಳ್ಳ ಮಕ್ಕಳು ಜನಿಸಬಹುದು. ಈ ವ್ಯತ್ಯಾಸಗಳ ಕಾರಣಗಳನ್ನು ಗೊತ್ತುಹಚ್ಚಲು ಸಾಧ್ಯವಿದೆ. ಅದೇ ರೀತಿ ಒಂದೇ ಪ್ರವರ, ಗೋತ್ರದವರ ಗುಣ ಲಕ್ಷಣಗಳು ಬೇರೆ ಪ್ರವರ ಗೋತ್ರದವರಿಗಿಂತ ಭಿನ್ನವಾಗಿರುತ್ತವೆ. ಹಾಗೆಯೆ ಭಿನ್ನ ಭಿನ್ನ ಮತಧರ್ಮಗಳನ್ನು ಅವಲಂಬಿಸಿದವರ ಗುಣಲಕ್ಷಣಗಳು ಪ್ರತ್ಯೇಕವಿರುತ್ತವೆ. ಈ ವ್ಯತ್ಯಾಸಗಳು ಪಾರಂಪರ್ಯವಾಗಿ ಆಯಾ ಭಿನ್ನ ಭಿನ್ನ ಜಾತಿ ಮತ ಧರ್ಮಾವಲಂಬಿಗಳಲ್ಲಿ ಪ್ರತ್ಯೇಕವಾಗಿ ಕಾಲಾನುಗತಿಯಿಂದ ನೆಲೆನಿಂತಿರುವ ಗುಣಗಳು. ಇವು ಒಂದೇ ಪ್ರವರ, ಜಾತಿ, ಅಥವಾ ಜನಾಂಗದಲ್ಲಿ ಹೆಚ್ಚು ಕಡಿಮೆ ಒಂದೇ ರೀತಿಯಾಗಿರುತ್ತವೆ. ಇದರಿಂದ ನಾವು ಅವರನ್ನು ಕಂಡೊಡನೆ ಇವನು ಇಂಥ ಕುಲ, ಇಂಥ ಜನಾಂಗದವನು ಎಂದು ಗೊತ್ತು ಹಚ್ಚಲು ಬರುತ್ತದೆ. ಈ ರೀತಿಯಲ್ಲಿ ಭಿನ್ನ ಭಿನ್ನ ಜಾತಿಗಳ, ಕುಲಗಳ, ಅಥವಾ ಜನಾಂಗಗಳ ವಿಶೇಷ ಲಕ್ಷಣಗಳನ್ನು ಪ್ರತ್ಯೇಕಿಸಿ ಇಡುವುದೇ ವರ್ಣಸಾಂಕರ್ಯಕ್ಕೆ ಇರುವ ಒಂದು ಆಕ್ಷೇಪ.

'ಪಾಶ್ಚಾತ್ಯರು ಪಾಶ್ಚಾತ್ಯರೇ, ಪೌರ್ವಾತ್ಯರು ಪೌರ್ವಾತ್ಯರೇ, ಅವರು ಎಂದಿಗೂ ಕಲೆತುಕೊಳ್ಳಲಾರರು' ಎಂದು ಕಿಪ್ಲಿಂಗ್ ಎಂಬ ಗ್ರಂಥಕಾರನು ಹೇಳುವ ಮಾತಿನಲ್ಲಿ ತಥ್ಯಾಂಶವಿದೆ. ಪೌರ್ವಾತ್ಯರು ಎಷ್ಟೆ ರೀತಿಯಲ್ಲಿ ಪಾಶ್ಚಿಮಾತ್ಯರ ಕ್ರಮಕಟ್ಟಳೆಗಳನ್ನು ಬಾಹ್ಯದಲ್ಲಿ ಅನುಸರಿಸಲಿ, ಅವರ ಹೃದಯದಲ್ಲಿ ತಾವು ಪೌರ್ವಾತ್ಯರು ಎಂಬ ಭಾವನೆಯು ಅಗಲಿಹೋಗಲಾರದು. ಇಂಗ್ಲಿಷ ವಿದ್ಯಾಭ್ಯಾಸ ಹೊಂದಿದ ತರುಣನಲ್ಲಿ ಎರಡು ಭಿನ್ನ ಭಿನ್ನ ಜೀವನಕ್ರಮಗಳಿವೆ ಎಂದು ಒಂದು ನುಡಿಯಿದೆ. 'ಅವನು ಮನೆಯಿಂದ ಹೊರಬಿದ್ದಾಗ ಅವನ ವರ್ತನವೇ ಒಂದು ಬಗೆ, ಮನೆ ಸೇರಿದೊಡನೆ ಅವನ ವರ್ತನವೇ ಬೇರೆ'ಯಂತೆ. ಇದಕ್ಕೆ ಪಾರಂಪರ್ಯದಿಂದ ಅವನ ನರನಾಡಿಗಳಲ್ಲಿಯೂ ವ್ಯಾಪಿಸಿಕೊಂಡಿರುವ ಪೌರ್ವಾತ್ಯ ಭಾವನೆ

ಗಳು ಕಾರಣವಾಗಿವೆ. ಪಾಶ್ಚಾತ್ಯರೊಡನೆ ಅಥವಾ ಇತರ ಜನಾಂಗ ಗಳೊಡನೆ ಅವನು ಎಷ್ಟು ಕಲೆತುಕೊಂಡಿದ್ದರೂ, ಪಾಶ್ಚಾತ್ಯ ವಾಙ್ಮಯ ವನ್ನು ಎಷ್ಟು ಓದಿದರೂ, ಅವನ ಹುಟ್ಟುಭಾವನೆಗಳೂ ಪಾರಂಪರ್ಯದಿಂದ ಅವನಲ್ಲಿ ಸೇರಿರುವ ಮನೋವಿಕಾರಗಳೂ ತೀರಾ ಮಾರ್ಪಡುವುದಿಲ್ಲ. ಇದರಿಂದ ಪಂಜಾಬಿಗಳೇ ಬೇರೆ, ರಜಪುತ್ರರೇ ಬೇರೆ, ಬನಿಯಾ ಜಾತಿ ಯವರೇ ಬೇರೆ, ತಮಿಳರೇ ಬೇರೆ, ಮಲೆಯಾಳಿಗಳೇ ಬೇರೆ ಎಂದು ಅವರ ವರ್ತನ ಕ್ರಮದಿಂದ ಒಂದೆರಡು ದಿನಗಳಲ್ಲಿ ಗೊತ್ತುಹಚ್ಚಲು ಬರುತ್ತದೆ. ವಿಲಾಯತಿಯಲ್ಲಿಯು ಕೂಡಾ ಐರಿಷ ಜನಾಂಗದ ಮನೋವಿಕಾರಗಳಿಗೂ ಇಂಗ್ಲಿಷರ ಮನೋವಿಕಾರಗಳಿಗೂ ವಿಶೇಷ ಅಂತರವಿದೆ. ಇಂಗ್ಲಿಷರಿಗೂ ಫ್ರೆಂಚರಿಗೂ ಜರ್ಮನರಿಗೂ ಎಷ್ಟೋ ಭೇದಗಳಿವೆ.

ಆದರೆ ಸುಧಾರಿತ ಒಂದು ಇಂಗ್ಲಿಷ ಕುಟುಂಬದಿಂದ ಒಂದು ಮಗು ವನ್ನು ಕದ್ದೊಯ್ದು ಆಫ್ರಿಕದ ನರಭಕ್ಷಕರ ಮಧ್ಯೆ ಸಾಕಿದೆವೆಂದರೆ, ಅಥವಾ ಕೊರಗರ ಅನಾಥ ಮಗುವೊಂದನ್ನು ಬ್ರಾಹ್ಮಣನು ತನ್ನ ಮನೆಯಲ್ಲಿ ತಂದಿ ರಿಸಿ ಸಾಕಿದನೆಂದರೆ ಅವರ ಬಾಹ್ಯವಿಕಾರ, ಬಾಹ್ಯ ವರ್ತನೆಗಳು ಒಮ್ಮೆಗೆ ತೀರಾ ಬದಲಾವಣೆಯಾದಂತೆ ಕಂಡರೂ ಪಾರಂಪರ್ಯವಾಗಿ ಅವರಲ್ಲಿ ಬೀಜರೂಪವಾಗಿರುವ ಗುಣಸ್ವಭಾವಗಳು ಒಂದಲ್ಲ, ಒಂದು ಸಂದರ್ಭ ದಲ್ಲಿ ಹೊರಬೀಳುತ್ತವೆ. 'ಐಕ್ಹೆನಫೆಲ್ಸಿನ ಶ್ರೀಮಂತನಾದ ಹೆನ್ರಿಯು' ಎಂಬ ಗ್ರಂಥದಲ್ಲಿ ಸುಧಾರಿತ ಒಂದು ಜರ್ಮನ ಶ್ರೀಮಂತ ಮನೆತನದ ಚಿಕ್ಕ ಮಗುವನ್ನು ಕೊರವಂಜಿಯೊಬ್ಬಳು ಅದರ ದಾದಿಯಿಲ್ಲದ ವೇಳೆ ಯಲ್ಲಿ ಕದ್ದೊಯ್ದು ಕಳ್ಳರ ಕತ್ತಲಾದ ಗವಿಯಲ್ಲಿ ಬಚ್ಚಿಟ್ಟು ಸಲಹಿದಳು. ಅವನು ಬೆಳೆದ ಹುಡುಗನಾದಾಗಲೂ ಕತ್ತಲೆಯಲ್ಲಿಯೇ ಇದ್ದುದರಿಂದ ಅವನಲ್ಲಿ ಸೃಷ್ಟಿ ಪರಿಚಯವು ಒಂದಿಷ್ಟೂ ಇದ್ದಿಲ್ಲ. ಆದರೆ ಬರೆ ಪೂರ್ವ ವಾಸನೆಯಿಂದಲೇ ಅವನು ಈ ಕಳ್ಳರು ತನ್ನ ಕುಟುಂಬದವರಲ್ಲವೆಂದು ನೆನಸಿ, ಅವರ ಕೈಯಿಂದ ತಪ್ಪಿಸಿಕೊಂಡು ಗವಿಯಿಂದ ಹೊರಬಿದ್ದನು. ಆಗ ಅವನು ಕುರಿಮರಿಯನ್ನು ಕಂಡಾಗಲೂ ಬಗೆಬಗೆಯ ಹೂ ಗಿಡ ಬಳ್ಳಿ ಗಳನ್ನು ಕಂಡಾಗಲೂ ಬೆರಗಾಗಿ ತೀರಾ ಮಂಕನಂತೆ ವರ್ತಿಸಿದನು. ಕಾಲ ಕ್ರಮದಲ್ಲಿ ಅವನು ಮೆನ್ರಾಡನೆಂಬವನ ಸಹವಾಸದಿಂದ ಸೃಷ್ಟಿಯ ಪರಿ

ಜಯುಮಾಡಿ, ಸೃಷ್ಟಿಕರ್ತನ ಮಹಿಮೆಯನ್ನು ತಿಳಿದು, ಸತ್ಪುತ್ರನಾಗಿ ತಂದೆಯನ್ನು ಸೇರಿದನಂತೆ. ಇದು ಮೆನ್ರಾದನ ಸಹವಾಸದಿಂದ ಆದ ಬದಲಾವಣೆ ಎಂದರೂ ಅವನಲ್ಲಿ ಪೂರ್ವವಾಸನೆಗಳು ಇದ್ದುವೆಂದು ಒಪ್ಪಬೇಕಾಗಿದೆ. ಬೇಡನು ಹಿಡಿದ ಗಿಳಿಗಳಲ್ಲಿ ಒಂದು ಕಟುಕರವನ ಮನೆಗೂ ಇನ್ನೊಂದು ಬ್ರಾಹ್ಮಣನ ಮನೆಗೂ ಸೇರಿತಂತೆ. ಕಟುಕನಲ್ಲಿ ಬೆಳೆದ ಗಿಳಿಯು ಜನರನ್ನು ಕಂಡಾಕ್ಷಣ 'ಹಿಡಿ, ಕಡಿ, ಕೊಯ್ಯು' ಎಂದು ಕೂಗುತಿತ್ತಂತೆ. ಬ್ರಾಹ್ಮಣನ ಮನೆಯಲ್ಲಿದ್ದ ಗಿಳಿಯು ಬಂದವರನ್ನು ಸ್ವಾಗತ ಮಾಡುತಿತ್ತಂತೆ. ಪುರಾಣ ಕಥೆಗಳಲ್ಲಿ ನೋಡಿದರೂ ಇದೇ ಬಗೆಯ ದೃಷ್ಟಾಂತಗಳು ಹಲವು ಇವೆ. ಕರ್ಣನು ಹುಟ್ಟು ಕ್ಷತ್ರಿಯನು; ಸೂತನಲ್ಲಿ ಬೆಳೆದರೂ ಆತನಲ್ಲಿ ಅಸ್ತ್ರಶಸ್ತ್ರ ವಿದ್ಯೆಯನ್ನು ಕಲಿಯಲು ಕಾಂಕ್ಷೆಯು ಉಂಟಾಗಿ ಪರಶುರಾಮನಲ್ಲಿ ವಿದ್ಯೆ ಕಲಿತನು. ಆತನ ಗುಟ್ಟನ್ನು ಬಯಲುಪಡಿಸಬೇಕೆಂದು ಕಾದುಕೊಂಡಿದ್ದ ಇಂದ್ರನು, ಆತನ ತೊಡೆಯನ್ನು ತಲೆದಿಂಬಾಗಿಟ್ಟು ಪರಶುರಾಮನು ಮಲಗಿದಾಗ, ಭ್ರಮರನಾಗಿ ಬಂದು ಕರ್ಣನ ತೊಡೆಯನ್ನು ಚುಚ್ಚಿಬಿಟ್ಟನು. ತೊಡೆ ಅಲುಗಿದರೆ ಗುರುವಿಗೆ ಎಚ್ಚರವಾದೀತು ಎಂದು ಕರ್ಣನು ರಕ್ತಮಯವಾದ ತೊಡೆಯ ನೋವನ್ನು ಲೆಕ್ಕಿಸದೆ ದರ್ಪದಿಂದ ಇದ್ದನು. ಸುರಿದ ರಕ್ತದ ಬಿಸಿಯಿಂದ ಪರಶುರಾಮನು ಎಚ್ಚತ್ತು ಕರ್ಣನ ಸ್ಥಿತಿಯನ್ನು ನೋಡಿ ಅವನಲ್ಲಿ ಕ್ಷತ್ರಿಯ ಸ್ಥೈರ್ಯ ಮತ್ತು ದರ್ಪಗಳಿರುವುದರಿಂದ ಕ್ಷತ್ರಿಯನೆಂದು ಕರ್ಣನ ಗುಟ್ಟು ತಿಳಿದು ಆತನಿಗೆ ಶಪಿಸಿದನಂತೆ. ಇಲ್ಲಿ ಕರ್ಣನ ಪಾರಂಪರ್ಯಾಗತ ಗುಣವು ಸೂತನಲ್ಲಿ ಬೆಳೆದರೂ ಅಳಿದುಹೋಗಿಲ್ಲವೆನ್ನಬೇಕು. ಕೃಷ್ಣನು ಹುಟ್ಟು ರಾಜಕುಲದವನಾಗಿದ್ದರೂ ಬಾಲ್ಯದಲ್ಲಿ ನಂದಗೋಕುಲದಲ್ಲಿ ಬೆಳೆದ ಕಾರಣ, ಗೋವಳರ ಪುಂಡಾಟಿಕೆಯಲ್ಲಿ ಆಸಕ್ತಿ ತೋರಿಸಿದನು; ಕಡೆಗೆ ತನ್ನ ಮಾವನಾದ ಕಂಸನನ್ನು ಗೆದ್ದಾಗ ಕ್ಷತ್ರಿಯನ ಗುಣಗಳು ಅವನಲ್ಲಿ ಸ್ಫೂರ್ತಿಗೆ ಬಂದವು. ಆಗ ಅವನು ವಿದ್ಯಾಭ್ಯಾಸ ಮಾಡಿ ಮುಂದೆ ಅಸ್ತ್ರಶಸ್ತ್ರ ವಿದ್ಯೆಯಲ್ಲಿಯೂ ಅಧ್ಯಾತ್ಮ ವಿಚಾರದಲ್ಲಿಯೂ ಪಾಂಡಿತ್ಯವನ್ನು ಹೊಂದಿ, ಭಾರತ ಯುದ್ಧದ ಕಾಲದಲ್ಲಿ ಗೀತೆಯನ್ನು ಅರ್ಜುನನಿಗೆ ಬೋಧಿಸಿದನು. ಪ್ರಹ್ಲಾದನ ತಂದೆಯಾದ ಹಿರಣ್ಯಕಶಿಪು ಶಿವಭಕ್ತನು. ವಿಷ್ಣುವಿನ ವೈರಿ. ಪ್ರಹ್ಲಾದನು ಬಾಲ್ಯದಲ್ಲಿಯೆ ನಾರದರ ವೈಷ್ಣವ ಸಂಪ್ರದಾಯವನ್ನು ಅನುಕರಣ

ಶಕ್ತಿಯಿಂದ ಕೈಕೊಂಡು, ಕೊನೆಗೆ ತಂದೆಯ ಮತವನ್ನು ಅಲ್ಲಗಳೆದು, ಪಿತೃನಾಶಕ್ಕೆ ಕಾರಣನಾದನು. ಇಂಥ ದೃಷ್ಟಾಂತಗಳು ನಮ್ಮ ಕಣ್ಣೆದುರಿಗೆ ಎಷ್ಟೋ ಕಾಣಬಹುದು.

ಹೀಗೆ ಹುಟ್ಟುಗುಣಗಳು ಎಲ್ಲವೂ ಬಾಲ್ಯದಲ್ಲಿ ಇದ್ದರೂ ಪಾರಂಪರ್ಯದ ವಾಸನೆಗಳು, ಸಹವಾಸ ಇವುಗಳ ಅನುಲೇಪನದಿಂದ ಮನುಷ್ಯನಲ್ಲಿ ಬೇರೆ ಬೇರೆ ಮನೋವೃತ್ತಿಗಳು ಹೆಚ್ಚುಕಡಿಮೆಯಾಗಿ ಬೆಳೆದು ಅವುಗಳಿಂದ ಅವನ ಸ್ವಭಾವವೇ ಬೇರೆಯಾಗುತ್ತದೆ. ಇದರ ಮೇಲೆ ಮನುಷ್ಯವರ್ಗವನ್ನು ಸತ್ವ, ರಜ, ತಮವೆಂಬ ಮೂರು ಗುಣದವರಾಗಿ ವಿಭಾಗಿಸುತ್ತಾರೆ. ಇದನ್ನು 'ಗೀತಾರಹಸ್ಯ'ದಲ್ಲಿ ಹೀಗೆ ವಿವರಿಸಿದೆ:—

"ಶರೀರದಲ್ಲಿಯ ರಜೋಗುಣವನ್ನೂ ತಮೋಗುಣವನ್ನೂ ಅಡಗಿಸಿ ಸತ್ವಗುಣವು ತಲೆ ಎತ್ತಿದರೆ ನಮ್ಮ ದೇಹದಲ್ಲಿ ಜ್ಞಾನ ಉತ್ಪನ್ನವಾಗಿ, ನಿಜವಾದ ಸತ್ವವು ಮನದಲ್ಲಿ ಹೊಳೆದು, ಚಿತ್ತವೃತ್ತಿಯು ಶಾಂತವಾಗುತ್ತದೆ. ಆಗ ಶರೀರದಲ್ಲಿ ರಜ ತಮ ಗುಣಗಳು ಇಲ್ಲವೆಂತಲ್ಲ. ಅವು ಹಿಂದೆ ಬಿದ್ದಿರುವುದರಿಂದ ಅವುಗಳ ಆಟವು ಮಾತ್ರ ಸಾಗುವುದಿಲ್ಲ. ಸತ್ವಕ್ಕೆ ಬದಲಾಗಿ ರಜೋಗುಣವು ಪ್ರಬಲವಾಗಲು ಮನುಷ್ಯನ ಶರೀರದಲ್ಲಿ ಜಾಗ್ರತವಾಗಿ ಆಸೆಗಳು ಮೊಳೆತು, ಅವನು ಕೆಲಸಗಳನ್ನು ಮಾಡತೊಡಗುತ್ತಾನೆ. ಅದೇ ಮೇರೆಗೆ ಸತ್ವ ರಜಗಳಿಗಿಂತ ತಮೋಗುಣವು ಪ್ರಬಲವಾಗಲು, ನಿದ್ದೆ, ಆಲಸ್ಯ, ಸ್ಮೃತಿಭ್ರಂಶ ಮುಂತಾದ ದೋಷಗಳು ಶರೀರದಲ್ಲಿ ಮೊಳೆದೋರುತ್ತವೆ."

ಇಲ್ಲಿ 'ಶರೀರದಲ್ಲಿ' ಎಂಬ ಮಾತಿನಲ್ಲಿ ಈ ದೋಷಗಳೊ ಶಾಂತವೃತ್ತಿಗಳೊ ಮನಸ್ಸಿನಲ್ಲಿ ವ್ಯಾಪಿಸಿ, ಅವುಗಳ ವ್ಯಾಪಕತ್ವವನ್ನು ಬಾಹ್ಯ ಇಂದ್ರಿಯಗಳ ಮೂಲಕ ಕಾಣಿಸಿಕೊಳ್ಳುತ್ತವೆ ಎಂಬ ಅರ್ಥವಾಗುತ್ತದೆ. ಇನ್ನೊಂದು ಕಡೆಗೆ ಇದೇ ಸತ್ವರಜತಮವೆಂಬ ಗುಣಗಳನ್ನು ಬುದ್ಧಿಗೆ ಅನ್ವಯಿಸಿಕೊಳ್ಳುವಾಗ ಅದೇ ಗ್ರಂಥದಲ್ಲಿ ಹೀಗೆ ಹೇಳಿದೆ:—

ಮಾಡತಕ್ಕ ಕೆಲಸವಾವುದು, ಮಾಡಕೂಡದ ಕೆಲಸವಾವುದು, ಅಹುದಾದ ಕೆಲಸವಾವುದು, ಅಲ್ಲವಾದ ಕೆಲಸವಾವುದು, ಅಂಜತಕ್ಕ ಮಾತಾವುದು, ಅಂಜಬಾರದ ಮಾತಾವುದು, ಬಂಧವಾವುದು, ಮೋಕ್ಷವಾವುದು ಮುಂತಾದವುಗಳನ್ನು (ಯಥಾರ್ಥವಾಗಿ) ತಿಳಿಯುವ ಬುದ್ಧಿಯೇ ಸಾತ್ವಿಕ ಬುದ್ಧಿಯು. ಧರ್ಮ—ಅಧರ್ಮ, ಕಾರ್ಯ—ಅಕಾರ್ಯ ಇವುಗಳ ಯಥಾರ್ಥವಾದ ನಿರ್ಣಯವನ್ನು ಸರಿಯಾಗಿ ಮಾಡದ ಬುದ್ಧಿಯೇ ರಾಜಸ ಬುದ್ಧಿಯು. ಅಧರ್ಮಕ್ಕೆ ಧರ್ಮವೆನ್ನುವ ಇಲ್ಲವೆ ಸರ್ವವಿಷಯಗಳಲ್ಲಿಯೂ ವಿರುದ್ಧವಾದ ನಿರ್ಣಯವನ್ನು ಕೊಡುವ ಬುದ್ಧಿಯು ತಾಮಸವು."

ಈ ಮಾತುಗಳನ್ನು ಮುಂದೆ ಟೀಕಿಸುವಾಗ ಅದೇ ಗ್ರಂಥವು ಏನು ಅನ್ನುತ್ತದೆ ನೋಡೋಣ:—

"ಬುದ್ಧಿಯು ಒಂದೆಯೇ ಇದ್ದು ಒಳ್ಳೆಯದನ್ನು ಆರಿಸುವ ಈ ಸಾತ್ವಿಕ ಧರ್ಮವು ಆ ಬುದ್ಧಿಯಲ್ಲಿಯೇ ಪೂರ್ವಸಂಸ್ಕಾರದಿಂದಾಗಲಿ, ಶಿಕ್ಷಣದಿಂದಾಗಲಿ, ಇಂದ್ರಿಯ ನಿಗ್ರಹದಿಂದಾಗಲಿ, ಆಹಾರಾದಿಗಳಿಂದಾಗಲಿ, ಉಂಟಾಗುತ್ತದೆಂದೂ, ಈ ಪೂರ್ವಸಂಸ್ಕಾರಾದಿ ಕಾರಣಗಳು ಇಲ್ಲದಿದ್ದರೆ, ಆ ಬುದ್ಧಿಯೇ ಕೇವಲ ಕಾರ್ಯಾಕಾರ್ಯ ನಿರ್ಣಯದ ಕೆಲಸದಲ್ಲಿ ಮಾತ್ರವೇ ಅಲ್ಲ, ಮಿಕ್ಕ ವಿಷಯಗಳಲ್ಲಿಯೂ ರಾಜಸ ಅಥವಾ ತಾಮಸವಾಗ ಬಹುದೆಂದೂ ಮೇಲಿನ ಮಾತುಗಳ ಭಾವಾರ್ಥವು . . . . ಈ ಕಾರಣಕ್ಕೋಸ್ಕರವೇ ಕಠೋಪನಿಷತ್ತಿನಲ್ಲಿ ಶರೀರಕ್ಕೆ ರಥದ ಉಪಮೆಯನ್ನು ಕೊಟ್ಟು ರಥಕ್ಕೆ ಹೂಡಿದ ಇಂದ್ರಿಯರೂಪ ಕುದುರೆಗಳು ಇಂದ್ರಿಯೋಪಭೋಗದ ಮಾರ್ಗದಲ್ಲಿ ವ್ಯವಸ್ಥಿತವಾಗಿ ನಡೆಯುವುದಕ್ಕೆ ಬುದ್ಧಿರೂಪ ಸಾರಥಿಯು ಮನೋಮಯ ಲಗಾಮನ್ನು ಧೈರ್ಯದಿಂದ ನೆಟ್ಟಗೆ ಬಿಗಿಹಿಡಿಯಬೇಕೆಂದು ರೂಪಕಮಾಡಿದೆ".

ಈ ಮೇಲಿನ ಮಾತುಗಳಿಂದ ಮನೋವಿಕಾರಗಳು ಕೆಲವರಲ್ಲಿ ಪಾರಂಪರ್ಯಗುಣವಾಗಿ ಅಂಟಿಕೊಳ್ಳುತ್ತವೆ. ಕೆಲವರಲ್ಲಿ ಸಹವಾಸ, ಆಹಾರ ಮುಂತಾದವುಗಳಿಂದ ಆಯಾಯ ಕಾಲದಲ್ಲಿ ವ್ಯಾಪಿಸಿಕೊಳ್ಳುತ್ತವೆ ಎಂತಲೂ ಅಂಥ ಗುಣಗಳ ಪ್ರೇರಣೆಯೇ ಅವನ ಕಾರ್ಯಗಳಿಗೆ ಅಗತ್ಯವಿರುವುದರಿಂದ ಆ ಪ್ರೇರಣೆಯು ಸತ್ ಪ್ರೇರಣೆಯಾಗುವಂತೆ, ಅವನ ಮನಸ್ಸು ಶುದ್ಧವಾಗುವಂತೆ ಶಿಕ್ಷಣವೂ ಸಹವಾಸವೂ ಮಾಡತಕ್ಕದ್ದಿದೆ ಎಂದು ಸ್ಪಷ್ಟವಾಗುತ್ತಿದೆ. ಮೇಲೆ ಉಲ್ಲೇಖಿಸಿದ ಕಠೋಪನಿಷತ್ತಿನ ರೂಪಕದಲ್ಲಿ ಇದನ್ನು ವ್ಯಕ್ತಪಡಿಸಿಯದೆ. ಬುದ್ಧಿಯು ಸಾರಾಸಾರ ವಿಚಾರಮಾಡುವ ಸಾರಥಿಯಾಗಿದ್ದರೂ ಕಡಿವಾಣವು ಅವನ ಕೈಯಲ್ಲಿಲ್ಲ ದಿದ್ದರೆ ಕುದುರೆಗಳನ್ನು ಸರಿದಾರಿ ಬಿಟ್ಟುಹೋಗದಂತೆ ಬಿಗಿ ಹಿಡಿಯುವುದಾದರೂ ಹೇಗೆ? ಈ ಕಡಿವಾಣವು ಮನಸ್ಸು. ಮನಸ್ಸು ಬುದ್ಧಿಯ ನಿರ್ಣಯವನ್ನು ಕರ್ಮೇಂದ್ರಿಯಗಳಿಗೆ ತಿಳಿಸುವ ಅಂತರ್ ಇಂದ್ರಿಯ ವೆಂದರೆ ಅದು ಹೇಗೆ ಹೋಗಬೇಕು ಎಂದು ಇಂದ್ರಿಯ ಕುದುರೆಗೆ ಸೂಚಿಸುತ್ತದೆಂದು ಅರ್ಥವಾಯಿತು. ಹಾಗಿದ್ದರೆ ಹಿರಿಯರಾಗಲಿ ಶಿಕ್ಷಕರಾಗಲಿ ಮಕ್ಕಳ ಮನಸ್ಸಿನಲ್ಲಿ ಹುಟ್ಟುಗುಣವಾಗಿ, ಅಥವಾ ಪಾರಂಪರ್ಯ (ಆನುವಂಶಿಕ) ಗುಣವಾಗಿ, ಅಥವಾ ಸಹವಾಸದ ಲೇಪನದಿಂದ ಬರುವ ಗುಣಗಳ ಪರಿಚಯವನ್ನು ಮಾಡಿಕೊಳ್ಳಬೇಕಾದುದು ಪ್ರಥಮ ಕರ್ತವ್ಯ.

ಮಕ್ಕಳ ಮನಸ್ಸು ಚಂಚಲವಾಗಿರಬಹುದು, ಬಹು ಬೇಗನೆ ಬಾಹ್ಯ ವಸ್ತುಗಳ ಭಾವನೆಗಳ ಕಲ್ಪನೆಗಳ ಮೂಲಕ ಮನೋವಿಕಾರಗಳಿಗೆ (ಸಿಟ್ಟು, ಸಂತೋಷ, ಈರ್ಷೆ, ಮದ ಇತ್ಯಾದಿಗಳಿಗೆ) ಸೆರೆಯಾಗಬಹುದು. ಕೆಲವು ಮಕ್ಕಳಲ್ಲಿ ಒರಟುತನವಿದೆ. ಇದು ಆತ್ಮಪ್ರತಿಷ್ಠೆಯ ಒಂದು ಚಿಹ್ನೆ. ಅದು ಹಲವು ಸಲ ಹಟಮಾರಿತನಕ್ಕೂ ಹೇಳಿದ್ದಕ್ಕೆ ವಿರೋಧವಾಗಿ ವರ್ತಿಸಲಿಕ್ಕೂ ಪ್ರೇರೇಪಿಸುತ್ತದೆ. ಇಂಥ ಮಕ್ಕಳನ್ನು ತಿದ್ದುವುದಕ್ಕೆ ತಾಳ್ಮೆಯೂ ವಿಚಾರವೂ ಉಪಾಧ್ಯಾಯನಲ್ಲಿ ಬೇಕಾಗುತ್ತವೆ. ಹೆಣ್ಣು ಮಕ್ಕಳಲ್ಲಿ ಮನೋವಿಕಾರಗಳ ಪ್ರತಿಭೆಯು ಹೆಚ್ಚು; ಬುದ್ಧಿ ಮತ್ತು ಸಾರಾಸಾರ ವಿವೇಕದ ಪ್ರೇರೇಪಣೆಯು ಕಡಿಮೆ. ಹೆಣ್ಣುಮಕ್ಕಳನ್ನು ಗಂಡುಮಕ್ಕಳೊಂದಿಗೆ 10 ವರ್ಷ ಪ್ರಾಯದ ಅನಂತರ ಜತೆಯಲ್ಲಿ ಶಿಕ್ಷಣಕೊಡುವುದು ಯೋಗ್ಯವಲ್ಲ. ಸಣ್ಣ ಮಕ್ಕಳಿಗೆ ಸ್ತ್ರಿಯರೇ ಪಾಠ ಹೇಳುವುದು ಉತ್ತಮ. ಹೆಣ್ಣುಮಕ್ಕಳಿಗೆ ಗಣಿತ ನ್ಯಾಯ, ತರ್ಕ, ವ್ಯಾಕರಣ ಮೊದಲಾದುವುಗಳಿಗಿಂತ ಕಾವ್ಯ ಕಥೆ ಮುಂತಾಗಿ ಮನೋವಿಕಾರಗಳಿಗೆ ತವುರುಮನೆಯಾದ ವಿಷಯಗಳ ಮೇಲೆ ಪ್ರೇಮ ಹೆಚ್ಚು; ಗಂಡುಮಕ್ಕಳಿಗೆ ಪ್ರಯಾಣ, ವಿಚಿತ್ರರಚನೆ, ಧೈರ್ಯ, ಸ್ಥೈರ್ಯಾದಿಗಳಿಂದ ಕೂಡಿದ ಗ್ರಂಥಗಳಲ್ಲಿ ಅಭಿರುಚಿ ಹೆಚ್ಚು; ಗಣಿತ ನ್ಯಾಯ ಮುಂತಾಗಿ ವಿವೇಚನೆ, ವಿಮರ್ಶೆ, ನಿರ್ಣಯಶಕ್ತಿಗೆ ರಂಗಸ್ಥಳವಾದ ವಿಷಯಗಳು ಗಂಡುಮಕ್ಕಳ ಮನಸ್ಸಿಗೆ ಬೇಗನೆ ಹಿಡಿಯುತ್ತವೆ. ಹೀಗಾಗಿ ಅವರಿಬ್ಬರನ್ನು 10 ವರ್ಷ ಪ್ರಾಯದ ಮೇಲೆ ಜತೆಯಲ್ಲಿ ಕಲಿಸಿದರೆ, ಅಥವಾ ಆ ಪ್ರಾಯ ದಾಟಿದನಂತರ ಸ್ತ್ರೀಯರು ಪಾಠ ಹೇಳುತಿದ್ದರೆ, ಗಂಡುಮಕ್ಕಳು ಸ್ತ್ರೀಯ ಸೌಮ್ಯ ಗುಣಗಳನ್ನೆ ಹೆಕ್ಕಿಕೊಂಡು, ಧೈರ್ಯ ಮನೋದಾರ್ಢ್ಯ ಮುಂತಾದ ಪುರುಷಲಕ್ಷಣಗಳನ್ನು ಕಳೆದುಕೊಳ್ಳುವರು. ಹಾಗೆಯೇ ಹೆಣ್ಣುಮಕ್ಕಳು ಗಂಡುಮಕ್ಕಳ ಜತೆಯಲ್ಲಿ ಪುರುಷಲಕ್ಷಣಗಳನ್ನು ಹೆಕ್ಕಿಕೊಂಡು ಸ್ತ್ರೀಯ ಸ್ವಾಭಾವಿಕ ಗುಣಗಳನ್ನು ತೊರೆದು ಗಂಡುಬೀರಿಯಾಗಿ ಬಿಡುವರು. ಇದನ್ನು ಇನ್ನೊಂದು ರೀತಿಯಾಗಿ ಹೇಳುವುದಾದರೆ ಸ್ತ್ರೀಯರ ಜತೆಯಲ್ಲಿದ್ದು ಸ್ತ್ರೀಯರಿಂದ ಪಾಠ ಹೇಳಿಸಿಕೊಳ್ಳುವ ಕನ್ನಿಕೆಯು ಸೀತೆಯಂತಾಗುವಳು. ಗಂಡುಮಕ್ಕಳ ಜತೆಯಲ್ಲಿ ಪಾಠಕಲಿತು ಗಂಡಸರಿಂದಲೇ ಪಾಠ ಹೇಳಿಸಿಕೊಳ್ಳುವ ಕನ್ನಿಕೆಯು ದ್ರೌಪದಿಯಂತಿರುವಳು. ಸ್ತ್ರೀಯು

ಸ್ತ್ರೀಯಾಗಿದ್ದು ಪುರುಷನು ಪುರುಷನಾಗಿದ್ದರೆ ಅವರಿಬ್ಬರ ಗುಣಗಳ ಪರಸ್ಪರ ಸಮ್ಮೇಲನದಿಂದ ಕುಟುಂಬವು ಕುಟುಂಬವೆನಿಸುತ್ತದೆ. ಇದರಲ್ಲಿ ವ್ಯತ್ಯಾಸಗಳಾದರೆ ಆ ಕುಟುಂಬದಲ್ಲಿ ಸಾರ್ವದಾ ಜಗಳ, ವೈಮನಸ್ಸು, ಅವಿಚಾರಗಳು ಬೆಳೆದು ಮನೆಯೆಂಬುದು ಸ್ಮಶಾನವಾಗುತ್ತದೆ.

ಅಭಿರುಚಿಯೂ ಚಿತ್ತಾಕರ್ಷಣ ಶಕ್ತಿಯೂ

16ನೆಯ ಅಧ್ಯಾಯ

ಮನೋವಿಕಾರಗಳು ತೃಷ್ಣೆಯನ್ನು, ತೃಷ್ಣೆಯ ಮೂಲಕ ಸುಖ ದುಃಖ ಪ್ರಾಪ್ತಿಯನ್ನು ಮಾಡುವುದರಿಂದ ಕಲ್ಪನಾಶಕ್ತಿಯ ಬೆಳವಣಿಗೆಗೆ ಅವು ಸಹಾಯಕವಾಗಿವೆ ಎಂದು ಹಿಂದೆ ಹೇಳಿದ್ದೇವೆ. ಈ ಸುಖದುಃಖಗಳಲ್ಲಿ ಶಾರೀರಕ, ಮತ್ತು ಮಾನಸಿಕವೆಂದು ಎರಡು ಶಾಖೆಗಳಿವೆ ಎಂತಲೂ ಹಿಂದೆ ವಿವರಿಸಿದೆವು. ಮನುಷ್ಯ ದೇಹವು 'ವಿಷಯ ಸುಖರೂಪ ಸ್ವಾರ್ಥವೆಂಬ ಎರಕದಲ್ಲಿ ಹೊಯ್ದ ಬೊಂಬೆ' ಎಂದು ಕೆಲವು ತತ್ವವಾದಿಗಳು ಚರ್ಚಿಸುವಾಗಲೂ ಇಂದ್ರಿಯ ಸುಖದುಃಖಗಳು ಮನೋವಿಕಾರಗಳಲ್ಲಿ ಉಂಟಾಗುತ್ತವೆ, ಅಂಥ ಮನೋವೃತ್ತಿಗಳಿಲ್ಲದಿದ್ದರೆ ಮನುಷ್ಯನ ಯಾವ ಕಾರ್ಯಕ್ಕೂ ಪ್ರೇರಣೆ ಇಲ್ಲವೆಂಬುದನ್ನೆ ಪುಷ್ಟೀಕರಿಸುತ್ತವೆ. ತೋಟದಲ್ಲಿ 'ಹಾವು' ಎಂಬ ಶಬ್ದವನ್ನು ಕೇಳಿದ ದೃಷ್ಟಾಂತದಲ್ಲಿ ನಮ್ಮಲ್ಲಿ 'ಅದು ಏನು' ಎಂದು ಕುತೂಹಲವಾಗಲಿ, ಅದರ ಪೂರ್ವ ಕಲ್ಪನೆಯಾಗಲಿ ಇದ್ದಿದ್ದರೆ, ಅದನ್ನು ನೋಡಿ ಅದು ಕಚ್ಚೀತು ಎಂಬ ಭಯವಾಗಲಿ, ಅದು 'ಕೃತಕ ಹಾವು, ಮಣ್ಣಿನ ಪ್ರತಿಮೆ' ಎಂದು ತಿಳಿದಾಗ ಉಂಟಾಗುವ ಸಂತೋಷವಾಗಲಿ ಮನೋವಿಕಾರಗಳೇ. ಈ ಮನೋವಿಕಾರಗಳು ನಮ್ಮ ಜ್ಞಾನೇಂದ್ರಿಯಗಳನ್ನು ಇನ್ನಷ್ಟು ಆ ವಸ್ತುವಿನ ಪರಿಚಯಮಾಡುವುದಕ್ಕಾಗಲಿ ಅಥವಾ ಕರ್ಮೇಂದ್ರಿಯಗಳನ್ನು ಪ್ರಾಣರಕ್ಷಣೆಗೋಸ್ಕರ ಓಡಿಹೋಗುವುದಕ್ಕಾಗಲಿ

ಪ್ರೇರೇಪಿಸುತ್ತವೆ. ಈ ಬಗೆಯ ಪ್ರೇರಣೆಗೆ **ಅಭಿರುಚಿ** ಎನ್ನುವರು. ಅಭಿರುಚಿ ನಮ್ಮ ಮನಸ್ಸನ್ನು ಆ ವಸ್ತುವಿನ ಕಡೆಗೆ ಆಕರ್ಷಿಸಿ ಹಿಡಿಯುತ್ತದೆ. ಇದಕ್ಕೆ **ಚಿತ್ತಾಕರ್ಷಣಶಕ್ತಿ** ಎಂದೂ ಹೇಳಬಹುದು. 'ನೀವು ಗಾಯನವನ್ನಾಗಲಿ ಚಿತ್ರಲೇಖನವನ್ನಾಗಲಿ ಏತಕ್ಕೆ ಕಲಿಯುತ್ತೀರಿ?' ಎಂದು ನಿಮಗೆ ಯಾರಾದರೂ ಕೇಳಿದರೆ 'ನನಗೆ ಆ ಕಲೆಗಳಲ್ಲಿ ಅಭಿರುಚಿ ಇದೆ' ಎಂದು ನೀವು ಅನ್ನುವಿರಿ. ಯಾವುದು ನಿಮ್ಮ ಮನಸ್ಸನ್ನು ಬಿಗಿ ಹಿಡಿದು ಅದರ ಪಟಲದಲ್ಲಿ ಒಂದು ಮನೋವಿಕಾರವನ್ನು ವ್ಯಾಪಿಸಿ, ಇತರ ಮನೋವೃತ್ತಿಗಳನ್ನು ಅಡಿಗೆ ಹಾಕುತ್ತದೊ ಅದೇ ಅಭಿರುಚಿ. ಆ ಕೆಲಸದಲ್ಲಿ ನಿರತರಾಗಿರುವಾಗ ನಿಮಗೆ ಬೇರೆ ಕೆಲಸದ ಗೊಡವೆ ಮನಸ್ಸಿಗೆ ಹತ್ತುವುದಿಲ್ಲ.

ಮನುಷ್ಯನ ಅಭಿರುಚಿಯಲ್ಲಿ ವಿವಿಧ ಪ್ರಕಾರಗಳಿವೆ. ಒಬ್ಬನಿಗೆ ಗಾಯನದಲ್ಲಿ ಅಭಿರುಚಿ ಇದೆ. ಇನ್ನೊಬ್ಬನಿಗೆ ಮೈಗಳ್ಳನಾಗಿ ತಿರುಗುವುದೇ ಮನಸ್ಸಿಗೆ ಹಿತ. ಇನ್ನೊಬ್ಬನಿಗೆ ಚೂರಿಯನ್ನಾಗಲಿ ಹಾರೆಯನ್ನಾಗಲಿ ಗುದ್ದಲಿಯನ್ನಾಗಲಿ ಹಿಡಿದುಕೊಂಡು ತೋಟದಲ್ಲಿ ಕೆಲಸ ಮಾಡುವ ಅಭಿರುಚಿ ಇದೆ. ಕೆಲವರಿಗೆ ಹಾಳುಹರಟೆ ಕೊಚ್ಚುವುದರಲ್ಲಿ ಅಭಿರುಚಿ ಹೆಚ್ಚು. ಇನ್ನು ಕೆಲವರಿಗೆ ಪ್ರಯಾಣದಲ್ಲಿ ಅಭಿರುಚಿ ಇರುವುದು. ಮತ್ತು ಕೆಲವರಿಗೆ ನೂತನ ಗ್ರಂಥಗಳನ್ನು ತರಿಸಿ ಓದುವುದರಲ್ಲಿ ಅಭಿರುಚಿ ಇರಬಹುದು. ಅದರಲ್ಲಿಯೂ ಒಂದೇ ಬಗೆಯ ಗ್ರಂಥಗಳನ್ನು ಓದುವುದರಲ್ಲಿ ಅಷ್ಟು ಮಂದಿಗೂ ಅಭಿರುಚಿ ಇರಲಾರದು. ಕಾದಂಬರಿಗಳಲ್ಲಿ ಕೆಲವರು, ಜ್ಯೋತಿಷ್ಯ ಶಾಸ್ತ್ರದಲ್ಲಿ ಕೆಲವರು, ಭೌತಿಕ ಶಾಸ್ತ್ರದಲ್ಲಿ ಕೆಲವರು ಇತ್ಯಾದಿಯಾಗಿ ಕಾಲಕಳೆಯುವುದೂ ಉಂಟು.

ಅಭಿರುಚಿಯಿಂದ ಯಾವಾಗಲೂ ಸಂತೋಷವೇ, ಸುಖವೇ ಪರಿಣಾಮವಾಗಿಲ್ಲ. ಅಂಗಡಿಗೆ ಸಾಮಾನು ತರಲಿಕ್ಕೆ ಹೋದ ಮನುಷ್ಯನು ಅಲ್ಲಿ ಕರಡಿಯನ್ನು ಕುಣಿಸುವವನ ಅಥವಾ ವಿಚಿತ್ರವಾದ ಇಂದ್ರಜಾಲ ವಿದ್ಯೆಯನ್ನು ತೋರಿಸುವ ಡೊಂಬನ ಕೆಲಸಗಳನ್ನು ನೋಡಿ, ಆಶ್ಚರ್ಯದಿಂದ ಪರವಶನಾಗಬಹುದು. ಅಥವಾ ಒಂದು ಮನೆಗೆ ಫಕ್ಕನೆ ಬೆಂಕಿ ಬಿದ್ದು ಮನೆಯ ಒಳಗಿನ ಜನರ ಗೋಳನ್ನು ಕೇಳಿ, ಚಿಂತೆಯಿಂದ ಮೈಮರೆಯು

ಬಹುದು. ಆಕಸ್ಮಿತವಾಗಿ ಸೋಡ್ತಿಯಲ್ಲಿ ಒಂದೆರಡು ಲಕ್ಷ ರೂಪಾಯಿ ಸಿಕ್ಕಿತೆಂಬ ತಂತಿ ವರ್ತಮಾನವನ್ನು ನೋಡಿ ಆಶ್ಚರ್ಯವೂ, ಸಂತೋಷವೂ ಉಕ್ಕಿ ನೀರವನಾಗಿ ಕುಳಿತಿರಬಹುದು. ಇದೇ ರೀತಿಯಲ್ಲಿ ತನ್ನ ಎದುರಿನಲ್ಲಿ ಇಬ್ಬರು ಜಗಳವಾಡಿಕೊಂಡು ಒಬ್ಬರನ್ನು ಒಬ್ಬರು ಚೂರಿಯಿಂದ ತಿವಿದಾಗ ಸಿಟ್ಟಿನ ಪರವಶನಾಗಿ, ತನ್ನ ಶಕ್ತಿಗೆ ಮೀರಿದ ಯಾವುದೊಂದು ಸಾಹಸ ಕಾರ್ಯವನ್ನು ಮಾಡಲು ಎಣಿಸಬಹುದು.

ಹಾಗಾದರೆ ಭಯ, ಚಿಂತೆ, ಸಂತೋಷ, ದುಃಖ, ಸಿಟ್ಟು ಮುಂತಾದ ಮನೋವಿಕಾರಗಳಿಗೂ, ಅಭಿರುಚಿಗೂ ನಿಕಟ ಸಂಬಂಧವಿದೆ ಎಂದು ಗೊತ್ತಾಗುವುದು. ಮನೋವಿಕಾರದ ತೇಜವು ಎಷ್ಟಕ್ಕೆ ಹೆಚ್ಚಿತೋ ಅಷ್ಟಕ್ಕೆ ಮನಸ್ಸನ್ನು ಆಕರ್ಷಿಸುವ ಅಭಿರುಚಿಯ ಬಿಗುಪೂ, ವ್ಯಾಪ್ತಿಯೂ ಇರುವವು. ಅಂದರೆ ಮನೋವಿಕಾರದ ತೀಕ್ಷ್ಣತೆಗೆ ಸರಿಯಾಗಿ ನಮ್ಮ ಮನಸ್ಸು ಅಲ್ಲಿ ತಲ್ಲೀನವಾಗುವ ಕಾಲವು ಹೆಚ್ಚಾಗಬಹುದು. ಅಭಿರುಚಿಯನ್ನು ನೆಲೆಗೊಳಿಸುವ ಶಕ್ತಿಯು ಹೆಚ್ಚಿದಷ್ಟಕ್ಕೆ ಮನೋವಿಕಾರದ ತೀಕ್ಷ್ಣತೆಯು ಹೆಚ್ಚುವುದು. ಉದಾಹರಣೆಯಾಗಿ ಗಾಯನದ ಮೇಲೆ ನಮಗೆ ಅಭಿರುಚಿ ಇರುವುದೇ ತಡ, ಅದು ನಮಗೆ ಸುಖವನ್ನು ಕೊಡುವಷ್ಟಕ್ಕೆ ನಮ್ಮ ಮನಸ್ಸು ಹೆಚ್ಚು ಹೆಚ್ಚಾಗಿ ಅದರಲ್ಲಿ ಆಸಕ್ತಿಯನ್ನು ತೋರಿಸುವುದು. ದುಃಖಕರವಾದ ನೋಟಗಳನ್ನು ನೋಡುತ್ತ ಇರುವಷ್ಟಕ್ಕೆ ಯಾವುದೊಂದೂ ದುಃಖಕರವಾದ ವಾರ್ತೆಯನ್ನು ಕೇಳಿದೊಡನೆ ನಮ್ಮ ಮನಸ್ಸು ಕರಗಿ, ದುಃಖ ಪೀಡಿತರ ಕಡೆಗೆ ದಯಾಭಾವವನ್ನು ತೋರಿಸಬೇಕೆಂಬ ಕಾಂಕ್ಷೆಯು ವೃದ್ಧಿಯಾಗುತ್ತದೆ. ಇತರ ಮನೋವಿಕಾರಗಳ ಅವಸ್ಥೆಯೂ ಇದೇಯಾಗಿದೆ. ಈ ಚಿತ್ತಾಕರ್ಷಣ ಶಕ್ತಿಯು ಎರಡು ಬಗೆಯ ಕೆಲಸಗಳನ್ನು ಮಾಡುತ್ತದೆ. ಯಾವುದೊಂದು ಮನೋವಿಕಾರದಿಂದ ತುಂಬಿದ ಮನುಷ್ಯನು ಅದರ ನಿವಾರಣೆಗೆ ಬೇಕಾದ ಉಪಾಯವನ್ನು ಕೈಕೊಳ್ಳಬಹುದು. ಅಥವಾ ಏನುಮಾಡ ಬೇಕೆಂದು ತೋರದೆ ತಟಸ್ಥನಾಗಬಹುದು. ಮರಕಡಿಯುವುದಕ್ಕೆ ಕಾಡಿಗೆ ಹೋದ ಮನುಷ್ಯನು ಫಕ್ಕನೆ ಹುಲಿಯನ್ನು ಕಂಡು, ಏನು ಮಾಡಬೇಕೆಂದು ತೋರದೆ ಕಣ್ಣುಕತ್ತಲೆ ಬಂದಂತಾಗಿ ಬಿದ್ದುಬಿಡಬಹುದು. ಇಲ್ಲಿ ಭಯವೆಂಬ ಮನೋವಿಕಾರವು ಬುದ್ಧಿಯ ಕೆಲಸವನ್ನು ಮಾಡಲಿಕ್ಕೆ ಬಿಡದೆ, ಕರ್ಮೇಂದ್ರಿ

ಯುಗಳಿಗೆ ಅಗತ್ಯವಿರುವ ಸೂಚನೆಗಳನ್ನು ಕೊಡುವುದಿಲ್ಲ. ಆದರೆ ಅದೇ ಮನುಷ್ಯನು ಕಂಗೆಡದೆ ಮರವನ್ನು ಹತ್ತಿಕೊಂಡು ಹುಲಿಯ ಬಾಯಿಯಿಂದ ತಪ್ಪಿಸಿಕೊಳ್ಳುವುದಕ್ಕಾಗಲಿ ಅಥವಾ ಕೈಯಲ್ಲಿರುವ ಕೊಡಲಿಯಿಂದ ಆ ಹುಲಿಯನ್ನು ಹೊಡದು ಕೊಲ್ಲುವುದಕ್ಕಾಗಲಿ ಉದ್ಯುಕ್ತನಾಗುತ್ತಾನೆಂದು ತಿಳಿಯುವ. ಆಗ ತಪ್ಪಿಸಿಕೊಳ್ಳುವ ಯತ್ನವನ್ನು ಮಾಡಿದರೆ ಅವನಲ್ಲಿ ವಿಚಾರಶಕ್ತಿಯು ಮುಂದಿನ ಉಪಾಯವನ್ನು ಕಾಣಲಿಕ್ಕೆ ಪ್ರೇರೇಪಿಸುತ್ತದೆ ಎನ್ನಬೇಕು. ಕೊಡಲಿಯಿಂದ ಕೊಲ್ಲುವುದಕ್ಕೆ ಮುಂದಾದರೆ ಧೈರ್ಯವೂ ಪೌರುಷವೂ ಅವನ ಮನಸ್ಸಿನಲ್ಲಿ ವ್ಯಾಪಿಸಿ, ತನ್ನ ಕೈಯನ್ನೂ ದೃಷ್ಟಿಯನ್ನೂ ಶಸ್ತ್ರಪ್ರಯೋಗಕ್ಕೆ ಸಿದ್ಧಗೊಳಿಸುವ ಪ್ರೇರೇಪಣೆಮಾಡುತ್ತದೆ. ಅಂದರೆ ಈ ಮನೋವಿಕಾರಗಳ ಪರಿಣಾಮವು ಏನೂ ಕಾರ್ಯವನ್ನು ಮಾಡಲು ಯತ್ನಿಸದ ನಿವೃತ್ತಿಮಾರ್ಗವನ್ನಾಗಲಿ, ಅಥವಾ ತಕ್ಕ ರೀತಿಯ ವ್ಯವಸ್ಥೆಯನ್ನು ಮಾಡುವ ಪ್ರವೃತ್ತಿ ಮಾರ್ಗವನ್ನಾಗಲಿ ಕೈಕೊಳ್ಳುವುದಕ್ಕೆ ಪ್ರೇರೇಪಿಸುತ್ತದೆ.

ಕೆಲವೊಂದು ವೇಳೆ ಒಂದು ಮನೋವಿಕಾರದ ಪರಿಣಾಮವು ಮನಸ್ಸಿನಲ್ಲಿ ಜಾಗ್ರುತಿಯನ್ನು ಹುಟ್ಟಿಸುವ ಬದಲಾಗಿ ಪದೇ ಪದೇ ಮನಸ್ಸಿನ ಮೇಲೆ ಬಿಂಬಿಸುವುದರಿಂದ ಒಂದು ಬಗೆಯ ಔದಾಸೀನ್ಯವನ್ನು ಉಂಟುಮಾಡುತ್ತದೆ. ಶಸ್ತ್ರಪ್ರಯೋಗವನ್ನು ಮಾಡುವ ಡಾಕ್ಟರನು ರೋಗಿಗಳ ದುಃಖದ ಸ್ವರವನ್ನು ಕೇಳಿ ಕೇಳಿ, ಅಭ್ಯಾಸ ಬಲದಿಂದ ಒಂದು ಬಗೆಯ ಔದಾಸೀನ್ಯವನ್ನು ತಳೆಯುತ್ತಾನೆ. ಅಂದರೆ ಅವನ ಮನಸ್ಸಿನಲ್ಲಿ ಆ ಗೋಳಿನಿಂದ ದುಃಖವಾಗಲಿ ಭಯವಾಗಲಿ ಉದ್ರೇಕವಾಗುವುದಿಲ್ಲ. ಅಭ್ಯಾಸಗುಣದಿಂದ ಹೀಗೆ 'ನಮ್ಮ ಮನಸ್ಸು ಗಟ್ಟಿಯಾಗುತ್ತದೆ' ಎನ್ನುತ್ತೇವೆ.

ಮೇಲೆ ಹೇಳಿದಂತೆ ಮನೋವಿಕಾರಗಳೇ ನಮ್ಮಲ್ಲಿ ಅಭಿರುಚಿಯನ್ನು ಜಾಗೃತಿಗೊಳಿಸಲಿಕ್ಕೆ ಕಾರಣವಾಗಿವೆ. ಆದರೆ ಈ ಚಿತ್ತಾಕರ್ಷಣ ಶಕ್ತಿಯನ್ನು ಬಲಗೊಳಿಸಲಿಕ್ಕೆ ಇಷ್ಟೇ ಸಾಲದು. ಸುಲಭದಲ್ಲಿ ಕೈಸೇರಿದ ವಸ್ತುವಿನ ಮೇಲೆ ಬೇಗನೆ ನಮಗೆ ಪ್ರೇಮವು ಕಡಿಮೆಯಾಗುತ್ತದೆ. ಪದೇಪದೇ ನೋಡುತ್ತ ಇದ್ದರೆ ಅದರ ನವೀನತ್ವವು ಕಳೆದು ಹೋಗಿ, ಅದರ ಮರವೆಯೇ ಬೀಳುತ್ತದೆ. ಅದ್ದರಿಂದ ಒಂದು ಕಡೆಯಲ್ಲಿ ಚಿತ್ತವನ್ನು ಬಿಗಿಯಾಗಿ ನೆಲೆಗೊಳಿಸಬೇಕಾದರೆ ನಮ್ಮಲ್ಲಿ ಆಗುವ ಮನೋವಿಕಾರದ ಬಿಗುಪು ಮಾತ್ರವೇ

ಸಾಕಾಗುವುದಿಲ್ಲ. ಮರದ ಮೇಲೆ ಹಣ್ಣಿದೆ, ಅದನ್ನು ತಿನ್ನಬೇಕೆಂದು ಆಸೆಯಾಗುತ್ತಿದೆ ಎನ್ನೋಣ. ಅದನ್ನು ನೋಡಿ ನಮ್ಮ ಕಣ್ಣು ಸಂತೋಷ ಮತ್ತು ಆಸೆಯೆಂಬ ಮನೋವಿಕಾರಗಳನ್ನು ಜಾಗೃತಿಗೊಳಿಸುತ್ತದೆ. ಆ ಹಣ್ಣು ಕೈಗೆ ಎಟಕುವುದಿಲ್ಲವಾದರೆ ಮರಹತ್ತಿ ಅದನ್ನು ಕೀಳಬೇಕು, ಅಥವಾ ಕಲ್ಲನ್ನು ಅದಕ್ಕೆ ಎಸೆಯಬೇಕು, ಅಥವಾ ಒಂದು ಕೋಲಿನಿಂದ ಅದನ್ನು ಉದುರಿಸಬೇಕು ಎಂಬ ನಿರ್ಣಯವನ್ನು ಬುದ್ಧಿಯು ಮಾಡುತ್ತದೆ. ಆ ನಿರ್ಣಯವನ್ನು ಅನುಷ್ಠಾನದಲ್ಲಿ ತರುವುದಕ್ಕೆ ನಮ್ಮ ಕರ್ಮೇಂದ್ರಿಯಗಳು ಮುಂದಾಗುತ್ತವೆ. ಕೈಕಾಲುಗಳು ಮರವನ್ನು ಹತ್ತಲು ಯತ್ನಿಸುತ್ತವೆ. ಅದು ಸಾಧ್ಯವಾಗದಿದ್ದರೆ ಉದ್ದವಾದ ಒಂದು ಕೋಲನ್ನು ಹುಡುಕಿ ತರಲಿಕ್ಕೆ ಅತ್ತಿತ್ತ ಕಾಲುಗಳು ಓಡುತ್ತವೆ; ಅದೂ ಸಾಧ್ಯವಾಗದಿದ್ದರೆ ಚಿಕ್ಕ ಕಲ್ಲುಗಳನ್ನು ತರಲಿಕ್ಕೆ ಕಾಲುಗಳೂ ಎಸೆಯಲಿಕ್ಕೆ ಕೈಗಳೂ ಮುಂದರಿಸುತ್ತವೆ. ಒಂದು ಎರಡು ಮೂರು ಕಲ್ಲುಗಳನ್ನು ಎಸೆದರೂ ಹಣ್ಣಿರುವ ಗೊನೆಯು ಅಡುತ್ತದಲ್ಲದೆ ಹಣ್ಣು ನೆಲಕ್ಕೆ ಉರುಳುವುದಿಲ್ಲ. ಇನ್ನೂ ಇನ್ನೂ ಕಲ್ಲೆಸೆದು ಹಣ್ಣು ಕೆಳಕ್ಕೆ ಉದುರುವ ವರೆಗೆ ನಾವು ಸುಮ್ಮನಿರುವುದಿಲ್ಲ. ಇಲ್ಲಿ ನಮ್ಮ ಆಸೆಯು ಕೈಗೂಡುವುದಕ್ಕೆ ಅಡ್ಡ ಬಂದ ತೊಡಕುಗಳೇ ನಮ್ಮನ್ನು ಹುರಿದುಂಬಿಸಿ, ನಮ್ಮ ಪ್ರಯತ್ನವನ್ನು ಹೆಚ್ಚಿಸಲಿಕ್ಕೆ ಪ್ರೇರೇಪಿಸುತ್ತವೆ. ಇದಕ್ಕೆ ಆ ಹಣ್ಣು ನಮ್ಮ ಚಿತ್ತಾಕರ್ಷಣವನ್ನೇ ಮಾಡಿದ್ದುದೇ ಕಾರಣವಾಗಿದ್ದರೂ ನಡುವೆ ಬಂದ ತೊಡಕುಗಳು ಈ ಶಕ್ತಿಗೆ ಪುಟಕೊಡುತ್ತವೆ. ಹೀಗೆ ಪ್ರಯತ್ನವನ್ನು ಹೆಚ್ಚಿಸುವುದೇ '**ಸಾಧನೆ.**'

ಹಾಗಾದರೆ ಅಭಿರುಚಿಗೆ ಅಥವಾ ಚಿತ್ತಾಕರ್ಷಣಶಕ್ತಿಗೆ ಮನೋವಿಕಾರಗಳು ಮೂಲವಾದರೂ ಅದನ್ನು ಉತ್ತೇಜಿಸಲಿಕ್ಕೆ ಚಿಕ್ಕ ತೊಡಕು ಅಭ್ಯಂತರಗಳೂ ಸಹಾಯಕವಾಗಿವೆ, ಮತ್ತು ಆ ಆಸೆ ನೆರವೇರುವುದಕ್ಕೆ ಮಾಡುವ ಪ್ರಯತ್ನವು ಸಾಧನೆ ಎಂದಾಯಿತು. ಆದರೆ 'ಸಾಧಿಸಿದರೆ ಸಬಳ ನುಂಗ್ಯಾನು' ಎಂಬ ಮಾತು ಎಲ್ಲಾ ಕಡೆಗಳಲ್ಲಿ ಸರಿ ಹೋಗುವುದಿಲ್ಲ. ಹತ್ತಲು ಅಸಾಧ್ಯವಾದ ಪ್ರಪಾತದ ತುದಿಯಲ್ಲಿ ಒಂದು ರಮ್ಯವಾದ ಹೂ ಬೆಳೆದರೆ ಅದನ್ನು ಕೊಯ್ಯಬೇಕೆಂದು ಆಸೆ ಹುಟ್ಟಿದರೂ 'ದ್ರಾಕ್ಷೆ ಹಣ್ಣು

ಹುಳಿಯಾಗಿದೆ' ಎಂದು ಸಮಾಧಾನಪಟ್ಟು ಹೋದ ನರಿಯಂತೆ ನಮ್ಮ ಚಿತ್ತಾಕರ್ಷಣವು ಆ ಕಡೆಯಿಂದ ಬೇಗನೆ ಅಣಗಿ ಹೋಗುತ್ತದೆ.

ಅಭಿರುಚಿಯ ಪ್ರಭೇದಗಳು:—ಶಾಲೆಗೆ ಮಗು ಹೋಗುತ್ತ ಇದ್ದರೆ ಮುಂದೆ ವಿದ್ಯಾಭ್ಯಾಸದ ಬಲದಿಂದ ಉದ್ಯೋಗವನ್ನು ಪಡೆದು ದ್ರವ್ಯ ಗಳಿಸಬಹುದು ಎಂದು ಆ ಮಗುವಿನ ತಂದೆತಾಯಿಗಳು ಹೇಳುವುದರಿಂದ ಮಗುವು ಪಾಠವನ್ನು ಕಲಿಯಲು ಮನಸ್ಸು ಕೊಡುತ್ತದೆ. ಅಥವಾ ಮರದ ಮೇಲೆ ಹಣ್ಣು ಇರುವುದನ್ನು ನೋಡುತಿದ್ದ ಮಗು ಅದನ್ನು ಹೇಗೆ ತಿನ್ನಬಹುದೆಂದು ನೋಡುತ್ತಾ ಇದೆ. ಈ ಎರಡು ದೃಷ್ಟಾಂತಗಳಲ್ಲಿಯೂ ಫಲಾಕಾಂಕ್ಷೆಯೇ ಅಭಿರುಚಿಯನ್ನು ಬಲಪಡಿಸುವ ಕಾರಣವಾಗಿದೆ. ಒಂದು ಸಣ್ಣಮಗುವು ತನ್ನ ತಾಯಿ ಅಥವಾ, ದಾದಿಯನ್ನು ನೋಡಿದೊಡನೆ ಅವರ ಮನಸ್ಸನ್ನು ತನ್ನ ಕಡೆಗೆ ಆಕರ್ಷಿಸುವಂತೆ ನಕ್ಕು, ಆ ನಗುವಿನ ಪರಿಣಾಮವು ಏನಾಗುತ್ತದೆ ಎಂದು ಎವೆಯಿಕ್ಕದೆ ನೋಡುತ್ತಿರುವುದು ಸ್ವಾರ್ಥಪರವಾದ ಸುಖಾಕಾಂಕ್ಷೆಯ ಅಭಿರುಚಿಯಿಂದಲೇ ಆಗಿರುತ್ತದೆ. ಒಂದು ವಸ್ತುವು ಚಲೋದಿದೆ, ಕಣ್ಣಿಗೆ ರಮ್ಯವಾಗಿದೆ, ಅಥವಾ ಗಾಯನವು ಕಿವಿಗೆ ಇಂಪಾಗಿದೆ, ಅಥವಾ ಒಂದು ವಸ್ತುವು ನಾಲಿಗೆಗೆ ರುಚಿಯಾಗಿದೆ ಎಂಬುದರಿಂದ ಆ ಕಡೆಗೆ ನಮ್ಮ ಮನಸ್ಸನ್ನು ಆಕರ್ಷಿಸುವ ಕೆಲಸದಲ್ಲಿ ಅವು ನಮಗೆ ಸುಖವನ್ನು ಕೊಡುತ್ತವೆ,' ಎಂಬುದರಿಂದಲೇ ಅವುಗಳ ಕಡೆಗೆ ನಮ್ಮ ಅಭಿರುಚಿಯು ಇರುತ್ತದೆ. ಇಂಥಾ ಸ್ವಾರ್ಥಪರವಾದ ಅಭಿರುಚಿಯೇ ಚಿತ್ತಾಕರ್ಷಣಶಕ್ತಿಯ ಅಭಿವೃದ್ಧಿಗೆ ಮತ್ತು ಬೆಳವಣಿಗೆಗೆ ಕಾರಣವಾಗುತ್ತದೆ. ಆದರೆ ಒಂದು ಚಿತ್ರವು ನೋಟಕ್ಕೆ ರಮ್ಯವಾಗಿದೆ, ಅಥವಾ ಒಂದು ರಾಗವು ಕಿವಿಗೆ ಇಂಪಾಗಿದೆ ಎಂಬುದರಿಂದ ನಮಗೆ ಸಿಗುವ ಸುಖಕ್ಕೂ ತಿಂಡಿಯ ಪದಾರ್ಥವು ರುಚಿಕರವಾಗಿದೆ ಎಂಬುದರ ಮೇಲಿಂದ ಹೊಂದುವ ಸುಖಕ್ಕೂ ಬಹಳ ಅಂತರವಿದೆ. ಅದೇ ರೀತಿಯಲ್ಲಿ, ಚೆನ್ನಾಗಿ 'ಮೆಹನತ' ಮಾಡಿದರೆ ಅದರಿಂದ ಪಾಂಡಿತ್ಯವನ್ನು ಹೊಂದಿ, ಹೆಚ್ಚಿನ ದ್ರವ್ಯ ಲಾಭ ವಾಗುವುದು, ಎಂಬುದರಿಂದ ಆಗುವ ಅಭಿರುಚಿಯು ಸ್ವಾರ್ಥಪರವಾಗಿದ್ದರೂ, ಅದರಿಂದ ಉಂಟಾಗುವ ಸುಖವು ಬೇಗನೇ ಪ್ರಾಪ್ತಿಯಾಗುವುದಿಲ್ಲ. ಆದ್ದರಿಂದ, ಅಂಥ ಕಾರ್ಯದ ಮೇಲೆ ಆಸಕ್ತಿಯನ್ನು ತೋರಿ

ಸುವ ಅಭಿರುಚಿಯು ಸ್ವಾರ್ಥಪರವಾದ ಅಭಿರುಚಿಯಲ್ಲಿ ಮೇಲಿನ ತರಗತಿಯದಾಗಿದೆ. ಚಲೋ ಕಾವ್ಯವನ್ನು ಓದುವುದರಲ್ಲಿ ಅಥವಾ ಚಲೋ ಚಿತ್ರವನ್ನು ಬರೆಯುವುದರಲ್ಲಿ ಅಥವಾ ಮನೋಹರವಾದ ನೋಟಗಳನ್ನು ನೋಡುವುದರಲ್ಲಿ, ಸಿಗುವ ಸುಖವು ಅದರಿಂದ ಉಂಟಾಗುವ ದ್ರವ್ಯಲಾಭದ ಮಾನದಿಂದ ಪರಿಗಣಿಸಲ್ಪಡುವುದಿಲ್ಲ. ಬಲುಕಷ್ಟದಿಂದ ನರಳುವವನಿಗೆ ತನ್ನ ಕೈಲಾದಮಟ್ಟಿಗೆ ಸಹಾಯವನ್ನು ಮಾಡಬೇಕೆಂಬ ಕುತೂಹಲವು ಇದ್ದು, ಅದರಲ್ಲಿ ಉಪಕಾರಸ್ಮರಣೆಯ ಪ್ರತಿಫಲವನ್ನು ಕೂಡಾ ಬಯಸದೆ ಇರುವ ಅಭಿರುಚಿಯು ಅತ್ಯುತ್ಕೃಷ್ಟವಾಗಿದೆ. ಇದರಲ್ಲಿ ಪ್ರತಿಫಲಾಪೇಕ್ಷೆ ಇಲ್ಲದಿರುವುದರಿಂದ 'ನಿಷ್ಕಾಮ ಅಭಿರುಚಿ' ಎಂದು ಅದನ್ನು ಕರೆಯಬಹುದು. ಇದು ಬಹಳ ಕಡಿಮೆ ಜನರಲ್ಲಿ ಇರುತ್ತದೆ. ಭೂತದಯೆ ಮುಂತಾದ ಸದ್ಗುಣಗಳ ವಿಶೇಷವಾದ ಪ್ರಸರಣೆಯೇ ಇದಕ್ಕೆ ಕಾರಣವಾಗಿದೆ.

ಹಾಗಾದರೆ ಅಭಿರುಚಿಯಲ್ಲಿ ಮುಖ್ಯವಾದ ಮೂರು ಭೇದಗಳಿವೆ. ಈ ವಸ್ತುವಿನ ಅಥವಾ ಕಾರ್ಯದ ನಿಮಿತ್ತ 'ನನಗೇನು ಪ್ರತಿಫಲ ಸಿಕ್ಕೀತು?' ಎಂಬ ಪ್ರಶ್ನೆಗೆ ಉತ್ತರಕೊಡುವ ಅಭಿರುಚಿಯೊಂದು. 'ಇದರೊಳಗೇನಿದೆ?' ಎಂದು ಗೊತ್ತುಹಚ್ಚಬೇಕು, ಎಂದು ತವಕಗೊಳ್ಳುವ ಅಭಿರುಚಿಯೊಂದು; ಇದು ಒಳ್ಳೆಯದೊ ಕೆಟ್ಟದೊ ಎಂಬುದನ್ನು ಮಾತ್ರ ಕೂಲಂಕಷ ವಿಮರ್ಶೆ ನಡಿಸಬೇಕೆಂಬ ಅಭಿರುಚಿಯೊಂದು. ಮೊದಲನೆ ಅಭಿರುಚಿಗೆ ಫಲಾಕಾಂಕ್ಷಿತ ಅಭಿರುಚಿಯೆನ್ನಬಹುದು. ಎರಡನೆಯದನ್ನು ಪ್ರಥಕ್ಕರಣದ ಅಭಿರುಚಿಯೆನ್ನಬಹುದು. ಮೂರನೆಯದನ್ನು ಸಂಸ್ಕರಣದ ಅಭಿರುಚಿಯೆನ್ನಬಹುದು.

ಮನುಷ್ಯನಲ್ಲಿ ಈ ಮೂರು ಬಗೆಯ ಅಭಿರುಚಿಗಳೂ ವೃದ್ಧಿಯಾಗಿದ್ದರೆ ಮಾತ್ರವೇ ಅವನಲ್ಲಿ ಶಿಕ್ಷಣದ ಪರಿಣಾಮವಾಗಿದೆಯೆನ್ನಬಹುದು. ಚಿಕ್ಕ ಮಗುವಿನಲ್ಲಿಯೂ ಈ ಮೂರು ವಿಧದ ಅಭಿರುಚಿಗಳು ಬೀಜರೂಪದಲ್ಲಿ ಇವೆ. ಸುಮಾರು ಎರಡು ಅಥವಾ ಮೂರು ವರ್ಷ ಪ್ರಾಯ ದಾಟುವವರೆಗೆ ಒಂದು ಕೂಸಿಗೆ ವಿಶೇಷವಾಗಿ ಫಲಾಪೇಕ್ಷೆಯ ಅಭಿರುಚಿಯೇ ವ್ಯಾಪಿಸಿದೆ. ಒಂದು ಮಗುವು ಹುಟ್ಟಿದಂದಿನಿಂದ ಬೆಳೆದು ಮನುಷ್ಯ

ನಾಗುವ ಮೊದಲು ಪ್ರಾಯದ ಅಂತರವನ್ನು ಶೈಶವ, ಬಾಲ್ಯ, ಕೌಮಾರ, ತಾರುಣ್ಯ ಎಂಬ ನಾಲ್ಕು ಅವಸ್ಥೆಗಳಾಗಿ ವಿಭಾಗಿಸಬಹುದು. ಹುಟ್ಟಿದಂದಿನಿಂದ ಸುಮಾರು 3 ವರ್ಷ ಪ್ರಾಯದ ವರೆಗೆ ಅದು ಶಿಶು; 3ರಿಂದ 6 ವರ್ಷ ಪ್ರಾಯದ ವರೆಗೆ ಅದು ಬಾಲಕ; ಆತನಿಗೆ 7ರಿಂದ 12ರ ವರೆಗೆ ಕೌಮಾರ್ಯ, 13ರಿಂದ ಸುಮಾರು 25 ವರ್ಷ ಪ್ರಾಯದ ವರೆಗೆ ತಾರುಣ್ಯವೆನ್ನಬಹುದು. ಈ ಅವಸ್ಥೆಗಳಲ್ಲಿ ಆ ಮಗುವಿನ ಬೆಳವಣಿಗೆಯಲ್ಲಿ ಕ್ರಮವಾದ ಹೆಜ್ಜೆಗಳು ಇವೆ.

ಶೈಶವಾವಸ್ಥೆಯಲ್ಲಿ ಅದರ ಜ್ಞಾನೇಂದ್ರಿಯುಗಳು ಹೊರಗಿನಿಂದ ಹೊಂದಿದ ಅನುಭವಗಳನ್ನು ಸಂಗ್ರಹಿಸುತ್ತವೆ, ಮತ್ತು ಗ್ರಾಹ್ಯಮಾಡಿಕೊಳ್ಳುತ್ತವೆ. ಈ ಇಂದ್ರಿಯುಗಳ ಬಲವು ಮೊತ್ತಮೊದಲು ಬಹಳ ಕಡಿಮೆಯಾಗಿದೆ. ಪದೇ ಪದೇ ಬಾಹ್ಯವಸ್ತುಗಳು ಈ ಇಂದ್ರಿಯುಗಳಿಗೆ ಗೋಚರವಾಗುತ್ತಾ ಅವುಗಳ ನೂತನ ಅನುಭವಗಳಿಂದ ಚಿತ್ತಾಕರ್ಷಣ ಮಾಡುತ್ತವೆ. ಶಬ್ದವು ಕಿವಿಯ ಮೇಲೂ, ಬಗೆಬಗೆಯ ನೋಟಗಳು ಕಣ್ಣಿನ ಮೇಲೂ, ' ದೊರಗು, ನಯ, ಮಿದು' ಎಂಬುದನ್ನು ಪ್ರತ್ಯೇಕಿಸುವ ಅನುಭವಗಳು ಸ್ಪರ್ಶೇಂದ್ರಿಯದ ಮೇಲೂ, ಬಗೆಬಗೆಯ ಪರಿಮಳವು ಘ್ರಾಣೇಂದ್ರಿಯದ ಮೇಲೂ ಒಂದು ಬಗೆಯ ಪರಿಣಾಮವನ್ನು ಉಂಟುಮಾಡುತ್ತವೆ. ಆಗ ಆ ಮಗುವು ತಾನು ಬೇರೆ, ತನ್ನ ಸುತ್ತಲಿರುವ ವಸ್ತುಗಳು ಬೇರೆ, ಎಂಬಿಷ್ಟನ್ನು ಗೊತ್ತುಹಚ್ಚುತ್ತದೆ. ಈ ರೀತಿಯ ಅನುಭವಗಳಲ್ಲಿ ಮೊತ್ತಮೊದಲು ಕ್ರಮವೂ, ವ್ಯವಸ್ಥೆಯೂ ಇಲ್ಲ. ಒಂದು ಕೆಲಸವನ್ನು ಮಾಡಲಿಕ್ಕೆ ತಾನು ಯತ್ನಿಸಬೇಕು ಎಂಬ ವ್ಯವಸ್ಥಿತ ಪ್ರಯತ್ನವೂ ಇಲ್ಲ. ಇಲ್ಲಿ ಬಾಹ್ಯಸಂಸ್ಕಾರಗಳು ನಮ್ಮ ಮನಸ್ಸನ್ನು ಸೆರೆಗೊಳ್ಳುತ್ತವೆ.

3ರಿಂದ 6ರ ವರೆಗೆ ಚಟುವಟಿಕೆಯೇ ಪ್ರಬಲವಾಗಿದೆ. ಆದರೆ ಈ ಚಟುವಟಿಕೆಯಲ್ಲಿ ವ್ಯವಸ್ಥೆ ಇಲ್ಲ. ಸರಿಯಾದ ಆರೋಗ್ಯವುಳ್ಳ ಮಗುವಿನಲ್ಲಿ ಅದರ ದೇಹದೊಳಗಿನಿಂದಲೇ ಈ ಚಟುವಟಿಕೆಯು ಉಕ್ಕಿ ಬರುತ್ತದೆ. ತಾನು ಪ್ರತ್ಯೇಕವಾಗಿ ಇತರರ ಜತೆ ಇಲ್ಲದೆನೇ ಏನಾದರೊಂದು ಕೆಲಸವನ್ನು ಮಾಡುತ್ತಲೇ ಇರುತ್ತದೆ. ತಾಯಿಯು ಮಗುವನ್ನು ಒಲೆಯ ಬಳಿಯಲ್ಲಿ ಬಿಟ್ಟು, ಫಕ್ಕನೆ ಅತ್ತಿತ್ತ ಹೋದರೆ ಅದು ಉರಿಯುವ

ಕೊಳ್ಳಿಯನ್ನು ಒಲೆಯಿಂದ ಈಚೆಗೆ ಎಳೆಯುತ್ತದೆ; ಅಥವಾ ಸಮೀಪದಲ್ಲಿದ್ದ ಪಾತ್ರೆಯನ್ನು ಎಳೆದು ಅದನ್ನು ಕವಚಿಬಿಟ್ಟು, ಅದರೊಳಗಿನ ವಸ್ತುವನ್ನು ನೆಲದ ಮೇಲೆ ಚೆಲ್ಲಿಬಿಡುತ್ತದೆ. ಈ ಚಟುವಟಿಕೆಯಲ್ಲಿ ಉದ್ದೇಶ ವೇನೂ ಇಲ್ಲ. ತನ್ನ ಕೆಲಸದಿಂದ ಮುಂದೆ ಪರಿಣಾಮವೇನಾದೀತೆಂಬ ತಿಳುವಳಿಕೆಯೂ ಇಲ್ಲ. ತನ್ನ ಚಟುವಟಿಕೆಯಿಂದ ಅದಕ್ಕೆ ಒಂದು ಬಗೆಯ ಸುಖವೂ, ಆನಂದವೂ ಹುಟ್ಟುತ್ತವೆ. ಅಷ್ಟೇ ಸಾಕು. ಕೃಷ್ಣಲೀಲೆಯಲ್ಲಿ ಹೇಳಿರುವ ವಿನೋದಕರವಾದ ನಟನೆಗಳಲ್ಲಿ ಈ ಚಟುವಟಿಕೆಯೇ ಕಂಡು ಬರುತ್ತದೆ. 'ಒರಳಿಗೆ ಆತನನ್ನು ಕಟ್ಟಿದಾಗ ಓಡುವ ಅವಸರದಲ್ಲಿ ಆ ಒರಳನ್ನು ಎಳೆದುಕೊಂಡು ಎರಡು ಮರಗಳ ನಡುವೆ ಓಡಿ, ಆ ಒರಳು ಅದಕ್ಕೆ ಸಿಕ್ಕಿಬಿದ್ದಾಗ ಮರಗಳು ಮುರಿದು ಬಿದ್ದವು' ಎಂದು ಮುಂತಾದ ಮಾತುಗಳಲ್ಲಿ ಅದ್ಭುತಾಕಾರವನ್ನು ಒತ್ತಟ್ಟಿಗಿಟ್ಟರೆ ಆಂತರಿಕವಾದ ಈ ಚಟುವಟಿಕೆಯೇ ತೋರಿಬರುತ್ತದೆ. ಒಂದು ಕೋಲನ್ನು ತನ್ನ ಕಾಲುಗಳ ನಡುವೆ ಹಿಡಿದು ಕುದುರೆಯನ್ನು ಚಪ್ಪರಿಸಿದಂತೆ ಮಾಡಿ ಓಡುತ್ತಿರುವಾಗ ಈ ಚಟುವಟಿಕೆಯೇ ಕಣ್ಣಿಗೆ ಹೊಳೆಯುತ್ತದೆ. ತಾನು ಮಾಡುತ್ತಿರುವ ಈ ಚೇಷ್ಟೆಗಳಿಂದ ತನ್ನ ಸುತ್ತುಮುತ್ತಲಿನವರು ಆಶ್ಚರ್ಯ ಅಥವಾ ಸಂತೋಷ ತೋರ್ಪಡಿಸುವುದರಿಂದ ಅದಕ್ಕೆ ತೃಪ್ತಿ. ತನ್ನ ಕೆಲಸದಿಂದ ಇತರರಿಗೆ ಮೆಚ್ಚಿಗೆಯಾಗದಿದ್ದರೆ ಅಥವಾ ಸಿಟ್ಟೆದ್ದರೆ ಅದನ್ನು ತಿಳಿದು ಕೊಂಡು, ಆ ಕೆಲಸವನ್ನು ನಿಲ್ಲಿಸಿಬಿಡುವುದು ಕಾರ್ಯಕಾರಣ ಸಂಬಂಧದ ಫಲವಾಗಿದೆ. ಈ ಕಾಲದಲ್ಲಿ ಅದರ ದೊಡ್ಡ ಸ್ನಾಯುಗಳಿಗೆ ತುಂಬಾ ಕೆಲಸವು ಸಿಗುತ್ತದೆ. ಈಗ ಅದರ ಅಭಿರುಚಿಯು ಚಟುವಟಿಕೆಯಲ್ಲಿಯೇ ಲೀನವಾಗಿದೆ.

ಕ್ರಮೇಣ ಆಶ್ಚರ್ಯವನ್ನು ತೋರ್ಪಡಿಸಿ, ನೂತನ ಅನುಭವದ ವಿಷಯವಾಗಿ ವಿಚಾರನಡಿಸುವ ಕುತೂಹಲವು ಅದಕ್ಕೆ ಉಂಟಾಗುತ್ತದೆ. ಆಗ ಅದು ಪ್ರಶ್ನೆಗಳನ್ನು ಕೇಳುತ್ತದೆ. ಇದು ಪೃಥಕ್ಕರಣದ ಅಭಿರುಚಿ. ಅಂಥ ಪ್ರಶ್ನೆಗಳಲ್ಲಿ ಹುರುಳು ಇಲ್ಲದೆ ಇರಬಹುದು; ಈ ಪ್ರಶ್ನೆಗಳಲ್ಲಿ ನಾವು ಮೊತ್ತಮೊದಲು ಸಮರ್ಪಕವಲ್ಲದ ಕಾರಣಗಳನ್ನು ಕೊಟ್ಟಲ್ಲಿಯೂ ಮಗುವು ಸಮಾಧಾನಪಡುತ್ತದೆ. ಆ ಸಮಯದಲ್ಲಿ ಅದರ ವಿಚಾರಶಕ್ತಿ ಬೆಳೆದಿರು

ವುದಿಲ್ಲ. 'ಮಳೆ ಎಲ್ಲಿಂದ ಬರುತ್ತದೆ?' ಎಂಬ ಪ್ರಶ್ನೆಗೆ 'ಹಲವರು ಆಕಾಶದಿಂದ ನೀರು ಸುರಿಸುತ್ತಾರೆ.' ಅಥವಾ 'ಆಕಾಶವೆಂಬ ಪಾತ್ರೆಗೆ ತೂತು ಬಿದ್ದು ಸೋರಲಾರಂಭಿಸಿದೆ' ಎಂಬ ಉತ್ತರದಲ್ಲಿ ನಿಜಸ್ಥಿತಿಯು ಇಲ್ಲವಾದರೂ ಮಗು ತೃಪ್ತಿಪಡಬಹುದು. ಆದರೆ ಅಂಥಾ ಉತ್ತರಸಿಕ್ಕಿದ ನೆನಪು ಇಲ್ಲದೆ ಅದೇ ಪ್ರಶ್ನೆಯನ್ನು ಆ ಮಗು ಇನ್ನೊಮ್ಮೆ ಕೇಳಬಹುದು. ಅನಂತರ ಇನ್ನೊಂದು ಹೊಸತಾದ ಕಲ್ಪಿತಕಾರಣದಿಂದ ಅದು ತೃಪ್ತಿಪಡಬಹುದು. ಈ ಕಾಲದಲ್ಲಿ ಅದರ ಕಲ್ಪನಾಶಕ್ತಿಗೆ ಅಂದರೆ ಮನಸ್ಸಿನಲ್ಲಿ ಆಗುವ ಭಾವನೆಗಳಿಗೆ ಮೇರೆಯೇ ಇಲ್ಲ. ತಾನು ಸಾಮಾನ್ಯವಾಗಿ ಮಾಡುವ ಕೆಲಸಗಳನ್ನೇ ಅದ್ಭುತ ರೀತಿಯಾಗಿ ಜೋಡಿಸಿದ ನಟನೆಗಳಿಂದ ಕೂಡಿದ ಕಥೆಗಳಿಂದ ಅದಕ್ಕೆ ಮನಸ್ಸಿಗೆ ಸಂತೋಷ ಉಂಟಾಗುತ್ತದೆ. 'ಕಾಗೆ ಗುಬ್ಬಚ್ಚಿಯು' ಕಥೆಯಲ್ಲಿ 'ಬಿಸಿಯಾದ ಕಲ್ಲಿನ ಸುತ್ತಲೂ ಬೆಣ್ಣೆಯನ್ನು ಮುಚ್ಚಿ, ಬೆಣ್ಣೆ ಯಾರಿಗೆ ಬೇಕು?' ಎಂದು ಕೇಳಿದ ಮಾತನ್ನು ಅದು ನಂಬುತ್ತದೆ. ಬಿಸಿಯಾದ ಕಲ್ಲಿಗೆ ಒತ್ತಾಗಿ ಇರುವ ಬೆಣ್ಣೆಯು ಕರಗಿ ನೀರಾದೀತೆಂಬ ಕಲ್ಪನೆ ಅದಕ್ಕೆ ಉಂಟಾಗುವುದಿಲ್ಲ. ಅದೇ ರೀತಿಯಲ್ಲಿ 'ಕಾಗೆ ನುಂಗಿದ ಮರಿಗಳು ಕಾಗೆ ಕಾರಿದಾಗ ಜೀವಂತವಾಗಿ ಹೊರ ಬಿದ್ದವು' ಎಂದು ಹೇಳುವಾಗ, ಅದು ಅಸಂಭವನೀಯವೆಂದು ಮಗುವಿನ ಎಳೆ ಮನಸ್ಸಿಗೆ ಗೊತ್ತಾಗುವುದಿಲ್ಲ. ತನ್ನ ಕೆಲಸದ ಅನುಭವಕ್ಕಿಂತ ವಿಚಿತ್ರವಾಗಿರುವ ಯಾವದೊಂದು ಕೆಲಸವನ್ನು ಬಣ್ಣಿಸಿ ಹೇಳಿದರೆ ಅದು ಒಪ್ಪಿಕೊಳ್ಳುತ್ತದೆ. ಆ ಕಾಲದಲ್ಲಿ 'ರಾವಣನಿಗೆ ಹತ್ತು ತಲೆಗಳಿದ್ದವು' 'ಕುಂಭಕರ್ಣನು ನಿದ್ದೆಮಾಡುವಾಗ ಅವನ ಶ್ವಾಸದಲ್ಲಿ ಆನೆಗಳು ಸಹ ಮೂಗಿನ ಸೊಳ್ಳೆಯೊಳಗೆ ನುಗ್ಗುತಿದ್ದವು' ಎಂದರೆ ಅದು ನಂಬುತ್ತದೆ. 'ಭೂಮಿಯನ್ನು ಚಾಪೆಯ ಹಾಗೆ ಸುರುಳಿಮಾಡಿ, ಒಬ್ಬ ರಾಕ್ಷಸನು ಹೆಗಲ ಮೇಲಿಟ್ಟು ಪಾತಾಳಕ್ಕೆ ಹೋದನು. ಒಂದು ವರಾಹವು ನೆಲವನ್ನು ಕೊರೆದು, ಅದನ್ನು ತನ್ನ ಕೋರೆದಾಡೆಗಳಲ್ಲಿ ಹಿಡಿದು ಮೇಲಕ್ಕೆ ತಂದಿತು' ಎನ್ನುವಾಗ ಇದರ ಸಾಧ್ಯಾಸಾಧ್ಯತೆಯ ಕಡೆಗೆ ಮಗುವಿನ ಮನಸ್ಸು ಓಡಾಡುವುದಿಲ್ಲ. ಇಲ್ಲಿ ಕಲ್ಪನಾಪ್ರವಾಹದಲ್ಲಿ ಮಗುವಿಗೆ ಅಭಿರುಚಿ.

ಸುಮಾರು 4 ವರ್ಷ ಪ್ರಾಯದಲ್ಲಿಯೇ ಮಗು ಇತರರು ಮಾಡಿದ ಹಾಗೆಯೇ ತಾನೂ ಮಾಡಬೇಕು ಎಂಬ ಲಾಲಸೆಯನ್ನು ತೋರ್ಪಡಿಸುತ್ತದೆ. ಇದಕ್ಕೆ ಸಾಮಾನ್ಯವಾಗಿ 'ಮಂಗಚೇಷ್ಟೆ' ಎನ್ನುತ್ತೇವೆ. ತಂದೆಯ ರುಮಾಲನ್ನು ತಲೆಗೆ ಇಟ್ಟುಕೊಂಡು, ಆತನ ದೊಡ್ಡ ಮೆಟ್ಟುಗಳನ್ನು ಮೆಟ್ಟಿಕೊಂಡು, ದೊಡ್ಡ ಬೆತ್ತವನ್ನು ಹಿಡಿದು 'ಕಚೇರಿಗೆ' ಹೋಗುತ್ತೇನೆಂದು ಹೇಳುವ ಮಗುವೂ ಎರಡು ಸಣ್ಣ ಗಾಲಿಗಳಿಗೆ ಒಂದು ಅಡ್ಡಕೋಲನ್ನು ಕಟ್ಟಿ, ಅದಕ್ಕೆ ಕಟ್ಟಿದ ಹಗ್ಗವನ್ನು ತನ್ನ ಬಾಯಲ್ಲಿ ಹಿಡಿದು ಅಂಬೆಗಾಲು ಹಾಕುತ್ತಾ ಓಡುವ ಮಗುವೂ ಇದೇ ವಿಧದ ಅನುಕರಣಶಕ್ತಿಯನ್ನು ತೋರ್ಪಡಿಸುತ್ತವೆ. ಬಾಲಕನಾದ ಕೃಷ್ಣನು ಬಂಡಿಯನ್ನು ಎಳೆಯುವಾಗ, ಅದು ಮಗುಚಿ ಬಿದ್ದಲ್ಲಿ ಕವಿಯ ಮಾತಿನಲ್ಲಿ ಅದು ಶಕಟಾಸುರನ ವಧೆಯಾಯಿತು. ಇಲ್ಲಿ ಅನುಕರಣದಲ್ಲಿ ಅಭಿರುಚಿಯು ಕಾಣುತ್ತಿದೆ.

6ರಿಂದ ಅಥವಾ 5ರಿಂದ 12 ವರುಷ ಪ್ರಾಯದ ವರೆಗೆ ಮಕ್ಕಳ ಚಟುವಟಿಕೆಯಲ್ಲಿ ನಿಧಾನವಾಗಿ ಉದ್ದೇಶವು ಕಂಡುಬರುತ್ತದೆ. 'ನೀನು ಶಾಲೆಗೆ ಯಾತಕ್ಕೆ ಹೋಗುತ್ತಿ?' ಎಂದು ಕೇಳಿದ ಪ್ರಶ್ನೆಗೆ 'ಹೆಚ್ಚು ಕಲಿತು, ಅಪ್ಪನಂತೆಯೇ ದೊಡ್ಡ ಉದ್ಯೋಗವನ್ನು' ನಡಿಸಬೇಕು ಎಂದು ಉತ್ತರ ಕೊಡುವ ಮಗುವಿನಲ್ಲಿ ಚಟುವಟಿಕೆಯ ಮೇಲೆ ಅಭಿರುಚಿ ಇದ್ದರೂ ಅದರ ಪರಿಣಾಮದ ಮೇಲೆಯೂ ದೃಷ್ಟಿ ಇದೆ ಎನ್ನಬೇಕು. ಈ ಕಾಲದಲ್ಲಿ ಅದರ ಆಟಗಳಲ್ಲಿ, ನಟನೆಗಳಲ್ಲಿ, ವ್ಯವಸ್ಥೆ ಇದೆ. ಮೊದಲು ಅದು ಒಂಟಿಯಾಗಿ ಆಡುತಿದ್ದರೆ ಈಗ ಅದು ತನ್ನ ಸಹಪಾಟಿಗಳ ಜತೆಯನ್ನು ಅಪೇಕ್ಷಿಸುತ್ತದೆ. ತಾನು ಮಾಡುವ ಪ್ರತಿ ಒಂದು ಕೆಲಸದಲ್ಲಿ ಅದಕ್ಕೆ ಒಂದು ಉದ್ದೇಶವಿದೆ. ಹಣ್ಣನ್ನು ಕೊಯ್ಯಲಿಕಾಗಿಯೇ ಅದು ಮರವನ್ನು ಹತ್ತುತ್ತದೆ, ಅಥವಾ ಹಣ್ಣಿಗೆ ಕಲ್ಲು ಎಸೆಯುತ್ತದೆ. ತಾನು ಮಾಡುವ ನಟನೆಯಲ್ಲಿ ಮೂಲ ವಸ್ತುವಿಗೆ ಅಥವಾ ಕ್ರಿಯೆಗೆ ಆದಷ್ಟು ಸಮಾನತೆಗೆ ಅದು ಯತ್ನಿಸುತ್ತದೆ. ಕುದುರೆ ಸವಾರಿ ಮಾಡುವುದಕ್ಕೋಸ್ಕರ ಅದು ಬರೇ ಕೋಲಿನಿಂದ ತೃಪ್ತಿ ಪಡಲಾರದು. ಕುದುರೆಯಾಕಾರದ ಗೊಂಬೆಯಾದರೂ ಅದಕ್ಕೆ ಸಿಗಬೇಕಾಗುತ್ತದೆ. ಅದು ದೋಣಿಯ ಆಕಾರವನ್ನು ಕಾಗದದಿಂದಾಗಲಿ ಎಲೆಗಳಿಂದಾಗಲಿ ಮಾಡುತ್ತದೆ. ಹಾವಿನ ಆಕಾರದಲ್ಲಿ ತೆಂಗಿನ ಗರಿಗಳನ್ನು

ಹೆಣೆಯುತ್ತದೆ. ಹಕ್ಕಿ ಹಾರುವುದನ್ನು ನೋಡಿ, ಗಾಳಿಪಟವನ್ನು ಆಕಾಶದಲ್ಲಿ ಹಾರಿಸಲು ಸಂತೋಷಪಡುತ್ತದೆ. ತನ್ನ ಕೆಲಸವು ಇತರರ ಕೆಲಸಕ್ಕಿಂತ ಮೇಲಾಗಿದೆಯೋ ಕೆಳಗಾಗಿದೆಯೋ ಎಂಬುದನ್ನು ಸರಿ ಹೋಲಿಸಿ ನೋಡಲಿಕ್ಕೆ ಅದಕ್ಕೆ ತುಂಬಾ ಇಚ್ಛೆ ಇದೆ. ಈ ಕಾಲದಲ್ಲಿ ಅದಕ್ಕೆ ಭೀಮನ ಪರಾಕ್ರಮ, ಅರ್ಜುನನ ಸಾಹಸ, ಇತ್ಯಾದಿಗಳಲ್ಲಿ ಅಭಿರುಚಿ ಹೆಚ್ಚು. ಆಗೊಳಿ ಮಂಜಣ್ಣನು ತನಗಿಂತಲೂ ಎಷ್ಟು ಪಾಲಷ್ಟು ಬಲಿಷ್ಠನಾಗಿದ್ದನು, ಅಷ್ಟೇ ಬಲವು ತನ್ನಲ್ಲಿ ಯಾಕೆ ಬರಲಾರದು ಎಂದು ಅದು ವಿಚಾರಮಾಡುತ್ತದೆ. ಎಲ್ಲರನ್ನು ಮೇಲಾಟದಲ್ಲಿ ದಂಗುಬಡಿಯಬೇಕೆಂತಲೇ ಅದು ಯತ್ನಿಸುತ್ತದೆ. ಹುಡುಗರು ಗುಂಪುಕೂಡಿದಾಗ ತಮ್ಮ ಶಕ್ತಿಯನ್ನು ತೋರ್ಪಡಿಸುವುದಕ್ಕೆ ಹೆಣಗಾಡುತ್ತಿರುವುದು ಈ ಪ್ರಾಯದ ಮಕ್ಕಳ ವಿಶೇಷ ಲಕ್ಷಣವಾಗಿದೆ. ಈ ಪ್ರಾಯದಲ್ಲಿ ಮಕ್ಕಳಿಗೆ ಒಗಟುಗಳ ಮೇಲೆ ಪ್ರೇಮ ಹೆಚ್ಚು. ಒಂದು ಲೆಕ್ಕವನ್ನು ಮಾಡುವುದಕ್ಕೆ ಬಹಳ ಹೊತ್ತಿನ ವರೆಗೆ ಅದರ ಮೇಲೆ ತನ್ನ ಲಕ್ಷ್ಯವನ್ನು ನೆಡುವಷ್ಟು ಮನಸ್ಸಿಲ್ಲದಿದ್ದರೂ ಒಂಬತ್ತು ಮನೆಗಳ ಒಂದು ಚೌಕದಲ್ಲಿ ಹೇಗೆ ಕೂಡಿಸಿದರೂ 15 ಬರಬೇಕು ಎಂಬ ಪ್ರಶ್ನೆಗೆ ಉತ್ತರವನ್ನು ಹುಡುಕಲಿಕ್ಕೆ ಅದು ತಾಸು ಒಂದಾದರೂ ವ್ಯಯ ಮಾಡುತ್ತದೆ. ಇಲ್ಲಿ ಮಕ್ಕಳಲ್ಲಿ ಅಹಂಕಾರ, ಆತ್ಮಪ್ರತಿಷ್ಠೆ ಇವು ಸ್ಫೂರ್ತಿಗೆ ಬಂದು, ಮನಸ್ಸು ಅಭಿರುಚಿಯನ್ನು ಆಳತೊಡಗುತ್ತದೆ.

12 ವರ್ಷ ಪ್ರಾಯದ ನಂತರ ಆಟಗಳಲ್ಲಿ ತನ್ನ ಮೇಲಾಟವನ್ನು ತೋರ್ಪಡಿಸುವ ಬದಲಾಗಿ ತಾನು ಕೂಡಿದ ಕೂಟವು ಗೆಲ್ಲಬೇಕು ಎಂಬ ಕಾಂಕ್ಷೆಯು ಹುಟ್ಟುತ್ತದೆ. ಇದಕ್ಕೆ ಸಂಘಶಕ್ತಿಯಲ್ಲಿ ಅಭಿರುಚಿಯನ್ನುತ್ತೇವೆ. ಕ್ರಿಕೆಟ್, ಉಪ್ಪು ಮುಂತಾದ ಆಟಗಳಲ್ಲಿ ತಾನು ಒಬ್ಬನೇ ಗೆಲ್ಲಬೇಕು ಎನ್ನುವುದಕ್ಕಿಂತಲೂ ತನ್ನ ಕೂಟ ಗೆಲ್ಲಬೇಕು ಎಂಬ ಕಾಂಕ್ಷೆಯು ಒತ್ತಿಕೊಂಡು ಬರುತ್ತದೆ. ಈ ಕಾಲದಲ್ಲಿ ವಿಚಾರಶಕ್ತಿಯು ಬಲವಾಗುತ್ತ ಬರುತ್ತದೆ. 'ಕರ್ಮಕ್ಕೆ ತಕ್ಕ ಫಲವು,' ಎಂಬ ಅಭಿಪ್ರಾಯವು ಬಲಗೊಳ್ಳುತ್ತದೆ. ಅಭಿರುಚಿಯು ಇತರರ ಕಾರ್ಯಗಳ ಮತ್ತು ಅವುಗಳ ಕಾರಣಗಳ ಸಂಬಂಧವನ್ನು ಗೊತ್ತುಹಚ್ಚುವುದಕ್ಕೆ ಮುಂದುವರಿಸುತ್ತದೆ. ಇತರರ ಕಷ್ಟಸುಖಗಳಲ್ಲಿ ತಾನೂ ಸಹಭಾಗಿಯಾಗಬೇಕೆಂಬ ಕಾಂಕ್ಷೆಯು ಬಲ

ಗೊಳ್ಳುತ್ತದೆ. ಈ ಕಾಲದಲ್ಲಿ ಚಿತ್ರಲೇಖನ, ಹಾಡುಗಾರಿಕೆ, ವೃತ್ತಿ ಕೈಗಾರಿಕೆ ಮುಂತಾದುವುಗಳ ಕಡೆಗೆ ಆ ಹುಡುಗನ ಮನಸ್ಸು ಓಡಾಡುತ್ತದೆ. ಈ ಕಲೆಗಳ ಅಸ್ತಿವಾರವನ್ನು ಹಾಕುವುದಕ್ಕೆ ಇದೇ ಸಮಯವಾಗಿದೆ.

ತಾರುಣ್ಯದಲ್ಲಿ ಮನುಷ್ಯಾವಸ್ಥೆಯ ಸಂಪೂರ್ಣ ಬೆಳವಣಿಗೆಯು ಬರುವುದಲ್ಲದೆ ತನ್ನ ವಿಚಾರಬಲದಿಂದಲೇ ತಾನು ಈ ಮೊದಲು ನೋಡದಿರುವ ನೋಟಗಳ ಊಹನೆ ಕಲ್ಪನೆಯನ್ನು ಮಾಡಿಕೊಳ್ಳುವುದಕ್ಕೂ, ಇತರರ ಕೆಲಸಗಳ ನ್ಯಾಯವಾದ ತುಲನೆಯನ್ನು ಮಾಡಿ, ಅದರ ಸಾಧ್ಯಾಸಾಧ್ಯತೆ, ಅದರ ಪರಿಣಾಮ, ಮುಂತಾದುವುಗಳನ್ನು ನಿರ್ಣಯಮಾಡುವುದಕ್ಕೂ ಶಕ್ತಿಯು ಚೆನ್ನಾಗಿ ವೃದ್ಧಿಯಾಗುತ್ತದೆ. ಆಗ ಬುದ್ಧಿಯು ಅಭಿರುಚಿಯನ್ನು ಆಳುತ್ತದೆ.

ಅವಧಾನ ಶಕ್ತಿ

17ನೆಯ ಅಧ್ಯಾಯ

“ಈ ದಿನ ತುಂಬಾ ಕೆಲಸಮಾಡಿ ಮನಸ್ಸು ದಣಿದಿದೆ, ಸಿನೆಮಾ ಪ್ರದರ್ಶನಕ್ಕೆ ಹೋಗೋಣವೇ” ಎಂದು ನನ್ನ ಸ್ನೇಹಿತನೊಬ್ಬನು ಹೇಳುತ್ತಾನೆ, ಎನ್ನೋಣ. ನಾವಿಬ್ಬರೂ ಹೋದಾಗ ಅಲ್ಲಿ ತೋರಿಸಿದ ಪ್ರದರ್ಶನವು ವಿನೋದದಿಂದ ಕೂಡಿದ್ದರೆ ಕೆಲವು ಸಮಯದ ವರೆಗೆ ಅದನ್ನೆ ನೋಡುತ್ತಾ ಕಾಲಕಳೆಯುತ್ತೇವೆ. ಆ ವಿನೋದಕರವಾದ ನೋಟವು ನಮ್ಮ ಮನಸ್ಸನ್ನು ಆಕರ್ಷಿಸಿತು. ಹೀಗಾಗಿ ನಮ್ಮ ಆಯಾಸದ ಮರವೆಯಾಗಿ ಒಂದು ಬಗೆಯ ವಿಶ್ರಾಂತಿಸುಖವು ಸಿಗುತ್ತದೆ. ಆ ಕಾಲದಲ್ಲಿ ನಮ್ಮ ಹಲವು ತಾಪತ್ರಯಗಳನ್ನು ಮರೆತು, ಆ ಪ್ರದರ್ಶನದಲ್ಲಿಯೇ ನಮ್ಮ ಮನಸ್ಸು ತಲ್ಲೀನವಾಗುತ್ತದೆ. ಆ ವಿನೋದಕರವಾದ ನೋಟದಲ್ಲಿ ಸಿಕ್ಕಿಕೊಂಡ ಮನಸ್ಸನ್ನು ಆ ನೋಟದ ಅಭಿರುಚಿಯೇ ಬಿಗಿದು ಹಿಡಿಯುತ್ತದೆ.

ಇಲ್ಲಿ ನೋಟವು ಈ ಅಭಿರುಚಿಯು ಕರ್ತೃವಾಯಿತು. ನಮ್ಮ ಈ ಇಚ್ಛೆಯು ಅಭಿರುಚಿಯು ವ್ಯವಹಾರಕ್ಷೇತ್ರವಾಯಿತು. ಆ ನೋಟದಲ್ಲಿ ಕಂಡ ಕೃತ್ರಿಮ ವಸ್ತುನಟನೆಯು ಹಲವು ಸಲ ನಮ್ಮ ಮನಸ್ಸಿನ ಮೇಲೆ ತಾತ್ಕಾಲಿಕ ಪರಿಣಾಮವನ್ನು ಉಂಟುಮಾಡುವುದೂ ಉಂಟು. ಹನುಮಂತನು ಲಂಕೆಯ ಲಗ್ಗೆಹತ್ತಿ ಗೋಡೆಗಳ ಮೇಲೆ ಹಾರಿ ರಾಕ್ಷಸರೊಡನೆ ಯುದ್ಧಮಾಡುವಾಗಲೂ, ಅಹಿಮಹಿರಾವಣರ ಕಥೆಯಲ್ಲಿ ಪಾತಾಳದ ಸುರಂಗವನ್ನು ಇಳಿದುಹೋಗುವಾಗಲೂ, ಅಥವಾ ದಾಮಾಜಿಪಂಥನ ಕಥೆಯಲ್ಲಿ ಬರಗಾಲದ ವರ್ಣನೆಯನ್ನು ನಾವು ನೋಡಿದಾಗಲೂ, ಅಥವಾ ದ್ರೋಣನ ಪರ್ಣಕುಟೀರವು ನೆರೆನೀರಿನ ಪ್ರವಾಹದಿಂದ ತೋಯಿದು ಕೊಚ್ಚಿಕೊಂಡು ಹೋಗುವಾಗಲೂ, ನಮ್ಮ ಮನಸ್ಸಿನ ಒಳಭಾಗದಲ್ಲಿ ಇದೆಲ್ಲ ನಟನೆಯೆಂದು ಗೊತ್ತಿದ್ದರೂ, ಆಶ್ಚರ್ಯ ದುಃಖ ಮುಂತಾದ ಭಾವನೆಗಳು ಉಂಟಾಗಿ ನಮ್ಮ ಮನಸ್ಸನ್ನು ಆಕರ್ಷಿಸುತ್ತವೆ. ಇದು 'ಬಾಹ್ಯ ಅಭಿರುಚಿ' ಎನ್ನಬಹುದು. ಇದರಲ್ಲಿ ನಮ್ಮ ಮನಸ್ಸಿನ ಸ್ವಾತಂತ್ರ್ಯವು ಕಳಚಿ ಹೋಗುತ್ತದೆ.

ಆದರೆ ಇನ್ನೊಂದು ಬಗೆಯ ಅಭಿರುಚಿಯು ಇದೆ. ಕಷ್ಟತರವಾದ ಒಂದು ಲೆಕ್ಕವಿದೆ, ಪುನಃ ಪುನಃ ಮಾಡಿದರೂ ಉತ್ತರ ಸರಿ ಬರುವುದಿಲ್ಲ, ಸರಿಯಾದ ಉತ್ತರ ಕಂಡುಹಿಡಿಯುವುದಕ್ಕೆ ನಾವು ಹಟಸಾಧನೆಮಾಡುತ್ತೇವೆ. ಇಲ್ಲಿ ನಮ್ಮ ಅಹಂಕಾರವು ಕರ್ತೃ. ಅದು ಆ ಲೆಕ್ಕದ ಕಡೆಗೆ ನಮ್ಮ ಮನಸ್ಸನ್ನು ಬಗ್ಗಿಸಿ ಹಿಡಿಯುತ್ತದೆ. ಮನಸ್ಸು ಪ್ರಯತ್ನಮಾಡಿ ದಣಿದರೂ ಈ ಅಹಂಕಾರವು ಆ ಮನಸ್ಸನ್ನು ಅತ್ತಿತ್ತ ಕದಲಿಸಲು ಬಿಡುವುದಿಲ್ಲ. "ಸಾಧನೆಮಾಡು, ಆಗ ನೀನು ಜಯಹೊಂದುವೆ" ಎಂದು ಅದು ಮನಸ್ಸಿಗೆ ಪ್ರೇರೇಪಣೆ ಮಾಡುತ್ತದೆ. ಇದು 'ಅಂತರ್ ಅಭಿರುಚಿ' ಎನ್ನಬಹುದು. ಇಲ್ಲಿ ಮನಸ್ಸಿಗೆ ಅಂಕುಶವನ್ನು ಅಹಂಕಾರವು ಹಾಕುತ್ತದೆ.

ಚಿಕ್ಕ ಮಕ್ಕಳಲ್ಲಿ ಬಾಹ್ಯವಸ್ತುಗಳೇ ಅವುಗಳ ಮನಸ್ಸನ್ನು ಆಕರ್ಷಿಸುತ್ತವೆ. ಓದುತ್ತಿರುವ ಅಥವಾ ಲೆಕ್ಕಮಾಡುತ್ತಿರುವ ಹುಡುಗನಿಗೆ ಶಾಲೆ ಕೋಣೆಯ ಹೊರಗೆ ಹುಲಿವೇಷದ ವಾದ್ಯದ ಅಥವಾ ಸರ್ಕಸು ನೋಟೀಸುಗಳ ವಾದ್ಯದ ಸ್ವರವು ಕೇಳಿದೊಡನೆ ಕೈಯಲ್ಲಿದ್ದ ಪುಸ್ತಕ ಸ್ಲೇಟು ಜಾರಿ

ಬಿದ್ದು, ಆತನು ಬೀದಿಗೆ ಓಡಲು ತವಕಗೊಳ್ಳುವನು; ಅಂದರೆ ಯಾವುದರಿಂದ ಅವನ ಮನಸ್ಸಿಗೆ ಸುಖ ಅಥವಾ ಸಂತೋಷ ಉಂಟಾಗುವುದೊ ಆ ಕಡೆಗೆ ಅವನ ಮನಸ್ಸು ಓಡಾಡುತ್ತಿರುವುದು. ಹೀಗೆ ಬಾಹ್ಯ ವಸ್ತುಗಳೇ ಆತನ ಮನಸ್ಸನ್ನು ಅಥವಾ ಇಚ್ಛೆಯನ್ನು ತನ್ನ ನಾಟ್ಯರಂಗವಾಗಿ ಮಾಡಿದ ಕಾರಣ, ಅಂಥ ವಸ್ತುಗಳು ಎಂದಿನ ವರೆಗೆ ನೂತನವಾಗಿರುವುವೊ ಆ ವರೆಗೆ ಅವನ ಅಭಿರುಚಿಯು ಅವುಗಳ ಮೇಲೆ ಇರುವುದು. ಅದು ಹಳೆಗೆಳೆಯು ನಾದೊಡನೆ ಆ ಅಭಿರುಚಿ ಮತ್ತೊಂದು ಕಡೆಗೆ ಓಡುವುದು.

ಮೇಲೆ ಹೇಳಿದಂತಹ ಸಿನೆಮಾ ಪ್ರದರ್ಶನದಲ್ಲಿ ಆ ಅಚೇತನ ಚಿತ್ರಗಳು ಹೇಗೆ ಒಂದರ ಹಿಂದೆ ಒಂದು ಓಡಾಡುತ್ತವೆ, ಅವಕ್ಕೆ ಏನಾದರೂ ಯಂತ್ರಸಾಮಗ್ರಿಯು ಇದೆಯೇ, ಅಂಥ ಯಂತ್ರಸಾಮಗ್ರಿಯ ಅಂಗಾಂಗಗಳು ಹೇಗಿವೆ, ಇವನ್ನೆಲ್ಲ ತಿಳಿಯಬೇಕೆಂಬ ವಿಚಾರವು ಯಾವಾಗ ನಮ್ಮಲ್ಲಿ ಉಂಟಾಯಿತೊ ಆಗ ಪ್ರದರ್ಶನವು ಮುಗಿದ ನಂತರವೂ ನಮ್ಮ ಮನಸ್ಸಿನಲ್ಲಿ ಅದೇ ಚಿಂತನೆಯು ಇರುತ್ತದೆ. ಆಗ ನಾವು ವಿಚಾರಮಾಡ ತೊಡಗುತ್ತೇವೆ, ಬೇಕು ಬೇಕಾದ ಪುಸ್ತಕಗಳನ್ನು ಮಗುಚುತ್ತೇವೆ; ಹಲವರೊಡನೆ ಪ್ರಶ್ನಿಸುತ್ತೇವೆ. ಇಲ್ಲಿ ನಮ್ಮ ಅಭಿರುಚಿಯನ್ನು ನಮ್ಮ ಮನೋವಿಕಾರವೂ ಅಹಂಕಾರವೂ ಆ ಪ್ರದರ್ಶನದ ಮೇಲೆ ಹರಡಿ, ಹೊಸ ಅನುಭವ ಅಥವಾ ಜ್ಞಾನಸಂಪಾದನೆಗೆ ಸಹಾಯಕವಾಗುತ್ತದೆ. ಈ ರೀತಿಯಾಗಿ ನಮ್ಮ ಮನಸ್ಸು ಒಂದೇ ಕಡೆಗೆ ನೆಲೆನಿಂತು ವಿಚಾರಪರವಾಗಿದ್ದರೆ ಅಂಥ ಶಕ್ತಿಗೆ **ಅವಧಾನಶಕ್ತಿ** ಎನ್ನುತ್ತೇವೆ.

ಈ ಅವಧಾನಶಕ್ತಿಯು ನಮ್ಮ ಇಂದ್ರಿಯಗಳ ಮೂಲಕ ಪಡೆದ ಅನುಭವಗಳ ಮೇಲೆ ಮನಸ್ಸನ್ನು ಒತ್ತಿ ಹಿಡಿದು ಅದರ ಕೂಲಂಕಷ ವಿಚಾರ ಶೋಧನೆ ನಡೆಸಲಿಕ್ಕೂ, ಅದರ ಸಂಪೂರ್ಣ ಪರಿಚಯವನ್ನು ಮಾಡಿಕೊಳ್ಳಲಿಕ್ಕೂ ಸಹಾಯಕವಾಗುತ್ತದೆ. ಇಂಥ ಪರಿಚಯದ ಪೂರ್ಣತೆಯಾಗಬೇಕಾದರೆ ಅತ್ತಿತ್ತ ಸುಖಾಕಾಂಕ್ಷೆಯಿಂದ ಓಡಾಡುವ ಮನಸ್ಸನ್ನು ನಾವು ಒಂದೇ ಕೊನೆಯಲ್ಲಿ ಬಹಳ ಹೊತ್ತು ನಿಲ್ಲಿಸಬೇಕು. ಇದು **ಏಕಾಗ್ರತೆ.**

ಅವಧಾನಶಕ್ತಿಯ ಪ್ರಯೋಗದಲ್ಲಿ ಕೆಲವು ಅಂಗವಿಕಾರಗಳು ಆಗುತ್ತವೆ. ಡ್ರಿಲ್ಲಿನ ಸಮಯದಲ್ಲಿ 'ಎಟೆನ್‌ಶನ್' ಎಂದು ಶಬ್ದವನ್ನು ಉಚ್ಚಾರ

ಮಾಡಿದೊಡನೆ ಡ್ರಿಲ್ ಮಾಡುವವನು ತನ್ನ ಸ್ನಾಯುಗಳನ್ನು ದೃಢೀಕರಿಸಿ, ತಲೆಯನ್ನು ಎತ್ತಿ ನೆಟ್ಟಗೆ ಹಿಡಿದು, ಶ್ವಾಸೋಚ್ಛ್ವಾಸಗಳನ್ನು ಕ್ರಮಪಡಿಸುತ್ತಾನೆ. ಕೈಗಳನ್ನು ಜೋಲು ಬೀಳಿಸದೆ ಮುಷ್ಟಿಬಿಗಿದು, ಅಥವಾ ಬೆರಳುಗಳನ್ನು ಪೂರ್ಣ ಚಾಚಿ ಕೈಗಳ ಸ್ನಾಯುಗಳನ್ನೂ ಬಿಗುಪೇರಿಸುತ್ತಾನೆ. ಹೀಗೆ ರಕ್ತಾಭಿಸರಣಕಾರ್ಯ, ಶ್ವಾಸೋಚ್ಛ್ವಾಸಕಾರ್ಯ, ಮತ್ತು ಸ್ನಾಯುಗಳ ಬಿಗುಪು, ಈ ಮೂರು ಕ್ರಿಯೆಗಳು ಈ ಶಬ್ದದೊಡನೆ ಅನುಕರಿಸಬೇಕಾಗುತ್ತದೆ. ಇವೆಲ್ಲ ಹೆಚ್ಚು ಕಡಿಮೆ ರೀತಿಯಲ್ಲಿ ಅವಧಾನ ಶಕ್ತಿಯನ್ನು ಒಂದು ಕಡೆಗೆ ನೆಟ್ಟಾಗ ನಮ್ಮ ದೇಹದಲ್ಲಿ ಆಗುತ್ತಿವೆ. ಈ ರೀತಿಯಲ್ಲಿ ಅಂಗವಿಕಾರಗಳಿಲ್ಲದೆ ಏಕಾಗ್ರತೆ ಮಾಡಲಾರೆವು. ಏಕಾಗ್ರತೆಯನ್ನು ಮಾಡಬೇಕಾದರೆ ನಮ್ಮ ಧೃತಿಯ ಗುಣವಾದ ಅಹಂಕಾರವು ತನ್ನ ಸಾಮರ್ಥ್ಯವನ್ನು ಬೀರಬೇಕು. ಆಗಲೇ ಈ ಅಂಗವಿಕಾರಗಳು ಸ್ವಲ್ಪ ಸಮಯದ ವರೆಗೆ ಬದಲಾಯಿಸುವುದಿಲ್ಲ. ಈ ಅಹಂಕಾರವು ಈ ಅಂಗವಿಕಾರಗಳ ಲಗಾಮನ್ನು ಹಿಡಿಯುವುದು ಬುದ್ಧಿಯ ನಿರ್ಣಯದ ಆಧಾರದಿಂದಲೆ ಎಂದು ಬೇರೆ ಹೇಳಬೇಕಾಗಿಲ್ಲ.

ಈ ಅಹಂಕಾರದ ಲಗಾಮಿನ ಚಮತ್ಕಾರವನ್ನು ನಾವು ಕೆಳಗಿನ ದೃಷ್ಟಾಂತಗಳಿಂದ ಗೊತ್ತುಹಚ್ಚಬಹುದು. ಕಠಿನವಾದ ಮನೋವ್ಯಥೆಯು ಬಾಧಿಸುವಾಗ ಅದನ್ನು ತತ್ಕಾಲಿಕವಾಗಿ ಮರೆತುಬಿಡಲಿಕ್ಕೆ ನಾವು ಏನೊಂದು ಆಟ ಅಥವಾ ವಿನೋದ ಅಥವಾ ವಾಚನವನ್ನು ಕೈಕೊಳ್ಳುತ್ತೇವೆ. 'ಸಿಟ್ಟು ಬಂದಾಗ 1ರಿಂದ 20ರ ವರೆಗೆ ಎಣಿಕೆಮಾಡು' ಎಂದು ಒಬ್ಬ ವಿದ್ವಾಂಸನು ಹೇಳಿದನಂತೆ. ಇದರಿಂದ ಅಹಂಕಾರವು ನಮ್ಮ ಮನಸ್ಸಿನಲ್ಲಿ ವ್ಯಾಪ್ತವಾದ ಸಿಟ್ಟನ್ನು ತಗ್ಗಿಸಿ, ನಮ್ಮ ಮನಸ್ಸಿನಲ್ಲಿ ಬೇರೊಂದು ಕಲ್ಪನೆಯನ್ನು ಎಚ್ಚರಿಸುತ್ತದೆ. ಏಕಾಂಗಿಯಾಗಿ ನಿರ್ಜನವಾದ ಪ್ರದೇಶದಲ್ಲಿ ರಾತ್ರೆ ಹೋಗುವಾಗ 'ದೇವರ ಭಜನೆ ಮಾಡು' ಎಂದು ಕೆಲವರು ಹೇಳುವರು. ಇದರ ಉದ್ದೇಶವಾದರೂ ನಮ್ಮ ಮನೋಪಟಲದಲ್ಲಿ ಇಲ್ಲಸಲ್ಲದ ಭಯವನ್ನು ಜಾಗೃತಿಗೊಳಿಸದಂತೆಯೇ ಇದೆ. ಈ ಕಾರ್ಯಗಳಲ್ಲಿ ನಮ್ಮ ಅಹಂಕಾರವು ನಮ್ಮ ಬಾಹ್ಯ ಇಂದ್ರಿಯಗಳ ಮೇಲೆಯೂ ತನ್ನ ಕೈತೋರಿಸಿ, ಮೇಲಕ್ಕೆ ಬರಬಾರದಾದ ಮನೋವಿಕಾರಗಳ ಅಂಗವಿಕಾರಗಳನ್ನು ಕೂಡಾ ಕೆಳಕ್ಕೆ ಅಮುಕಿಬಿಟ್ಟು ತಲೆ ಎತ್ತಲು ಬಿಡುವುದಿಲ್ಲ.

ಕೆಲವು ಸಲ ಅಭ್ಯಾಸ ಬಲದಿಂದ ನಾವು ಒಂದೆರಡು ಕೆಲಸಗಳನ್ನು ಏಕಕಾಲದಲ್ಲಿ ಮಾಡುತ್ತೇವೆ. ವೀಣೆ ಬಾರಿಸುವಾಗ ಗೆಳೆಯರ ವಿನೋದ ಕರವಾದ ಮಾತನ್ನು ಕೇಳುತ್ತಲೂ ಇದ್ದೇವೆ; ಸರಿಗೆಗಳನ್ನೂ ಮಿಾಟುತಿದ್ದೇವೆ. ವಿಶೇಷವಾದ ಆಲೋಚನೆ ಮಾಡಿ ಒಂದು ಗ್ರಂಥವನ್ನು ಬರೆಯುವಾಗ ಅಥವಾ ಕಾವ್ಯವನ್ನು ಕಟ್ಟುವಾಗ ಒಂದು ಕಡೆಯಿಂದ ನಸ್ಯವನ್ನು ಮೂಗಿಗೆ ಏರಿಸುತ್ತಿರಲೂ ಬಹುದು; ಬಾಯಿಯಲ್ಲಿ ಚುಟ್ಟಾ ಹಿಡಿದು ಸೇದುತ್ತಿರಲೂ ಬಹುದು. ಅಷ್ಟಾವಧಾನಿ ಶತಾವಧಾನಿಗಳೆಂದು ಕೆಲವರು ಇದ್ದಾರೆ. ಅವರು ಏಕಕಾಲದಲ್ಲಿ ಎಂಟು ಯಾ ಒಂಬತ್ತು ಸ್ಥಾನಗಳ ಸಂಖ್ಯೆಯಿಂದ ಅಷ್ಟೆ ಸ್ಥಾನಗಳುಳ್ಳ ಒಂದು ಸಂಖ್ಯೆಗೆ ಗುಣಾಕಾರ, ಒಂದು ನೂತನವಾದ ಶ್ಲೋಕ ವನ್ನು ಕೇಳುವುದು, ಅನ್ಯಭಾಷೆಯ ಕೆಲವು ವಾಕ್ಯಗಳನ್ನು ಕೇಳುವುದು, ಒಂದು ವಿಚಿತ್ರರೀತಿಯ ಒಗಟಿಗೆ ಉತ್ತರವನ್ನು ಕಂಡು ಹಿಡಿಯುವುದು ಮುಂತಾದ ಕ್ರಿಯೆಗಳನ್ನು ಏಕಕಾಲದಲ್ಲಿ ಮಾಡಲು ಸಮರ್ಥರಾಗುತ್ತಾರೆ. ಇವುಗಳಲ್ಲಿ ಅತಿ ಕಷ್ಟತರವಾದ ಪ್ರಶ್ನೆಗಳ ಮೇಲೆ ಮಾತ್ರ ಅವರ ಧೃತಿ ಯನ್ನು ಪಸರಿಸುತ್ತಾರೆ. ಉಳಿದ ಕೆಲಸಗಳೆಲ್ಲ ಪರಾವರ್ತನ ಕ್ರಮ ದಿಂದಲೇ ಸಾಗುವಂತಿವೆ. ಅವರು ಅಭ್ಯಾಸಬಲದಿಂದ ತಮ್ಮ ಸಂಪೂರ್ಣ ಏಕಾಗ್ರತೆಯನ್ನು ಆ ಕ್ರಿಯೆಗಳ ಮೇಲೆ ಇರಗೊಡಿಸದೆ ಇರಲು ಸಾಧ್ಯವಿದೆ. ಒಂದು ಕಲ್ಪನೆಯ ಮೇಲೆ ಅತಿ ಹೆಚ್ಚೆಂದರೆ 30 ಸೆಕೆಂಡುಗಳಿಗಿಂತ ಏಕಾ ಗ್ರತೆ ಮಾಡಲು ಜನಸಾಮಾನ್ಯರಿಗೆ ಸಾಧ್ಯವಲ್ಲ. ನಮ್ಮ ಮನಸ್ಸು ಒಂದು ಕಲ್ಪನೆಯ ಮೇಲೆ ಸರಾಸರಿ 5 ಯಾ 6 ಸೆಕಂಡು ನೆಲೆ ನಿಲ್ಲುತ್ತದೆ. ವಿನೋದಕರವಾದ ನೋಟವನ್ನು ನೋಡುವಾಗಲೂ ಒಂದು ಗ್ರಂಥವನ್ನು ಓದುವಾಗಲೂ ಕ್ಷಣೆಕ್ಷಣೆ ನಮ್ಮ ಮನಸ್ಸು ಅದರಲ್ಲಿ ಅಡಕವಾದ ವಿವಿಧ ಭಾವನೆಗಳಲ್ಲಿ ಹೆಜ್ಜೆ ಇಡುತ್ತಾ ಮುಂದೊತ್ತುತ್ತದೆ. ವಿಷಯ ಒಂದೇ ಎಂದು ಎಣಿಸಿದರೂ ಅದರಲ್ಲಿ ಕಲ್ಪನೆಗಳು ಭಿನ್ನಭಿನ್ನವಾಗಿವೆ. ನಮ್ಮ ಮನಸ್ಸು ಒಂದು ಭಾವನೆಯ ಮೇಲೆ ಈ ಕಾಲಕ್ಕಿಂತ ಹೆಚ್ಚು ಹೊತ್ತು ನೆಲೆನಿಲ್ಲ ಲಾರದು; ಅಂದರೆ ಸಿನೆಮಾದಲ್ಲಿದ್ದಂತೆ ಪ್ರತಿಬಿಂಬಗಳು ಕ್ಷಣೆಕ್ಷಣೆ ಏಳು ತ್ತಲೂ ಮಾಯವಾಗುತ್ತಲೂ ಬದಲಾಯಿಸುತ್ತಲೂ ಇವೆ ಎಂದು ತಿಳಿಯ ಬಹುದು. ನಾಮಸ್ಮರಣೆಯನ್ನು ಮನಸ್ಸಿನಲ್ಲಿ ಮಾಡುತ್ತ ಏಕಾಗ್ರತೆ ಮಾಡ

ಬೇಕೆಂದಿರುವಾಗ ಜಪಸರದ ಮಣಿಗಳನ್ನು ಎಣಿಸುವುದು ಈ ಬಗೆಯಲ್ಲಿ ಚಂಚಲವಾಗುತ್ತಿರುವ ಮನಸ್ಸಿಗೆ ನಾಮಸ್ಮರಣೆಗೆ ಸಂಬಂಧವಾದ ಮತ್ತೊಂದು ಕೆಲಸವನ್ನು ಕೊಡುವುದೇ ಉದ್ದೇಶ ಇದ್ದಿರಬೇಕು.

ಒಂದು ಹುಲಿಯ ಚಿತ್ರವನ್ನು ಒಂದು ಮಗು ನೋಡಿತೆನ್ನೋಣ. ಅದರ ಬಾಲ ಹೇಗಿದೆ, ಅದರ ಕೋರೆದಾಡೆಗಳು ಹೇಗಿವೆ, ಅದರ ಉಗುರುಗಳು ಹೇಗಿವೆ, ಇತ್ಯಾದಿಯಾಗಿ ಅದರ ಅಂಗಾಂಗಗಳ ಲಕ್ಷಣಗಳನ್ನು ಪ್ರತ್ಯಪ್ರತ್ಯೇಕವಾಗಿ ನೋಡಿ, ಅಂಗಾಂಗಗಳು ಹಾಗೆ ಇರುವುದರಿಂದ ಅದರ ಗುಣ, ಆಹಾರ, ಮುಂತಾದವುಗಳ ಕಲ್ಪನೆಯನ್ನು ಮಾಡಿಕೊಂಡು 'ಹುಲಿ' ಯೆನ್ನುವ ಮೃಗಕ್ಕೆ ಇಂಥಿಂಥ ಲಕ್ಷಣಗಳಿರಬೇಕು ಎಂದು ನಿರ್ಣಯಮಾಡಬೇಕಾದರೆ, ಮಗುವಿನ ಮನಸ್ಸನ್ನು ಆ ಚಿತ್ರದ ಮೇಲೆ ಬಹಳ ಹೊತ್ತು ಆಡಿಸಬೇಕು. ಆಗ ಮಾತ್ರವೇ ಹುಲಿಯೆನ್ನುವ ಸಂಪೂರ್ಣ ಅಭಿಪ್ರಾಯವು ಆ ಮಗುವಿನಲ್ಲಿ ಆಗುವುದು. ಈ ರೀತಿಯಲ್ಲಿ ಏಕಾಗ್ರತೆಯನ್ನು ಮಾಡುವುದು ಅಭ್ಯಾಸದಿಂದಲೇ ಬರಬೇಕಲ್ಲದೆ ಅದು ಹುಟ್ಟುಗುಣವಾಗಿಲ್ಲ.

ಒಂದು ಕೋಣೆಯಲ್ಲಿ ಎಲ್ಲಾ ಬಗೆಯ ಸಾಮಾನುಗಳನ್ನು ರಾಶಿ ಹಾಕಿದರೆ ನಮಗೆ ಬೇಕಾದ ವಸ್ತುವನ್ನು ಥಕ್ಕನೆ ಎತ್ತಿಕೊಳ್ಳಲಾರೆವು. ಹಾಗೆ ಎತ್ತಿಕೊಳ್ಳುವುದು ಸುಲಭವಾಗಬೇಕಾದರೆ ಅದನ್ನು ಪ್ರತ್ಯಪ್ರತ್ಯೇಕವಾಗಿ ಇರಿಸಿ, ಅದಕ್ಕೆ ಹೆಸರಿನ ಪಟ್ಟಿ ಹಚ್ಚಬೇಕು. ನಮಗೆ ಅಗತ್ಯವಾಗಿರುವುದನ್ನು ಮಾತ್ರ ಅಲ್ಲಿ ಇಡಬೇಕು. ಆಗ ಹಾಗೆ ಪ್ರತ್ಯಪ್ರತ್ಯೇಕವಾಗಿರಿಸಲಿಕ್ಕೆ ಸಾಕಷ್ಟು ಸ್ಥಳವು ಇರುವುದು. ಬೇಕಾದುದನ್ನು ಗಲಿಬಿಲಿ ಇಲ್ಲದೆ ಕಾಲವಿಳಂಬವಿಲ್ಲದೆ ಎತ್ತಿಕೊಳ್ಳಲು ಸಲಭವಾಗುವುದು. ಮಕ್ಕಳು ತಮ್ಮ ಚಟುವಟಿಕೆ ಮತ್ತು ಅಭಿರುಚಿಯ ಬಲದಿಂದ ಎತ್ತಿಕೊಳ್ಳುವ ಸಂಗ್ರಹದಲ್ಲಿಯೂ ಇದೇ ಬಗೆಯ ವ್ಯವಸ್ಥೆ ಇರಬೇಕು. ಹಾಗೆ ವ್ಯವಸ್ಥೆಗೊಳಿಸಬೇಕಾದರೆ ಮಗುವಿನ ಅವಧಾನ ಶಕ್ತಿಯನ್ನು ನಿಧಾನವಾಗಿ ಬೆಳಿಸಿ, ಅದು ಬೇಕಾದ ಕಡೆಗೆ ಏಕಾಗ್ರತೆ ಮಾಡುವಂತೆ ಅಭ್ಯಾಸ ಕೊಡಬೇಕು. ಒಂದು ಹೆಂಗಸು ಅಭ್ಯಾಸಬಲದಿಂದ ಎಮ್ಮೆ ಕರುವನ್ನು ಎತ್ತುತಿದ್ದಳಂತೆ. ಹೇಗೆ ಅಭ್ಯಾಸಬಲದಿಂದ ನಾವು ಹೆಚ್ಚು ಹೆಚ್ಚಾದ ಭಾರವನ್ನು ಎತ್ತಲು ಶಕ್ತರಾಗುತ್ತೇವೋ ಹಾಗೆಯೇ ಅಭ್ಯಾಸದಿಂದ ನಮ್ಮ ಏಕಾಗ್ರತೆಯ ಬಲವೂ ಹೆಚ್ಚುತ್ತದೆ.

ಒಂದು ಪುಸ್ತಕವನ್ನು ಒಂದು ಮಗು ಓದುತ್ತಿದೆ ಅಥವಾ ಲೆಕ್ಕಗಳನ್ನು ಮಾಡುತ್ತಿದೆ ಎನ್ನೋಣ. ಒಂದೆರಡು ಪುಟಗಳನ್ನು ಓದಿದೊಡನೆ ಅದಕ್ಕೆ ಬೇಸರಿಕೆಯುಂಟಾಗುತ್ತದೆ. ಆಗ ಆ ಪುಸ್ತಕವನ್ನು ಅಲ್ಲೆ ಬಿಟ್ಟು ಅದು ಆಟಕ್ಕೆ ಹೊರಗೆ ಓಡುತ್ತದೆ. ಅದು ಆಟದಲ್ಲಿಯೂ ಬಹಳ ಹೊತ್ತು ಇರಲಾರದು. ಬೇಗನೆ ಅದನ್ನು ಮುಗಿಸಿ ಅದು ತಾಯಿಯೊಡನೆ ತಿನ್ನಲಿಕ್ಕೆ ಕೊಡೆಂದು ಚಂಡಿಹಿಡಿಯುತ್ತದೆ. ಇಲ್ಲವಾದರೆ ನೆರೆಮನೆಯ ಮಕ್ಕಳಿದ್ದಲ್ಲಿಗೆ ಹೋಗುತ್ತದೆ. ಹೀಗೆ ಅದರ ಮನಸ್ಸಿನಲ್ಲಿ ಚಾಂಚಲ್ಯವಿದೆ. ಅಂದರೆ ಒಂದೇ ಕೆಲಸದಲ್ಲಿ ಬಹಳ ಹೊತ್ತು ಅನುರಕ್ತಿಯನ್ನು ತೋರಿಸಲಾರದು. ಆದರ ಮನಸ್ಸು ಬೇಗನೆ ದಣಿಯುತ್ತದೆ. ಆಗ ಮತ್ತೊಂದು ಬಗೆಯ ಚಟುವಟಿಕೆಯು ಅದಕ್ಕೆ ಬೇಕೇ ಬೇಕು. ನಾವಾದರೂ ಒಂದು ರಸಿಕ ವಾದ ಕಾದಂಬರಿಯನ್ನು ಓದಲು ಹತ್ತಿದೆವೆಂದರೆ ಊಟಉಪಚಾರಗಳ ಗೊಡವೆ ಇಲ್ಲದೆ ಆ ಕಾದಂಬರಿಯನ್ನು ಓದಿ ಮುಗಿಸಲು ತವಕಗೊಳ್ಳು ತ್ತೇವೆ. ಆಗ ಹಸಿವೆ ಬಾಯಾರಿಕೆಗಳ ನೋಟನುಡಿಗಳ ವಿಚಾರಗಳೆ ಹತ್ತುವುದಿಲ್ಲ. ಆ ಕಾದಂಬರಿಯಲ್ಲಿ ನಾವು ಮಗ್ನರಾಗಿರುತ್ತೇವೆ. ಈ ವಿಧದ ಏಕಾಗ್ರತೆಯು ಅಭ್ಯಾಸಬಲದಿಂದಲೇ ಸಾಧ್ಯ. ಅದೇ ಕಾದಂಬರಿಯ ಬದಲಾಗಿ ಆಗಲೆ ನಾವು ಜರ್ಮನ ಭಾಷೆಯ ವ್ಯಾಕರಣವನ್ನು ಕಲಿಯಲು ತೊಡಗಿದೆವು ಎನ್ನೋಣ. ಅದು ಅಷ್ಟು ಸಮಯದವರೆಗೆ ನಮ್ಮ ಮನ ಸ್ಸನ್ನು ಆಕರ್ಷಿಸಿ ಹಿಡಿಯಲಾರದು. ಆದರೆ ಅದನ್ನು ಕಲಿತು ಪಾಸು ಮಾಡಿದರೆ ಇನಾಂ ಇದೆ, ಅಥವಾ ನಮಗೆ ಬಢ್ತಿ ಸಿಗುತ್ತದೆ ಎಂದು ಭಾವಿ ಸೋಣ. ಅದನ್ನು ಉರು ಹಾಕಲಿಕ್ಕೆ ಸೊಂಟಗಟ್ಟುತ್ತೇವೆ. ಇಲ್ಲಿ ಕುದು ರೆಯು ಅತ್ತಿತ್ತ ನೋಡದೆ ನೆಟ್ಟಗೆ ಹೋಗುವಂತೆ ಅದಕ್ಕೆ ಚರ್ಮದ ಬಿಲ್ಲೆ ಗಳನ್ನು ಕಣ್ಣಿನ ಸಮೀಪ ಕೆನ್ನೆಗೆ ಕಟ್ಟುವ ಕ್ರಮದಲ್ಲಿ ನಮ್ಮ ಮನಸ್ಸಿಗೆ ಕಟ್ಟುತ್ತೇವೆ; ಲಗಾಮು ಹಾಕುತ್ತೇವೆ; ನಮ್ಮ ಸ್ವಾತಂತ್ರ್ಯಬಲದಿಂದಲೇ ಮನಸ್ಸನ್ನು ಆ ವಿಷಯದ ಮೇಲೆ ನಿಲ್ಲಿಸಿ ಅದನ್ನು ಮುಂದಟ್ಟುಮಾಡಿ ಕೊಳ್ಳುತ್ತೇವೆ.

ಅಹಂಕಾರದ ಬೆಳೆವಣಿಗೆ

18ನೆಯ ಅಧ್ಯಾಯ

ಧೃತಿ ಅಥವಾ ಚೈತನ್ಯದ ಬಾಹ್ಯಲಕ್ಷಣವು ಅಹಂಕಾರವೆಂದು ಹಿಂದೆ ಹೇಳಿದೆವು. ಗರ್ವದಲ್ಲಿ 'ನಾನು' ಎಂಬ ವಿಚಾರವೇ ತುಂಬಿ ಹೋಗುವುದರಿಂದ 'ಗರ್ವ' ಎಂಬ ಪದಕ್ಕೆ ಅಹಂಕಾರವನ್ನು ಸಮಾನಾರ್ಥದಲ್ಲಿ ಪ್ರಯೋಗಿಸುತ್ತಾರೆ. ಇಲ್ಲಿ 'ನಾನು' ಎಂಬ ವಿಚಾರದಲ್ಲಿ ಮಾತ್ರ ನಾವು ಪ್ರಯೋಗಿಸಿದ್ದೇವೆ.

ಚಿಕ್ಕ ಮಗುವಿನಲ್ಲಿ ಅನೇಕ ಕಾರ್ಯಗಳು ಪರಾವರ್ತನ ಕ್ರಮದಿಂದಲೇ ಸಾಗುವುದರಿಂದ ಅದಕ್ಕೆ 'ನಾನು' ಎಂಬ ಅರಿವು ಮೊದಲು ಆಗುವುದಿಲ್ಲ. ಒಂದೊಂದು ಸಲ ತನ್ನ ಕಾಲ್ಬೆರಳನ್ನು ಚೀಪುವಾಗ ಅದನ್ನು ಕಚ್ಚಿಬಿಡುತ್ತದೆ. ಪದೇಪದೇ ತನ್ನ ಕಣ್ಣುಗಳಿಂದ ನೋಡಿ ಕೈಗಳಿಂದ ಸ್ಪರ್ಶ ಮಾಡುತ್ತಲೇ ಇದ್ದು, ತನ್ನ ಅಂಗಭಾಗದ ಸುಖದುಃಖಗಳು ತನ್ನ ಸುಖದುಃಖಗಳೆಂಬ ಕಲ್ಪನೆಯು ಅದಕ್ಕೆ ಸುಮಾರು 18 ತಿಂಗಳೊಳಗೆ ಆಗುತ್ತದೆ. ಕನ್ನಡಿಯ ಬಳಿಯಲ್ಲಿ ನಿಂತು 'ಬಾಬು ಬಾಬು' ಎಂದು ತೋರಿಸಿದಾಗ ಅದು ನಗುತ್ತದೆ. ಆದರೆ ಅದನ್ನು ಬೇರೆ ಮಗುವೆಂದೇ ಭಾವಿಸಿ ಅದಕ್ಕೆ ಮುತ್ತುಕೊಡಲು ಯತ್ನಿಸುತ್ತದೆ.

ಸುಮಾರು ಮೂರನೆ ವರ್ಷದಲ್ಲಿ ಮಗುವಿಗೆ ತಾನು ಬೇರೆ ಎಂತಲೂ ತನಗೆ ಸಂಬಂಧಿಸಿದ ವಸ್ತುಗಳು ಬೇರೆ ಎಂತಲೂ ಗೊತ್ತಾಗುತ್ತದೆ. 'ನಿನ್ನ ಟೊಪ್ಪಿ ಎಲ್ಲಿ, ನಿನ್ನ ಕೈ ತೋರಿಸು, ನಿನ್ನ ಬಾಯಿ ತೆರೆ' ಎಂಬ ಪ್ರಶ್ನೆಗಳಿಗೆ ಸರಿಯಾಗಿ ಅದು ಉತ್ತರಕೊಡುತ್ತದೆ. ತನ್ನದಲ್ಲದ ಅಂಗಿಯನ್ನು ತೋರಿಸಿದರೆ ಅಳುತ್ತದೆ; ಇಲ್ಲವೆ ಅದನ್ನು ಸಿಟ್ಟಿನಿಂದ ದೂರಕ್ಕೆ ಬಿಸಾಡುತ್ತದೆ. ಆಗ ಅದಕ್ಕೆ ತನ್ನ ಅಲಂಕಾರದ ಮೇಲೆ ಪ್ರೇಮ ಹುಟ್ಟುತ್ತದೆ. 'ಕೈಗೆ ಬಳೆ ತೊಡಿಸಬೇಕು, ಒಳ್ಳೆ ಬಣ್ಣದ ಅಂಗಿ ತೊಡಿಸಬೇಕು, ಟೊಪ್ಪಿ ಇಡಬೇಕು'

ಎಂದು ಸನ್ನೆಯಿಂದ ತೋರಿಸುತ್ತದೆ. ಅವನ್ನು ತೊಡಿಸಿದಾಗ ಸಂತೋಷ ದಿಂದ ನೋರೆಯ ಮೇಲೆ ವೈಯ್ಯಾರವನ್ನು ತೋರ್ಪಡಿಸುತ್ತದೆ. ತಾನು ಬೆಳೆದ ಮನುಷ್ಯನಷ್ಟೇ ಉದ್ದ ಇದ್ದೇನೆ ಎಂದು ತೋರಿಸಲಿಕ್ಕೆ ಬೆಂಚು ಅಥವಾ ಕುರ್ಚಿಯ ಮೇಲೆ ಹತ್ತಿ ತೋರಿಸುತ್ತದೆ. ತನ್ನ ತಂದೆಯ ಅಥವಾ ಅಣ್ಣನ ಮೊಚ್ಚೆಗಳನ್ನು ಮೆಟ್ಟುತ್ತದೆ, ತಂದೆಯ ರುಮಾಲನ್ನು ತಲೆಗೆ ಇಟ್ಟುಕೊಳ್ಳುತ್ತದೆ.

ಸ್ವತ್ತಿನ ಆಸೆಯು ಅದಕ್ಕೆ ಈಗ ಮೆಲ್ಲಗೆ ಮೂಡಿರುವುದರಿಂದ ತನ್ನ ಆಟದ ಗೊಂಬೆಗಳನ್ನು ಇತರರಿಗೆ ಮುಟ್ಟಲು ಬಿಡಲೊಲ್ಲದು. ಅವನ್ನು ಅಡಗಿಸಿಡಲು ಯತ್ನಿಸುತ್ತದೆ. ಅದು ತೊದಲು ನುಡಿಗಳಲ್ಲಾದರೂ ಭಾಷೆಯನ್ನು ಹೆಕ್ಕಿಕೊಂಡಾಗ, ಸ್ಮರಣಾಶಕ್ತಿಯ ಸಹಾಯದಿಂದಲೂ ಸ್ವಭಾವತಃ ತುಂಬಿ ತುಳುಕುವ ಚಟುವಟಿಕೆಯಿಂದಲೂ ತನ್ನ ಸುತ್ತುಮುತ್ತಲಿನ ಸೃಷ್ಟಿಪರಿಚಯವನ್ನು ಮಾಡಲು ಯತ್ನಿಸುತ್ತದೆ. ತನ್ನ ಚಟುವಟಿಕೆಯಿಂದ ನವರಚನೆಯನ್ನು ಮಾಡಲಿಕ್ಕೆ ತೊಡಗುತ್ತದೆ. ಅನುಕರಣಶಕ್ತಿಯು ಈ ಕೆಲಸದಲ್ಲಿ ಅದಕ್ಕೆ ಸಹಾಯಕವಾಗಿದೆ.

ಆ ಕಾಲದಲ್ಲಿ ಬಾಹ್ಯಸಂಸ್ಕಾರಗಳೇ ಅದರ ಮನಸ್ಸನ್ನು ಆಕರ್ಷಿಸುತ್ತವೆ. ಹೀಗಾಗಿ ಬಹಳ ಬೇಗನೆ ಅದರ ಅಭಿರುಚಿಯು ಒಂದು ವಸ್ತುವಿನಿಂದ ಇನ್ನೊಂದಕ್ಕೆ, ಒಂದು ನೋಟದಿಂದ ಇನ್ನೊಂದಕ್ಕೆ ಹಾರುತ್ತದೆ. ಅದನ್ನು ಒಂದೇ ಕಡೆಗೆ ನೆಲೆ ನಿಲ್ಲಿಸುವಷ್ಟು ಮನೋದಾರ್ಢ್ಯವು ಅಲ್ಲಿ ಉಂಟಾಗಲಿಲ್ಲ. ಮನಸ್ಸು ಮನೋವಿಕಾರಗಳ ವಶವರ್ತಿಯಾಗಿ ಚಂಚಲವಾಗಿದೆ. ಅಂಥ ಮಗು ಫಕ್ಕನೆ ಸಿಟ್ಟಿಗೇಳುತ್ತದೆ. ತನಗೆ ಬೇಕಾದ ವಸ್ತುವನ್ನು ಕೊಡಬೇಕೆಂದು ಚಂಡಿ ಹಿಡಿಯುತ್ತದೆ. ಅಷ್ಟರಲ್ಲಿ ಬೇರೊಂದು ನೋಟವಾಗಲಿ ವಸ್ತುವಾಗಲಿ ಅದನ್ನು ಆಕರ್ಷಿಸಿದರೆ ಮೊದಲಿನ ಆಸೆಯನ್ನು ಮರೆತು ಬಿಡುತ್ತದೆ.

ಅದೇ ಸಮಯದಲ್ಲಿ 'ಇದು ಒಳ್ಳೆಯ ನಡತೆ, ಇದು ಕೆಟ್ಟ ಗುಣ' ಎಂಬ ವ್ಯತ್ಯಾಸವು ಮಗುವಿಗೆ ಅಲ್ಪಸ್ವಲ್ಪ ತೋರತೊಡಗಿದೆ. 'ನಾನು ನನ್ನ ಗೆಳೆಯರಿಗಿಂತ ಒಳ್ಳೆಯವನಲ್ಲವೇ? ನೆರೆಮನೆಯ ಹುಡುಗನು ಕೆಟ್ಟವನು,' ಎಂದು ಅದು ತೋರಿಸಲು ಯತ್ನಿಸುತ್ತದೆ. ಅಂದರೆ ಇತರರಿಗೆ

ತನ್ನ ನಡತೆಯು ಮೆಚ್ಚಿಗೆಯಾಗಬೇಕೆಂದು ಅದು ಸಾಧಿಸುತ್ತದೆ. ಈ ಕಾಂಕ್ಷೆಯು ಹುಟ್ಟುವ ವರೆಗೆ ಆ ಮಗುವಿನ ಚಂಚಿತನಕ್ಕಾಗಿ ಅದನ್ನು ದಂಡಿಸುವುದು ಉಪಯೋಗವಿಲ್ಲ. ಕೆಲವರು ಇಂಥ ಮಕ್ಕಳಿಗೆ 'ಸುಮ್ಮನಿರು,' ಎಂದು ಗದರಿಸಿ ಎರಡೇಟುಗಳನ್ನು ಕೊಡುವರು. ಆ ಮಗುವಿನಲ್ಲಿ ಇನ್ನೂ ಚಂಚಲ ಮನಸ್ಸಿರುವುದರಿಂದ ತನ್ನ ಚಂಡಿತನ್ನಕ್ಕಾಗಿ ದಂಡಿಸಿದರು ಎಂಬ ವಿಚಾರವು ಬೇಗನೆ ವಿಸ್ಮೃತಿಯಾಗುತ್ತದೆ. ಪುನಃ ಇನ್ನೊಂದು ಗಳಿಗೆಯಲ್ಲಿ ಮೊದಲಿನಂತೆ ಹಟಹಿಡಿಯುತ್ತದೆ. ಇಂಥ ಹಟಮಾರಿತನವನ್ನು ತಗ್ಗಿಸ ಬೇಕಾದರೆ ಅದಕ್ಕೆ ಕಾಂಕ್ಷೆಗಳ ವಿಸ್ಮೃತಿಯಾಗುವಂತೆ ಉಪಾಯಕಾಣುವುದೇ ಲೇಸು. ಇಲ್ಲವಾದರೆ ತನಗೆ ಆದ ವೇದನೆಯಿಂದ ನೊಂದ ಮಗು ಸಿಟ್ಟಿನ ವಶವಾಗಿ ಇನ್ನಷ್ಟು ಹಟಮಾರಿತನವನ್ನು ತೋರಿಸುತ್ತದೆ.

ಒಮ್ಮೆ ತನ್ನ ಸುತ್ತಮುತ್ತಲಿರುವವರ ಹೊಗಳಿಕೆಗೆ ಪಾತ್ರನಾಗ ಬೇಕೆಂಬ ಕಾಂಕ್ಷೆಯು ಉತ್ಪನ್ನವಾಯಿತೆಂದರೆ ಆಗ ಅದರ ಒಳ್ಳೆ ಕೆಲಸಗಳ ಗೋಸ್ಕರ ಬೆನ್ನು ತಟ್ಟುವುದು, ದುಷ್ಟವರ್ತನಕ್ಕೆ ದಂಡಿಸುವುದು ಪ್ರಯೋಜನಕಾರಿಯಾಗುತ್ತದೆ. ಯಾಕಂದರೆ ತನಗೆ ಆದ ಶಿಕ್ಷಾಕಾರ್ಯಕ್ಕೂ ಅದರ ಕಾರಣಕ್ಕೂ ಮಗು ಸಂಬಂಧ ಕಟ್ಟಲು ತೊಡಗುತ್ತದೆ. ಇಂಥ ಮಕ್ಕಳಿಗೆ ಶಾಲೆಯಲ್ಲಿ 'ನಿನಗೆ ನಾಲ್ಕು ಮಾರ್ಕು ಕೊಟ್ಟಿದೆ' ಎಂದು ಹೇಳಿದರೆ ಎಷ್ಟೊ ಸಂತೋಷ. ಆ ಮಾರ್ಕನ್ನು ಅದು ಏನು ಮಾಡಬಲ್ಲುದು ಎಂದು ಅದಕ್ಕೆ ಜ್ಞಾನವಿಲ್ಲ. ಆದರೂ ಶಾಲೆಯಿಂದ ಮನೆಗೆ ಹೋದೊಡನೆ "ಉಪಾಧ್ಯಾಯರು ನನಗೆ ಚಿತ್ರ ಬರೆದುದಕ್ಕೆ ನಾಲ್ಕು ಮಾರ್ಕು ಕೊಟ್ಟರು.' ಎಂದು ಓಡುತ್ತ ಹಾರುತ್ತ ಬಂದು ತನ್ನ ತಾಯೊಡನೆ ತಿಳಿಸುತ್ತದೆ. ಆ ಕಾಲದಲ್ಲಿ ಇತರರ ಮೇಲೆ ನಾಯಕತ್ವವನ್ನು ನಡಿಸಬೇಕೆಂಬ ಇಚ್ಛೆಯು ಮೆಲ್ಲಗೆ ಸ್ಫೂರ್ತಿಗೆ ಬರುತ್ತದೆ. ತನಗಿಂತಲೂ ಚಿಕ್ಕವರಿಗೆ 'ಹೀಗೆ ಮಾಡು, ಅಲ್ಲಿಗೆ ಹೋಗಬೇಡ, ಬೀಳುವೆ' ಎಂದು ಎಚ್ಚರಿಸುತ್ತದೆ. ದೊಡ್ಡವರಿಗೂ ಬುದ್ಧಿ ಹೇಳುವುದುಂಟು. ತನ್ನ ಮಾತನ್ನು ಮೀರಿದರೆ ತಾನೇ ದಂಡಿಸಲು ಯತ್ನಿಸುತ್ತದೆ; ಇಲ್ಲವಾದರೆ ದೂರಿಡುತ್ತದೆ. ಇಲ್ಲಿ ಅದಕ್ಕೆ ತನ್ನ ಹಿರಿಯರು ಹಾಕಿ ಕೊಟ್ಟ ನಡತೆಯ ಮರ್ಯಾದೆಯನ್ನು ಮೀರದಂತೆ ತಿಳಿವಳಿಕೆ ಉಂಟಾಗಿದೆ ಎನ್ನಬಹುದು.

ಕನ್ನಡ ಪುಸ್ತಕಗಳಲ್ಲಿ 'ನಾನು ಒಲ್ಲೆ' ಎಂಬ ಕಥೆಯನ್ನು ನೀವು ಓದಿರಬಹುದು. ಹಿರಿಯರ ಮಾತಿಗೆ ಅವಿಧೇಯತೆಯನ್ನು ತೋರಿಸಿದ ಮತ್ತು ತನಗೆ ಬುದ್ಧಿ ಹೇಳಬೇಕಾಗಿಲ್ಲ ಎಂದು ಎದುರಿಸಿದ ಇಲಿಮರಿಯ ವರ್ತನವು ಸುಮಾರು ನಾಲ್ಕು ವರ್ಷ ಪ್ರಾಯದೊಳಗೆ ಮಗುವಿನಲ್ಲಿ ಕಂಡುಬರುತ್ತದೆ. 'ಮಗು ನಿದ್ದೆಮಾಡು' ಅಂದರೆ 'ಮಾಡೋದಿಲ್ಲ,' 'ಇಲ್ಲಿಗೆ ಬಾ' 'ಅಂದರೆ ಬರೋದಿಲ್ಲ,' 'ಓಡು' ಅಂದರೆ 'ಓಡೋದಿಲ್ಲ,' ಎಂದು ಆಜ್ಞೆಗೆ ವಿರೋಧವಾಗಿ ನಡಿಯುವ ಗುಣವು ಮಕ್ಕಳಲ್ಲಿ ಕಂಡು ಬರುತ್ತದೆ. ಅಂಥ ಗುಣವನ್ನು ಅಣಗಿಸಲು ಬಹಳ ತಾಳ್ಮೆ ಬೇಕಾಗುತ್ತದೆ. ಈ 'ಕರೀ ನಕರೀ' ಗುಣಕ್ಕೆ ಒಂದು ಚಲೊ ಔಷಧವಿದೆ. ಒಂದು ಮಗು ಒಂದು ಚೂರಿಯನ್ನು ಎತ್ತಿಕೊಂಡಿದೆ; ಕೇಳಿದರೆ ಕೊಡುವುದಿಲ್ಲ. ಅದು ತನ್ನ ಕೈಕಾಲುಗಳಿಗೆ ಗಾಯಮಾಡಿಕೊಳ್ಳುತ್ತದೊ ಅಥವಾ ಇತರರಿಗೆ ಗಾಯಮಾಡೀತೊ ಎಂದು ಹೇಳಲಾರೆವು. ಅಂಥ ಕಾಲದಲ್ಲಿ ಕೆಲವು ತಾಯಿತಂದೆಗಳು ತಮ್ಮ ಕಣ್ಣು ಮುಚ್ಚಿ 'ಇಗೊ; ನಮ್ಮ ಪುಟ್ಟ ಎಷ್ಟು ಚಲೊ ಕೂಸು, ಎಷ್ಟು ಒಳ್ಳೆ ಕೂಸು! ಚೂರಿಯನ್ನು ನನ್ನ ಕೈಗೆ ತಂದಿಕ್ಕುತ್ತದೆ, ನಾನು ಕಣ್ಣುಬಿಡುವಷ್ಟರಲ್ಲಿ ಇಕ್ಕುತ್ತದೆ. ಇಗೊ ನನ್ನ ಕೈಗೆ ಚೂರಿ ಬಂತು' ಎಂದು ಹೇಳುತ್ತಾರೆ. ಆಗ ಮೊತ್ತಮೊದಲು ಮಗು ನಗುತ್ತದೆ. ಹಿರಿಯರ ಕೈಗೆ ಅದನ್ನು ಒಪ್ಪಿಸುವುದಿಲ್ಲ. ಒಂದು ಕಡೆ ಅದರ ಸ್ವಾರ್ಥಪರ ಕಾಂಕ್ಷೆಯು ಬಿಡಲೊಲ್ಲದು. ಇನ್ನೊಂದು ಕಡೆ ತನ್ನ ಆತ್ಮಪ್ರೇಮದಿಂದ ತನ್ನ ವ್ಯಕ್ತಿಸ್ವಾತಂತ್ರ್ಯವನ್ನು ತೋರಿಸಬೇಕೆಂದು ಮಗುವಿಗೆ ಇಚ್ಛೆ ಇದೆ. ಅತ್ತಿತ್ತ ನೋಡುತ್ತದೆ. ಹಿರಿಯರಿಗೆ ಸಿಟ್ಟು ಬಂದೀತೇ ಎಂದು ತುಸು ಹೊತ್ತು ಯೋಚಿಸುತ್ತದೆ. ಆ ಮೇಲೆ ಅದನ್ನು ಒಪ್ಪಿಸಿಬಿಟ್ಟು 'ನಾನು ಚೂರಿ ಕೊಟ್ಟೆ' ಎಂದು ಕೈತಟ್ಟಿ ನಗುತ್ತದೆ. ಇಲ್ಲಿ ಹಿರಿಯರ ಮನಸ್ಸನ್ನು ನೋಯಿಸಲು ಅದಕ್ಕೆ ಇಷ್ಟವಿಲ್ಲ, ಅವರ ಹೊಗಳಿಕೆಗೆ ತಾನು ಪಾತ್ರನಾಗಬೇಕೆಂದು ಆ ಮಗುವಿಗೆ ಕಾಂಕ್ಷೆ ಇದೆ.

ಕೆಲವೊಂದು ವೇಳೆ ಇಂಥ ಮಗು ಈ ರೀತಿಯಲ್ಲಿಯೂ ಚೂರಿಯನ್ನು ಒಪ್ಪಿಸಲಿಲ್ಲವೆನ್ನೋಣ. ಆಗ ಹಿರಿಯರು ಇನ್ನೊಂದು ಯುಕ್ತಿಯನ್ನು ನಡಿಸುತ್ತಾರೆ. 'ಮಗು! ನೀನು ನನಗೆ ಕೊಡಬೇಡ; ನಾನು ಖಂಡಿತ

ನಾಗಿಯೂ ಅದನ್ನು ತೆಗೆದುಕೊಳ್ಳಲಾರೆ. ಈ ಸಾಯಂಕಾಲ ನಾನು ಬೇರೆ ಚಲೋ ಚೂರಿಯನ್ನು ತರುವೆನು. ಇದು ಹಾಳು ಚೂರಿ. ನನಗೆ ಬೇಡವಪ್ಪಾ!' ಎಂದು ಹೇಳುತ್ತಾರೆ. ಆಗ ತನಗೆ ಆ ಹೊಸತೊಂದು ಚೂರಿ ಸಿಕ್ಕಿದರೆ ಆದೀತು, ಅದು ಸಿಗಬೇಕಾದರೆ ಹಿರಿಯರನ್ನು ತಾನು ಮೆಚ್ಚಿಸಬೇಕು ಎಂದು ನೆನಸಿ, ಆ ಮಗು ಚೂರಿಯನ್ನು ಹಿರಿಯರಿಗೆ ಒಪ್ಪಿಸಿಬಿಡುತ್ತದೆ. ಇಂಥದ್ದರಲ್ಲಿ ಮಗು ಯಾವ ಕೆಲಸವನ್ನು ಮಾಡ ಬಾರದೊ ಅದನ್ನ ಮಾಡೆಂದು ವಿರೋಧಕ್ರಮದಲ್ಲಿ ನಾವು ಆಜ್ಞೆಮಾಡು ತ್ತೇವೆ. ಅವಿಧೇಯತೆಯ ಬಗ್ಗೆ ದಂಡಿಸುವುದಕ್ಕಿಂತಲೂ ಇದು ಎಷ್ಟೊ ವಾಸಿ. ಅವಿಧೇಯತೆಯನ್ನು ತೋರಿಸಬೇಕೆಂದು ಇಚ್ಛೆಯಿಂದ ಆ ಮಗು ಅವಿಧೇಯನಾದುದಲ್ಲ. ತನ್ನಲ್ಲಿ ತುಂಬಿರುವ ಚಟುವಟಿಕೆಯ ನಿಮಿತ್ತ ತನ್ನ ವ್ಯಕ್ತಿಸ್ವಾತಂತ್ರ್ಯವನ್ನು ಪ್ರದರ್ಶಿಸಲು ಅದು ಯತ್ನಿಸಿತು. ಅದನ್ನು ಅವಿಧೇಯತೆ ಎಂಬ ನೈತಿಕ ಅಪರಾಧವಾಗಿ ತಿಳಿಯುವಷ್ಟು ಅದಕ್ಕೆ ಕರ್ತವ್ಯ ಜ್ಞಾನವಾಗಿಲ್ಲ. ಅಂಥ ಮಕ್ಕಳನ್ನು ದಂಡಿಸುವುದರಿಂದ ಒಮ್ಮೆ ಅವು ತಗ್ಗಿ ದರೂ ಇನ್ನೊಮ್ಮೆ ಅಂಥ ವ್ಯಕ್ತಿಸ್ವಾತಂತ್ರ್ಯವನ್ನು ಇನ್ನೊಂದು ರೀತಿಯಲ್ಲಿ ತೋರಿಸಬೇಕೆಂಬ ಇಚ್ಛೆಯು ಅಂಥ ಮಕ್ಕಳಲ್ಲಿ ಉಕ್ಕಿಬರುತ್ತದೆ. ಇಂಥ ಒರಟುತನ ಅಥವಾ ಹಟಮಾರಿತನವನ್ನು ಯುಕ್ತಿಯಿಂದ ಗೆಲ್ಲಬೇಕು. ಆಗ ಅದು ಬಹಳ ಕಾಲ ನಿಲ್ಲುವುದಿಲ್ಲ. ಅದರ ವಿಚಾರಶಕ್ತಿಯು ಬೆಳೆದ ಹಾಗೆ 'ಇದು ನ್ಯಾಯ, ಇದು ಅನ್ಯಾಯ, ಇದು ಸಲ್ಲದು' ಎಂಬ ತಿಳುವಳಿ ಕೆಯು ಮಗುವಿನಲ್ಲಿ ಆಗುತ್ತದೆ. ಕೆಲವು ಮಕ್ಕಳು ಮನೆಯಲ್ಲಿ ಬಹಳ ಹಟಮಾರಿಗಳೆಂದು ತುಂಬಾ ದಂಡನೆಗೆ ಗುರಿಯಾಗುತ್ತವೆ. ಆದರೆ ಇತರ ರೊಂದಿಗೆ ಚಲೊ ವರ್ತನವನ್ನು ಕೈಕೊಳ್ಳುತ್ತವೆ. ಇದರಿಂದಲೇ ಆ ಮಗುವಿಗೆ ತನ್ನ ಅವಿಧೇಯತೆಯ ಜ್ಞಾನವಾಗಿಲ್ಲವೆಂದು ನಾವು ತಿಳಿಯ ಬಹುದು.

ಈ ಅವಿಚಾರದ ವ್ಯಕ್ತಿಸ್ವಾತಂತ್ರ್ಯವನ್ನು ಕ್ರಮಪಡಿಸಬೇಕಾದರೆ ಅದಕ್ಕೆ ಇತರ ಮಕ್ಕಳೊಡನೆ ಒಡನಾಡಲು ಬಿಡಬೇಕು. ಆಗ ಅದರಲ್ಲಿ ಇತರರ ಕಷ್ಟಗಳಿಗೆ ಅನುತಾಪ, ಇತರರಿಗೆ ಸಹಾಯಮಾಡಬೇಕೆಂಬ ಲವ ಲವಿಕೆ ಇವು ತನ್ನ ಸ್ವಾರ್ಥಪರವಾದ ವ್ಯಕ್ತಿಸ್ವಾತಂತ್ರ್ಯವನ್ನು ಕಿತ್ತುಬಿಡಲಿಕ್ಕೆ ಸಹಾಯಕವಾಗುತ್ತವೆ.

ಮುಂದೆ ಅದಕ್ಕೆ ಒಂದು ಕೆಲಸವನ್ನು ಮಾಡುವಾಗ, 'ನಾನು ಮಾಡುತ್ತೇನೆ, ಅದರ ಉದ್ದೇಶವು ಇಂಥದು, ಅದನ್ನು ಹೀಗೆ ಕೈಗೂಡಿಸಬೇಕು, ಅದರಿಂದ ಈ ರೀತಿ ನನಗೆ ಸುಖಪ್ರಾಪ್ತಿಯಾಗುತ್ತದೆ' ಎಂಬ ವಿಚಾರವು ಬೆಳೆದು, ತನ್ನ ಕೆಲಸದ ಮೇಲೆ ಅಭಿರುಚಿಯೂ ಏಕಾಗ್ರತೆಯೂ ತೋರಿ, ಅಭ್ಯಾಸಬಲದಿಂದ ಅದು ತನ್ನ ಕೆಲಸಕ್ಕೆ ಬರುವ ತೊಡಕುಗಳನ್ನು ತೆಗೆದುಹಾಕಲು ನೋಡುತ್ತದೆ. ಇಂಥ ಶಕ್ತಿಯು ಅದಕ್ಕೆ ಸುಮಾರು 8 ವರ್ಷ ಪ್ರಾಯದ ಮುಂಚೆ ಉಂಟಾಗುವುದಿಲ್ಲ. ಈ ಪ್ರಾಯಕ್ಕೆ ಮುಂಚೆ ಅದು ತನ್ನ ಮೇಲೆ ಹಿರಿಯರು ಹಾಕುವ ನಿರ್ಬಂಧಗಳ ಮೇಲೆ ಆಕ್ಷೇಪಿಸುತ್ತದೆ. ಈ ನಿರ್ಬಂಧಗಳ ಕಾರ್ಯಕಾರಣ ಸಂಬಂಧವನ್ನು ಅದು ತಿಳಿಯದೆ ತನ್ನ ಹಿರಿಯರು ಅವಿಚಾರಿಗಳೆಂದು ತಿಳಿಯುತ್ತದೆ. ಡಾ। ರವೀಂದ್ರನಾಥ ಟಾಗೋರರು 'ಕ್ರೆಸೆಂಟ ಮೂನ್' (ಬಿದಿಗೆಯ ಚಂದ್ರ) ಎಂದು ಮಗುವಿನ ಮಾನಸಿಕ ಶಕ್ತಿಗಳಿಗೆ ಅನ್ವಯಿಸಿ, ಮಗುವಿನ ಮಾತಿನಲ್ಲಿ ವಿವರಿಸುವಾಗ ಹೀಗಂದಿದ್ದಾರೆ:—

"ಅಪ್ಪನು ಬರೆಯುವ ಲೇಖನಿಯನ್ನಾಗಲಿ ಪೆನ್ಸಿಲನ್ನಾಗಲಿ ಎತ್ತಿಕೊಂಡು ಆತನು ಬರೆಯುವ ಪುಸ್ತಕದಲ್ಲಿ 'ಅ ಆ ಇ ಈ' ಎಂದು ಒಂದೆರಡು ಅಕ್ಷರ ಬರೆಯಲು ತೊಡಗಿದೆನೊ ಇಲ್ಲವೊ, ನೀನು ಓಡಿ ಬಂದು ನನ್ನನ್ನು ಗದರಿಸುತ್ತಿ! ಆದರೆ ನಮ್ಮಪ್ಪನು ಎಷ್ಟೆ ಬೇಕಾದರೆ ಗೀಚಲಿ, ನೀನು 'ಚ'ಕಾರ ಶಬ್ದವೆತ್ತುವುದಿಲ್ಲವೇಕಮ್ಮಾ?

ಅಪ್ಪನು ಬರೆಯುವ ನೆವದಿಂದ ಹಾಳೆ ಹಾಳೆ ಕಾಗದಗಳನ್ನು ಹಾಳುಮಾಡಿ ಎಸೆದುಬಿಡುತ್ತಾನೆ. ಆದರೂ ನಿನಗೆ ಅದೊಂದು ಗಣ್ಯವಲ್ಲ. ಆದರೆ ನಾನು ಒಂದೇ ಒಂದು ಕಾಗದ ಚೂರನ್ನು ಒಂದು ಚಿಕ್ಕ ದೋಣಿಮಾಡುವುದಕ್ಕಾಗಿ ಅಪ್ಪನ ಮೇಜಿನ ಮೇಲಿಂದ ತೆಗೆದೆನೆಂದು ನಿನಗೆ ತಿಳಿದೊಡನೆ ಇದೆಂಥ ಅನಿಷ್ಟ! ಎಂದು ರೇಗಿ ಬೀಳುತ್ತಿ!"

ಈ ರೀತಿಯಲ್ಲಿ ತನ್ನ ಚಟುವಟಿಕೆಗೆ ನಿರ್ಬಂಧ ಹಾಕುವವರನ್ನು ಕುರಿತು ಮಕ್ಕಳ ಮನಸ್ಸಿನಲ್ಲಿ ಒಂದು ವಿಧವಾದ ಉರಿ ಏಳುತ್ತದೆಂದು ಈ ವಿಚಿತ್ರ ಕಲ್ಪನೆಯಿಂದ ಡಾ। ರವೀಂದ್ರನಾಥರು ಮಕ್ಕಳ ಮಾನಸಿಕ ಪರಿಸ್ಥಿತಿಯನ್ನು ವರ್ಣಿಸಿರುವರು. ಡಾ। ಮೊಂಟೆಸೊರಿಯವರ ಶಿಕ್ಷಣಕ್ರಮದಲ್ಲಿ ಈ ವ್ಯಕ್ತಿಸ್ವಾತಂತ್ರ್ಯಕ್ಕೆ ಹೇಗೆ ಪ್ರಾಶಸ್ತ್ಯಕೊಟ್ಟಿರುವುದೆಂದು ಮುಂದಿನ ಅಧ್ಯಾಯಗಳಲ್ಲಿ ಗೊತ್ತಾಗುವುದು.

ವರ್ತನ, ಸದಸದ್ವಿವೇಕ

19ನೆಯ ಅಧ್ಯಾಯ.

ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಸ್ವಭಾವವು ಅವನ ಬಾಹ್ಯವರ್ತನ ಅಥವಾ ನಡತೆಯಲ್ಲಿ ಕಂಡು ಬರುತ್ತದೆ. ಹೀಗಾಗಿ ಸ್ವಭಾವವು ಪ್ರೇರಕವೆಂದೂ ವರ್ತನವು ಅವನ ಪ್ರೇರಣೆಯ ಪ್ರದರ್ಶನವೆಂದೂ ರೂಢಿಯಲ್ಲಿ ತಿಳಿಯುತ್ತಾರೆ. ಸ್ವಭಾವವನ್ನು ಟೀಕಿಸುವಾಗ ಹಿಂದೆ 106ನೇ ಪುಟದಲ್ಲಿ ಸತ್ವ, ರಜ, ತಮೋಗುಣಗಳು ಅದರ ಲಕ್ಷಣಗಳು, ಎಂದು ಹೇಳಿದೆ. ಅವುಗಳಲ್ಲಿ ಯಾವದಾದರೊಂದು ಮನುಷ್ಯನ ಸರ್ವಕಾರ್ಯಗಳಲ್ಲಿಯೂ ಕಂಡು ಬರಬಹುದು. ಆಗ ಅವನ ವರ್ತನವು ಅದೇ ಕಾರಣದಿಂದ ಸಾರ್ವದಾ ಸಾತ್ವಿಕ, ರಾಜಸಿಕ, ಅಥವಾ ತಾಮಸಿಕ ಇರಬಹುದು. ಇದಕ್ಕೊಂದು ದೃಷ್ಟಾಂತವನ್ನು ಕೊಡೋಣ. ಹರಿಶ್ಚಂದ್ರನ ಸತ್ವಪರೀಕ್ಷೆಯನ್ನು ಮಾಡಬೇಕೆಂದಿರುವ ವಿಶ್ವಾಮಿತ್ರನು ಆತನನ್ನೂ ಆತನ ಪತ್ನಿಪುತ್ರರನ್ನೂ ಅನೇಕ ವಿಧವಾಗಿ ಪೀಡಿಸಿದನು. ಆದರೆ ಅಷ್ಟನ್ನೆಲ್ಲ ಸಹಿಸಿಕೊಂಡು ಕೊನೆಗೆ ಹರಿಶ್ಚಂದ್ರನು ತನ್ನ ಸತ್ಯವನ್ನು ಕಾಪಾಡಿದ ಕೀರ್ತಿಯನ್ನು ಹೊಂದಿದನು. ಹರಿಶ್ಚಂದ್ರನು ಹುಟ್ಟುಕ್ಷತ್ರಿಯನು. ಕ್ಷತ್ರಿಯರಲ್ಲಿ ರಾಜಸಗುಣವೇ ಪ್ರಾಧಾನ್ಯವಾಗಿದೆ. ಅಂದರೆ ಅವರ ಮನಸ್ಸಿನ ಕಾಂಕ್ಷೆಗಳನ್ನು ನೆರವೇರಿಸುವುದಕ್ಕೆ ಅವರ ಅಹಂಕಾರವು ಪ್ರೇರೇಪಿಸುತ್ತದೆ. ಅವರ ಬುದ್ಧಿಯೂ ಅಹಂಕಾರದ ಅನುಲೇಪನದಿಂದಿದ್ದು 'ಇಂಥ ಕಾರ್ಯವನ್ನು ಮಾಡಬೇಕು' ಎಂದು ನಿರ್ಣಯಿಸುತ್ತದೆ. ಅವರ ಮನಸ್ಸು ಅದೇ ನಿರ್ಣಯವನ್ನು ಕರ್ಮೇಂದ್ರಿಯಗಳಿಂದ ನಡಿಸುತ್ತದೆ. 'ಧರ್ಮ ಅಧರ್ಮ, ಕಾರ್ಯ ಅಕಾರ್ಯ ಇವುಗಳ ಯಥಾರ್ಥವಾದ ನಿರ್ಣಯವನ್ನು ಮಾಡಲು ಅವರ ಬುದ್ಧಿಯು ಪಕ್ವವಾಗಿಲ್ಲ. ಆದರೆ ಹರಿಶ್ಚಂದ್ರನು ವಸಿಷ್ಠ ಮಹಾಮುನಿಯ ಅನುವರ್ತಿಯಾಗಿದ್ದು, ಅವನ ಸಹವಾಸ ಮತ್ತು ಶಿಕ್ಷಣಬಲದಿಂದ ಸಾತ್ವಿಕ ಮಾರ್ಗವನ್ನು ಅವಲಂಬಿಸಿದ್ದನು. ತನಗೆಷ್ಟು ಕಷ್ಟ ಬಂದರೂ ಅದಕ್ಕೋಸ್ಕರ

ಪ್ರತಿಕಾರ ಮಾಡಲು ಇಚ್ಛಿಸದೆ ತನ್ನ ಕಷ್ಟ ಸಹಿಷ್ಣುತೆ ಮತ್ತು ಧರ್ಮಾಧರ್ಮ ವಿಚಾರದ ಬಲದಿಂದಲೇ ವಿಶ್ವಾಮಿತ್ರನ ದರ್ಪವನ್ನು ಮುರಿದನು. ವಿಶ್ವಾಮಿತ್ರನು ಹುಟ್ಟುಕ್ಷತ್ರಿಯನಾಗಿದ್ದು ಕೊನೆಗೆ ತಪಸ್ಸಿನ ಆಚರಣೆಯಿಂದ ಋಷಿ ಎನ್ನಿಸಿಕೊಂಡರೂ ಪಾರಂಪರ್ಯವಾಗಿ ಬಂದ ರಾಜಸಗುಣವು ಅವನ ಬೆನ್ನು ಬಿಡಲಿಲ್ಲ. ತನ್ನ ಮಾತನ್ನು ನಿಜವೆಂದು ತೋರಿಸುವುದಕ್ಕಾಗಿ ಇತರರನ್ನು ಪೀಡಿಸುವುದಕ್ಕೆ ಆತನು ಹಿಂಜರಿಯಲಿಲ್ಲ. ಚಿಕ್ಕ ಮಗುವಾದ ರೋಹಿದಾಸನೂ ಅವನ ತಾಯಿಯೂ ಪಡುವ ಕಷ್ಟಗಳಿಂದ ಅವನ ಎದೆ ಕರಗಲಿಲ್ಲ. ಧರ್ಮ ದುರ್ಯೋಧನರ ವರ್ತನದಲ್ಲಿಯೂ ಇದೇ ಸ್ಥಿತಿಯು ಕಂಡುಬರುತ್ತದೆ. ಇವರಿಬ್ಬರೂ ಕ್ಷತ್ರಿಯರಾದರೂ ಧರ್ಮನು ಧರ್ಮಾವತಾರವೇ ಎನ್ನಿಸಿಕೊಂಡಿದ್ದು ನ್ಯಾಯವಾದ ಮಾರ್ಗವನ್ನು ತಪ್ಪಲಿಲ್ಲ. ಹೀಗಾಗಿ ದೈವಸಹಾಯವು ಅವನಿಗೆ ಕೊನೆಯ ವರೆಗೆ ಬೆಂಬಲಕ್ಕೆ ನಿಂತಿತು. ದುರ್ಯೋಧನನಲ್ಲಿ ತಾನು ಮಾಡುವ ತಪ್ಪುಗಳ ಅರಿವು ಇದ್ದರೂ ಅಹಂಕಾರವು ಅವನನ್ನು ಸರಿದಾರಿಗೆ ಹೋಗಲು ಬಿಡಲಿಲ್ಲ. ಅವನಿಗೆ ಭೀಷ್ಮ ದ್ರೋಣಾದಿಗಳ ಹಿತವಚನಗಳು ಗ್ರಾಹ್ಯವಾಗಲಿಲ್ಲ. ಶಕುನಿ ಕರ್ಣಾದಿಗಳು ಕಿವಿಯೂದಿದ ಉಪದೇಶವೇ ಅವರ ಒಡನಾಟದಿಂದ ಅವರ ಸಹವಾಸದಿಂದ ಪಥ್ಯವಾಯಿತು.

ತಾಮಸ ಗುಣದ ದೃಷ್ಟಾಂತವನ್ನು ಕಂಸನಿಂದ ತೆಗೆದುಕೊಳ್ಳಬಹುದು. ಆತನು ಗರ್ವದಿಂದ ಅಹಂಕಾರದಿಂದ ಉನ್ಮತ್ತನಾದವನು; ವಿಚಾರಹೀನನಾಗಿ ತನ್ನ ಮುದಿ ತಂದೆಯಾದ ಉಗ್ರಸೇನನನ್ನು ಸೆರೆಯಲ್ಲಿಟ್ಟನು. ತನ್ನ ಸ್ವಂತ ತಂಗಿಯಾದ ದೇವಕಿಯನ್ನೂ ಅವಳ ಪತಿಯಾದ ವಸುದೇವನನ್ನೂ ಸೆರೆಯಲ್ಲಿಟ್ಟನು. ಅವನ ಮನಸ್ಸಿನಲ್ಲಿ ತಮೋಗುಣವೇ ವ್ಯಾಪಿಸಿ, ಅದರ ಕತ್ತಲೆಯನ್ನು ಹೋಗಲಾಡಿಸುವ ವಿಚಾರದ ಬೆಳಕು ಇಲ್ಲದ ಕಾರಣ, ಕೊನೆಯಲ್ಲಿ ನಿದ್ರೆಯಲ್ಲಿಯೂ ಜಾಗ್ರತಾವಸ್ಥೆಯಲ್ಲಿಯೂ ಕೃಷ್ಣನು ತನ್ನನ್ನು ಕೊಲ್ಲುವನು ಎಂಬ ಭೀತಿಯು ವ್ಯಾಪಿಸಿತು. ಹೀಗಾಗಿ ಎಲ್ಲಿ ನೋಡಿದರೂ ಅವನಿಗೆ ಕೃಷ್ಣನೇ ಕಾಣುತ್ತಿದ್ದನಂತೆ. ಹಿರಣ್ಯಕಶಿಪುವಿಗೆ ಸರ್ವವ್ಯಾಪಿಯಾದ ದೇವರು ಕಂಬದಲ್ಲಿಯೂ ಇದ್ದಾನೆ ಎಂಬಷ್ಟು ವಿಚಾರವು ಹತ್ತದಿರುವುದಕ್ಕೆ ಅವನಿಗೆ ವಿಷ್ಣುವಿನ ಮೇಲೆ ಇರುವ ದ್ವೇಶವೇ ಕಾರಣವಾಗಿತ್ತು. ಹೆರೊ

ದನು ಇಸ್ರಾಯೇಲ ದೇಶದ ಗಂಡು ಮಕ್ಕಳನ್ನು ಕೊಲ್ಲಬೇಕೆಂದು ಅಪ್ಪಣೆ ಕೊಡುವಾಗಲೂ ಕಂಸನ ರೀತಿಯ ಭ್ರಾಂತಿಯೇ ಅವನ ವಿಚಾರಶಕ್ತಿಯನ್ನು ಮಂಕುಮಾಡಿತ್ತು.

ಹೀಗೆ ಮನೋವೃತ್ತಿಗಳಲ್ಲಿ ಕೆಲವು ಮನೋಪಟಲವನ್ನು ಸರ್ವದಾ ವ್ಯಾಪಿಸಿಕೊಂಡಿದ್ದು, ಅಹಂಕಾರವು ಅವುಗಳೊಂದಿಗೆ ಕೂಡಿ, ಅವಕ್ಕೆ ವಿಚಾರದ ಅಂಕುಶವಿಲ್ಲದಿದ್ದರೆ ಅಂಥವರ ಸ್ವಭಾವವು ಈ ರಜ ತಮೋಗುಣಗಳ ಪೈಕಿ ಒಂದನ್ನು ಕೈಕೊಳ್ಳುವುದು. ಆದರೆ ಸ್ವಭಾವವು ಇದ್ದಂತೆಯೇ ಅವರ ವರ್ತನವು ಸಾರ್ವದಾ ಇರಬೇಕೆಂತಿಲ್ಲ. ಟೀಪುವು ಇತರ ರಾಜ್ಯದ ಪ್ರಜೆಗಳನ್ನು ಹಿಂಸಿಸುತಿದ್ದರೂ ತನ್ನ ರಾಜ್ಯದಲ್ಲಿ ವ್ಯವಸ್ಥೆಮಾಡಿ ಪ್ರಜೆಗಳಿಗೆ ಸುಖಕೊಡಲು ಹವಣಿಸುತ್ತಿದ್ದನು. ಧರ್ಮಾಂಧನಾದ ಔರಂಗಜೇಬನು ಹಿಂದೂ ಅರಸರಿಗೂ ಪ್ರಜೆಗಳಿಗೂ ಪೀಡಿಸುತಿದ್ದರೂ ತನ್ನ ಮತದವರ ಶ್ರೇಯಃಚಿಂತನೆಯಲ್ಲಿಯೇ ಇದ್ದನು. ತನ್ನ ಮತದ ಆಚರಣೆಯಲ್ಲಿ ಒಂದಿಷ್ಟಾದರೂ ಲೋಪಮಾಡುತಿರಲಿಲ್ಲ. ತನ್ನ ಮತದ ಮೌಲ್ವಿಗಳೊಡನೆ ಧರ್ಮಶಾಸ್ತ್ರ ವಿಚಾರಗಳನ್ನು ತರ್ಕಿಸುವುದು, ಅವರಿಗೆ ನ್ಯಾಯವಾದ ರೀತಿಯಲ್ಲಿ ಗೌರವಿಸುವುದು, ಇವೆಲ್ಲ ಗುಣಗಳು ಅವನಲ್ಲಿದ್ದವು. ಅವನು ವಿಷಯಾಂಧನಾಗಿರಲಿಲ್ಲ. ಮಹಮ್ಮದ ಬಿನ ತೊಗಲಕನು ತಮೋಗುಣದ ಅವತಾರವೆನ್ನಬಹುದು. ಅವನು ಒಬ್ಬನನ್ನು ಪ್ರೀತಿಸಿದರೆ ಏನು ಮಾಡಿಯಾನು, ದ್ವೇಷಿಸಿದರೆ ಏನು ಮಾಡಿಯಾನು ಎಂಬದು ಯಾರಿಂದಲೂ ಹೇಳಲು ಅಸಾಧ್ಯವಾಗಿತ್ತು. ಔದಾರ್ಯದಲ್ಲಿ ಅವನಿಗೆ ಎಣೆ ಇದ್ದಿಲ್ಲ. ಆದರೆ ಸಿಟ್ಟು ಬಂತೆಂದರೆ ಸಿಟ್ಟಿಗೆ ಗುರಿಯಾದವನ ಹಿಂಸೆಮಾಡುವುದರಲ್ಲಿ ಅವನಿಗೆ ಸಮಾನರು ಯಾರೂ ಇರಲಿಲ್ಲ.

ಹೀಗಿದ್ದರೆ ಒಬ್ಬನ ವರ್ತನವೇನೆಂದು ನಿರ್ಧರಿಸುವಾಗ ಅವನಲ್ಲಿ ಯಾವ ಮನೋವೃತ್ತಿಗಳು ಸುಲಭವಾಗಿ ಜಾಗೃತವಾಗುತ್ತವೆ, ಅವನ ಅಹಂಕಾರ ಗುಣಕ್ಕೆ ಅವನ ವಿಚಾರಯುಕ್ತ ಬುದ್ಧಿಯ ಅಂಕುಶವು ನಾಟುತ್ತದೋ ಎಂಬದನ್ನು ತಿಳಿಯಬೇಕಾಗುತ್ತದೆ. ದುಷ್ಟಬುದ್ಧಿಯ ಗುಣಕಥನವನ್ನು ಮಾಡುವಾಗ 'ವ್ಯಾಳದಂಗದ ಸಯಪೊ . . . . ಕಾಳಕೂಟಂ ಬೆರಸಿದ ಮೃತಾನ್ನ ಭೋಜನವೊ' ಎಂದು ಜೈಮಿನಿ ಭಾರತದಲ್ಲಿ ಹೇಳಿದೆ.

ಇಲ್ಲಿ ದುಷ್ಟಬುದ್ಧಿಯು ತನ್ನ ನಿಜವಾದ ವರ್ತನವನ್ನು ಹೊರಗೆಡವುದಿಲ್ಲ. ಅವನು 'ನಸುನಗುತ ನುಡಿದ ಮಾತು'ಗಳಿಂದ ಅವನ ಮನಸ್ಸಿನಲ್ಲಿ ಏನಿದೆ ಎಂಬದು ಥಕ್ಕನೆ ಗೊತ್ತಾಗದೆ ಚಂದ್ರಹಾಸನು ಮೋಸಹೋದನು. ಕೌರವ ಕುಲಕ್ಕೆ ಕೊಡಲಿ ಕಾವು ಆದ ಶಕುನಿಯು ಕೃತಕದಾಳಗಳಿಂದ ಜೂಜಾಟಕ್ಕೆ ದುರ್ಯೋಧನನನ್ನು ಪ್ರೋತ್ಸಾಹಿಸುವಾಗ ಅವನ ಆಂತರಿಕ ಕಲ್ಪನೆಗಳು ಏನಿದ್ದವೆಂದು ಅವನು ಮರೆಪಡಿಸಿದನು. ಇಲ್ಲಿ ಅವನ ಬುದ್ಧಿಯು ಅವನ ಕೆಲಸಗಳ ಪರಿಣಾಮವು ಇಂಥದ್ದೆ ಎಂದು ಆತನಿಗೆ ತಿಳಿಸಿದ್ದರೂ ಅವನು ಅಂಥ ಬುದ್ಧಿಯ ವಶವರ್ತಿಯಾಗಿರಲಿಲ್ಲ.

ಈ ಮೂರು ಗುಣಗಳಿಗೆ ಅನುಕೂಲ ಅಥವಾ ಪ್ರತಿಕೂಲವಾದ ಎರಡು ಇಂದ್ರಿಯಗಳನ್ನು ಈಚೆಗೆ ಮನುಷ್ಯನಲ್ಲಿ ಗೊತ್ತುಹಚ್ಚಿದ್ದಾರೆ. 'ಎಂಡೊಕ್ರೀನ್' ಗ್ರಂಥಿಗಳು ದೇಹದ ಆರೋಗ್ಯ ಮತ್ತು ಪುಷ್ಟಿಗೆ ಕಾರಣ ವಾಗಿದ್ದು, ದೇಹದ ಬೇರೆ ಬೇರೆ ಭಾಗಗಳಲ್ಲಿ ಹೆಚ್ಚು ಕಡಿಮೆ ರೀತಿಯಲ್ಲಿ ವ್ಯಾಪಿಸಿವೆ. ಇವುಗಳ ಪೈಕಿ ಈಚೆಗೆ ಚೆನ್ನಾಗಿ ತಿಳಿದುಬಂದುದು ಕಂಠ ನಾಳದ ಇಕ್ಕಡೆಗಳಲ್ಲಿ ಕೆಳದವಡೆಯ ಕೆಳಗಡೆಯ ಒಳಪ್ರದೇಶದಲ್ಲಿರುವ 'ಥಾಯ್ರೋಯ್ಡ' ಲಾಲಾಗ್ರಂಥಿ. ಇದು ಸರಿಯಾಗಿ ಕೆಲಸಮಾಡದಿದ್ದರೆ ಮನುಷ್ಯನು ತೀರಾ ಮಂಕನಾಗುತ್ತಾನೆ. ಅವನಲ್ಲಿ ಬುದ್ಧಿ ಮಂದ ವಾಗುತ್ತದೆ. ಅದು ಹದಮೀರಿ ಚಟುವಟಿಕೆಯನ್ನು ತೋರಿಸುತಿದ್ದರೆ ಮನುಷ್ಯನಲ್ಲಿ ಬುದ್ಧಿಭ್ರಂಶವಾಗುತ್ತದೆ. ಈ ಗ್ರಂಥಿಯಲ್ಲಿ ಹುಟ್ಟುವ ರಸವೇ ಈ ಎಲ್ಲಾ ವ್ಯತ್ಯಾಸಗಳಿಗೆ ಕಾರಣವಾಗಿದೆ ಎನ್ನುತ್ತಾರೆ. ಮೂತ್ರಪಿಂಡದ ಮೇಲಿರುವ ಕೆಲವು 'ಸುಪ್ರಾರೀನಲ್' ಜತೆ ಗ್ರಂಥಿಗಳಲ್ಲಿ ಒಳಭಾಗದಿಂದ ರಸವು ದೇಹದಲ್ಲಿ ಪ್ರವಹಿಸಿದರೆ ಅಂಥ ಮನುಷ್ಯನು ಭೀರುವಾಗುತ್ತಾನಂತೆ. ಹೊರಭಾಗದಿಂದ ರಸವು ಪ್ರವಹಿಸಿದರೆ ಅವನು ಧೀರನಾಗುತ್ತಾನಂತೆ.

ಈ ಎರಡು ಇಂದ್ರಿಯಗಳು ತಮ್ಮ ಕೆಲಸವನ್ನು ಹದವಾಗಿ ಮಾಡು ವಂತೆ ಶುದ್ಧಗಾಳಿ, ವ್ಯಾಯಾಮ, ನಿದ್ದೆ, ಪುಷ್ಟಿಯಾದ ಆಹಾರ, ಸೂರ್ಯನ ಪ್ರಕಾಶ, ಮುಖ್ಯವಾಗಿ ಕಡೆಯ ಎರಡನ್ನು ಧಾರಾಳವಾಗಿ ಒದಗಿಸಿಕೊಡು ವುದು ಉಪಾಧ್ಯಾಯನ ಕರ್ತವ್ಯ. ರೋಗಪೀಡಿತನಾಗಿದ್ದು, ಮನೋ ವ್ಯಥೆಯು ಹೆಚ್ಚಿದರೆ ವರ್ತನವೇ ಮಾರ್ಪಡುತ್ತದೆ. ಮಕ್ಕಳಂತೆ ಅಳು

ವುದು, ಚಿಲ್ಲರೆ ಸಂಗತಿಗಳಲ್ಲಿ ಜಗಳವೆಬ್ಬಿಸುವುದು, ಸಿಟ್ಟಿದ್ದು ಆತ್ಮಹತ್ಯೆ ಮುಂತಾದ ದುಷ್ಟವರ್ತನಕ್ಕೆ ಇಳಿಯುವುದು, ನಿಷ್ಕಾರಣವಾದ ಭೀತಿಯಿಂದೊಡಗೂಡುವುದು ಇವೆಲ್ಲ ಈ ಅನಾರೋಗ್ಯದ ದೆಸೆಯಿಂದ ಮನುಷ್ಯನಲ್ಲಿ ವರ್ತನ ಕ್ರಮವನ್ನು ಬೇರ್ಪಡಿಸುತ್ತವೆ.

ಸದಸದ್ ವಿವೇಕ:—ಮಗುವಿನ ಬುದ್ಧಿಯು ಬಾಹ್ಯವಸ್ತುಗಳ ಪರಿಚಯ, ಅವುಗಳ ಗುಣಲಕ್ಷಣಗಳಿಂದ 'ಇದು ಎಂಥಾದ್ದು, ಇದು ಹೀಗೆ ಇದೆ' ಎಂಬ ಚಿಕ್ಕ ನಿರ್ಣಯಗಳನ್ನೂ ಮಾಡುತ್ತದೆ. ಮುಂದೆ ತನ್ನ ಇಂದ್ರಿಯಗೋಚರವಾದ ಕಲ್ಪನೆಗಳ ಅಥವಾ ಪ್ರತ್ಯಕ್ಷ ಕಲ್ಪನೆಗಳ ಸಹಾಯದಿಂದ ನೂತನ ಮಾನಸಿಕ ಊಹನೆಗಳನ್ನು ಮಾಡುತ್ತದೆ. ಅಂದರೆ ಕತ್ತೆಯನ್ನು ನೋಡದ ಮಗು ಕುದುರೆಗೂ ಕತ್ತೆಗೂ ಇರುವ ವ್ಯತ್ಯಾಸಗಳನ್ನು ಕೇಳಿ ಕತ್ತೆಯ ಕಲ್ಪನೆಯನ್ನು ಮನಸ್ಸಿನಲ್ಲಿ ಮಾಡಿಕೊಳ್ಳುತ್ತದೆ. ಹಾಗೆಯೇ ತನಗೆ ಗೊತ್ತಿರುವ ಊರಿನ ಒಂದು ವರ್ಣನೆಯಿಂದ ತಾನು ಅದು ವರೆಗೂ ನೋಡದ ಆ ಊರಿನ ಮತ್ತು ಅಲ್ಲಿರುವ ನಿವಾಸಿಗಳ ಕಲ್ಪನೆಯನ್ನು ಮಾಡಿಕೊಳ್ಳುತ್ತದೆ. ಜ್ಞಾನಸಂಪಾದನೆಗೆ ಪ್ರತ್ಯಕ್ಷ ಅನುಭವವು ಪ್ರಥಮ ಹೆಜ್ಜೆಯಾದರೂ ಮುಂದೆ ಜ್ಞಾನವೃದ್ಧಿಯಾಗಬೇಕಾದರೆ 'ಕೆಲವಂ ಬಲ್ಲವರಿಂದ ಕಲ್ತು, ಕೆಲವಂ ಶಾಸ್ತ್ರಂಗಳಂ ಕೇಳುತಂ, ಕೆಲವಂ ಮಾಳ್ಪವರಿಂದ ಕಂಡು, ಕೆಲವಂ ಸುಜ್ಞಾನದಿಂ ನೋಡುತಂ, ಕೆಲವಂ ಸಜ್ಜನ ಸಂಗದಿಂದಲರಿಯಲ್' ಬೇಕು ಎಂದು ಸೋಮೇಶ್ವರ ಶತಕದಲ್ಲಿ ಹೇಳಿದ ಮಾತುಗಳು ಅರ್ಥಗರ್ಭಿತವಾಗಿವೆ. ಇಲ್ಲಿ ಗ್ರಂಥಗಳಿಂದಲೂ ಬಲ್ಲವರಿಂದಲೂ ಪ್ರತ್ಯಕ್ಷವಾಗಿ ಮಾಡಿಕೊಂಡ ಅನುಭವದಿಂದಲೂ ಜ್ಞಾನಸಂಪಾದನೆ ಆದರೆ ಸಾಕಾಗುವುದಿಲ್ಲ. ಸಜ್ಜನ ಸಂಗದಿಂದಲೂ ಸುಜ್ಞಾನದಿಂದಲೂ ತಿಳಿಯುವ ಅನುಭವಗಳೂ ಇವೆ ಎಂದು ನಾವು ತಿಳಿದುಕೊಳ್ಳಬೇಕು. 'ಸುಜ್ಞಾನದಿಂದ' ಎಂಬ ಮಾತಿಗೆ ಇಲ್ಲಿ ಅಂತರ್ ಅವಲೋಕನದಿಂದ ಎಂದು ಅರ್ಥಮಾಡಿಕೊಳ್ಳಬೇಕು. ಇಲ್ಲಿ ತನ್ನ ಮುಂದೆ ನಿರ್ಣಯಕ್ಕೆ ಇಟ್ಟ ಪ್ರತಿಯೊಂದು ಕಲ್ಪನಾಸಮೂಹವನ್ನು ಪರಿಶೋಧಿಸಿ, ಅವುಗಳಿಂದ ಯಾವುದು ಯೋಗ್ಯ ಯಾವುದು ಅಯೋಗ್ಯವೆಂದೂ, ಯಾವುದು ಪ್ರಾಮುಖ್ಯ, ಯಾವುದು ಗೌಣವೆಂದೂ ಗೊತ್ತುಹಚ್ಚುವ ಕೆಲಸವನ್ನು ಬುದ್ಧಿಯು ಮಾಡಿ ನಿರ್ಣಯ

ಗಳನ್ನು ಮನಸ್ಸಿಗೆ ತಿಳಿಸುವ ಕಾರ್ಯವಿದೆ. ತೋಟದಲ್ಲಿ ಕಂಡ ಹಾವು ನಿಜವಾದ ಹಾವಲ್ಲ, ಮಣ್ಣಿನ ಪ್ರತಿಮೆಯೆಂದು ಗೊತ್ತುಹಚ್ಚುವುದಕ್ಕೆ ಬುದ್ಧಿಯೇ ಪ್ರಬಲವಾಗಬೇಕು. ಅದು ಆಗ ಒಮ್ಮೆ ಭೀತಿಯೆಂಬ ಮನೋವಿಕಾರದಿಂದ ತುಂಬಿದ ಮನಸ್ಸಿಗೆ ಕಾರಣಗಳನ್ನು ಕೊಟ್ಟು ಸಮಾಧಾನ ಹೇಳುತ್ತಿದೆ. ಇಂಥ ಬಾಹ್ಯ ಕ್ರಿಯೆಗಳಲ್ಲಿ ನಿರ್ಣಯಮಾಡುವುದಕ್ಕಿಂತಲೂ ಬೆಳೆದ ಮನುಷ್ಯನಿಗೆ ಸಾಮಾಜಿಕ ವ್ಯವಹಾರಗಳಲ್ಲಿ ಕಷ್ಟ ಪ್ರಸಂಗಗಳಲ್ಲಿ ನಿರ್ಣಯವನ್ನು ಮಾಡುವುದೂ ಸಂದರ್ಭ ಒದಗುತ್ತದೆ. ಆಗ ಹೀಗೆ ಮಾಡುವುದು ಯೋಗ್ಯ, ಹೀಗೆ ಮಾಡುವುದು ಅಯೋಗ್ಯ ಎಂಬುದನ್ನು ನಿರ್ಧರಿಸಲು ಸಾಧ್ಯವಿಲ್ಲದೆ ಮನುಷ್ಯನು ಸಂಶಯಚಿತ್ತನಾಗಿ ತಟಸ್ಥನಾಗುತ್ತಾನೆ. ಭಾರತಯುದ್ಧದ ಆರಂಭದಲ್ಲಿ ಅರ್ಜುನನಿಗೆ ಇಂಥದ್ದೆ ಸಂದೇಹವು ಪ್ರಾಪ್ತಿಯಾಯಿತು. ಕೇವಲ ರಾಜ್ಯಾಭಿಲಾಷೆಯಿಂದ ತನ್ನ ಕುಲಗೋತ್ರದವರನ್ನು, ಪೂಜ್ಯರಾದ ಭೀಷ್ಮಾದಿಗಳನ್ನು ಕೊಲ್ಲಲಿಕ್ಕೆ ಮುಂದರಿಸಬೇಕೇ ಎಂದು ಸಂಶಯವು ಅರ್ಜುನನಲ್ಲಿ ಮೂಡಿತು. ಅವನು ಕೈಯಲ್ಲಿದ್ದ ಅಸ್ತ್ರಶಸ್ತ್ರಗಳನ್ನು ಕೆಳಗಿಟ್ಟು ರಥಕ್ಕೆ ಒರಗಿದನು. ಆಗ ಅವನು ಮಾಡಬೇಕಾದ ಕರ್ತವ್ಯವೇನು ಎಂಬದನ್ನು ಶ್ರೀ ಕೃಷ್ಣನು ಬೋಧಿಸಿ ಅವನ ಸಂಶಯನಿವಾರಣೆ ಮಾಡಿದನು. ಸತ್ಯವನ್ನು ನುಡಿಯಬೇಕಾದುದು ಕರ್ತವ್ಯವೆಂದು ನಮಗೆ ಸರ್ವಶಾಸ್ತ್ರಗಳು ಬೋಧಿಸುತ್ತವೆ. ಆದರೆ ದ್ರವ್ಯದ ಚೀಲಗಳನ್ನು ಹೊತ್ತುಕೊಂಡ ವರ್ತಕರು ಹೋದ ದಾರಿಯನ್ನು ತಿಳಿಸೆಂದು ಕಳ್ಳರು ನಮಗೆ ಅಡ್ಡಕಟ್ಟಿ ಬೆದರಿಸಿದಾಗ, ನಾವು ಸತ್ಯ ನುಡಿದು ಆ ವರ್ತಕರ ಜೀವನಾಶಕ್ಕೆ ಕಾರಣರಾಗಬೇಕೇ ಅಥವಾ ಸುಳ್ಳು ಹೇಳಿ ಅವರನ್ನು ಉಳಿಸಬೇಕೇ ಎಂಬ ಪ್ರಶ್ನೆಗೆ ಏನು ಹೇಳಬೇಕು? ಅಥವಾ ಸೆಂಟರ ಮೇಲೆ ಬಂದ ಕೊಲೆಯ ಆರೋಪದ ರುಜುವಾತನ್ನು ಅಡಗಿಸುತ್ತೇನೆಂದು ಹೇಳುವ ಅಧಿಕಾರಸ್ಥನಿಗೆ ಲಂಚರುಷುವತ್ತಿನಿಂದ ಸಮಾಧಾನಪಡಿಸಿ ಗೆಳೆಯನನ್ನು ದೇಹಾಂತಶಿಕ್ಷೆಯಿಂದ ಉಳಿಸಬೇಕೊ, 'ಮಾಡಿದ ಕರ್ಮದ ಫಲವನ್ನು ತಿನ್ನಲಿ' ಎಂದು ಹಾಗೆಯೆ ಬಿಟ್ಟುಬಿಡಬೇಕೊ? ಇಂಥ ಪ್ರಶ್ನೆಗಳು ನಿತ್ಯ ವ್ಯವಹಾರದಲ್ಲಿ ಹಲವು ಸಲ ನಮ್ಮ ಮುಂದೆ ಇತ್ಯರ್ಥಕ್ಕೆ ಬರುತ್ತವೆ. ಹರಿಶ್ಚಂದ್ರನಂತೆ ಕೊನೆ ವರೆಗೆ ಸತ್ಯಕ್ಕಾಗಿ ಕಷ್ಟಪಡುವವರೂ, ಅಥವಾ ಬಡವರ ಕಷ್ಟಯಾತನೆಗಳಿಗೆ ಅನುತಾಪದಿಂದ ತನ್ನ ದೇಹದ ಇಂದ್ರಿಯ ಸುಖಕ್ಕೆ

ತರ್ಪಣಕೊಟ್ಟು ಮಹಾತ್ಮಾಗಾಂಧಿಯವರಂತೆ ತಮ್ಮ ತನುಮನಧನಗಳನ್ನೂ ಅರ್ಪಿಸುವವರೂ ಬಹಳ ವಿರಳ. 'ಬೈದ ಬಾಯಿಗೆ ಹೊಯಿದ ಪೆಟ್ಟು' ಎಂದು ಮುಯ್ಯಿಗೆ ಮುಯ್ಯಿ ತೀರಿಸಲು ಎಳಸುವವರು ಅಧಿಕ ಮಂದಿ. ಇಲ್ಲಿ ಇವರು ತಮ್ಮ ಕೃತ್ಯದಿಂದ ತಮಗಾಗಲಿ ತಮ್ಮ ಸಮಾಜಕ್ಕಾಗಲಿ ಏನು ಅಹಿತವುಂಟಾದೀತು ಎಂಬ ವಿಚಾರವನ್ನು ಮಾಡುವುದಿಲ್ಲ. ಯಾವಾತನು ತನ್ನ ಮುಂದೆ ಇಂಥ ಸಾಮಾಜಿಕ ಪ್ರಶ್ನೆಗಳಲ್ಲಿ ಪ್ರಥಮ ದೃಷ್ಟಿಯಲ್ಲಿ ಕಂಡು ಬಂದ ಅನುಭವದಿಂದಲೇ ತೃಪ್ತನಾಗದೆ 'ಕಣ್ಣಾರೆ ಕಂಡರೂ ಪರಾಂಬರಿಸಿ ನೋಡಬೇಕು' ಎಂದು ನೆನಸಿ, ವಿಚಾರನಡಿಸಿ, ಅಷ್ಟರ ವರೆಗೆ ತನ್ನ ಮನೋವೃತ್ತಿಗಳಿಗೂ ಅಹಂಕಾರಕ್ಕೂ ಲಗಾಮನ್ನು ಬಿಗಿದು ಹಿಡಿಯುತ್ತಾನೊ ಅವನ ಬುದ್ಧಿಯಲ್ಲಿ ಸಾರಾಸಾರ ವಿಚಾರಶಕ್ತಿ ಇದೆ, ಅವನಲ್ಲಿ ಸದಸದ್ವಿವೇಕವಿದೆ ಎನ್ನುತ್ತೇವೆ. ಇಂಥವನು ತನ್ನಲ್ಲಿ ಜಾಗೃತವಾದ ಮನೋವಿಕಾರಗಳಿಂದ ದುಡುಕುವುದಿಲ್ಲ; ಯಾತಕ್ಕಂದರೆ ಸಮಾಜದ ಕಲ್ಯಾಣಕ್ಕೆ ಇಂಥ ಗುಣಗಳೇ ಅನುಕೂಲ, ಇಂಥವೇ ಪ್ರತಿಕೂಲವೆಂದು ಅವನು ವಿವಿಧ ರೀತಿ ಜ್ಞಾನ ಸಂಪಾದಿಸಿ, ವರ್ತನಕ್ಕೆ ಒಂದು **ಧ್ಯೇಯ**ವನ್ನು ಕಲ್ಪಿಸಿಕೊಂಡಿರುವನು. ಸಮಾಜದ ಹಿತಕ್ಕೆ ಅನುಕೂಲವಾದ ಮನೋವೃತ್ತಿಗಳನ್ನು ಅವನು ಅಭ್ಯಾಸಬಲದಿಂದ ಬೆಳೆಯಿಸಿಕೊಂಡಿದ್ದಾನೆ, ಮತ್ತು ವರ್ತನದ ಗುರಿ ಇಂಥದೆ ಇರಬೇಕು ಎಂದು ನಿರ್ಧರಿಸಿದ್ದಾನೆ. ಇಂಥ ಗುರಿಯೇ ಧ್ಯೇಯವೆನಿಸುತ್ತದೆ. ಧ್ಯೇಯವೆಂದರೆ ಗುರಿಯೆನ್ನುವಾಗ ಎಲ್ಲರೂ ಗುರಿಯನ್ನು ಮುಟ್ಟುತ್ತಾರೆಂದು ತಿಳಿಯಕೂಡದು. ಆದರೆ ಮುಟ್ಟಬೇಕೆಂದು ಲಕ್ಷ್ಯೆಯಲ್ಲಿಡಬೇಕು. ಇಂಥ ಗುರಿಗಳನ್ನು ದೃಷ್ಟಿ ಪಥದ ಮುಂದೆ ಸಾರ್ವದಾ ಇಟ್ಟುಕೊಳ್ಳಬೇಕು. ನಮ್ಮ ಅಹಂಕಾರವು ದುರ್ವೃತ್ತಿಗಳಿಗೆ ನಮ್ಮನ್ನು ಪ್ರೇರೇಪಿಸುವ ಬದಲಾಗಿ ಸದ್ವೃತ್ತಿಗಳಿಗೆ ಅಂದರೆ ಸಮಾಜಕ್ಕೆ ಹಿತಕರವಾದ, ಕಾರುಣ್ಯ, ದಯೆ, ಶ್ರದ್ಧೆ, ಅನುತಾಪ, ಸಹಾನುಭೂತಿ, ಉತ್ಸಾಹ, ಲಜ್ಜೆ ಮುಂತಾದವುಗಳ ಸಹಾಯದಿಂದ ಸತ್ಕಾರ್ಯ ಪ್ರವರ್ತನೆಗೆ ಪ್ರೇರೇಪಿಸುವುದು. ಆಗ ಸತ್ಕಾರ್ಯವು ಇಂಥದ್ದೇ ಎಂದು ಸಾತ್ವಿಕಬುದ್ಧಿಯು, ಮನಸ್ಸಾಕ್ಷಿಯು ಅಥವಾ ಸದಸದ್ವಿವೇಕವು ನಿರ್ಣಯಗಳನ್ನು ಹೇಳಿದರೆ, ಅವನಿಗೆ ಲೌಕಿಕ ವ್ಯಾಪಾರದ ಗೊಂದಲದಲ್ಲಿ ದಿಕ್ಕು ಕಾಣುವಂತೆ ಉತ್ತಮ ಧ್ಯೇಯಗಳು ಅವನ ಕಣ್ಣೆದುರಿಗೆ ಇದ್ದರೆ.

ಅವನ ವರ್ತನವು ಸಾರ್ವದಾ ಸದ್ವರ್ತನವಾಗಿ ಸಮಾಜಕ್ಕೆ ಅದರಿಂದ ಸುಖಪ್ರಾಪ್ತಿಯಾಗುವುದು. ಆಗ ಅವನು ಕಾಮ, ಕ್ರೋಧ, ಲೋಭ, ಮದ, ಮೋಹ, ಮತ್ಸರಗಳೆಂಬ ಸಮಾಜವೈರಿಗಳನ್ನು ತನ್ನ ಸಮೀಪಕ್ಕೆ ಬಂದು ಪೀಡಿಸಿದರೂ ಎಡೆಕೊಡದೆ ಓಡಿಸುತ್ತಾನೆ. ಮತ್ತು 'ಸತ್ಯಂಮಾತಾ, ಪಿತಾಜ್ಞಾನಂ, ಧರ್ಮೋಭ್ರಾತಾ, ದಯಾಸಖಾ, ಶಾಂತಿಪತ್ನೀ, ಕ್ಷಮಾ ಸೂನು' ಎಂಬ ಆರು ಬಂಧುಗಳ ಸಂಸರ್ಗದಿಂದಲೇ ಸುಖಹೊಂದುತ್ತಾನೆ, ಸಮಾಜಕ್ಕೂ ಕಲ್ಯಾಣವನ್ನುಂಟುಮಾಡುತ್ತಾನೆ.

ಇಂಥ ವರ್ತನವನ್ನು ಮಕ್ಕಳಲ್ಲಿ ಬೇರೂರಿಸುವುದಕ್ಕೆ ಉಪಾಧ್ಯಾಯ ಮತ್ತು ಹಿರಿಯರ ವರ್ತನವೇ ಮಾರ್ಗದರ್ಶಕವಾಗಿರಬೇಕು. ಇದಲ್ಲದೆ ಸಾಧುಸಜ್ಜನರ ಜೀವನಚರಿತ್ರೆ, ಇತಿಹಾಸ, ಸದ್ವೃತ್ತಿಗಳ ಪ್ರಶಂಸೆಯನ್ನು ಮಾಡುವ ವಾಙ್ಮಯ ಗ್ರಂಥಾದಿಗಳನ್ನು ಮಕ್ಕಳ ಕೈಯಲ್ಲಿ ಕೊಟ್ಟು ಅವರ ವರ್ತನದ ಕಡೆಗೆ ಎಡೆಬಿಡದೆ ಲಕ್ಷ್ಯ ಇಡಬೇಕು. ಚಿಕ್ಕ ಮಕ್ಕಳಿಗೆ ನೀತಿಪ್ರದವಾದ ಕಥೆಗಳು ಇಂಥ ಸದ್ವರ್ತನೆಗೆ ದಾರಿಗಾಣಿಸುತ್ತವೆಂಬು ದನ್ನು ಸುದರ್ಶನರಾಯನ ಮದಗರ್ವಿತರಾದ ಮಕ್ಕಳಿಗೆ ವಿಷ್ಣುಶರ್ಮನು 'ಪಂಚತಂತ್ರ'ವೆಂಬ ವಿಚಿತ್ರಕಥೆಯಿಂದ ಹೇಗೆ ಸರಿದಾರಿಗೆ ತಂದನೆಂಬ ದೃಷ್ಟಾಂತದಿಂದ ತಿಳಿದುಕೊಳ್ಳಬಹುದು. ಈ ಬಗೆಯ ಕ್ರಮದಿಂದಲೇ ಸಮಾಜದ ಸುಧಾರಣೆಯಾಗುತ್ತದೆ.

ಧರ್ಮ ಬೋಧೆ

20ನೆಯ ಅಧ್ಯಾಯ

ಸೃಷ್ಟಿ ಪರಿಚಯದಿಂದ ಬಗೆಬಗೆಯ ಶಾಸ್ತ್ರಗಳನ್ನು ಕಲಿತುಕೊಂಡೆವು, ಅದರ ಮೂಲಕ ನಮ್ಮ ಪ್ರತ್ಯಕ್ಷ ಅಪ್ರತ್ಯಕ್ಷ ಆತ್ಮರಕ್ಷಣೆ, ಇಂದ್ರಿಯ ಸುಖ ಪ್ರಾಪ್ತಿ ಇವನ್ನೆಲ್ಲ ಈ ಶಾಸ್ತ್ರಗಳ ಮೂಲಕ ಪಡೆಯುತ್ತೇವೆ, ಅಥವಾ ಸಮಾಜದ ಕಲ್ಯಾಣಕ್ಕೆ ಬೇಕಾದ ಸರ್ವ ಸೌಕರ್ಯಗಳ ಸಂಗ್ರಹ ಮಾಡಿದ್ದೇವೆ ಎಂದರೂ ನಮ್ಮ ಶಿಕ್ಷಣದ

ಕೊನೆಗಂಡೆವು ಎಂದು ಹೇಳಲಾಗುವುದಿಲ್ಲ. ಇಷ್ಟರ ವರೆಗೆ ನಾವು ಚರ್ಚಿಸಿದ ವಿಷಯಗಳು ನಮ್ಮ ದೇಹವೆಂಬ ಯಂತ್ರದ ವಿಷಯಕವಾದವು. ಆ ಯಂತ್ರಕ್ಕೆ ಸ್ವಾಮಿಯಾದವನು, ಚಾಲಕನು ಒಬ್ಬನು ಇದ್ದಾನೆಯೇ, ಅವನ ಪರಿಚಯವನ್ನು ನಾವು ಮಾಡಿಕೊಳ್ಳುವುದು ಅಗತ್ಯವೇ ಎಂಬ ವಿಷಯವನ್ನು ಇಲ್ಲಿ ಎತ್ತಿಕೊಳ್ಳಬೇಕಾಗಿದೆ.

ದೇಹವನ್ನು ಒಂದು ಯಂತ್ರಕ್ಕೆ ಸರಿಹೋಲಿಸಿದೆವು. ಯಂತ್ರದಲ್ಲಿ ಒಂದು ಕಡೆ ಬೆಂಕಿಯಾಗುತ್ತಿದೆ, ಅದು ಪ್ರಜ್ವಲಿಸುವಂತೆ ಕಟ್ಟಿಗೆಯನ್ನೂ ಇದ್ದಲನ್ನೂ ಅದರ ಒಲೆಗೆ ಒಟ್ಟಲಾಗುತ್ತಿದೆ. ಅಂಥ ಬೆಂಕಿಗೆ ಒತ್ತಾಗಿದ್ದ ನೀರು ಬಿಸಿಯಾಗಿ ಉಗಿಯಾಗಿ ಆ ಉಗಿಯ ಬಲದಿಂದ ಯಂತ್ರವು ನಡೆಯುತ್ತಿದೆ. ಇಲ್ಲಿ ಕಟ್ಟಿಗೆ ಅಥವಾ ಇದ್ದಲು ಎಂಬದು ಇಂದ್ರಿಯಗಳಿಂದ ಸಂಗ್ರಹವಾದ ಅನುಭವ ಸಂಸ್ಕಾರಗಳು; ಬೆಂಕಿಯೆಂಬದು ಮನೋವಿಕಾರ ಅಥವಾ ಮನೋವೃತ್ತಿಗಳು; ನೀರು ಎಂಬದು ಬುದ್ಧಿ. ಬರೆ ಕಟ್ಟಿಗೆ, ನೀರು, ಬೆಂಕಿಗಳು ಒಂದೊಂದಾಗಿ ಇದ್ದರೆ, ಆ ಯಂತ್ರವು ಕೆಲಸ ಮಾಡಲಾರದು. ಅವುಗಳಲ್ಲಿ ಯಾವುದಾದರೂ ಎರಡು ಮಾತ್ರವಿದ್ದರೆ ಸರ್ವನಾಶ. ಕಟ್ಟಿಗೆ ಮತ್ತು ಬೆಂಕಿ ಮಾತ್ರವಿದ್ದರೆ ಕಟ್ಟಿಗೆಯನ್ನು ಸುಡುವುದಲ್ಲದೆ ಆ ಬೆಂಕಿಯು ಯಂತ್ರವನ್ನೂ ಸುಟ್ಟುಬಿಟ್ಟೀತು. ಬರೇ ನೀರು ಮತ್ತು ಕಟ್ಟಿಗೆ ಮಾತ್ರವಿದ್ದರೆ ನೀರಿನ ತಂಪು ಕಟ್ಟಿಗೆಗೆ ತಗಲಿ, ಅವೆರಡೂ ಶೀತಲವಾಗಿದ್ದು, ಏನೊಂದು ಕೆಲಸ ಮಾಡದೆ ಕಟ್ಟಿಗೆಯು ನಿಷ್ಪ್ರಯೋಜಕವಾಗುವುದು. ನೀರೂ ಬೆಂಕಿಯೂ ಮಾತ್ರವಿದ್ದರೆ ನೀರು ಬೆಂಕಿಯನ್ನು ನಂದಿಸಿಬಿಡುವುದು. ಹಾಗೆಯೇ ಇಂದ್ರಿಯ ವ್ಯಾಪಾರಗಳು ಸರಾಗ ನಡೆದು ಹೊಸ ಕಲ್ಪನಾ ಸಮೂಹವು ಮನೋವೃತ್ತಿಗಳನ್ನು ಜಾಗೃತಗೊಳಿಸದಿದ್ದರೆ ಬುದ್ಧಿಯು ತೀವ್ರಾನಗಳೇನಿದ್ದರೂ ಉಪಕಾರಿಯಾಗುವುದಿಲ್ಲ. ಹಾಗಾದರೆ ಮನೋವೃತ್ತಿಗಳ ತೇಜ ಹೆಚ್ಚಲಿಕ್ಕೆ ಇಂದ್ರಿಯ ಸಂಸ್ಕಾರಗಳು ಆಗಾಗ ಆಗುತ್ತಲೇ ಇರಬೇಕು, ಆದರೆ ಅವುಗಳ ಬಳಿಯಲ್ಲಿ ಬುದ್ಧಿ ಎಂಬ ನೀರು ಇಲ್ಲದಿದ್ದರೆ ಈ ಮನೋವಿಕಾರಗಳು ಹೆಚ್ಚಿ ದೇಹವೆಂಬ ಯಂತ್ರವನ್ನೇ ಅವ್ಯವಸ್ಥಿತ ದಶೆಗೆ ತರುವವು. ಇಲ್ಲಿ ಮನೋವಿಕಾರಗಳು ಪ್ರೇರಕವಾದುದರಿಂದ ಅವಕ್ಕೆ ತೇಜ ಅಥವಾ ಬೆಂಕಿಯ ಉಪಮೆಯನ್ನು ಕೊಟ್ಟೆವು. ಬುದ್ಧಿಯು

ಶೀತಳ ಸ್ವಭಾವದ್ದು, ನಿರ್ಗುಣ ಮತ್ತು ವಾಸನಾರಹಿತವಾದದ್ದು ಎಂಬದರಿಂದ ಅದಕ್ಕೆ ನೀರಿನ ಉಪಮೆಯನ್ನು ಕೊಟ್ಟೆವು. ನೀರು ಕಟ್ಟಿಗೆ ಬೆಂಕಿಗಳು ಇದ್ದರೂ ಈ ನೀರು ಪಕ್ವವಾಗಿ ಉಗಿಯಾಗದಿದ್ದರೆ ಯಂತ್ರವು ನಡೆಯದು. ಹಾಗಾದರೆ ಯಂತ್ರವು ಚಲಿಸಬೇಕಾದರೆ ಬುದ್ಧಿಯೆಂಬ ನೀರು ತನ್ನ ಶೀತಲ ಗುಣವನ್ನು ಬಿಟ್ಟು, ಉಷ್ಣದಿಂದ ಶುದ್ಧವಾಗಿ ಹೊಸರೂಪವನ್ನು ಹೊಂದಿ, ಆ ಮೇಲೆ ಯಂತ್ರವನ್ನು ಆಡುವಂತೆ ಮಾಡುತ್ತದೆ. ಆದರೆ ಕಟ್ಟಿಗೆ, ನೀರು, ಬೆಂಕಿ ಇವನ್ನು ಹತ್ತಿರವಿಟ್ಟು ಬೇಕಾದಷ್ಟೆ ಉಪಯೋಗಿಸಿ, ಅವುಗಳಿಂದ ಉಗಿಯನ್ನು ಹುಟ್ಟಿಸುವ ಇಂಜಿನಿಯರೊಬ್ಬನು ಬೇಕು. ಅವನೇ ಯಂತ್ರವು ಇಂಥದೇ ಇರಬೇಕೆಂದು ರೂಪಿಸಿದನು; ಯುಂತ್ರದ ಕಾರ್ಯಕಲಾಪಗಳು ಹೀಗೆಯೇ ಆಗಬೇಕೆಂದು ನಿರ್ಣಯಿಸಿದನು; ನೀರು, ಕಟ್ಟಿಗೆ, ಬೆಂಕಿಯ ಹದಗಳನ್ನು ಮಿತಿಕಟ್ಟಿದನು. ಅಂಥವನೊಬ್ಬನು ಈ ಯಾವ ಜಡ ವಸ್ತುವಿನಲ್ಲಿಯೂ ಸೇರಿರಲಾರನು. ಅವನೇ ತನ್ನ ಆಜ್ಞೆಯ ಪ್ರಕಾರ ಸರ್ವವೂ ನೋಡಿಕೊಳ್ಳುವುದಕ್ಕೆ ಚೈತನ್ಯ ಅಥವಾ ಧೃತಿಯೆಂಬ ಫೈರಮೆನನನ್ನು ನೇಮಿಸಿದನು. ಯಂತ್ರವು ಈ ಎಲ್ಲಾ ಸಾಹಿತ್ಯಗಳ ಬಲದಿಂದ ಸರಿಯಾಗಿ ಕೆಲಸಮಾಡುತ್ತದೊ ಎಂದು ಸಾರ್ವದಾ ಎಚ್ಚರದಿಂದಿದ್ದಾನೆ ಎಂದು ನಾವು ತಿಳಿಯುವುದು ನ್ಯಾಯವಾಗಿದೆ. ಈ ಎಂಜಿನಿಯರು ಸರ್ವಾಂತರ್ಯಾಮಿಯಾದ ಪರಮಾತ್ಮನು. ಅವನ ಪ್ರತಿನಿಧಿಯಾದ ಜೀವಾತ್ಮನು ನಮ್ಮ ದೇಹದಲ್ಲಿ ವ್ಯಾಪಿಸಿ ಈ ದೇಹಯಂತ್ರದ ಕೆಲಸಗಳನ್ನು ನೋಡಿಕೊಳ್ಳುತಿದ್ದಾನೆ. ಆತನ ಆಸ್ತಿಕ್ಯವನ್ನು ತಿಳಿದು ಅವನ ಉಪಕಾರ ಸ್ಮರಣೆ ಅಥವಾ ಮಹಿಮೆಯನ್ನು ಕೊಂಡಾಡುವುದೇ ಮನುಷ್ಯನ ವಿಶೇಷ ಕರ್ತವ್ಯವಿದೆ. ಈ ಬಗೆಯ ಜ್ಞಾನವೇ ಸಾಮಾನ್ಯ ಪಶುಗಳಿಗಿಂತ ಮನುಷ್ಯವರ್ಗವನ್ನು ಪ್ರತ್ಯೇಕಿಸಲಿಕ್ಕೆ ಕಾರಣವಾಗಿದೆ.

ವಿದ್ಯುತ್ ಶಕ್ತಿಯು ಮೋಡಗಳಲ್ಲೆಲ್ಲ ವ್ಯಾಪಿಸಿಕೊಂಡಿದೆ. ಆದರೆ ಅದರ ಆಸ್ತಿಕ್ಯವನ್ನು ಗೊತ್ತುಹಚ್ಚಬೇಕಾದರೆ ನಮ್ಮ ಚರ್ಮದೃಷ್ಟಿಗೆ ಅದು ವಿದ್ಯುಲ್ಲೇಖೆಯಾಗಿ ಬೆಳಕನ್ನು ಕೊಡಬೇಕು. ಹಾಗೆಯೇ ಆ ಸೃಷ್ಟಿಕರ್ತನ ಪರಿಚಯುವನ್ನು ಅವನ ಸೃಷ್ಟಿಯ ಪರಿಣಾಮದಿಂದಲೇ ಗೊತ್ತುಹಚ್ಚಬೇಕಾಗುತ್ತದೆ; ಇತರ ವಿಧಾನಗಳಿಂದ ಸಾಧ್ಯವಿಲ್ಲ.

ನಮ್ಮ ಚೈತನ್ಯವನ್ನು ನಾವು ಫೈರಮೆನ್ ಎಂಬ ಹೆಸರಿನಿಂದ ಕರೆದೆವು. ಅವನಲ್ಲಿ ತನ್ನ ಶಕ್ತಿಯ ಅರಿವು ಆಯಿತೆಂದರೆ ಅವನು ತಾನಾಗಿಯೇ ಎಂಜಿನಿಯರನ ಕೆಲಸವನ್ನು ಅಭ್ಯಾಸದಿಂದ ಕಲಿತುಕೊಳ್ಳುತ್ತಾನೆ. ಯಾವ ವರೆಗೆ ಬೆಂಕಿಯನ್ನು ಸರಿಗೊಳಿಸುವುದು, ಕಟ್ಟಿಗೆಯನ್ನು ಬೇಕಾದಷ್ಟಕ್ಕೆ ಒದಗಿಸುವುದು, ಉಗಿಯ ಮಿತಿಯನ್ನು ನೋಡುವುದು ಇಷ್ಟೆ ತನ್ನ ಕೆಲಸವೆಂದು ಅಂಥಾ ಜೀವಾತ್ಮನು ತಿಳಿದುಕೊಳ್ಳುತ್ತಾನೊ, ಆ ವರೆಗೆ ಆ ಯಂತ್ರ ಉಜ್ಜಿತಿಕ್ಕಿ ಆಗಾಗ ಬೆಳ್ಳಗಿರಿಸುವುದು, ಕಟ್ಟಿಗೆ ಉರಿಯದಿದ್ದರೆ ಅದು ಸರಿಯಾಗಿ ಉರಿಸುವಂತೆ ಮಾಡುವುದು, ನೀರು ಶುದ್ಧವಾಗಿಲ್ಲವಾದರೆ ಅದನ್ನು ಶುದ್ಧೀಕರಿಸುವುದು ಇದರಲ್ಲೆ ಅವನ ಸಮಯವು ವೆಚ್ಚವಾಗುತ್ತದೆ. ಆಗ ಅವನಿಗೆ ಈ ಯಂತ್ರದ ರಚನೆಯ ವೈಚಿತ್ರ್ಯವನ್ನು ತಿಳಿಯಲಿಕ್ಕೆ ಅವಕಾಶವೇ ಇರುವುದಲ್ಲ. ಅವನು ಸಾರ್ವದಾ ಫೈರಮೇನನಾಗಿಯೇ ಕಾಲಕಳೆಯುತ್ತಾನೆ. ಆದರೆ ತನಗಿದ್ದ ವಿರಾಮ ವೇಳೆಯಲ್ಲಿ ಆತ್ಮ ನಿರೀಕ್ಷಣವನ್ನು ಮಾಡಿ ತನ್ನ ಶಕ್ತಿಗಳು ಏನಿವೆ, ಅವುಗಳಿಂದ ಈ ವಿಚಿತ್ರ ಯಂತ್ರದ ರಚನೆಯು ಹೇಗಿದೆ, ಎಂಬ ಜ್ಞಾನವಾದೊಡನೆ ಅವನಿಗೂ ಎಂಜಿನಿಯರನಿಗೂ ಇರುವ ವ್ಯತ್ಯಾಸವು ತನ್ನಷ್ಟಕ್ಕೆ ಮಾಯವಾಗುತ್ತದೆ. ಆಗ ತಾನೇ ಅವನು ಎಂಜಿನಿಯರನಾಗುತ್ತಾನೆ. ಇಂಥ ವಿಚಾರಕ್ಕೆ **ಅಧ್ಯಾತ್ಮ ವಿಚಾರ**ವೆನ್ನುತ್ತೇವೆ.

ಈ ವಿಚಾರಕ್ಕೂ ಧರ್ಮಕ್ಕೂ ಸಂಬಂಧವೇನು? ಸಾಮಾನ್ಯ ವ್ಯವಹಾರದಲ್ಲಿ ಒಬ್ಬನು ಕ್ರೈಸ್ತನು, ಇನ್ನಿತರರು ವೈದಿಕ, ಬುದ್ಧ, ಜೈನ, ಮಹಮ್ಮದಿ, ಪಾರಸೀ ಇತ್ಯಾದಿ ಧರ್ಮಗಳನ್ನು ಆಚರಿಸುವವರಿದ್ದಾರೆ ಎನ್ನುತ್ತೇವೆ. ಇಲ್ಲಿ ಧರ್ಮವೆಂಬ ಮಾತಿಗೆ ಆ ಮತದ ಮೂಲ ಪುರುಷರು ತಮ್ಮ ತಮ್ಮ ವಿಚಾರದ ಬಲದಿಂದ ಈ ಬಗೆಯಲ್ಲಿ ಫೈರಮೆನ ಆಗಿದ್ದಲ್ಲಿಂದ ಎಂಜಿನಿಯರಾಗುವುದಕ್ಕೆ ಕಂಡುಹಿಡಿದ ಮಾರ್ಗಗಳನ್ನು ಅನ್ವಯಿಸುತ್ತೇವೆ. ಇವುಗಳೆಲ್ಲ ಆಯಾಯ ಮಹಾಪುರುಷರು ತಮ್ಮ ಆತ್ಮನಿರೀಕ್ಷಣ ಮತ್ತು ಆತ್ಮವಿಚಾರದಿಂದ ಕಂಡುಹಿಡಿದ ಮಾರ್ಗಗಳು. ಅವುಗಳ ಉದ್ದೇಶವೊಂದೇ. ಜೀವಾತ್ಮ ಪರಮಾತ್ಮರುಗಳಿಗಿರುವ ಪರಸ್ಪರ ಸಂಬಂಧವನ್ನು ಗೊತ್ತುಹಚ್ಚಿ, ಜೀವಾತ್ಮನು ಹೇಗೆ ಆತ್ಮನಿರೀಕ್ಷಣದಿಂದ ಪರಮಾತ್ಮನಲ್ಲಿ ಐಕ್ಯವಾಗುತ್ತಾನೆ, ಅಥವಾ ಧರ್ಮಾಚರಣೆಯಿಂದ ಹೇಗೆ ಮೋಕ್ಷವು

ಸಾಧ್ಯವಾಗುತ್ತದೆ, ಹೇಗೆ ಜೀವಾತ್ಮನು ಈ ದೇಹದ ಅನಿಶ್ಚಯವಾದ ಸುಖಗಳನ್ನೂ ಆಸೆಕಾಂಕ್ಷೆಗಳನ್ನೂ ತೊರೆದು ಪರಮಾತ್ಮನ ಐಕ್ಯದಿಂದ ನಿತ್ಯವಾದ ಸುಖವನ್ನು ಹೊಂದುತ್ತಾನೆ ಎಂಬುದನ್ನೆ ಬೇರೆ ಬೇರೆ ಧರ್ಮಗಳು ಬೇರೆ ಬೇರೆ ರೀತಿಯಲ್ಲಿ ಸಾರುತ್ತಿವೆ. ಅತ್ಯುನ್ನತವಾದ ಬೆಟ್ಟದ ಶಿಖರವನ್ನು ಹತ್ತಲಿಕ್ಕೆ ಕಡಿದಾದ ದಾರಿಗಳು ಹಲವು ಇವೆ. ನಾಲ್ಕು ಸುತ್ತಲೂ ಇರುವ ಪ್ರದೇಶಗಳಿಂದ ಈ ಶಿಖರವನ್ನು ಮುಟ್ಟಲು ಪ್ರಯತ್ನವು ನಡೆದಿದೆ. ಕೆಲವರು ಅಲ್ಲಿಗೆ ಮುಟ್ಟಿ ದಿಗ್ದರ್ಶನದಿಂದ ಸರ್ವವೂ ಒಂದೇ ಎಂದು ತಿಳಿದು ಸುಖಾನಂದಗಳಲ್ಲಿ ಓಲಾಡಿದ್ದಾರೆ. ಹಲವರು ಮಾತ್ರ ಈ ವಿಚಾರವನ್ನು ತಿಳಿಯದೆ ಧರ್ಮಾಂಧರಾಗಿ ತಮ್ಮ ಮಾರ್ಗವೇ ಸುಲಲಿತವಾದ ಸರಳವಾದ ಮಾರ್ಗವೆಂದು ವಾದಿಸಿ, ಇತರ ಮತಗಳನ್ನು ಹೀಯಾಳಿಸುತ್ತಾರೆ. ಇದಕ್ಕೆ ಈ ಗಹನ ವಿಚಾರದಲ್ಲಿ ಅಪಕ್ವವಾದ ಬುದ್ಧಿಯು ಅವರ ತಿಳಿವಳಿಕೆಯನ್ನು ಸಂಕೋಚಗೊಳಿಸಿದುದೇ ಕಾರಣವಾಗಿದೆ. ಹರಿಹರರಲ್ಲಿ ಭೇದವಿಲ್ಲೆಂಬ ವಿಚಾರವು ಪ್ರಹ್ಲಾದನಿಗೆ ಬಾಲ್ಯದಿಂದ ಬೋಧಕರಾಗಿದ್ದವರಲ್ಲಿ ಆಗಲಿ, ವಿಷ್ಣುವಿನ ಮೇಲೆ ಹಗೆಯೇ ನರನಾಡಿಗಳಲ್ಲಿ ತುಂಬಿರುವ ಹಿರಣ್ಯಕಶಿಪುವಿನಲ್ಲಿ ಆಗಲಿ ಮೂಡಿದ್ದರೆ ಹಿರಣ್ಯಕಶಿಪುವಿನ ವಧೆಗೆ ಕಾರಣವಾಗುತಿರಲಿಲ್ಲ. ಪ್ರಹ್ಲಾದನು ಬರೇ ಅನುಕರಣಶಕ್ತಿಯಿಂದ ಮತ್ತು ತನ್ನ ಚಟುವಟಿಕೆಯ ಉತ್ಸಾಹದಿಂದ ನಾರದರ ಸಹವಾಸದಲ್ಲಿ ಹರಿಸ್ಮರಣೆಯನ್ನು ಅಭ್ಯಾಸಿಸಿದಾಗ ನಾರದರೇ ಹರಿಹರರಲ್ಲಿ ಭೇದವಿಲ್ಲೆಂದು ಬೋಧಿಸಿದ್ದರೆ ಪ್ರಹ್ಲಾದನು ತಂದೆಯ ಮತವನ್ನು ಉಲ್ಲಂಘಿಸುವ ಅಗತ್ಯವಿರಲಿಲ್ಲ. ಹೀಗೆ ಮತಭೇದಗಳು ಅವಿಚಾರದ ಮತ್ತು ಬುದ್ಧಿಸಂಕೋಚತ್ವದ ದೆಸೆಯಿಂದ ಆಗುವುದರಿಂದ ಅದಕ್ಕೆ ಎಡೆಕೊಡದಂತೆ ಮಕ್ಕಳಿಗೆ ಅವರ ಹಿರಿಯರಲ್ಲಿ ಆಚರಣೆಗೆ ಬಂದಿರುವ ಧರ್ಮವನ್ನು ಬಾಲ್ಯದಿಂದಲೇ ಬೇರೂರಿಸುವುದಕ್ಕೆ ಹಿರಿಯರೂ ಅನಂತರ ಉಪಾಧ್ಯಾಯರೂ ಯತ್ನಿಸಬೇಕಾಗಿದೆ. ಹಾಗೆ ಬೋಧಿಸುವಾಗ ಅನ್ಯ ಮತಗಳೂ ಪರಿಶುದ್ಧ ಅವತಾರ ಪುರುಷರಿಂದ ಆಯಾ ದೇಶ ಕಾಲಕ್ಕೆ ಅನುಗುಣವಾಗುವ ರೀತಿಯಲ್ಲಿ ಬೋಧಿಸಲ್ಪಟ್ಟಿರುವುದರಿಂದ ಅವುಗಳ ಮೇಲೆಯೂ ಗೌರವವನ್ನಿಡುವಂತೆ ಕಲಿಸಬೇಕು. ಇದಕ್ಕೆ ಈಗಿನ ಶಾಲೆಗಳಲ್ಲಿ ಸಾಕಷ್ಟು ಅವಕಾಶವಿಲ್ಲದುದು ಹಿಂದೂ ಧರ್ಮಾವಲಂಬಿಗಳ ಮಟ್ಟಿಗೆ ಬಲು ಶೋಚನೀಯವಾಗಿದೆ.

ಪ್ರಾರ್ಥನೆ, ಗೀತ, ಭಕ್ತರ ಸಾಧು ಸಂತರ ಜೀವನ ಚರಿತ್ರೆ, ಅವರ ಬೋಧಪರವಾದ ನುಡಿಗಳು ಇವುಗಳಲ್ಲಿ ಮಕ್ಕಳಿಗೆ ಅಭಿರುಚಿ ಹುಟ್ಟಿಸು ವುದು, ಶಾಂತಚಿತ್ತದಿಂದ ಏಕಾಗ್ರತೆಯಿಂದ ದೇವರ ಧ್ಯಾನವನ್ನು ಒಂದೆರಡು ನಿಮಿಷವಾದರೂ ಮಾಡುವಂತೆ ಮಕ್ಕಳಿಗೆ ಅಭ್ಯಾಸಮಾಡಿಸುವುದು ಇವೇ ಧರ್ಮಬೋಧೆಯ ಸೋಪಾನಗಳು. ಇವನ್ನು ಹೇಳಿಕೊಡುವುದು ಹಿರಿಯರ ಮತ್ತು ಉಪಾಧ್ಯಾಯರ ಕರ್ತವ್ಯವಾಗಿದೆ.

ಮಿಸ್ ಗೊರ್ಡನ್ ಎಂಬವರು ಈಗಿನ ಸ್ಥಿತಿಯನ್ನು ವರ್ಣಿಸುವಾಗ ತಾಯಿತಂದೆಗಳು ಶರೀರ ಸಂಬಂಧದಿಂದ ಮಾತ್ರ ಈಗ ಹಿರಿಯರಾಗಿದ್ದಾರಲ್ಲದೆ ನಿಜವಾದ ಗುರುತ್ವದಿಂದ ಹಿರಿಯರಾಗಿಲ್ಲ ಎಂದು ಹೇಳುವಾಗ ಈ ರೀತಿಯಲ್ಲಿ ಹಿರಿಯರು ತಮ್ಮ ಮಕ್ಕಳ ಐಹಿಕ ಸುಖ ಸಂಪತ್ತಿನ ಕಡೆಗೆ ಮಾತ್ರ ಲಕ್ಷ್ಯ ಇಡುತ್ತಾರಲ್ಲದೆ ಮಕ್ಕಳಿಗೆ ಪರಮಾತ್ಮನ ಪರಿಚಯವನ್ನು ಮಾಡಿಕೊಡುವ ಕರ್ತವ್ಯಜ್ಞಾನವಿಲ್ಲದೆ, ಪಾರಲೌಕಿಕವಾದ ಹಿತವನ್ನು ಮರೆತು ಬಿಟ್ಟಿದ್ದಾರೆಂದು ಹೇಳುತ್ತಾರೆ. ಈ ಮಾತು ಹಿರಿಯರೆಲ್ಲರ ಸ್ಮರಣೆಯಲ್ಲಿರಬೇಕಾಗಿದೆ.

ಮಕ್ಕಳ ನೈತಿಕ ವಿಚಾರಗಳು

21ನೆಯ ಅಧ್ಯಾಯ

'ಮಕ್ಕಳನ್ನು ಹುಗಿದ ಸ್ಥಳದಲ್ಲಿ ನನ್ನನ್ನು ಹುಗಿಯಬೇಡಿರಿ' ಎಂದು ಸಾಯಲಿಕ್ಕಾದ ಮುದುಕನೊಬ್ಬನು ಬೇಡಿದನಂತೆ. ಮಕ್ಕಳು ಅಲ್ಲಿಯೂ ತನಗೆ ಒಂದಿಷ್ಟು ವಿಶ್ರಾಂತಿ ಸುಖವನ್ನು ಕೊಡಲೊಲ್ಲವು ಎಂಬ ಭ್ರಾಂತಿಯಿಂದ ಆ ಮುದುಕನು ಹೀಗೆ ಅಂದಿರಬೇಕು. ಈ ವಿಧದ ಭ್ರಾಂತಿಯಲ್ಲದಿದ್ದರೂ ಮಕ್ಕಳು ಮನೆಯಲ್ಲಿ ಶಾಂತಿಭಂಗಕ್ಕೆ ಕಾರಣವಾಗುತ್ತವೆಂದು ಹಲವರಲ್ಲಿ ಒಂದು ಬಗೆಯ ದುರಭಿಪ್ರಾಯವಿದೆ. ಮಕ್ಕಳಲ್ಲಿ ಸ್ವಾಭಾವಿಕ ಚಟುವಟಿಕೆ ಇದ್ದುದೇ ಅವರ

ಮೇಲೆ ಈ ದೋಷಾರೋಪಕ್ಕೆ ಕಾರಣವಾಗಿದೆ. ಇದಲ್ಲದೆ ಬೆಳೆದ ಜನರ ಸ್ವಭಾವವನ್ನು ತೂಕಮಾಡುವ ತ್ರಾಸಿನಲ್ಲಿ ಮಕ್ಕಳ ಸ್ವಭಾವವನ್ನು ತುಲನೆ ಮಾಡಿದರೆ ತಪ್ಪಾದೀತು. ಚಿಕ್ಕ ಮಕ್ಕಳ ಗುಣಗಳು ಬೆಳೆದು ಸ್ಫೂರ್ತಿಗೆ ಬರುವ ಮುಂಚೆ ಅವುಗಳಿಗೂ ಪಶುಗಳಿಗೂ ವ್ಯತ್ಯಾಸವಿಲ್ಲ. ತನ್ನ ಸುಖ, ಆ ಸುಖಕ್ಕೆ ಕಾರಣವಾದ ವಸ್ತುಗಳು, ಇವುಗಳ ಕಡೆಗೆ ಮಾತ್ರ ಮಗುವಿನ ಲಕ್ಷ್ಯಹೋಗುತ್ತದೆ. ಅದರ ಸ್ವಾರ್ಥಪರತೆಯಲ್ಲಿ ಇತರರ ವಿಚಾರಗಳು ಅದರ ಮನಸ್ಸಿಗೆ ಹತ್ತುವುದಿಲ್ಲ. ಚಿಕ್ಕ ಮಗುವಿನ ಕೈಯಲ್ಲಿ ಉಡುಗೆರೆ ಯಾಗಿ ಇತ್ತ ರೂಪಾಯಿಯನ್ನು ಅದು ತೆಗೆಯಲೀಸದೆ 'ಹೂಂ ಹೂಂ' ಎಂದು ತಲೆ ಅಲ್ಲಾಡಿಸುತ್ತದೆ; ಕೈಯನ್ನು ಹಿಂದಕ್ಕೆ ಎಳೆಯುತ್ತದೆ. ಸ್ವಲ್ಪ ಬೆಳೆದ ಮಗು ಆ ಕೈಯನ್ನು ತನ್ನ ಬೆನ್ನ ಹಿಂದಕ್ಕೆ ಹಿಡಿದು ಅಡಗಿಸುತ್ತದೆ. ಇಲ್ಲಿ ತನ್ನ ಕೈಯಲ್ಲಿ ಹಣವಿದೆ ಎಂಬದನ್ನು ಮರೆಪಡಿಸುವ ಉದ್ದೇಶವಲ್ಲದೆ ಅದು ಮೋಸಗಾರಿಕೆಯ ಕೃತ್ಯವಲ್ಲ.

ಅದರ ಸ್ವಾರ್ಥಪರತೆಯು ಇತರರಲ್ಲಿರುವ ವಸ್ತುಗಳನ್ನು ಒಂದೊಂದು ಸಲ ಕಿತ್ತುಕೊಳ್ಳಲು ಅದನ್ನು ಪ್ರೇರೇಪಿಸುತ್ತದೆ. ಇಲ್ಲಿ 'ಇತರರ ವಸ್ತುಗಳ ಮೇಲೆ ಆಸೆಮಾಡಬಾರದು, ತನ್ನಂತೆ ಪರರು' ಎಂಬ ಅಭಿಪ್ರಾಯವು ಆ ಮಗುವಿನಲ್ಲಿ ಇನ್ನೂ ಮೂಡಿರುವುದಿಲ್ಲ. ಇತರ ಮಕ್ಕಳನ್ನು ತನ್ನ ತಾಯಿ ತಂದೆಗಳು ಎತ್ತಿಕೊಂಡಾಗ ತನ್ನದಾದ ಪ್ರೇಮಕ್ಕೆ ಇತರರು ಪಾಲು ಹೊಂದಲು ಅದಕ್ಕೆ ಇಷ್ಟವಿಲ್ಲ. ಹೀಗಾಗಿ ತುಟಿಗಳು ಉಬ್ಬೇರಿ, ಆ ಮಗುವಿನಲ್ಲಿ ಕಣ್ಣೀರು ತೊಟ್ಟಿಕ್ಕುತ್ತದೆ. ಕೆಲವು ಸಲ ಅದು ನೆಲದ ಮೇಲೆ ಬಿದ್ದು ಹೊರಳಾಡಿ, ಆ ಇನ್ನೊಂದು ಮಗುವನ್ನು ದೂಡುತ್ತದೆ, ಅದನ್ನು ಎತ್ತಿದ ತನ್ನ ತಾಯಿಯನ್ನು ಹೊಡೆಯಲು ಕೈ ಎತ್ತುತ್ತದೆ, ತುಳಿಯುತ್ತದೆ. ಕಾಡಾಡಿಗಳ ಸಿಟ್ಟಿಗೂ ಇಂಥ ಮಗುವಿನ ಸಿಟ್ಟಿಗೂ ವಿಶೇಷ ಭೇದವಿರುವುದಿಲ್ಲ. ಒಂದೊಂದು ಸಲ ಅದೇ ಮಗು ತನ್ನ ಸಿಟ್ಟಿನಲ್ಲಿ ತಾನು ಯಾರಿಗೂ ಬೇಡಾಗಿದ್ದೇನೆ ಎಂದು ವ್ಯಸನ ತಳೆದು ಒಂದು ಮೂಲೆಯಲ್ಲಿ ತನ್ನಷ್ಟಕ್ಕೆ ಕುಳಿತು ಕೊರಗುವುದುಂಟು. ಮನೆಯಲ್ಲಿ ತನಗಿಂತ ಚಿಕ್ಕ ಮಗುವಾದ ತನ್ನ ತಮ್ಮನನ್ನು ಎತ್ತಿಕೊಂಡು ಮುದ್ದಿಡುವುದನ್ನು ನೋಡಿ, ಹಲವು ಮಕ್ಕಳು ತಮ್ಮ ಮೇಲೆ ತಮ್ಮ ತಾಯಿಯ ಪ್ರೀತಿಯು ಕಡಿಮೆಯಾಯಿತೆಂದು ತಿಳಿಯು

ವ್ರದುಂಟು. ಆದರೆ ಮೆಲ್ಲಗೆ ಅದು ತನ್ನಷ್ಟಕ್ಕೆ ಈ ಸ್ಥಿತಿಯಲ್ಲಿ ತಾಳ್ಮೆ ಹೊಂದುವುದಕ್ಕೆ ಪ್ರಯತ್ನಿಸುತ್ತದೆ. ಈ ಕಾಲದಲ್ಲಿ ವಿಶೇಷವಾಗಿ ಆತ್ಮ ಪ್ರತಿಷ್ಠೆ ಮತ್ತು ಸ್ವಾರ್ಥ ಇವೇ ಮಗುವಿನಲ್ಲಿ ಪ್ರಬಲವಾಗಿವೆ. ತನ್ನವರು ಇತರರನ್ನು ಪ್ರೀತಿಸುವಾಗ ಹಗೆಯು ಬೀಜರೂಪವಾಗಿದ್ದು ಮಗುವಿನಲ್ಲಿ ಅಂಕುರಿಸುತ್ತದೆ.

'ನೀನು ಎಂಥಾ ನಿಷ್ಕರುಣಿ, ನಿನಗೆ ಇತರರ ಸುಖದುಃಖಗಳೇ ತಿಳಿಯು ವುದಿಲ್ಲವಲ್ಲ!' ಎಂದು ತಾಯಿಯು ಮಗುವಿನ ಮೇಲೆ ಸಿಟ್ಟಾಗಿ ಹಣೆ ಬಡಕೊಳ್ಳುವಾಗ, ಆ ಮಗುವಿನಲ್ಲಿ ಇತರರ ಸುಖದುಃಖಗಳ ನಿಜವಾದ ಕಲ್ಪನೆಯೇ ಇನ್ನೂ ಆಗಿಲ್ಲ, ಸ್ವಾಭಾವಿಕವಾಗಿ ಮಗು ಸ್ವಾರ್ಥದ ಪುಂಜ, ಪರರ ನೋವು ತನ್ನ ನೋವಿನಷ್ಟೆ ಬಲವಾಗಿದೆ ಎಂಬದನ್ನು ಗ್ರಹಿಸುವಷ್ಟು ವಿಚಾರಶಕ್ತಿಯು ಮಗುವಿನಲ್ಲಿ ಇನ್ನೂ ಬೆಳೆಯಲಿಲ್ಲ ಎಂಬ ವಿಚಾರವು ತಾಯಿಯ ಮನಸ್ಸಿನಲ್ಲಿ ಉಂಟಾಗಲಿಲ್ಲವೆನ್ನಬೇಕು. ಮನೆಯಲ್ಲಿ ಮರಣ ಉಂಟಾಗಿ ಅದರ ವ್ಯಥೆಯ ನಿಮಿತ್ತ ಎಲ್ಲರೂ ಗೋಳಿಡುವಾಗ, ಮಕ್ಕಳು ಹಲವು ಸಲ ಬೆರಗಾಗಿ ನೋಡುತ್ತಿವೆ; ಅಥವಾ ತಮ್ಮಷ್ಟಕ್ಕೆ ಆಟವಾಡು ತ್ತವೆ; ತಿನ್ನಲು ಕೊಡೆಂದು ಚಂಡಿಹಿಡಿಯುತ್ತವೆ. ಇದಕ್ಕೆಲ್ಲ ಮಕ್ಕಳಲ್ಲಿ ಆ ಗೋಳಿನ ಕಲ್ಪನೆ ಇಲ್ಲದಿರುವುದೇ ಕಾರಣವೆನ್ನಬೇಕಲ್ಲದೆ ಆ ಮಗುವನ್ನು ದೂರಿ ಪ್ರಯೋಜನವಿಲ್ಲ. 'ತನ್ನಂತೆ ಇತರರು' ಎಂಬ ಕಲ್ಪನೆಯು ಸಹವಾಸ ಮತ್ತು ಇತರರ ಒಡನಾಟಗಳಿಂದ ಬರಬೇಕಾಗಿದೆ.

ಜಿರಲೆಯನ್ನಾಗಲಿ, ಇರುವೆಯನ್ನಾಗಲಿ, ಅಕ್ಕಳೆಯನ್ನಾಗಲಿ, ಚಿಟ್ಟೆ ಗಳನ್ನಾಗಲಿ, ಬೆನ್ನಟ್ಟಿಹೋಗುವ ಮಗು ತನ್ನಲ್ಲಿ ಪಾರಂಪರ್ಯವಾಗಿ ಬಂದ ಬೇಟೆಯ ವಾಸನೆಯನ್ನು ತೋರ್ಪಡಿಸುತ್ತದೆ. ಕೆಲವು ಸಲ ತನ್ನ ಸಾಮರ್ಥ್ಯದ ಜ್ಞಾನವಾಗಿ ಅದನ್ನು ಇತರರಿಗೆ ತೋರಿಸಬೇಕು ಎಂಬ ಲವಲವಿಕೆಯಾಗಲಿ ತನ್ನ ಕಾರ್ಯದ ಪರಿಣಾಮವನ್ನು ತಿಳಿಯದೆ ಬರೇ ಚಟುವಟಿಕೆಯು ಉಕ್ಕಿಬರುವ ಪ್ರವಾಹದಿಂದಾಗಲಿ ಇಂಥ ದುಷ್ಕೃತ್ಯವನ್ನು ಮಗು ತೋರಿಸುತ್ತದೆ. ಮುಂದೆ ತನಗಿಂತ ಹೀನಸ್ಥಿತಿಯಲ್ಲಿರುವ ಅಥವಾ ಚಿಕ್ಕವರಾದ ಮಕ್ಕಳನ್ನು ಬೆದರಿಸುವುದು, ಹಿಂಸಿಸುವುದು ಮುಂತಾದ ಕೃತ್ಯಗಳಿಗೆ ಕೈಹಾಕುತ್ತದೆ. ಶಾಲೆಗಳಲ್ಲಿ ಒಬ್ಬಿಬ್ಬರು ಇಂಥ ಹುಡುಗರು

ಇರುತ್ತಾರೆ. ಇವರು ಸ್ವಾಭಾವಿಕವಾಗಿ ಭೀರುಗಳು. ಆದರೆ ತಾನು ಭೀರುವಲ್ಲವೆಂದು ಕಪಟ ನಟನೆಯಿಂದ ತನಗಿಂತ ಬಲಹೀನರನ್ನು ಗದರಿಸಿ, ಬೆದರಿಸಿ ಕಾಲಕ್ಷೇಪ ಮಾಡುತ್ತಾರೆ. ಇಂಥ ದುರ್ಗುಣವು ಸಹವಾಸದಲ್ಲಿ ಮತ್ತು ಇತರರು ತನ್ನ ಮೇಲೆ ಒಗ್ಗಟ್ಟಾಗಿ ದಂಡಿಸಲು ಯತ್ನಿಸಿದ ಸಂದರ್ಭದಲ್ಲಿ ನಿಂತುಹೋಗುತ್ತದೆ. ಇವರು ಮನೆಯಲ್ಲಿ ಅಥವಾ ಶಾಲೆಯಲ್ಲಿ ಹಿರಿಯರ ಅಥವಾ ಉಪಾಧ್ಯಾಯರ ಭೀತಿಯಲ್ಲಿ ಬೆಳೆದು, ಅದರ ಮುಯ್ಯನ್ನು ಇತರ ಮಕ್ಕಳಿಗೆ ಪೀಡಿಸುವುದರಲ್ಲಿ ತೀರಿಸುತ್ತಾರೆ. ಅವರಿಗೆ ಒಮ್ಮೆ ದಿಟ್ಟತನದಿಂದ ಒಬ್ಬರು ಎದುರಿಸಿದರೆಂದರೆ ಅವರ ಭೀರುತ್ವವು ಹೊರಗೆ ಬೀಳುತ್ತದೆ.

ದಯೆದಾಕ್ಷಿಣ್ಯಗಳು ಮೆಲ್ಲಮೆಲ್ಲಗೆ ಮಗುವಿನಲ್ಲಿ ಕಂಡು ಬರುತ್ತವೆ. ಆಗ ಅದು ತಾನು ಮೊದಲು ಪೀಡಿಸಿದ ಪ್ರಾಣಿಗಳನ್ನೆ ಮಮತೆ ಮಾಡುತ್ತದೆ. ತನ್ನ ತಾಯಿ ಅಥವಾ ದಾದಿಯು ಅಳುವಂತೆ ನಟಿಸಿದರೆ ಮಗುವಿಗೆ ಕಳವಳವಾಗುತ್ತದೆ. ಅದು ತಾಯಿಯನ್ನು ಮುದ್ದಿಟ್ಟು ಸಂಬಾಳಿಸುತ್ತದೆ. ಇದು ಮೊತ್ತಮೊದಲು ಅನುಕರಣಬಲದಿಂದ ಆಗುತಿದ್ದರೂ ಮುಂದೆ ನಿಜವಾದ ಅನುತಾಪವಾಗಿ ಪರಿಣಮಿಸುತ್ತದೆ. ತಾನು ತನ್ನ ತಾಯಿಯಿಂದ ಪಡೆಯುವ ಸುಖವನ್ನೆಲ್ಲ ತನ್ನ ಗೊಂಬೆಗೆ ಕೊಡಲು ಯತ್ನಿಸುವ ಹೆಣ್ಣು ಮಗುವಿಗೆ ಈ ಅನುಕರಣಶಕ್ತಿಯೇ ಅನುತಾಪದಲ್ಲಿ ಹೆಜ್ಜೆ ಇಡಿಸುತ್ತದೆ. ಅದೇ ಮಗುವಿಗೆ ತಾಯಿಯು 'ಮಗು! ನನಗೆ ಕಾಯಿಲೆ ಇದೆ, ನನ್ನ ಮೈ ನೋಯುತ್ತದೆ, ನನ್ನ ಮೈ ಸವರು' ಎನ್ನುವಾಗ ಅದು ಹಾಗೆ ಮಾಡಲಿಕ್ಕೆ ಮುಂದರಿಸುತ್ತದೆ. ಅಂಥ ಅನುತಾಪವನ್ನು ಅದು ಅನಂತರ ತನ್ನ ಒಡನಾಟದವರಲ್ಲಿಯೂ ತೋರಿಸ ತೊಡಗುತ್ತದೆ. ನೂತನ ಪ್ರಾಣಿಯೊಂದನ್ನು ಕಂಡಾಗ ಭಯಗೊಳ್ಳುವ ಮಗು ಅದರ ಪರಿಚಯವಾದ ಮೇಲೆ ಅದಕ್ಕೆ ಆಹಾರ ಕೊಡಲಿಕ್ಕೂ, ಮೈ ತಡವುದಕ್ಕೂ ಕೈ ಚಾಚುತ್ತದೆ.

ಮಕ್ಕಳು 'ಹುಟ್ಟು ಸಟೆಗಾರರು' ಎಂದು ಹಲವರ ಅಭಿಪ್ರಾಯವಿದೆ. ಮಕ್ಕಳ ಮಾನಸಿಕ ಶಕ್ತಿಗಳು ಹೇಗೆ ಬೆಳೆಯುತ್ತಿವೆ ಎಂಬುದನ್ನು ಸರಿಯಾಗಿ ತಿಳಿಯದವರು ವಿಶೇಷವಾಗಿ ಹೀಗನ್ನುವರು. ಮಕ್ಕಳಲ್ಲಿ ಕಲ್ಪನಾಶಕ್ತಿಗೆ ಮೇರೆ ಇಲ್ಲ ಎಂದು ಹಿಂದೆ ಹೇಳಿದೆವು. ಅನೇಕ ಸಲ ಮಕ್ಕಳು ಹೇಳುವ

ಹುಸಿನುಡಿಗಳಲ್ಲಿ ಇಂಥ ನಿರಂಕುಶ ಕಲ್ಪನಾಶಕ್ತಿಯೇ ವ್ಯಕ್ತವಾಗುತ್ತದೆ. ಅದು ಇತರರ ಅಸಂಭವನೀಯವಾದ ಮಾತುಗಳನ್ನು ನಂಬುತ್ತದೆ. ಇತರರಿಗೆ ಅದೇ ರೀತಿಯ ಅತಿಶಯೋಕ್ತಿಯ ನುಡಿಗಳಿಂದ ವರ್ಣಿಸಿ ಹೇಳುತ್ತದೆ. ಇಲ್ಲಿ ಮಗುವಿಗೆ ಸತ್ಯಮಿಥ್ಯದ ತಾರತಮ್ಯ ಸರಿಯಾಗಿ ಅರಿವಾಗಿಲ್ಲವೆನ್ನಬೇಕು. ತಾಳೆ ಮರದಷ್ಟು ಉದ್ದದ ರಾಕ್ಷಸನೊಬ್ಬನಿಗೆ ಹಣೆಯ ಮೇಲೆ ಒಂದೇ ಕಣ್ಣಿತ್ತು, ಕುಂಭಕರ್ಣನು ಒಮ್ಮೆ ಶ್ವಾಸ ಎಳೆದು ಬಿಡುವಾಗ ಒಂದೆರಡು ಆನೆಗಳು ಅವನ ಮೂಗಿನ ಸೊಳ್ಳೆಗಳಲ್ಲಿ ನುಸುಳಿ ಹೊರಗೆ ಬರುತಿದ್ದುವು ಎಂದು ಮುಂತಾದ ಅದ್ಭುತ ರಸದಲ್ಲಿ ವಿವರಿಸುವ ಮಾತುಗಳನ್ನು ಮಗು ನಿಜವೆಂದು ಭಾವಿಸುತ್ತದೆ.

ಕೆಲವು ಸಲ ಮಗು ತನ್ನ ಸಾಮರ್ಥ್ಯವನ್ನು ತೋರಿಸಲಿಕ್ಕೆ ತಾನು ಹೀಗೆ ಮಾಡಿದೆ, ಹಾಗೆ ಮಾಡಿದೆ ಎಂದು ಬಡಾಯಿ ಕೊಚ್ಚಿಕೊಳ್ಳುವುದುಂಟು. ಇಲ್ಲಿ ಅತಿಶಯೋಕ್ತಿಯಲ್ಲಿ ಸುಳ್ಳಿದ್ದರೂ ತಾನು ಸುಳ್ಳು ನುಡಿಯುತ್ತದೆಂಬ ಜ್ಞಾನವು ಅದಕ್ಕೆ ಆಗಿಲ್ಲ. 'ಚಂದ್ರ ಸೂರ್ಯರನ್ನು ರಾಹುವೆಂಬ ರಾಕ್ಷಸನು ನುಂಗುತ್ತಾನೆ, ಚೌತಿಯ ವಿನಾಯಕನು ಹೊಟ್ಟೆತುಂಬ ತಿಂಡಿ ತಿಂದು ಇಲಿಯ ಮೇಲೆ ಸವಾರಿಮಾಡುವಲ್ಲಿ, ಇಲಿಯು ಸರ್ಪನನ್ನು ನೋಡಿ ಹೆದರಿ ಓಡಿಹೋಯಿತು, ಆಗ ವಿನಾಯಕನು ಕೆಳಗೆ ಬಿದ್ದು ಹೊಟ್ಟೆ ಬಿರಿಯಿತು, ಅದಕ್ಕೆ ಸರ್ಪವನ್ನು ಹೊಟ್ಟೆಗೆ ಬಿಗಿದುಕೊಂಡನು' ಎಂದು ಹೇಳಿದ್ದನ್ನು ನಂಬುವ ಮುಂಕರಿಗೂ ಚಿಕ್ಕ ಮಕ್ಕಳಿಗೂ ವಿಶೇಷ ಭೇದವಿಲ್ಲ. ಅವರ ಕಲ್ಪನಾಶಕ್ತಿಗೆ ಸರಿಯಾದ ಊಹನೆಗಳನ್ನು ಮಾಡಿಕೊಳ್ಳುವುದಕ್ಕೆ ಈ ಕಥೆಗಳು ಸಾಕಾಗುತ್ತವೆ. ಇಂಥ ಕಥೆಗಳನ್ನು ನಂಬುವ ಮಕ್ಕಳು ತಾವೂ ಅದೇ ಬಗೆಯ ಕಥೆಗಳನ್ನೂ ಅಥವಾ ವರ್ಣನೆಯನ್ನೂ ಹೇಳುತ್ತವೆ. ಇಲ್ಲಿ ಸಂಭವ ಅಸಂಭವ ಯಾವುದು ಎಂದು ತಿಳಿದುಕೊಳ್ಳುವಷ್ಟು ವಿಚಾರಶಕ್ತಿಯು ಅವುಗಳಲ್ಲಿ ಬೆಳೆದಿಲ್ಲ.

'ಸಾಯಂಕಾಲ 4 ಗಂಟೆಗೆ ಗಾಡಿ ಬಂದೊಡನೆ ತಿರುಗಾಡಲಿಕ್ಕೆ ಕರೆದುಕೊಂಡು ಹೋಗುವೆನು' ಎಂದು ತಂದೆಯು ಹೇಳಿದ ಮಗುವಿಗೆ 3 ಗಂಟೆಯೆಂಬುದು 4 ಗಂಟೆಯಾಗಿ ಕೇಳಿಸುತ್ತದೆ. ಮನೆಯ ಹೊರಗೆ ಕೇಳಿಸಿದ ಪ್ರತಿಯೊಂದು ಶಬ್ದವು ಗಾಡಿ ಬಂತೆಂದು ಮಗುವಿನ ಮನಸ್ಸಿನಲ್ಲಿ

ಭ್ರಮೆ ಉಂಟುಮಾಡುತ್ತದೆ. ಇದಕ್ಕೆಲ್ಲ ಆ ಮಗುವಿಗೆ ತಿರುಗಾಡಲು ಹೋಗಲು ತುಂಬಿದ ಲವಲವಿಕೆಯೇ ಕಾರಣವಲ್ಲದೆ ಅದರ ಉದ್ದೇಶವು ಸುಳ್ಳು ಹೇಳಬೇಕೆಂದಿಲ್ಲ. 'ಅಜ್ಜಿ ಸಾಕಿದ ಮಗು'ವು ಕಳ್ಳರಿಗೆ ಸರಾಫರನ್ನು ತೋರಿಸಿಕೊಟ್ಟು ನುಡಿದ ಮಾತುಗಳಲ್ಲಿ ತಾನು ಸತ್ಯ ನುಡಿಯುತ್ತೇನೆ, ಅದು ನೀತಿ ಸಮ್ಮತವಾದದ್ದು ಎಂಬ ಜ್ಞಾನವಿದ್ದಂತೆ ತೋರಲಿಲ್ಲ. ತನ್ನ ಸತ್ಯದ ನುಡಿಯಿಂದ ಸರಾಫರ ಜೀವಕ್ಕೂ ಸೊತ್ತಿಗೂ ಹಾನಿ ಇದೆ ಎಂಬಷ್ಟು ವಿಚಾರವೂ ಆ ಮುಂಕನಿಗೆ ಇರಲಿಲ್ಲ. ಸುಳ್ಳನ್ನು ಕಲ್ಪಿಸಿ ಹೇಳುವಷ್ಟು ಸಾಮರ್ಥ್ಯವೂ ಅವನಲ್ಲಿ ಇರಲಿಲ್ಲವೆಂದು ಅವನ ಪೂರ್ವಕಥೆಯಿಂದ ಗೊತ್ತಾಗುತ್ತದೆ.

ಹಲವು ಸಲ 'ಹಾಗೆ ಮಾಡಬೇಡ, ಹೀಗೆ ಮಾಡಬೇಡ, ಮಾಡಿದರೆ ಪೆಟ್ಟು ಸಿಕ್ಕೀತು, ನೋಡಿಕೊ!' ಎಂಬ ನಿರ್ಬಂಧದ ನಿರ್ಣಯಗಳೇ ಮಕ್ಕಳಿಗೆ ಸುಳ್ಳು ಹೇಳುವುದಕ್ಕೆ ಪ್ರೋತ್ಸಾಹಕೊಡುತ್ತವೆ. ಹೀಗೆ ನಿರ್ಬಂಧ ಹಾಕುವುದಕ್ಕೆ ಬದಲಾಗಿ ನಯನುಡಿಗಳಿಂದ ಮಕ್ಕಳೊಡನೆ ಬೆರತುಕೊಂಡು, ಸಾಧ್ಯವಿದ್ದಲ್ಲಿ ಅವುಗಳ ಸದಸದ್ವರ್ತನದ ವಿಮರ್ಶೆಯನ್ನು ಮಾಡುತಿದ್ದರೆ, ತನ್ನ ಹಿರಿಗೆಳೆಯನಂತಿರುವವರ ವಿಶ್ವಾಸಕ್ಕೆ ಪಾತ್ರರಾಗಬೇಕೆಂದು ಅವು ತಮ್ಮ ವರ್ತನವನ್ನು ತಿದ್ದಿಕೊಳ್ಳುತ್ತವೆ. ನಿರ್ಬಂಧಗಳ ಬಿಗುಪು ಹೆಚ್ಚಾದರೆ ಮಗು ಸುಳ್ಳಿನ ಮಾಲೆಯನ್ನು ಕಟ್ಟುತ್ತದೆ.

ಅವಿಧೇಯತೆಯು ಮಕ್ಕಳಲ್ಲಿ ತೋರಿಬರುವ ಒಂದು ದುರ್ಗುಣ, ಮೊತ್ತಮೊದಲು ಮಗು ತನ್ನ ವ್ಯಕ್ತಿಸ್ವಾತಂತ್ರ್ಯವನ್ನು ತೋರಿಸುವ ಇಚ್ಛೆಯಿಂದ ಈ ರೀತಿಯಲ್ಲಿ ವರ್ತಿಸುತ್ತದೆ. ತನಗಿಂತ ಹಿರಿಯರು ಮಾಡುವ ಕೆಲಸಗಳನ್ನು ತಾನು ಮಾಡಬಾರದೆಂದು ನಿರ್ಬಂಧಹಾಕುವ ಕಾರಣವು ಅದಕ್ಕೆ ಗೊತ್ತಾಗುವುದಿಲ್ಲ. 'ನಾನು ಒಲ್ಲೆ' ಎಂಬ ಕಥೆಯಲ್ಲಿ (ಕನ್ನಡ ಸಹಕಾರಿಯಲ್ಲಿ ನೋಡಿರಿ) ಈ ಬಗೆಯ ಇಲಿಮರಿಯ ವರ್ತನದಲ್ಲಿ ಅವಿಧೇಯತ್ವವೇ ಉದ್ದೇಶವಲ್ಲ. ಈ ಪ್ರಾಯದಲ್ಲಿ ಮಕ್ಕಳನ್ನು ನೋಡಿಕೊಳ್ಳುವವರಿಗೆ ತುಂಬಾ ತಾಳ್ಮೆ ಬೇಕಾಗುತ್ತದೆ. ಈ ಕಾಲದಲ್ಲಿ ಪ್ರತಿ ಒಂದು ಅವಿಧೇಯತೆಯ ಕೆಲಸವನ್ನು ಕುರಿತು ದಂಡಿಸುವುದು, ಗದರಿಸುವುದು ಮುಂತಾದವುಗಳಿಂದ, ಮಕ್ಕಳಲ್ಲಿ ಇತರರ ಅವಹೇಳನೆಗೆ ಗುರಿಯಾಗ

ಬಾರದೆಂಬ ಮನೋವೃತ್ತಿಯನ್ನು ಬೆಳಗುವ ಬದಲಾಗಿ, ಅದನ್ನು ಬಡ್ಡಾಗಿ ಮಾಡುತ್ತದೆ. ಹಲವು ಸಲ ಅಂಥ ಮಕ್ಕಳು ಆಜ್ಞೆಯ ಉಲ್ಲಂಘನೆಗೆ ಉಪಾಯಗಳನ್ನು ಕಂಡು ಹಿಡಿಯಲು ಯತ್ನಿಸುತ್ತವೆ. ಅವರಿಗೆ ತಮ್ಮ ರಕ್ಷಕರ ಅಥವಾ ಉಪಾಧ್ಯಾಯರ ಮೇಲೆ ನಿಜವಾದ ವಾತ್ಸಲ್ಯ ಇರುವ ಬದಲಾಗಿ ಹಗೆಯು ಮೊಳೆಯುತ್ತದೆ. ಈ ರೀತಿಯಾಗದಂತೆ ಆ ಅವಿಧೇಯು ತೆಯ ಮೂಲವೇನು, ತನ್ನ ಆಜ್ಞೆಯನ್ನು ಅನುಸರಿಸಲಿಕ್ಕೆ ಮಗುವಿಗೆ ಉಂಟಾದ ಅಡಚಣೆಗಳೇನು ಎಂದು ರಕ್ಷಕರಾಗಲಿ ಉಪಾಧ್ಯಾಯರಾಗಲಿ ವಿವೇಚನೆಮಾಡಬೇಕು. ದುಡುಕಿ ಅವುಗಳ ಮೇಲೆ ರೇಗಿ ಬೀಳುವುದರಿಂದ ಬಾಧಕವೇ ಅಲ್ಲದೆ ಉಪಕಾರವಿಲ್ಲ.

ಕೆಲವು ಸಲ ಮಕ್ಕಳು ಬಹು ಚಮತ್ಕಾರದಿಂದ ತಮ್ಮ ಹಿರಿಯರ ಮಾತಿಗೆ ತಮಗೆ ಹಿತಕರವಾದ ಅರ್ಥವನ್ನು ಮಾಡಿಕೊಳ್ಳುತ್ತವೆ. 'ಮಗು! ಹಿತ್ತಲಲ್ಲಿ ಆಡು!' ಎಂದು ತಾಯಿಯು ಕರೆದು ಹೇಳಿದ ಮಾತಿಗೆ 'ಆಡು ಶ್ರೇಸನಮ್ಮಾ!' ಎಂದು ಹೇಳುವ ಮಗು ನಿಜವಾಗಿ ತನ್ನ ಅವಿಧೇಯತೆ ಯನ್ನು ಯುಕ್ತಿಯಿಂದ ಮರೆಸಲು ನೋಡಿತೋ, ಅಥವಾ ಆ ಕಾಲದಲ್ಲಿ ಅದರ ಮನಸ್ಸಿನಲ್ಲಿ ಜಾಗೃತವಾಗಿದ್ದ ಆಟದ ಲಾಲಸೆಯೇ ತನಗೆ ಹಿತಕರ ವಾದ ಅರ್ಥವನ್ನು 'ಆಡು' ಎಂಬ ಶಬ್ದದಲ್ಲಿ ಪ್ರೇರೇಪಿಸಿತೋ ಎಂಬದು ಸೂಕ್ಷ್ಮವಿಚಾರದಿಂದ ತಿಳಿಯಬೇಕಾದ ವಿಷಯವಾಗಿದೆ.

'ಬಿಸಿಲಲ್ಲಿ ಆಡಬೇಡ' ಎಂದು ತಾಯಿ ಕರೆದು ಹೇಳಿದಾಗ, ಆಟದಲ್ಲಿ ಮನಸ್ಸು ತಡೆಯದ ಮಗು ತನ್ನ ಅಪ್ಪನು ಪೇಟೆಯಿಂದ ಬರಲಿಲ್ಲವೇನು ಎಂದು ನೋಡಲಿಕ್ಕೆ ಅಂಗಳಕ್ಕೆ ಇಳಿದೆನು ಎಂದು ಹೇಳುತ್ತದೆ. ಇಲ್ಲಿ ಮಗುವಿನಲ್ಲಿ ಅವಿಧೇಯತೆಯು ಬದಲಾಗಿ ತನ್ನ ಚಟುವಟಿಕೆಯ ತುಂಬಿ ತುಳುಕುವಿಕೆಯಿಂದ ಉಂಟಾದ ಪ್ರೇರಣೆಯೇ ಕಾರಣವಾಗಿದೆ.

ಅಭ್ಯಾಸಬಲದಿಂದ ಕೆಲವು ನಿಯಮಗಳು ಮಕ್ಕಳಲ್ಲಿ ನೆಲೆನಿಂತು ಅವುಗಳಲ್ಲಿ ಅನಿವಾರ್ಯ ಕಾರಣಗಳಿಂದ ಲೋಪಬಂದರೆ ಆಗ ಆ ಮಕ್ಕ ಳಿಗೆ ಅಸುಖವಾಗುವುದು. ಊಟಕ್ಕೆ ಮುಂಚಿತವಾಗಿ ಕೈಕಾಲು ತೊಳೆಯ ಬೇಕೆಂದು ಅಭ್ಯಾಸಮಾಡಿದ ಮಗುವಿಗೆ ಕಾರ್ಯಾನವಸರದಲ್ಲಿ ಕಾಲು ತೊಳೆಯಲು ಮರೆತು ಬಿಟ್ಟರೆ, ಮನಸ್ಸಿಗೆ ಹಿತವಾಗದೆ ಗುಣುಗುಟ್ಟುವು

ದುಂಟು. ತನ್ನ ತಪ್ಪಿಗೋಸ್ಕರ ತಾಯಿಯು ತನಗೆ ಪ್ರೇಮದ ಮಾತು ಗಳಿಂದ ಬಹಿಷ್ಕಾರವಿಟ್ಟಿದೆ ಎಂದು ತಿಳಿದಾಗ ಹಲವು ಮಕ್ಕಳು ತಮ್ಮ ವರ್ತನವನ್ನು ತಿದ್ದಿಕೊಳ್ಳಲು ಯತ್ನಿಸುತ್ತವೆ. ಈ ಬಗೆಯ ಜ್ಞಾನವಾ ದೊಡನೆ ಕ್ರಮವಾಗಿ ಅವುಗಳಲ್ಲಿ ಸದ್ವರ್ತನಗಳನ್ನು ಅಭ್ಯಾಸ ಮಾಡಿಸಲಿಕ್ಕೂ ಆಗಾಗ ಇತರರ ಸಹವಾಸದಿಂದ ಹೆಕ್ಕಿಕೊಳ್ಳುವ ಹೊಲಸು ನುಡಿ, ದುರ್ವ್ಯಸನಗಳು ಮುಂತಾದ ಬಲೆಗೆ ಸಿಕ್ಕು ಬೀಳದಂತೆ ಎಚ್ಚರ ವಿಡುವುದಕ್ಕೂ ಮನೆಯಲ್ಲಿ ಹಿರಿಯರೂ ಶಾಲೆಯಲ್ಲಿ ಉಪಾಧ್ಯಾಯರೂ ಯತ್ನಿಸಬೇಕು.

ಲಲಿತ ಕಲೆಗಳು

೨೨ನೆಯ ಅಧ್ಯಾಯ

ಲಲಿತಕಲೆಗಳು ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ರೀತಿಯಿಂದ ಜೀವನ ವನ್ನು ಸಾಗಿಸುವುದಕ್ಕೆ ಸಹಾಯಕವಲ್ಲವಾದರೂ ಮನುಷ್ಯನ ವಿರಾಮಕಾಲವನ್ನು ಸುಖದಾಯಕವಾಗಿ ಮಾಡುವುದಕ್ಕೂ ಅವನ ಮನಸ್ಸನ್ನು ಸುಧಾರಣೆಮಾಡಲಿಕ್ಕೂ ಅಗತ್ಯ ಇವೆ ಎಂದು ಹಿಂದೆ ಹೇಳಿದೆವು. ಇಂಥ ಲಲಿತಕಲೆಗಳ ಅಭಿರುಚಿಯು ಸಣ್ಣ ಮಕ್ಕಳಲ್ಲಿಯೂ ಮೊಳೆಯುತ್ತಿದೆ. ಮಗು ಹುಟ್ಟಿದ ಒಂದು ವಾರದಲ್ಲಿಯೆ ಶುಭ್ರವಾದ ಬೆಳಕಿಗೆ ಆಸೆ ಪಡುತ್ತಿದೆ. ಕತ್ತಲಾದ ಕೋಣೆಗೆ ಕೊಂಡು ಹೋದೊಡನೆ ಅಳುತ್ತದೆ. ರಾತ್ರೆ ದೀಪದ ಬೆಳಕನ್ನು ಕಂಡು ಬೆರಗಾಗಿ ಅದೇ ಕಡೆಗೆ ನೋಡುತ್ತಾ ಇದೆ; ಒಂದೊಂದು ಸಲ ಆ ಕಡೆಗೆ ನೋಡಿ ಹೂಂಕರಿಸುತ್ತಿದೆ, ಮತ್ತು ತನ್ನ ಪುಟ್ಟ ಮನಸ್ಸಿಗೆ ಆದ ಸುಖವನ್ನು ತೋರ್ಪಡಿಸುತ್ತದೆ. ಶುಭ್ರ ಬಣ್ಣಗಳು ಮಕ್ಕಳ ಮನಸ್ಸನ್ನು ಬಹು ಬೇಗನೆ ಆಕರ್ಷಿಸುತ್ತಿರುವುದರಿಂದ ತೊಟ್ಟಿಲ ತಟ್ಟಿಗೆ ಬಗೆಬಗೆಯ ಬಣ್ಣದ ಗಿಳಿ ಗಳನ್ನೂ ಗೋಲಗಳನ್ನೂ ತೂಗಿಸುತ್ತಾರೆ. ಅದು ಎಚ್ಚತ್ತಾಗ ಅವನ್ನು ನೋಡಿ ಸುಖಹೊಂದುತ್ತದೆ!

ಹುಟ್ಟಿದ ಎರಡು ಮೂರು ತಿಂಗಳ ಮೇಲೆ ಅಂದರೆ ಮುಷ್ಟಿ ಬಿಗಿಯು ವುದಕ್ಕೆ ತ್ರಾಣಬಂದಾಗ ಬಣ್ಣದ ರಂಗಿನ ಕಣೆಯನ್ನು ಅದರ ಕೈಗೆ ಕೊಟ್ಟಾಗ ಅದು ಅಳುವುದನ್ನು ನಿಲ್ಲಿಸುತ್ತದೆ. ತನಗೆ ತೊಡಿಸಿದ ಬಣ್ಣದ ಅಂಗಿಯ ಮೇಲೆಯೂ ಅದಕ್ಕೆ ತುಂಬಾ ಇಷ್ಟವಿದೆ. ಅದನ್ನೆ ನೋಡಿ ನೋಡಿ ಅದು ಸುಖಹೊಂದುತ್ತದೆ.

ಆಕಾರದ ಜ್ಞಾನವೂ ಮಗುವಿಗೆ ಮೆಲ್ಲಗೆ ಆಗುತ್ತದೆ. ಅದು ಚಿಕ್ಕ ಪ್ರಾಣಿ, ವಸ್ತು ಮುಂತಾದವುಗಳನ್ನು ಹಿಡಿದು ಅವುಗಳ ಅಂಗಾಂಗ ಸ್ಪರ್ಶ ದಿಂದ ಆಕಾರದ ಸಂಪೂರ್ಣ ಪರಿಚಯಮಾಡಿಕೊಳ್ಳಲು ಯತ್ನಿಸುತ್ತದೆ.

ತಾಯಿಯ ಮುಡಿಯಲ್ಲಿರುವ ಹೂಗಳನ್ನು ಕಿತ್ತುಬಿಡಲಿಕ್ಕೆ ಯತ್ನಿ ಸುವ ಮಗುವಿಗೆ ಆ ಹೂಗಳ ಬಣ್ಣವೇ ಆಕರ್ಷಣೆಮಾಡಿದೆ ಎನ್ನಬೇಕು. ಕಾಡು ಮನುಷ್ಯರಿಗಿರುವಂತೆ ಮಕ್ಕಳಿಗೆ ಅಲಂಕಾರದ ಮೇಲೆ ತುಂಬಾ ಪ್ರೀತಿ. ಕೈಗೆ ಬಳೆ, ಸೊಂಟಕ್ಕೆ ಡಾಬು, ಕುತ್ತಿಗೆಗೆ ಸರ ಇಟ್ಟು ಬಣ್ಣದ ಅಂಗಿಯನ್ನು ತೊಡಿಸಿದ ಒಡನೆಯೆ ಆ ಮಗುವು ಒಯ್ಯಾರದಿಂದ ನಗು ನೋರೆ ಮಾಡಿ ನಡೆಯುವುದು ಅದರ ಅಲಂಕಾರ ಪ್ರಿಯತೆಯ ನಿದರ್ಶನ ವಾಗಿದೆ. ಹಕ್ಕಿಯ ಗರಿಗಳನ್ನು ಪ್ರಾಣಿಗಳ ಚಿಪ್ಪು, ಕೊಂಬು, ತಲೆ ಬುರುಡೆಗಳನ್ನೂ ಕೂಡಾ ಧರಿಸಿಕೊಳ್ಳುವ ಕಾಡಾದಿಗಳು ಈ ಅಲಂಕಾರ ಪ್ರಿಯತೆಯ ದಾಸರಾಗಿದ್ದಾರೆ. ಫೊಟೊಗ್ರಾಫದಲ್ಲಿ ಮಗು ತನ್ನ ತಾಯಿ ತಂದೆ ಅಣ್ಣಂದಿರನ್ನು ಗುರುತಿಸಿದರೆ ಅದಕ್ಕೆ ಆಕಾರಜ್ಞಾನವಾಗಿದೆ ಎಂದು ತಿಳಿಯಬಹುದು. ಚಿತ್ರಗಳ ಮೇಲೆ ಮಕ್ಕಳಿಗೆ ತುಂಬಾ ಪ್ರೀತಿ. ಆದರೆ ಮೊತ್ತಮೊದಲು ಅವಕ್ಕೆ ಆ ಚಿತ್ರವು ಕೃತಕವೆಂದು ಬೋಧೆಯಾಗುವುದಿಲ್ಲ. ಕನ್ನಡಿಯಲ್ಲಿ ತನ್ನ ತಾಯಿಯ ಬಿಂಬವನ್ನು ಕಂಡ ಮಗು ಅದಕ್ಕೆ ಮುದ್ದಿ ಡಲು ಯತ್ನಿಸುತ್ತದೆ. ರಾಮನು ಕನ್ನಡಿಯಲ್ಲಿರುವ ಬಿಂಬವನ್ನು ನೋಡಿ ಚಂದ್ರನು ತನ್ನ ಕೈಗೆ ಸಿಕ್ಕಿದನೆಂದು ಸಂತೋಷಪಟ್ಟನಂತೆ.

ಇದೇ ರೀತಿಯಲ್ಲಿ ಮಗುವಿನ ಕಿವಿಯು ತಾಯಿಯ ಜೋಗುಳದ ಸ್ವರವನ್ನು ಬೇಗನೆ ಗುರುತಿಸುತ್ತದೆ. ಮೆಲ್ಲಮೆಲ್ಲನೆ ರಾಗಮಾಲಿಕೆ, ವಾದ್ಯ, ಚೆಂಡು ಮುಂತಾದುವುಗಳ ಸ್ವರದ ಕಡೆಗೆ ಮಗುವಿನ ಮನಸ್ಸು ಆಕರ್ಷಿಸಲ್ಪಡುತ್ತದೆ. ಮಗು ಒಂದು ಕೋಲಿನ ತುದಿಯನ್ನು ಬಾಯೊಳಗೆ

ತುರುಕಿ ವಾದ್ಯ ಬಾರಿಸುವಂತೆ ನಟಿಸುವಾಗಲೂ, ರಾಗಕ್ಕೆ ಸರಿಯಾಗಿ ಕೈಯಿಂದ ತಾಳ ಹಾಕುವಾಗಲೂ ಅದಕ್ಕೆ ಗಾಯನದ ಲಾಲಸೆಯು ಇದೆಯೆಂದು ನೆನಸಬಹುದು. ಇವೆಲ್ಲ ಬಾಹ್ಯವಸ್ತುಗಳ ಮೂಲಕ ಉಂಟಾಗುವ ಸುಖಗಳು.

ಮಗು ಮಾತಾಡಲು ತೊಡಗುವ ಮುಂಚೆಯೆ ಕಲ್ಪನೆಗಳನ್ನು ಮಾಡಿಕೊಳ್ಳುತ್ತಲೆ ಇದೆ. ಇವು ಬೇಗಬೇಗನೆ ಸಂಗ್ರಹವಾಗುತ್ತಿದ್ದು ಅವಕ್ಕೆ ವಿವೇಚನೆಯು ಮೇರೆ ಇಲ್ಲದುದರಿಂದ ವಿಚಿತ್ರ ಮತ್ತು ಅದ್ಭುತವಾದ ವರ್ಣನೆಗಳು ಬೇಗನೆ ಆಕರ್ಷಣೆಮಾಡುತ್ತವೆ. ಭೀಮನು ಬಕಾಸುರನಿಕೋಸ್ಕರ ಕೊಂಡುಹೋಗುವ ಬಂಡಿ ತುಂಬಾ ಅನ್ನ ಮೊಸರುಗಳನ್ನು ತಾನೆ ಸೇವಿಸಿದನು, ಹನುಮಂತನು ಸಮುದ್ರವನ್ನು ದಾಟಿ ಲಂಕೆಗೆ ಹಾರಿದನು, ವಾಲಿಯೆಂಬ ಮಂಗವು ರಾವಣನನ್ನು ಹಿಡಿದು ಸೂರ್ಯಮಂಡಲಕ್ಕೆ ಹಾರಿತು, ಮುಂತಾದ ಕಥನಗಳಲ್ಲಿ ಮಕ್ಕಳಿಗೆ ತುಂಬಾ ಪ್ರೀತಿ. ಕಥೆಗಳು ಚಿಕ್ಕ ಮಕ್ಕಳಲ್ಲಿ ಮನೋವಿಕಾರಗಳನ್ನು ಹೇಗೆ ಬೆಳೆಯಿಸುತ್ತವೆಂದು ಹಿಂದೆ ಹೇಳಿದ್ದೇವೆ. ಇವೆಲ್ಲ ಮಗುವು ತನ್ನ ಕಲ್ಪನಾಶಕ್ತಿಯ ಬಲದಿಂದ ಹೊಂದುವ ಮಾನಸಿಕ ಸುಖಗಳು.

ಮಕ್ಕಳು ತಾವು ಕಂಡ ವಸ್ತುಗಳ ಪ್ರತಿಬಿಂಬಗಳನ್ನು ಮಾಡುವ ತವಕದಿಂದ ಚೋಕಿನಿಂದಾಗಲಿ ಮಸೀತುಂಡಿನಿಂದಾಗಲಿ ಗೋಡೆಯ ಮೇಲೆ ಅಥವಾ ನೆಲದ ಮೇಲೆ ಗೀರುವಾಗ ಸ್ವಾಭಾವಿಕವಾದ ಲಲಿತಕಲೆಗಳ ಅಂಕುರವು ಕಾಣಿಸುತ್ತದೆ. ಕಥಾನಟನೆ, ಮಕ್ಕಳು ತಾವಾಗಿಯೇ ಮಳಲು, ಮಣ್ಣು, ಕಡ್ಡಿ, ಬೀಜ ಮೊದಲಾದುವುಗಳಿಂದ ಮಾಡುವ ಆಕಾರಗಳು ಮಕ್ಕಳಲ್ಲಿ ಲಲಿತಕಲೆಗಳ ಅಭಿರುಚಿಯಿದೆ ಎಂದು ವ್ಯಕ್ತಗೊಳಿಸುತ್ತವೆ, ಮತ್ತು ಅವುಗಳ ಕಲ್ಪನೆಗಳನ್ನು ರೂಪುಗೊಳಿಸಲಿಕ್ಕೆ ಪ್ರೇರೇಪಿಸುತ್ತವೆ.

ಮನುಷ್ಯನ ಕಲ್ಪನಾಶಕ್ತಿಯನ್ನು ವರ್ಣಿಸುವಾಗ 'ಸಾಹಿತ್ಯ' ಎಂಬ ಹೃದ್ಯವಾದ ಉಪನ್ಯಾಸದಲ್ಲಿ ಶ್ರೀ। ಮಾಸ್ತಿ ವೆಂಕಟೇಶಯ್ಯಂಗಾರರು ಹೀಗಂದಿದ್ದಾರೆ:—

"ಮನುಷ್ಯನಲ್ಲಿ ಕಲ್ಪನಾಶಕ್ತಿ ಒಂದು ಉಂಟು. ಇದು ಹಲವು ವಿಧವಲ್ಲಿ ಹೊರಹೊಮ್ಮುತ್ತದೆ. ಈ ಕಲ್ಪನಾಶಕ್ತಿಯು ರಾಗಗಳ ಭಾವಗಳನ್ನು ವ್ಯಕ್ತಪಡಿಸು

ವುದಕ್ಕೆ ಉದ್ಯುಕ್ತವಾದಾಗ ಕುಶಲ ಕಲೆಗಳನ್ನು ಉಂಟುಮಾಡುವುವು. ಇವುಗಳಲ್ಲಿ ಸಾಹಿತ್ಯವು ಒಂದು. ಕಲ್ಲಿನಲ್ಲಿ ಕಡೆದಾಗ ಶಿಲ್ಪವಾಗತಕ್ಕದ್ದೆ, ಚಿತ್ರಿಸಿದಾಗ ಚಿತ್ರವೂ ಆಗಿ, ನುಡಿದಾಗ ಸಾಹಿತ್ಯವಾಗುವುದು."

ಇಲ್ಲಿ ರಾಗಗಳೆಂದು ಹೇಳುವುದು ಮನೋವಿಕಾರಗಳಿಗೆ ಅನ್ವಯಿಸುತ್ತದೆ. ಮನೋವಿಕಾರದ ಬಲದಿಂದ ಮನಸ್ಸಿನಲ್ಲಿ ಮಾಡಿಕೊಂಡ ಕಲ್ಪನೆಗಳನ್ನು ವಾಣಿಯಿಂದ ಅಥವಾ ಲೇಖನದಿಂದ ರೂಪುಗೊಳಿಸುವುದೇ ಸಾಹಿತ್ಯ. ಮನುಷ್ಯರಲ್ಲಿ ಈ ಕಲ್ಪನಾಶಕ್ತಿಯು ಹೆಚ್ಚು ಕಡಿಮೆ ಇದ್ದೇ ಇದೆ. ಅದರ ತೇಜವೇ ಬುದ್ಧಿಯ ನಿರ್ಣಯಗಳನ್ನು ಕಾರ್ಯರೂಪದಲ್ಲಿ ತರಲಿಕ್ಕೆ ಪ್ರೇರೇಪಿಸುತ್ತದೆ ಎಂದು ಹಿಂದೆ ಹೇಳಿದೆವು. ರಾಮಾಯಣ ಮಹಾಭಾರತಾದಿಗಳಲ್ಲಿರುವ ಕಥೆಗಳು ಈ ಬಗೆಯ ಮನೋವಿಕಾರಗಳಿಗೆ ಪುಟವಿಟ್ಟು, ಮನುಷ್ಯನ ಧ್ಯೇಯಗಳನ್ನು ಉಚ್ಚತರಗತಿಗೆ ಏರಿಸಿ, ಅವನ ವರ್ತನದಲ್ಲಿ ಸುಧಾರಣೆಯನ್ನು ಮಾಡುತ್ತವೆ. ಇದೇ ರೀತಿ ಪ್ರಾಚೀನ ಮತ್ತು ಆಧುನಿಕ ವಾಙ್ಮಯದಲ್ಲಿ ಸದ್ವೃತ್ತಿಗಳನ್ನೂ ದುಷ್ಟವೃತ್ತಿಗಳನ್ನೂ ಕೆರಳಿಸುವ ಅನೇಕ ಗ್ರಂಥಗಳು ಇವೆ. ಇವುಗಳ ವಾಚನವು ತರುಣರ ಮನಸ್ಸನ್ನು ಒಳ್ಳೇ ದಾರಿಗಾಗಲಿ ಕೆಟ್ಟ ದಾರಿಗಾಗಲಿ ಪ್ರೋತ್ಸಾಹಿಸುವುದು. ಹೀಗಿರುವುದರಿಂದ ಅಂಥ ವಾಙ್ಮಯವನ್ನು ತಾವು ಪರಿಶೀಲಿಸದೆ ಮಕ್ಕಳ ಕೈಗೆ ಕೊಡುವುದು ಮುಂದೆ ಆ ಮಕ್ಕಳ ಕೇಡಿಗೆ ಕಾರಣವಾಗಬಹುದು. ಆದ್ದರಿಂದ ಮೊತ್ತಮೊದಲು ಕಥೆಗಳು, ಆ ಮೇಲೆ ಇತಿಹಾಸ, ಮಹಾಪುರುಷರ ಜೀವನ ಚರಿತ್ರೆ, ಪುರಾಣ, ಸಾಧುಸಂತರ ಕಥೆಗಳು, ದೇಶವತ್ಸಲರಾಗಿ ಸಮಾಜದ ಒಳಿತನ್ನು ಸಾಧಿಸುವುದರಲ್ಲಿ ತಮ್ಮ ಕಾಲವನ್ನು ಸವೆಯಿಸಿದವರ ಚರಿತ್ರೆ ಮುಂತಾದವನ್ನು ಧಾರಾಳವಾಗಿ ಮಕ್ಕಳ ಮತ್ತು ತರುಣರ ಕೈಸೇರುವಂತೆ ಮಾಡಬೇಕಾಗಿದೆ.

ಈ ವಿಷಯದಲ್ಲಿ ಒಂದು ವಾದವಿದೆ. ಕೆಲವರು ವಿವಿಧ ವಿಜ್ಞಾನ ಶಾಸ್ತ್ರಸಾಹಿತ್ಯವೇ ಪ್ರಶಸ್ತವಾಗಿದೆ, ಅದರಿಂದ ಬುದ್ಧಿಯ ವಿವೇಚನಾಶಕ್ತಿಯು ಪುಷ್ಟಿಗೊಳ್ಳುತ್ತದೆ, ಈ ಶಾಸ್ತ್ರಗಳು ಯಾವಾಗಲೂ ಸತ್ಯವನ್ನೆ ಪ್ರತಿಪಾದಿಸುತ್ತವೆ ಎಂದು ಹೇಳಿ ಲಲಿತಕಲೆಗಳ ಕಡೆಗೆ, ಮುಖ್ಯವಾಗಿ ಸಾಹಿತ್ಯದ ಕಡೆಗೆ ನಮ್ಮ ಮನಸ್ಸನ್ನು ವಿಮುಖವಾಗುವಂತೆ ನೋಡುತ್ತಾರೆ.

ಇನ್ನೂ ಕೆಲವರು ವಾಙ್ಮಯವೇ ಸುಖದಾಯಕವಾಗಿದೆ, ಚಿತ್ರಕಲೆಗಳ ಮನುಷ್ಯನ ವಿರಾಮ ಕಾಲದ ಸದ್ವಿನಿಯೋಗಕ್ಕೆ ಸಲಕರಣೆಗಳೆಂದು ಸಾಧಿಸುತ್ತಾರೆ. ಮನುಷ್ಯನ ಜೀವನದ ಸಂಪೂರ್ಣತೆಯಾಗಬೇಕಾದರೆ ಇವೆರಡೂ ಇರಬೇಕು. ಬರೇ ಶಾಸ್ತ್ರಪಠನವು ಪುಷ್ಟಿ ಕೊಡುವುದಾದರೂ ಸಪ್ಪೆಯಾದ ಆಹಾರ; ಅದಕ್ಕೆ ಲಲಿತಕಲೆಗಳು ಒಗ್ಗರಣೆಯನ್ನು ಕೊಡುತ್ತವೆಂದು ನಮ್ಮ ಅಭಿಪ್ರಾಯ. ಹೀಗಾಗಿ ಸರ್ವಾಂಗಸುಂದರವಾದ ಶಿಕ್ಷಣವೆನಿಸಬೇಕಾದರೆ ಅದು ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ಶಕ್ತಿಯನ್ನು ವರ್ಧಿಸುವುದಲ್ಲದೆ ಬುದ್ಧಿ ಮನಸ್ಸು ಅಹಂಕಾರಗಳನ್ನು ವ್ಯವಸ್ಥಿತ ಕ್ರಮದಲ್ಲಿ ಇಟ್ಟು ಬೆಳೆಯಿಸಿ, ತಮ್ಮ ತಮ್ಮ ಕಾರ್ಯನಿರ್ವಾಹವನ್ನು ಹದ ತಪ್ಪದೆ ಮಾಡಿಸಿ, ಸಮಾಜದಲ್ಲಿ ಶಾಂತಿಸುಖಗಳಿಗೆ ದಾರಿ ಮಾಡಿಕೊಡಬೇಕು.

ಮೊಟೆಂಸೋರಿಯವರ "ಮಕ್ಕಳ ಮನೆಗಳು"

೨೩ನೆಯ ಅಧ್ಯಾಯ

ಹಿಂದಿನ ಅಧ್ಯಾಯಗಳಿಂದ ನಿಜವಾದ ಶಿಕ್ಷಣವು ಯಾವ ಉದ್ದೇಶವನ್ನು ಇಟ್ಟುಕೊಳ್ಳಬೇಕು ಮತ್ತು ಪಾಶ್ಚಾತ್ಯದೇಶಗಳಲ್ಲಿ ರುಸೊ ಎಂಬವನು ಬಿತ್ತಿದ ಶಿಕ್ಷಣ ವಿಚಾರ ಬೀಜವು ಫ್ರೊಬೆಲನ ಚಮತ್ಕಾರಿಕವಾದ ಸಾಹಸದಿಂದ ಹೇಗೆ ಹೂ ಬಿಟ್ಟಿತು ಎಂದು ನಿಮಗೆ ಗೊತ್ತಾಗದಿರದು. "ಮಕ್ಕಳೆಂಬುದೆ ತೋಟ" ಎಂದು ಫ್ರೊಬೆಲನು ಪ್ರತಿಪಾದಿಸಿದ ಕಾರಣವಾದರೂ ಇದೇ. ಆದರೆ ಅವನ ಕ್ರಮದಲ್ಲಿ ಉಪಾಧ್ಯಾಯನು ಮಕ್ಕಳ ಇಂದ್ರಿಯ ಪಾಟವಕ್ಕೆ ತಾನೇ ಮಾರ್ಗವನ್ನು ಕಡಿದು, ಅದರಲ್ಲಿ ಆ ಮಕ್ಕಳ ಕೈ ಹಿಡಿದು ನಡಿಸುವ ಜವಾಬ್ದಾರಿಯನ್ನು ವಹಿಸುತ್ತಾನೆ. ತೋಟಗಾರನು ಬೀಜವನ್ನು ಬಿತ್ತಿ ಗೊಬ್ಬರ, ನೀರು ಮೊದಲಾದುವುಗಳನ್ನು ಗಿಡಗಳಿಗೆ ಕ್ರಮವಾಗಿ ಕೊಟ್ಟು ಆರೈಕೆ ನೋಡುತ್ತಾನೆ, ಬಿತ್ತುವ ಮೊದಲು ನೆಲವನ್ನು ಉತ್ತು ಸರಿಗೊಳಿಸುತ್ತಾನೆ, ಎಂಬುದೇನೋ ನಿಜ. ಸ್ವಾಭಾವಿಕ

ವಾಗಿ ಹತ್ತು ಹೂಗಳು ಬಿಡುವಲ್ಲಿ ತೋಟಗಾರನ ಪ್ರಯತ್ನದಿಂದ ಹೂಗಳ ಸಂಖ್ಯೆ ಕೆಲವು ಪಾಲಷ್ಟು ಹೆಚ್ಚಬಹುದು. ಹೂ ಬಿಡುವ ಕಾಲಕ್ಕಿಂತ ಕೊಂಚ ಸಮಯ ಮುಂದಾಗಿಯೇ ಮೊಗ್ಗೆಗಳು ಹುಟ್ಟಿಬರಬಹುದು. ಆದರೆ ಈ ಮೊಗ್ಗೆಗಳು ಅರಳಿ ವಿಕಸಿತವಾಗುವ ಕಾಲವನ್ನು ಆತನು ತನ್ನ ಕೈಯೊಳಗೆ ತನ್ನ ಆಧೀನವಾಗಿ ಇರಿಸಲಾರನು. ಮೊಗ್ಗೆಯು ತಾನಾಗಿಯೇ ಅರಳುತ್ತದೆ. ಆ ಮೇಲೆ ನಿಯಮಿತ ಕಾಲದಲ್ಲಿ ತಾನಾಗಿಯೇ ಮಿಡಿ ಕಾಯಿ ಹೀಚು ಹಣ್ಣುಗಳಾಗಿ ಮಾರ್ಪಡುತ್ತದೆ. ಇದು ಪ್ರಕೃತಿಯ ಗುಣ. ಇದೇ ರೀತಿಯಲ್ಲಿ ಮಕ್ಕಳ ಇಂದ್ರಿಯಗಳ ಶಕ್ತಿಯನ್ನು ಉಪಾಧ್ಯಾಯನು ಸಾಹಸದಿಂದ ಹೆಚ್ಚಿಸಬಹುದು. ಆದರೆ ಅವರಲ್ಲಿ ತೋರುವ ಗುಣಗಳನ್ನು ಅರಳುವಂತೆ ಮಾಡುವುದಕ್ಕೆ ಅಧಿಕಾರವು ಉಪಾಧ್ಯಾಯನದಲ್ಲ. ಈ ಗುಣಗಳೂ ಬಾಹ್ಯ ಇಂದ್ರಿಯಗಳ ಮತ್ತು ಅಂತರಿಂದ್ರಿಯಗಳ ಶಕ್ತಿಯೂ ತಾನಾಗಿಯೇ ಬೆಳೆಯಬೇಕು. "ಒಂದು ಕುದುರೆಯನ್ನು ಹರಿಯುವ ನೀರಿನ ಬಳಿಗೆ ಒಬ್ಬನೆ ಸಾಗಿಸಿಕೊಂಡು ಹೋಗ ಬಹುದು. ಆದರೆ ಅದು ಒಲ್ಲದಿದ್ದರೆ ಹತ್ತು ಮಂದಿಯಿಂದಲೂ ಆ ಕುದುರೆಗೆ ನೀರು ಕುಡಿಯುವಂತೆ ಮಾಡಲು ಸಾಧ್ಯವಿಲ್ಲ" ವೆಂದು ಇಂಗ್ಲಿಷ್ ಭಾಷೆಯಲ್ಲಿ ಒಂದು ಗಾದೆ ಇದೆ. ಅಂದರೆ ಉಪಾಧ್ಯಾಯನ ಪ್ರಯತ್ನಕ್ಕೂ ಮಿಕ್ಕಿ ಮಕ್ಕಳ ಸ್ವತಂತ್ರ ಬುದ್ಧಿಯೇ ಸಾಹಸ ಮಾಡಬೇಕು ಎಂದು ಇದರ ಅರ್ಥ. ಈ ಬಗೆಯ ವ್ಯಕ್ತಿ ಸ್ವಾತಂತ್ರ್ಯವು ಫ್ರೊಬೆಲನ ಕಾರ್ಯಕ್ರಮದಲ್ಲಿ ಅಷ್ಟೊಂದು ಇಲ್ಲ. ಅವರಲ್ಲಿ ಉಪಾಧ್ಯಾಯನು ಇಂಥಿಂಥ ಕೆಲಸಗಳನ್ನೆ ಮಕ್ಕಳಿಂದ ಮಾಡಿಸಬೇಕೆಂದು ನಿರ್ಣಯ ಮಾಡಿದ್ದಾನೆ; ಮತ್ತು ಅವನ್ನು ತಪ್ಪದೆ ಶ್ರದ್ಧೆಯಿಂದ ಮಾಡಿಸು ತ್ತಾನೆ. ಇದು ಪ್ರಕೃತಿಯ ಕ್ರಮಕ್ಕೆ ವಿರೋಧವಾದದ್ದು, ಆದ್ದರಿಂದ ಪ್ರಕೃತಿಯ ಕ್ರಮವನ್ನೇ ಅನುಸರಿಸಬೇಕು, 'ಇದನ್ನು ಮಾಡು, ಇದನ್ನು ಮಾಡಬೇಡ' ಎಂದು ನಿರ್ಬಂಧ ಹಾಕುವ ಬದಲಾಗಿ ಮಕ್ಕಳು ತಮ್ಮ ಲ್ಲಿರುವ ಶಕ್ತಿಗಳನ್ನು ಪ್ರಯೋಗಿಸಲಿಕ್ಕೆ ಉಪಾಧ್ಯಾಯನು ಕೈಗಂಬವಾಗ ಬೇಕು ಎಂಬ ತತ್ವವನ್ನು ಡಾ॥ ಮೊಂಟೆಸೋರಿಯವರು ಪ್ರತಿಪಾದಿಸಿದರು.

ಇವರು 19ನೇ ಶತಮಾನದ ಆದಿಯಲ್ಲಿ ಇಟಲಿಯಲ್ಲಿ ವೈದ್ಯ ಪರೀಕ್ಷೆ ಯನ್ನು ಕೊಟ್ಟು ಮೊತ್ತಮೊದಲು ವೈದ್ಯರಾಗಿದ್ದರು. ತನ್ನ ಚಿಕಿತ್ಸಾ

ಕ್ರಮವನ್ನು ಸಾಗಿಸುವ ಸಂದರ್ಭದಲ್ಲಿ ಅಂಗವಿಹೀನರಾಗಿದ್ದ ಅಥವಾ ಇಂದ್ರಿಯಗಳಲ್ಲಿ ಊನವಿದ್ದ ಮಕ್ಕಳನ್ನು ನೋಡಿಕೊಳ್ಳುವ ಸಂದರ್ಭ ಇವರಿಗಿತ್ತು. ಇವರು ಸ್ತ್ರೀಯಾಗಿದ್ದು ಇಂಥ ಮಕ್ಕಳ ಮೇಲೆ ಕನಿಕರ ಹುಟ್ಟಿದರೆ ಅದೊಂದು ಆಶ್ಚರ್ಯವಲ್ಲ. ಈ ಇಂದ್ರಿಯಗಳ ಊನವಿದ್ದ ಮಕ್ಕಳಿಗೆ ಆ ಇಂದ್ರಿಯಗಳ ಸಹಾಯವನ್ನು ಹೇಗೆ ಬೆಳೆಯಿಸ ಬಹುದು ಎಂಬ ವಿಚಾರವು ಇವರ ಮನಸ್ಸಿಗೆ ಹತ್ತಿ ಅಂಥವರ ಆರೈಕೆಗೆ ಇವರು ಒಂದು ಆಶ್ರಮವನ್ನು ಸ್ಥಾಪಿಸಿದರು. ಅಲ್ಲಿ ಮಾಡಿಕೊಂಡ ಅನುಭವವನ್ನು ಅವರು ಸಾಮಾನ್ಯ ಮಕ್ಕಳ ವಿಷಯದಲ್ಲಿಯೂ ಹಚ್ಚುವ ಉದ್ದೇಶದಿಂದ ಹೊಸ ಶಾಲೆಗಳನ್ನು ಸ್ಥಾಪಿಸಿದರು. ಈ ಶಾಲೆಗಳಲ್ಲಿ ಮೂರರಿಂದ ಐದು ಅಥವಾ ಆರು ವರ್ಷದ ಚಿಕ್ಕ ಮಕ್ಕಳನ್ನು, ಮುಖ್ಯವಾಗಿ ಕಾರ್ಖಾನೆಗಳಲ್ಲಿ ಗೇಯುವವರ ಮಕ್ಕಳನ್ನು ಸಂಗ್ರಹಿಸಿ, ತನ್ನ ಅನುಭವಗಳ ಪ್ರಯೋಗಗಳನ್ನು ಅವರ ಮೇಲೆ ನಡಿಸಿದರು. ಈ ಕ್ರಮದ ಪ್ರಚಾರವು ಕೊನೆಗೆ ಯುರೋಪ ದಲ್ಲಿಯೂ ಅಮೇರಿಕದಲ್ಲಿಯೂ ಉಂಟಾಯಿತು. ಇವರು ಸ್ಥಾಪಿಸಿದ ಶಾಲೆಗಳಿಗೆ "ಮಕ್ಕಳ ಮನೆಗಳು" ಎಂದು ಹೆಸರು.

ಕೂಲಿಕಾರರ ಮಕ್ಕಳೆ ಈ ಶಾಲೆಗಳ ವಿದ್ಯಾರ್ಥಿಗಳು. ಹಿರಿಯರು ಅವರನ್ನು ಬೆಳಗ್ಗೆ ಈ ಶಾಲೆಗಳಿಗೆ ತಂದೊಪ್ಪಿಸುತ್ತಿದ್ದರು. ಸಾಯಂಕಾಲ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿ ಕರೆದುಕೊಂಡು ಹೋಗುತ್ತಿದ್ದರು. ಹೀಗಾಗಿ ಈ ಮಕ್ಕಳು ಸುಮಾರು ಎಂಟು ಅಥವಾ ಒಂಬತ್ತು ತಾಸು ಉಪಾಧ್ಯಾಯರ ಜೊತೆಯಲ್ಲಿಯೇ ಇರುತ್ತಿದ್ದರು. ಮಧ್ಯಾಹ್ನದ ಊಟವೂ ನಿದ್ರೆಯೂ ಶಾಲೆಯಲ್ಲಿಯೇ ಈ ಮಕ್ಕಳಿಗೆ ದೊರೆಯುತಿತ್ತು. ಒಂದು ದಿನದ ಕಾರ್ಯಕ್ರಮವನ್ನು ನೋಡಿದರೆ ಶಾಲೆಗೆ ಬಂದೊಡನೆ ಮಕ್ಕಳ ಉಡಿಗೆ ತೊಡಿಗೆಗಳ ನಿರ್ಮಲತ್ವದ ವಿಷಯವಾಗಿ ವಿಚಾರ ನಡೆಯುವುದು. ಅನಂತರ ಮಕ್ಕಳೇ ಶಾಲಾ ಕೋಣೆಗಳನ್ನು ಗುಡಿಸಿ ತಾವು ಕುಳಿತುಕೊಳ್ಳುವ ಆಸನಗಳನ್ನು ಕ್ರಮ ಪಡಿಸಿ ಇಡಬೇಕು. ಅನಂತರ ಉಪಾಧ್ಯಾಯಿನಿಯು ಮಕ್ಕಳೊಡನೆ ಮೃದು ನುಡಿಯಿಂದ ಮಾತುಕತೆ ಎತ್ತುವಳು. ಇದರಲ್ಲಿ ಹಿಂದಿನ ದಿನ ಮಕ್ಕಳು ಹೇಗೆ ಕಾಲವನ್ನು ಕಳೆದರು ಮುಂತಾದ ಪ್ರಶ್ನೆಗಳು ಇರುವವು. ಅನಂತರ ದೇವರ ಪ್ರಾರ್ಥನೆಯು ನಡೆಯುವುದು. ಆ ಮೇಲೆ

ಮಕ್ಕಳ ಜ್ಞಾನೇಂದ್ರಿಯಗಳ ಪಾಟವಕ್ಕೆ ಬೇಕಾದ ಸಾಮುಗ್ರಿಗಳು ಇರುವ
ಚಿಕ್ಕ ಕಪಾಟುಗಳಿಂದ ಮಕ್ಕಳು ತಮಗೆ ಇಷ್ಟವಿದ್ದ ವಸ್ತುಗಳನ್ನು ಎತ್ತಿ
ಕೊಂಡು ನೆಲದ ಮೇಲಾಗಲೀ ಮೇಜುಗಳ ಮೇಲಾಗಲೀ ಅಭ್ಯಾಸಗಳನ್ನು
ಮಾಡುವರು. ಈ ಅಭ್ಯಾಸಗಳು ಮಕ್ಕಳಿಗೆ ಒಂದು ಬಗೆಯ ಆಟವಾಗಿತ್ತು.
ಆಟವಾಡುವ ಕಾಲದಲ್ಲಿ ಉಪಾಧ್ಯಾಯಿನಿಯು “ಅದನ್ನು ಮಾಡಬೇಡ,
ಇದನ್ನು ಮುಟ್ಟಬೇಡ” ಎಂಬ ನಿರ್ಬಂಧಗಳನ್ನು ಹಾಕುತ್ತಿರಲಿಲ್ಲ.
ಮಕ್ಕಳು ಆಯಾಸಗೊಂಡರೆ ನೆಲಕ್ಕೆ ಹಾಸಿದ ಜಮಖಾನೆಯ ಮೇಲೆಯೇ
ನಿದ್ದೆ ಹೋಗುವರು. ಸಾಮಾನು ಸಾಹಿತ್ಯಗಳು ಹೇರಳವಿದ್ದುದರಿಂದ ಬಗೆ
ಬಗೆಯ ಆಟಗಳನ್ನು ಆಡಲಿಕ್ಕೆ ಅವಕಾಶವಿತ್ತು. ಆಟಗಳ ಕಾಲದಲ್ಲಿ
ಮಗು ತಪ್ಪಿ ಬಿದ್ದರೆ ತಾನೇ ಸರಿಪಡಿಸಿಕೊಳ್ಳಬೇಕಲ್ಲದೆ ಉಪಾಧ್ಯಾಯಿನಿಯು
ಸಹಾಯ ಮಾಡಬೇಕಾಗಿದ್ದಿಲ್ಲ. ಅನಂತರ ಗಂಟೆಬಾರಿಸಿದಾಗ ಮಕ್ಕ
ಳೆಲ್ಲರೂ ಗುಂಪು ಕೂಡಿ ಓಡುವುದು ಡ್ರಿಲ್ ಮಾಡುವುದು ಇತ್ಯಾದಿ
ಅಭ್ಯಾಸಗಳನ್ನು ಉಪಾಧ್ಯಾಯಿನಿಯ ಸೂಚನೆ ಮೇರೆಗೆ ಶಾಲಾಕೋಣೆಯ
ಹೊರಗಿನ ಬಯಲಿನಲ್ಲಿ ಮಾಡುವರು. ಆ ಮೇಲೆ ಊಟದ ಗಂಟೆಯಾಗು
ವುದು. ಪ್ರತಿ ದಿನಕ್ಕೆ ಇಂತಿಷ್ಟೇ ಮಕ್ಕಳು ತಿಂಡಿಯ ಸಾಮಾನುಗಳನ್ನು
ಇಕ್ಕುವ ಮತ್ತು ತಿಂಡಿ ತಿಂದಾದ ಮೇಲೆ ತಟ್ಟೆಪಾತ್ರೆಗಳನ್ನು ಎತ್ತಿ ನಿಯಮಿತ
ಸ್ಥಳದಲ್ಲಿ ಅವನ್ನು ತೊಳೆದು ಇಡುವ ಕಾರ್ಯವನ್ನು ವಹಿಸ ಬೇಕಾಗಿತ್ತು.
ಅನಂತರ ಮಕ್ಕಳಿಗೆ ಸ್ವಲ್ಪ ವಿಶ್ರಾಂತಿ ಸಿಗುವುದು. ಈ ಕಾಲದಲ್ಲಿ ಜಮ
ಖಾನೆಯ ಮೇಲೆ ಈ ಮಕ್ಕಳು ನಿದ್ದೆ ಹೋಗುವರು. ಆ ಮೇಲೆ ಪುನಃ
ಆಟಗಳಿಗೆ ಪ್ರಾರಂಭವಾಗುವುದು. ಅದರೊಂದಿಗೆ ಕೈ ಚಾಲಕದ ವೃತ್ತಿ
ಗಳನ್ನೂ ಮಾಡಲಾಗುವುದು. ಅನಂತರ ಶಾಲಾ ತೋಟದಲ್ಲಿ ಸಸ್ಯ ಗಿಡ
ಗಳನ್ನು ನೋಡಿಕೊಳ್ಳುವುದು, ಶಾಲೆಯಲ್ಲಿ ಸಾಕಿದ ಪ್ರಾಣಿಗಳಿಗೆ ಆಹಾರ
ನೀರನ್ನು ಕೊಟ್ಟು ಆರೈಕೆ ನೋಡಿಕೊಳ್ಳುವುದು ನಡೆಯುವುದು. ಹಾಡು
ಗಳು ಮಧ್ಯೆ ಮಧ್ಯೆ ಅಭ್ಯಾಸ ಮಾಡಲ್ಪಡುವುವು.

ಮೊಂಟೆಸೋರಿಯವರ ದೃಷ್ಟಿಯಲ್ಲಿ ಶಾಲಾ ಮಕ್ಕಳು ಅಂದರೆ ಒಂದು
ಚಿಕ್ಕ ಸಮಾಜ. ಈ ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ತನ್ನಲ್ಲಿ
ರುವ ಸ್ವಾಭಾವಿಕ ಶಕ್ತಿಗಳನ್ನು ಬೆಳೆಯಿಸುವಾಗ ಇತರರಿಗೆ ಬಾಧಕ

ಬಾರದಂತೆ ವರ್ತಿಸಲು ಕಲಿತುಕೊಳ್ಳಬೇಕು. ಇನಾಮು ಅಥವಾ ಶಿಕ್ಷೆ ಇವುಗಳ ಮೂಲಕ ಶಿಷ್ಟಾಚಾರವನ್ನು ಕಲಿಸಬೇಕೆಂಬ ಅಭಿಪ್ರಾಯಕ್ಕೆ ಈ "ಮಕ್ಕಳ ಮನೆಗಳಲ್ಲಿ" ಸ್ಥಾನವೇ ಇಲ್ಲ; ಅನ್ನುವಾಗ ಮಕ್ಕಳು ಸ್ವಾರ್ಥ ಪರರಾಗಿ ಒಬ್ಬರು ಇನ್ನೊಬ್ಬರಿಗೆ ಬಾಧೆ ಕೊಡದಂತೆ ನೋಡಿಕೊಳ್ಳುವ ಭಾರವು ಉಪಾಧ್ಯಾಯಿನಿಯದಿದ್ದರೂ, ತಮ್ಮ ತಪ್ಪನ್ನು ಮಕ್ಕಳು ತಾವೇ ಕಂಡು ಹಿಡಿದು ಸದ್ವರ್ತನವನ್ನು ಕೈಕೊಳ್ಳುವಂತೆ ಮಾಡುವುದು ಉಪಾಧ್ಯಾಯಿನಿಯ ಕರ್ತವ್ಯವಾಗಿದ್ದಿತ್ತು. ಮಕ್ಕಳ ವ್ಯಕ್ತಿಸ್ವಾತಂತ್ರ್ಯದಿಂದಲೇ ಅವು ತಮ್ಮನ್ನು ತಿದ್ದಿಕೊಳ್ಳುವಂತೆ ಉಪಾಧ್ಯಾಯಿನಿಯು ನೋಡಿಕೊಳ್ಳಬೇಕು. ಇದಕ್ಕೆ ಉಪಾಧ್ಯಾಯಿನಿಯರಲ್ಲಿ ತಾಳ್ಮೆ ತುಂಬಾ ಇರಬೇಕು. ಗದರಿಸಿ ಕೆಲಸ ಮಾಡಿಸುವುದು ಸುಲಭ. ಆದರೆ ಈ ಕ್ರಮದಿಂದ ಅತಿಶಯವಾದ ಹಾನಿಯುಂಟಾಗುತ್ತದೆ. ತಾನು ಎಲ್ಲಿ ತಪ್ಪಿ ಬಿದ್ದೇನೋ, ಎಲ್ಲಿ ಉಪಾಧ್ಯಾಯಿನಿಯು ಕಣ್ಣು ಕೆರಳಿಸುವಳೋ ಎಂಬ ಭೀತಿಯೇ ಮಕ್ಕಳಲ್ಲಿ ವ್ಯಾಪಿಸಿ, ಮಕ್ಕಳ ವ್ಯಕ್ತಿ ಸ್ವಾತಂತ್ರ್ಯವು ಸಂಕುಚಿತವಾಗುತ್ತಾ ಕೇನೆಯ ಗಿಡದ ಮೇಲೆ ಕಲ್ಲಿಟ್ಟಂತಾಗುವುದು. ಉಪಾಧ್ಯಾಯಿನಿಯ ಪ್ರೀತಿಯನ್ನು ಸಂಪಾದಿಸುವುದೇ ಮಕ್ಕಳಿಗೆ ಸುಖ. ಈ ಪ್ರೀತಿಗೆ ಲಂಚವಾಗಿ ಮಕ್ಕಳು ಸದ್ವರ್ತನೆಯನ್ನು ಕೈಕೊಳ್ಳುವುದಲ್ಲ. ಅದಕ್ಕೆ ಬದಲಾಗಿ ತನ್ನ ತಪ್ಪನ್ನು ತಾನೇ ಕಂಡು ತನ್ನ ಓರಿಗೆಯವರಿಗೆ ತನ್ನಿಂದ ಉಂಟಾದ ಅಸುಖವನ್ನು ತಾನೇ ತಿಳಿದು, ತನ್ನ ಮನಸ್ಸಿನ ಮೇಲೆ ಲಗಾಮನ್ನು ಬಿಗಿಯುವ ಬಗೆಯ ಶಿಕ್ಷಣವು ಪ್ರಕೃತಿಗೆ ಸಿದ್ಧವಾದ ಮಾರ್ಗ. ಉಪಾಧ್ಯಾಯಿನಿಯ ಕೆಲಸವು ಮಕ್ಕಳ ವಾತಾವರಣವನ್ನು ವ್ಯವಸ್ಥೆಗೊಳಿಸಿ ಇಡುವುದು ಮಾತ್ರ. ಅದರ ಸುಖಾನುಭವವನ್ನು ಮಾಡಿಕೊಳ್ಳುವುದಕ್ಕೆ ಆ ಮಕ್ಕಳಿಗೇನೇ ಬಿಟ್ಟು ಬಿಡಬೇಕು. ಅಂದರೆ ನೈವೇದ್ಯಕ್ಕೆ ತಂದಿಟ್ಟ ಕಜ್ಜಾಯವನ್ನು ಮಗುವು ದುಡುಕಿ ಕೈಹಾಕಿ ತಿಂದು ಬಿಡುವಾಗ ಅವಿಚಾರದಿಂದ ಮಾಡಿದ ಆ ಕೆಲಸಕ್ಕೆ ಆ ಮಗುವನ್ನು ದಂಡಿಸುವುದು ಗದರಿಸುವುದು ನ್ಯಾಯವಲ್ಲ. ನೈವೇದ್ಯವಾಗುವ ಮೊದಲು ಇತರರು ಆ ಭಕ್ಷವನ್ನು ತಿನ್ನುವುದಿಲ್ಲ, ಹಾಗೆಯೇ ತಾನೂ ವರ್ತಿಸಬೇಕು, ಅದು ಶಿಷ್ಟಾಚಾರ, ಅದರಿಂದ ಇತರರ ಮನಸ್ಸಿಗೆ ನೋವಾಗುವುದಿಲ್ಲ ಎಂಬುದನ್ನು ಮಗುವು ತಾನಾಗಿಯೇ ತನ್ನ ವಿಚಾರದಿಂದ ಅರಿತುಕೊಳ್ಳಬೇಕು. ಸಂಸಾರದಲ್ಲಿರುವ

ವರೆಗೆ ಇದು ಮಹತ್ತ್ವಾದ ಉಪದೇಶವೆಂದು ನೆನಸಬೇಕಾಗುತ್ತದೆ. ಕಾನೂನಿನ ನಿರ್ಬಂಧದ ಕಲಂಗಳನ್ನು ಹೆಚ್ಚಿಸುವುದರಿಂದ ತಕ್ಷೀರುಗಳ ಸಂಖ್ಯೆ ಏನಾದರೂ ಕಡಿಮೆಯಾಗುವುದಿಲ್ಲ. ಅದಕ್ಕೆ ಬದಲಾಗಿ ಕಾನೂನಿನ ಪುಸ್ತಕವೂ ಬೆಳೆಯುತ್ತದೆ. ತಕ್ಷೀರುಗಳ ಸಂಖ್ಯೆಯೂ ಹೆಚ್ಚಾಗುತ್ತದೆ. ಜನರ ಬುದ್ಧಿಯು ತಕ್ಷೀರುಗಳನ್ನು ಮಾಡಿದರೂ ಯಾವ ಉಪಾಯದಿಂದ ಶಿಕ್ಷೆಯನ್ನು ತಪ್ಪಿಸಿಕೊಳ್ಳಬಹುದು ಎಂದು ಚಿಂತಿಸುವ ಕಡೆಗೆನೇ ಓಡಾಡುತ್ತದೆ. ಇದು ಸಮಾಜದ ಸುಖಕ್ಕೆ ಹಾನಿಕರ. ಅದಕ್ಕೆ ಬದಲಾಗಿ ತಕ್ಷೀರುಗಳನ್ನು ಮಾಡುವುದು ಅಸಹ್ಯ ವರ್ತನೆ, ಅಸಭ್ಯ ವರ್ತನೆ, ಅದರಿಂದ ಇತರರ ಮನಸ್ಸಿಗೆ ನೋವು ಆಗುತ್ತದೆ ಎಂಬ ಸದಸದ್ವಿವೇಕವು ಜಾಗೃತಿಯಾಗುವುದು ಸಮಾಜಕ್ಕೆ ಸುಖದಾಯಕವಾಗುತ್ತದೆ. ಸಂಸಾರದಲ್ಲಿ ಮನಸ್ಸನ್ನು ಆಕರ್ಷಿಸುವ ದುಶ್ಚಾಳಿಗಳು ಅನೇಕ ಇವೆ ಎಂಬ ನಿಮಿತ್ತದಿಂದ ಸಂಸಾರವನ್ನು ತ್ಯಜಿಸಿ ವೈರಾಗಿಯಾಗುವುದು ಲೋಕಹಿತವೂ ಅಲ್ಲ, ಸುಸಾಧ್ಯವೂ ಅಲ್ಲ. ಅದಕ್ಕೆ ಬದಲಾಗಿ ಸಂಸಾರದಲ್ಲಿದ್ದರೂ ಅಂಥ ಚಾಳಿಗಳಿಂದ ನಿರ್ಲಿಪ್ತನಾಗಿರುವುದು ಮತ್ತು ಅದಕ್ಕೆ ಬೇಕಾದ ಮನೋದಾರ್ಢ್ಯವನ್ನು ಬೆಳೆಯಿಸಿಕೊಳ್ಳುವುದು, ಇವೇ ಲೋಕಹಿತವಾದ ವಿಧಾನ. ಈ ರೀತಿಯಲ್ಲಿ ಮಕ್ಕಳನ್ನು ತರಬೇತು ಮಾಡುವುದೇ ಶಿಕ್ಷಣ. ಅದನ್ನು ಕೈಕೊಳ್ಳುವವನೇ ಶಿಕ್ಷಕನು. ಅವನು ಬರೆ ಅಧ್ಯಾಪಕ, ಬೋಧಕರಿಗಿಂತಲೂ ಮೇಲಿನ ಅಂತಸ್ತಿನಲ್ಲಿರುವನು.

ಫ್ರೊಬೆಲನ ಶಿಕ್ಷಣಕ್ರಮದಲ್ಲಿಯೂ ಮೊಂಟೆಸೋರಿಯ ಕ್ರಮದಲ್ಲಿಯೂ ಜ್ಞಾನೇಂದ್ರಿಯಗಳ ಪಾಟನಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ಆದರೆ ಕಿಂಡರ್ ಗಾರ್ಟನಿಗಿಂತ "ಮಕ್ಕಳ ಮನೆಗಳಲ್ಲಿ" ಇಂದ್ರಿಯ ಪಾಟವದ ಸಾಹಿತ್ಯ ಸನ್ನಾಹಗಳೂ ರೀತಿಗಳೂ ಅಧಿಕವಾಗಿವೆ. ಬರೇ ಸ್ಪರ್ಶೇಂದ್ರಿಯದ ವಿಷಯವನ್ನೇ ಎತ್ತಿಕೊಂಡರೂ, ನಯ, ದೊರಗು, ಗಟ್ಟಿ, ಮಿದು, ಉಷ್ಣ, ಶೀತ, ನೆಟ್ಟಗೆ, ಡೊಂಕು, ಭಾರ, ಹಗುರ, ಇತ್ಯಾದಿಗಳನ್ನು ಬಹು ಸೂಕ್ಷ್ಮ ರೀತಿಯಿಂದ ಗೊತ್ತು ಹಚ್ಚಲಿಕ್ಕೆ ಏರ್ಪಾಡುಗಳು ಇವೆ. ಮಕ್ಕಳ ಕಣ್ಣುಗಳನ್ನು ಮುಚ್ಚಿದರೂ ಅವು ಈ ವ್ಯತ್ಯಾಸಗಳನ್ನು ಗೊತ್ತು ಹಚ್ಚುವುದಕ್ಕೆ ಅಭ್ಯಾಸ ಮಾಡಿಸಲಾಗುತ್ತದೆ. ಅದೇ ರೀತಿಯಲ್ಲಿ ರುಚಿಯ ವ್ಯತ್ಯಾಸಗಳು

ಆಕಾರ ಬಣ್ಣಗಳ ವ್ಯತ್ಯಾಸಗಳು, ವಾಸನೆಯ ವ್ಯತ್ಯಾಸಗಳು ಮುಂತಾದುವುಗಳನ್ನು ಬಹು ಸೂಕ್ಷ್ಮ ರೀತಿಯಿಂದ ಮಕ್ಕಳು ಗೊತ್ತು ಮಾಡಿಕೊಳ್ಳುತ್ತವೆ. ಇದರೊಂದಿಗೆ ಓದು ಬರಹ ಲೆಕ್ಕಗಳ ಪರಿಚಯವೂ ಆಗುತ್ತಿದೆ. ಈ ಜ್ಞಾನವೂ ಇಂದ್ರಿಯಗಳ ಸಹಾಯದಿಂದಲೇ ಸಾಗುತ್ತದೆ. ಮನಸ್ಸನ್ನು ನ್ಯಾಯವಾದ ರೀತಿಯಲ್ಲಿ ತಿದ್ದುವುದು, ಮಕ್ಕಳ ನ್ಯಾಯವಾದ ಚಟುವಟಿಕೆಗೆ ಧಾರಾಳವಾಗಿ ಸೌಕರ್ಯಗಳನ್ನು ಒದಗಿಸಿಕೊಡುವುದು, ಮತ್ತು ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ಶಕ್ತಿಯನ್ನು ವ್ಯವಸ್ಥಿತ ರೀತಿಯಲ್ಲಿ ವರ್ಧಿಸುವುದು, ಅವರ ಆತ್ಮಗೌರವ ಧೃಢ ಚಿತ್ತಗಳನ್ನು ರೂಪುಗೊಳಿಸಲಿಕ್ಕೂ ಒಪ್ಪೆಕೊಡಲಿಕ್ಕೂ ಸಹಾಯವಾಗುತ್ತದೆ ಎಂಬದು ಡಾ। ಮೊಂಟಿಸೋರಿಯವರ ಮುಖ್ಯ ತತ್ವ. ಇಲ್ಲಿ ಉಪಾಧ್ಯಾಯನ ಮಾರ್ಗದರ್ಶಕತೆಗಿಂತಲೂ ಮಕ್ಕಳ ವ್ಯಕ್ತಿಸ್ವಾತಂತ್ರ್ಯದ ಲಕ್ಷ್ಯವು ಚೆನ್ನಾಗಿ ಪೂರೈಸುತ್ತಿದೆ.

(ಪ್ರೊಜೆಕ್ಟ್ ಮೆಥಡ್) ಉದ್ದೇಶಪೂರ್ವಕ ಚಟುವಟಿಕೆ

24ನೆಯ ಅಧ್ಯಾಯ

ಸಾಮಾನ್ಯ ಶಿಕ್ಷಣ, ಕಿಂಡರಗಾರ್ಟನ್ ಕ್ರಮ, ಮೊಂಟಿಸೋರಿ ವ್ಯವಸ್ಥೆ ಇವನ್ನು ಹಿಂದೆ ಟೀಕಿಸಿದೆವು. ಶಿಕ್ಷಣ ಕ್ರಮವು ಇನ್ನೂ ಇನ್ನೂ ಹೊಸ ಮಾರ್ಗಗಳನ್ನು ಕಡಿದುಕೊಂಡು ಹೋಗುತ್ತಿದೆ. ಇತ್ತೀಚೆಗೆ ಹಳ್ಳಿಗಳ ಅನುಕೂಲತೆಗೆ ಸರಿಯಾಗಿರುವ ಲೋಕವ್ಯವಹಾರಜ್ಞಾನವನ್ನು ಧ್ಯೇಯವಾಗಿಟ್ಟು, ಅದಕ್ಕೆ ಬೇಕಾಗುವಷ್ಟೆ ವಿಷಯಗಳನ್ನು ಮಕ್ಕಳ ಚಟುವಟಿಕೆಯ ಮೂಲಕ ಕಲಿಸತೊಡಗಿರುವುದೇ ಈ ನೂತನ ಮಾರ್ಗ. ಇದರಲ್ಲಿ ಜೀವನ ಕಾರ್ಯವು ಸುಲಭವಾಗಿ

ಕೈಗೂಡುವಂತೆ ಉದ್ದೇಶವಿಟ್ಟು, ಮಗುವಿಗೆ ಅಂಥ ಉದ್ದೇಶಕ್ಕೆ ಅಗತ್ಯವಿರುವ ಅನುಭವವನ್ನು ಅದರ ಚಟುವಟಿಕೆಯ ಮೂಲಕ ಕೊಡುತ್ತಾರೆ. ಈ ಕ್ರಮವನ್ನು ಮಧ್ಯ ಅಮೇರಿಕದ ಕೊಲುಂಬಿಯಾ ಯುನಿವರ್ಸಿಟಿಯ ಪ್ರೊಫೆಸರ್ ಡಬ್ಲ್ಯು. ಯಚ್. ಕಿಲಪೆಟ್ರಿಕ್ ಎಂಬಾತನು ಪ್ರಚಾರಕ್ಕೆ ತಂದನು. ಈಗ ಇದು ನಮ್ಮ ಹಿಂದುಸ್ಥಾನದಲ್ಲಿಯೂ ಮೊಗಾ ಎಂಬಲ್ಲಿ ಮತ್ತು ಇನ್ನಿತರ ಸ್ಥಳಗಳಲ್ಲಿ ಕ್ರೈಸ್ತ ಮಿಶನರಿಗಳಿಂದ ಪರೀಕ್ಷಾರ್ಥವಾಗಿ ಏರ್ಪಡಿಸಲ್ಪಟ್ಟು, ಅದರ ಫಲಿತಾಂಶವು ಸಮಾಧಾನಕರವಾಗಿ ಕಂಡುಬಂದಿದೆ.

ಈ ಕ್ರಮವು ಹಿಂದಿನ ಕ್ರಮಗಳಿಂದ ಹೇಗೆ ಭಿನ್ನವಾಗಿದೆ ಎಂದು ವಿಚಾರಿಸೋಣ. ಉದಾಹರಣೆಗಾಗಿ ಭೂಗೋಲವಿಚಾರವನ್ನು ಎತ್ತಿ ಒಂದು ಮಗುವಿಗೆ ಆತನ ಜಿಲ್ಲೆಯ ಮುಖ್ಯ ಪಟ್ಟಣದ ಅನುಭವವನ್ನು ಕೊಡುತ್ತೇವೆ ಎನ್ನೋಣ. ಸಾಮಾನ್ಯ ಶಿಕ್ಷಣ ಕ್ರಮದಲ್ಲಿ ಆ ನಗರವನ್ನು ಕುರಿತು ಬರೆದ ಪುಸ್ತಕದಿಂದ ಉಪಾಧ್ಯಾಯನು ಹಲವು ಪುಟಗಳನ್ನು ಓದಿಸುತ್ತಾನೆ. ಆ ನಗರದ ಆಡಳಿತೆಯ ಕ್ರಮ ಹೇಗಿದೆ, ಯಾವ ಮುಖ್ಯ ಕಟ್ಟಡಗಳೂ ಆಫೀಸುಗಳೂ ಅಲ್ಲಿ ಇವೆ, ಅಲ್ಲಿ ಮ್ಯುನ್ಸಿಪಾಲಿಟಿ ಇದೆಯೊ, ಆ ನಗರದ ಜನಸಂಖ್ಯೆ ಎಷ್ಟು, ಯಾವ ಜಾತಿಮತಗಳು ಇವೆ, ಆಮದು ರಫ್ತು ಏನಿದೆ, ಆ ನಗರವು ಹೊಳೆಯ ಅಥವಾ ಕಡಲ ದಂಡೆಯಲ್ಲಿದೆಯೋ ಇತ್ಯಾದಿ ವಿವರವನ್ನು ಓದಿಸಿ ಉರುಹಾಕಿಸಬಹುದು. ಆ ಮಗು ಬೆಳೆದ ಮೇಲೆಯೂ ಈ ಅನುಭವವು ಆತನಿಗೆ ವಿಶೇಷ ಫಲಕಾರಿಯಾಗುವುದಿಲ್ಲ. ಕಿಂಡರಗಾರ್ಟನ ಕ್ರಮದಲ್ಲಿ ಕಲಿಸುವ ಉಪಾಧ್ಯಾಯನು ಈ ನಗರದ ನಕ್ಷೆಯನ್ನು ಹಿಡಿದು ಅದರ ಮೇರೆಗೆ ಯಾವ ಕಡೆ ಎತ್ತರ, ಎಲ್ಲಿ ಹಳ್ಳವಾಗಿದೆ, ಎಲ್ಲಿ ತಿಟ್ಟುಗಳಿವೆ, ಯಾವ ಮುಖ್ಯ ರಸ್ತೆಗಳಿವೆ, ಆ ರಸ್ತೆಗಳಲ್ಲಿ ಯಾವ ದೊಡ್ಡ ಕಟ್ಟಡಗಳನ್ನು ಬೇರೆ ಬೇರೆ ಚಿಹ್ನೆಗಳಿಂದ ಗುರುತಿಸಬಹುದು ಎಂದು ಗೊತ್ತು ಹಚಿಸುವುದಲ್ಲದೆ, ಅವರಂತೆ ಒಂದು ಪಟವನ್ನು ಮಕ್ಕಳಿಂದ ತಯಾರಿಸುತ್ತಾನೆ. ಆಮದು ರಫ್ತಾಗುವ ವಸ್ತುಗಳ ಮಾದರಿಗಳನ್ನು ಸಂಗ್ರಹಿಸಿ ಮಕ್ಕಳಿಗೆ ತೋರಿಸುತ್ತಾನೆ. ಆ ಮೇಲೆ ಮಣ್ಣಿನಿಂದಾಗಲಿ ಸೀಮೆಸುಣ್ಣದಿಂದಾಗಲಿ ಆ ನಗರದ ನಕಾಶವನ್ನು ಮಾಡಿಸಿ, ತಾನು

ಹೇಳಿಕೊಡುವ ಅನುಭವವೆಲ್ಲ ಮಗುವಿನ ಮನಸ್ಸಿಗೆ ಅಂಟಿಕೊಳ್ಳುವಂತೆ ಮಾಡುತ್ತಾನೆ. ಆ ಮೇಲೆ ಆ ಪಟದ ಸಹಾಯದಿಂದ ಆ ಮಗುವು ಆ ನಗರದಲ್ಲಿ ಬೇಕಾದ ಕಟ್ಟಡಗಳನ್ನೊ ಆಫೀಸುಗಳನ್ನೊ ಸಂದರ್ಶಿಸಬಹುದು. ಆದರೆ ಇದರಲ್ಲಿ ಮಗುವಿನ ಚಟುವಟಿಕೆಯೊಂದಿಗೆ ಉಪಾಧ್ಯಾಯನ ಪ್ರಯತ್ನವೂ ತುಂಬಾ ಇದೆ. ಮೊಂಟೆಸೋರಿ ಕ್ರಮದಿಂದ ಕಲಿಸುವ ಉಪಾಧ್ಯಾಯನು ಈ ಮಗುವನ್ನು ತಾನೆ ಆ ನಗರಕ್ಕೆ ಕೊಂಡು ಹೋಗುತ್ತಾನೆ, ಮತ್ತು ಆ ನಗರದ ಪಟವನ್ನು ಆತನ ಕೈಯಲ್ಲಿ ಕೊಡುತ್ತಾನೆ. 'ಮಗು! ನಿನಗೆ ಬೇಕಾದಲ್ಲಿ ತಿರುಗಿಕೊಂಡು ಬಾ' ಎನ್ನುತ್ತಾನೆ. ಪಟದಲ್ಲಿ ಯಾವುದೊಂದನ್ನು ಹೇಗೆ ಗೊತ್ತು ಹಚ್ಚಬೇಕು ಎಂದು ಮಾತ್ರ ಆತನು ಮೊದಲು ಹೇಳಿ ಕೊಡುತ್ತಾನೆ. ಮಗುವು ತನಗೆ ಇಷ್ಟಬಂದಂತೆ ತಿರುಗಾಡಲು ಅಪ್ಪಣೆ ಸಿಕ್ಕಿತೆಂಬ ಸಂತೋಷದಿಂದ ಊರೆಲ್ಲ ಸುತ್ತಿ ಸಾಯಂಕಾಲ ಬಂದೊಡನೆ 'ಮಗು ಏನೇನನ್ನು ನೋಡಿದೆ?' ಎಂದು ವಿಚಾರಿಸುತ್ತಾನೆ. ತಾನು ಕಂಡದ್ದನ್ನೆಲ್ಲ ಅದು ಅತಿ ಉತ್ಸಾಹದಿಂದ ವಿವರಿಸುತ್ತದೆ. ತನಗೆ ಎಲ್ಲೆಲ್ಲಿ ಪಟವಿದ್ದರೂ ದಾರಿ ತಪ್ಪಿತು, ದಾರಿಯಲ್ಲಿ ಎಂಥೆಂಥ ಜನರು ನೋಡ ಸಿಕ್ಕಿದರು, ಎಂದು ಮುಂತಾದ ಹಲವು ನೋಟಗಳನ್ನು ಅದು ಹೇಳಿ ಬಿಡುತ್ತದೆ. ಮರುದಿನ ಉಪಾಧ್ಯಾಯನು 'ನೀನು ಇಂಥಿಂಥ ನೋಟಗಳನ್ನು ನೋಡಲಿಲ್ಲ, ಅವನ್ನು ಕಾಣುವುದಕ್ಕೆ ಹೀಗೆ ಹೀಗೆ ಹೋಗಬೇಕು' ಎಂದು ಪುನಃ ಬೆಳಗ್ಗೆ ಹೇಳುತ್ತಾನೆ. ಮಗು ಪುನಃ ಉಲ್ಲಾಸದಿಂದ ಹೊರಟು ಬಿಸಿಲು ಮುಂತಾದ್ದನ್ನು ಲಕ್ಷಿಸದೆ, ಎಲ್ಲವನ್ನು ನೋಡಿ ಸಂತೋಷಪಡುತ್ತದೆ. ತನಗೆ ತಿಳಿಯಲಾರದ ಸಂಗತಿಗಳನ್ನು ನೆನಪಿನಲ್ಲಿಟ್ಟು ಉಪಾಧ್ಯಾಯನೊಡನೆ ಪ್ರಶ್ನಿಸುತ್ತದೆ. ಮಗುವಿಗೆ ಈ ಪ್ರಯಾಣವು ಅತಿ ವಿನೋದದ ಕಾಲ. ಪ್ರೊಜಕ್ಟ ಮೆಥಡಿನ ಮೇರೆಗೆ ಕಲಿಸುವ ಉಪಾಧ್ಯಾಯನು ಇಷ್ಟರ ಹವ್ಯಾಸಕ್ಕೆ ಹೋಗುವುದಿಲ್ಲ. ಮಗುವಿಗೆ ಶಾಲೆಯಲ್ಲಿ ಕಲಿಯುವ ವೇಳೆಯಲ್ಲಿ ಪುಸ್ತಕಗಳು ಬೇಕಾಗಿದ್ದರೆ ನಗರದಲ್ಲಿ ಅವನ್ನು ಎಲ್ಲಿ ಕೊಂಡುಕೊಳ್ಳಬೇಕು ಎಂಬ ಅನುಭವವನ್ನು ಮಾತ್ರ ಹೇಳಿಕೊಡುತ್ತಾನೆ. ಅದನ್ನು ಕೊಂಡುಕೊಳ್ಳಲು ಹೋಗುವ ದಾರಿಯಲ್ಲಿ ವೈಚಿತ್ರ್ಯಗಳೇನಾದರೂ ಕಂಡು ಬಂದರೆ ಆ ಕುರಿತು ಉಪಾಧ್ಯಾಯನು ಅನಂತರ ವಿವರಿಸಬಹುದು. ಆದರೆ ಮಗುವನ್ನು ಪೇಟೆಗೆ ಕಳುಹಿಸುವ ಉದ್ದೇಶವು

ಯಾವುದೋ ಅದನ್ನೆ ದೃಷ್ಟಿಪಥದಲ್ಲಿಟ್ಟು ಆ ಕಡೆಗೆನೆ ಮೊದಲು ಗಮನ ಕೊಡುತ್ತಾನೆ. ಉದ್ದೇಶವು ಮಗುವಿಗೆ ನಗರ ಸಂಚಾರದಿಂದ ಸಂತೋಷ ಹುಟ್ಟಿಸುವುದಲ್ಲ, ಪೇಟೆಯಲ್ಲಿ ಅವನಿಗೆ ಬೇಕಾದ ವಸ್ತುಗಳನ್ನು ಕೊಂಡು ಕೊಳ್ಳುವುದು, ಈ ಉದ್ದೇಶವೆ ಪ್ರಾಧಾನ್ಯ; ಉಳಿದುವೆಲ್ಲ ನಗರಸಂಚಾರದಲ್ಲಿ ಆತನಿಗೆ ಅಪ್ರಾಧಾನ್ಯ,

ಇನ್ನೊಂದು ಉದಾಹರಣೆಯನ್ನು ಎತ್ತಿಕೊಳ್ಳೋಣ. ಮಕ್ಕಳಿಗೆ ಘನ ಅಳತೆಯ ಭಾಗವನ್ನು ಕಲಿಸುವಾಗ, ಸಾಮಾನ್ಯ ರೀತಿಯ ಶಿಕ್ಷಕನು 'ಅಡಿಯ ವೃತ್ತದ ಚದರಕ್ಕೆ ಎತ್ತರದಿಂದ ಗುಣಿಸಿದರೆ ಉರುಟು ಕಂಬದ ಪರಿಮಾಣ ಸಿಗುತ್ತದೆ' 'ಅಡಿಯ ವೃತ್ತದ ಚದರಕ್ಕೆ ಎತ್ತರದ $\frac{1}{3}$ನೆ ಅಂಶ ದಿಂದ ಗುಣಿಸಿದರೆ ಶಂಕುವಿನ ಪರಿಮಾಣ ಸಿಗುತ್ತದೆ' ಎಂದು ಸೂತ್ರಗಳನ್ನು ಬಾಯಿಪಾಠ ಮಾಡಿಸಿ, ಅನೇಕಾನೇಕ ಲೆಕ್ಕಗಳನ್ನು ಮಾಡಿಸಬಹುದು. ಹಾಗೆ ಗುಣಿಸುವುದಕ್ಕೆ ಕಾರಣಗಳನ್ನು ಹೇಳುವ ತಾಳ್ಮೆ ಆತನಿಗಿಲ್ಲ. ಕಿಂಡರಗಾರ್ಟನ ಕ್ರಮದಲ್ಲಿ ಕಲಿಸುವವನು ಇದಕ್ಕೆ ಬೇಕಾದ ಘನಾಕೃತಿ ಗಳನ್ನು ಮಗುವಿನ ಮುಂದಿಟ್ಟು, ಇಡೀ ಎತ್ತರದಿಂದ ಏಕೆ ಗುಣಿಸಬೇಕು, $\frac{1}{3}$ನೆ ಅಂಶದಿಂದ ಏತಕ್ಕೆ ಗುಣಿಸಬೇಕು ಎಂಬದನ್ನು ಮಗುವು ತಾನಾಗಿ ಕಂಡು ಹಿಡಿಯುವುದಕ್ಕೆ ಸಹಾಯ ಮಾಡುತ್ತಾನೆ. ಮೊಂಟೆಸೊರಿ ಕ್ರಮದಲ್ಲಿ ಕಲಿಸುವವನು ಇಂಥ ಬಗೆಬಗೆಯ ತುಂಡುಗಳನ್ನು ಮಕ್ಕಳ ಕೈಯಲ್ಲಿ ಕೊಟ್ಟು ಆಯಾ ಆಕೃತಿಗಳನ್ನು ಮಾಡಿಸುವುದರಿಂದ ಮಗುವು ಈ ವಿಷಯವನ್ನು ತಾನಾಗಿ ತಿಳಿದುಕೊಳ್ಳುತ್ತದೆ. ಪ್ರೊಜಕ್ಟ ಮೆಥಡಿನಲ್ಲಿ ಕಲಿಸುವವನು 'ಒಂದು ಬಾವಿ ಅಗಿಯಬೇಕು' ಅಥವಾ 'ಒಂದು ಗೋಪುರ ಕಟ್ಟಬೇಕು,' 'ಒಂದು ಕದಿಕೆ ಕಟ್ಟಬೇಕು' 'ಒಂದು ಹುಲ್ಲು ಬಣವೆ ಕಟ್ಟಬೇಕು' ಇತ್ಯಾದಿಯಾಗಿ ಹೇಳಿ, ಅದರ ಆಕೃತಿಯನ್ನು ಮಾಡಿಸುವ ಸಂದರ್ಭದಲ್ಲಿ ಮಾತ್ರ ಈ ಆಕೃತಿಗಳ ಪ್ರಸ್ತಾಪವೆತ್ತಿ ಆ ಘನಾಕೃತಿಗಳ ಪರಿಚಯ ಮಾಡಿಸುತ್ತಾನೆ.

ಹೀಗನ್ನುವಾಗ ಆಯಾ ಉದ್ದೇಶವನ್ನು ಕಣ್ಣಮುಂದಿಟ್ಟುಕೊಂಡು ಅದಕ್ಕೆ ಅಗತ್ಯವಾದ ಚಟುವಟಿಕೆಯ ಮೂಲಕ ಹಳ್ಳಿಯ ಮಗುವು ತನ್ನ ಜೀವನವು ಸುಖದಾಯಕವಾಗುವುದಕ್ಕೆ ಎಷ್ಟು ಅನುಭವ ಬೇಕೊ ಅದನ್ನು

ಮಾತ್ರ ಪಡೆಯುತ್ತದೆ. ಹಿಂದೆ ಶರ್ಲಕ್ ಹೊವ್ಸ್ ಎಂಬ ಪತ್ತೆದಾರನು ಹೇಳಿದ್ದೆಂಬ ಮಾತಿನ ತತ್ವವಾದರೂ ಇದೇ. ಇಂದ್ರಿಯ ಪಾಟವಕ್ಕಾಗಿಯಾಗಲಿ ಅಥವಾ ಮಗುವಿನ ಸುಖಕರವಾಗುವ ಕಾಲಯಾಪನೆಯ ದೃಷ್ಟಿಯಿಂದಾಗಲಿ ಅತಿರೇಕವಾದ ಕೃತಕ ಸಾಹಿತ್ಯಗಳನ್ನು ಒದಗಿಸಿ, ಅವುಗಳ ಪ್ರಯೋಗದಲ್ಲಿ ಕಾಲಹರಣ ಮಾಡುವುದಕ್ಕಿಂತ ಮಗುವು ತೋಟವನ್ನು ಬೆಳಿಸುವಾಗಲೇ ಗಿಡಸಸ್ಯಾದಿಗಳ ರಚನೆ, ಬೆಳೆವಣಿಗೆಯ ಕ್ರಮ, ತೋಟದ ಫಲವನ್ನು ವಿಕ್ರಯಿಸುವಾಗಲೇ ಹಣ ಸಂಬಂಧವಾದ ಲೆಕ್ಕಗಳನ್ನು ಕಲಿತರೆ ಸಾಕು. ಈ ಪ್ರೊಜಕ್ಟ ಮೆಥಡಿನ ಶಾಲೆಗಳಲ್ಲಿ ಮಕ್ಕಳು ತಮ್ಮ ನಿವಾಸ ಗೃಹಗಳನ್ನು ತಾವೇ ಮಣ್ಣಿನಿಂದ ಕಟ್ಟುತ್ತಾರೆ, ಮಾಡು ಹೊದಿಸುತ್ತಾರೆ, ಗೋಡೆಗಳಿಗೆ ಸುಣ್ಣ ಬಳಿಯುತ್ತಾರೆ; ಇದರಿಂದ ಅವರಿಗೆ ಲೋಕ ವ್ಯವಹಾರ ಜ್ಞಾನವು ಬಹಳ ಬೇಗನೆ ಆಗುತ್ತದೆ. ಇಂಥ ಶಾಲೆಗಳಲ್ಲಿ ಕ್ಲಾಸುಗಳು, ಕಾಲ ನಿಯಾಮಕ ಪಟ್ಟಿ, ವಿಸ್ತಾರವಾದ ಪಾಠಪಟ್ಟಿ ಇವು ಇಲ್ಲ. ಈ ಎಲ್ಲಾ ವೃತ್ತಿ ಕೈಗಾರಿಕೆಗಳೊಂದಿಗೆ ಓದು ಬರಹ, ಲೆಕ್ಕ, ಚಿತ್ರಲೇಖನ ಇವೆಲ್ಲ ಸಾಗುತ್ತಿವೆ. ದೊಡ್ಡ ಮಕ್ಕಳಿಗೆ ಸಣ್ಣ ಮಕ್ಕಳು ತಮ್ಮ ಶಕ್ತ್ಯಾನುಸಾರವಾಗಿ ಸಹಾಯ ಮಾಡುತ್ತಿವೆ. ಹೊತ್ತಿಗೆ ಮಕ್ಕಳೇ ಅಡಿಗೆ ಮಾಡುತ್ತವೆ. ಉಪಾಧ್ಯಾಯನು ಹತ್ತರದಲ್ಲಿದ್ದು ಎಲ್ಲವನ್ನು ವ್ಯವಸ್ಥೆಯಿಂದ ನಡಿಸಿ ಅಗತ್ಯ ಬಿದ್ದಲ್ಲಿ ಸಹಾಯ ಮಾಡುತ್ತಾನೆ.

ಈ ಕ್ರಮದ ವ್ಯವಸ್ಥಾಪಕರು ಇದರ ಮೂಲತತ್ವಗಳನ್ನು ಹೀಗೆಂದು ವರ್ಣಿಸಿದ್ದಾರೆ:—(1) ಉದ್ದೇಶ: ಶಾಲೆಯಲ್ಲಿ ಕಲಿಯುವ ಪ್ರತಿಯೊಂದು ವಿಷಯವು ಮಗುವಿನ ಸಾಮಾಜಿಕ ಸ್ಥಿತಿ, ಆತನ ಜೀವನ ಕ್ರಮಕ್ಕೆ ಬಹಳವಾಗಿ ಹೊಂದಿಕೆಯಾಗಿರಬೇಕು. ನಿರ್ದಿಷ್ಟ ಉದ್ದೇಶವಿಲ್ಲದ ಕಾರ್ಯವು 'ಗುಡ್ಡೆಗೆ ಮಣ್ಣು ಹೊತ್ತಂತೆ' ನಿಸ್ಸಾರವಾಗುತ್ತದೆ. ಮಗುವಿಗೆ ವಾಸ್ತವವಾಗಿಯೂ ಅದರ ಮೇಲೆ ಪ್ರೇಮವಿರುವುದಿಲ್ಲ. ಅದನ್ನು ಆಟವಾಗಿಯೇ ಕೈಕೊಂಡರೆ ಅಂಥ ಬಗೆಬಗೆಯ ಆಟಗಳನ್ನು ಕಂಡು ಹಿಡಿಯುವುದೇ ಕಷ್ಟ. ಹಾಗೆ ನೂತನ ಆಟಗಳು ಬಾರದಿದ್ದರೆ ಹಳೆ ಆಟಗಳ ಮೇಲೆ ಬೇಗನೆ ಮಗುವಿಗೆ ಜುಗುಪ್ಸೆ ಹುಟ್ಟುತ್ತದೆ. ಒಮ್ಮೆ ಜೀವನ ಕ್ರಮಕ್ಕೆ ಅನುಸಾರವಾಗಿ ಉದ್ದೇಶವನ್ನು ಗೊತ್ತು ಹಚ್ಚಿದ ಮೇಲೆ, ಆ ಉದ್ದೇಶ

ಅಥವಾ ಪ್ರೊಜೆಕ್ಟ್ ಕೈಗೂಡುವುದಕ್ಕೆ ಸಾಕಷ್ಟು ವ್ಯವಧಾನವಿರಬೇಕು. ಆಗ ಆಸಕ್ತಿಯಿಂದ ಆ ಉದ್ದೇಶವನ್ನು ಪೂರೈಸುವುದಕ್ಕೆ ಮಕ್ಕಳಲ್ಲಿ ಉತ್ಸಾಹವು ಬರುವುದು. ಆಗ ಬರುವ ಎಡರುತೊಡರುಗಳು ಆತನ ಸಹನಶಕ್ತಿಯನ್ನು ಉಜ್ವಲಗೊಳಿಸಿ, ತನ್ನ ಕಾರ್ಯದಲ್ಲಿ ಜಯವೊದಗಿದ ಸಂಬಂಧ ಒಂದು ಬಗೆಯ ಆನಂದವನ್ನುಂಟು ಮಾಡುತ್ತವೆ. (2) ಫಲಿತಾಂಶದ ಅಭಿಮಾನ: ಹೀಗೆ ಪ್ರಯಾಸಪಟ್ಟು ಹೊಂದುವ ಫಲವು ತನ್ನ ಜೀವನ ಕ್ರಮಕ್ಕೆ ಪ್ರಯೋಜನಕಾರಿಯಾದೀತು ಎಂದು ಗೊತ್ತುಹಚ್ಚಿದ ಮಗುವಿಗೆ ಅದರ ಮೇಲೆ ವಾಸ್ತವವಾದ ಅಭಿಮಾನವುಂಟಾಗುತ್ತದೆ. (3) ಇಂಥ ಉದ್ದೇಶಪೂರ್ವಕ ಚಟುವಟಿಕೆಯು ಅದರಲ್ಲಿ ಅಭಿರುಚಿಯನ್ನು ಉಂಟು ಮಾಡಿ ಮಕ್ಕಳ ಮನಸ್ಸನ್ನು ಸಾಮಾನ್ಯ ವಿಷಯಗಳ ಮೇಲೆ ಇರುವುದಕ್ಕಿಂತ ಹೆಚ್ಚಾಗಿ ನೆಲೆ ನಿಲ್ಲಿಸುತ್ತದೆ. (4) ಈ ಅಭಿರುಚಿಯು ಕಾರ್ಯಸಾಧನೆಗೆ ಸ್ವಯಂಪ್ರೇರಕವಾಗುತ್ತದೆ. ಇದರಿಂದ ಈ ಕ್ರಮದಲ್ಲಿ ಶಿಕ್ಷಣವೆ ಜೀವನದ ಅಸ್ತಿವಾರ. ಸುಖ ಜೀವನವು ಶಿಕ್ಷಣದ ಧ್ಯೇಯ ಎಂಬದೇ ಈ ಕ್ರಮದ ಮುಖ್ಯ ಸಾರ. ಈ ಕ್ರಮದಲ್ಲಿ ಕಾಲನಿಯಾಮಕ ಪಟ್ಟಿ, ತಲೆಭಾರವಾಗುವ ಪಾಠಪಟ್ಟಿ, ತಲೆಮೆದುಳು ಕೆಡಿಸುವ ಪರೀಕ್ಷೆಗಳು ಇವುಗಳಿಗೆಲ್ಲ ಅರ್ಧ ಚಂದ್ರ ಪ್ರಯೋಗವೆ ಆಗುತ್ತದೆ. ಪ್ರಾಥಮಿಕ ಶಿಕ್ಷಣ ಅಥವಾ ಜನ ಸಾಮಾನ್ಯರ ಶಿಕ್ಷಣದಲ್ಲಿ ಈಗ ಸೇರಿಸಿಕೊಂಡಿರುವ ವಿಷಯಗಳು ಎಷ್ಟರ ಮಟ್ಟಿಗೆ ಅವರ ಸುಖಜೀವನಕ್ಕೆ ದಾರಿಯಾಗುತ್ತಿವೆ ಎಂಬದೇ ಕಷ್ಟತರ ಪ್ರಶ್ನೆಯಾಗಿದೆ. ಅನೇಕ ಸಲ ಪಾಠದ ಉದ್ದೇಶಕ್ಕೂ ಜೀವನದ ಉದ್ದೇಶಕ್ಕೂ ಅರ್ಥಾತ್ ಸಂಬಂಧವಿಲ್ಲ. ಎರಡನೆಯದಾಗಿ ಈ ಪಾಠಪಟ್ಟಿಯ ಭಾರವನ್ನು ಹೊರಲಿಕ್ಕೆ ಒಂದು ಶಾಲೆಯಲ್ಲಿರುವ ಉಪಾಧ್ಯಾಯರ ಸಂಖ್ಯೆ ವಿಪರೀತ ಏರಿಸ ಬೇಕಾಗುತ್ತದೆ. ಇದರಿಂದೆಲ್ಲ ಶಿಕ್ಷಣವು ಮಕ್ಕಳಿಗೆ ಹಿತಕಾರಿಯಾಗಿ ಕಡಿಮೆ ಖರ್ಚಿನಿಂದ ಸಾಗುವ ಬದಲು 'ಮಂತ್ರಕ್ಕಿಂತ ಉಗುಳೇ ಹೆಚ್ಚು' ಎಂಬಂತಾಗುತ್ತಿದೆ.

ಭಾರತದ ವರ್ಷದ ಪ್ರಾಚೀನ ಶಿಕ್ಷಣ ಕ್ರಮ

25ನೆಯ ಅಧ್ಯಾಯ

ಪಾಶ್ಚಾತ್ಯ ಶಿಕ್ಷಣ ಕ್ರಮದಲ್ಲಿ ಉಂಟಾದ ಬದಲಾವಣೆಗಳನ್ನು ಹಿಂದೆ ವಿವರಿಸಿದ್ದೇವೆ. ಹಿಂದುಸ್ಥಾನದಲ್ಲಿ ಪ್ರಾಚೀನ ಶಿಕ್ಷಣ ಕ್ರಮವು ಹೇಗಿತ್ತು ಎಂಬದನ್ನು ಇಲ್ಲಿ ಕೊಂಚ ಹೇಳುವುದು ಅಪ್ರಸಕ್ತವಾಗಲಾರದು. ವೇದ ಮತ್ತು ಪುರಾಣಗಳ ಕಾಲದಲ್ಲಿ ಶಿಕ್ಷಣವು ದೊಡ್ಡ ನಗರಗಳಲ್ಲಿ ಜರಗುತ್ತಿರಲಿಲ್ಲ. ಪವಿತ್ರವಾದ ನದಿಯ ದಂಡೆಯ ಮೇಲೆ ಅಥವಾ ಘೋರಾರಣ್ಯದಲ್ಲಿ ಕಟ್ಟಿದ ಪರ್ಣಾಶ್ರಮಗಳಲ್ಲಿ ಒಬ್ಬ ಋಷಿ ಅಥವಾ ಮುನಿಯ ಕೈಯಿಂದ ಸಾಗುತಿತ್ತು. ಈ ನಿರ್ಜನ ಪ್ರದೇಶದಲ್ಲಿ ಪ್ರಕೃತಿಯು ತನ್ನ ಅಂದಚಂದವನ್ನು ಈ ಗುರು ಶಿಷ್ಯರ ಮುಂದೆ ತೋರಿ ನಲಿದಾಡುವಂತಿತ್ತು. ದೇವತಾರ್ಚನೆಗೆ ಬೇಕಾದ ಪತ್ರೆ ಪುಷ್ಪಗಳು, ಯಜ್ಞಾಹುತಿಗೆ ಬೇಕಾದ ಸಮಿಧೆಗಳು ಪ್ರಕೃತಿಯ ಪರಿಚಯುವನ್ನು ಶಿಷ್ಯರಿಗೆ ಮಾಡಿ ಕೊಡುತಿದ್ದವು. ಸಂಸಾರದ ಕಷ್ಟ ಸುಖಗಳನ್ನು ತೃಣೀಕರಿಸುವ ಋಷಿ ಸಾನ್ನಿಧ್ಯದಿಂದ ಈ ಶಿಷ್ಯರಿಗೆ ಕಾಡಿನ ಹಿಂಸ್ರಜಂತುಗಳ ಭೀತಿಯು ತಲ್ಲಣಗೊಳಿಸುತ್ತಿರಲಿಲ್ಲ. 'ಪ್ರಕೃತಿಯು ಭಗವಂತನ ಅನುಲ್ಲಂಘ್ಯ ನಿಯಮಕ್ಕನುಸಾರವಾಗಿ ಕಾರ್ಯನಿರ್ವಾಹ ಮಾಡುವ ದಾಸಿ'ಯೆಂಬ ಬೋಧೆಯು ಈ ಶಿಷ್ಯರಿಗೆ ದಿನೇ ದಿನೇ ಸಿಗುತಿತ್ತು. "ಬ್ರಹ್ಮನೇ ಸತ್ಯ, ಜಗವೆಲ್ಲ ಮಿಥ್ಯ" ಎಂಬ ತತ್ವವನ್ನು ಅವರು ಸಾರ್ವದಾ ಪಠಿಸುತಿದ್ದರು.

ಕಾಲಕ್ರಮದಲ್ಲಿ ದೊಡ್ಡ ರಾಜ್ಯಗಳೂ ನಗರಗಳೂ ತಲೆಯೆತ್ತಿದವು. ಅವುಗಳನ್ನು ಆಳುವ ರಾಜರಿಗೂ ಕೃಷಿ ವಾಣಿಜ್ಯಗಳನ್ನು ಕೈಕೊಳ್ಳುವ ವೈಶ್ಯರಿಗೂ ಪಾರಂಪರ್ಯವಾಗಿ ತಮ್ಮ ವೃತ್ತಿ ವ್ಯಾಪಾರಗಳನ್ನು ನಡೆಸುತ್ತಿರುವಾಗ ಉಚ್ಚ ಶಿಕ್ಷಣವನ್ನು ಪಡೆಯುವ ಅಧಿಕಾರವಿದ್ದರೂ, ಅದಕ್ಕೆ ಸಾಕಷ್ಟು ವಿರಾಮ ದೊರೆಯುತ್ತಿರಲಿಲ್ಲ. ಹೀಗಾಗಿ ಧರ್ಮ, ಆಚಾರ,

ವೇದಶಾಸ್ತ್ರಗಳ ಪರಿಚಯು, ಮತ್ತು ಮಿಕ್ಕ ವರ್ಣಾಶ್ರಮಗಳಿಗೆ ಬೋಧಿಸುವ ಅಧಿಕಾರವು ಬ್ರಾಹ್ಮಣ ವರ್ಗಕ್ಕೆ ಕೈ ಸೇರಿ, ಸಮಾಜದಲ್ಲಿ ಉಚ್ಚ ಪದವಿಯು ಅವರ ಪದರಿನಲ್ಲಿ ಬಿತ್ತು. ಈ ವಿಚಾರಗಳಲ್ಲಿ ಪರಿಶ್ರಮ ಮಾಡಿದ ಬ್ರಾಹ್ಮಣ ರಿಗೆ ಜೀವನದ ಸೌಕರ್ಯವನ್ನು ಒದಗಿಸಿ ಕೊಡುವ ಭಾರವು ಇನ್ನಿತರ ವರ್ಗದವರದಾಯಿತು. ರಾಜರ ಮಂತ್ರಿಗಳಾಗಿಯೂ ಋತ್ವಿಕರಾಗಿಯೂ ಬ್ರಾಹ್ಮಣೇತರರಿಗೆ ಉಪದೇಶ ಮಾಡುವ ಬೋಧಕರಾಗಿಯೂ ಬ್ರಾಹ್ಮಣರು ಗುರುತ್ವವನ್ನು ಪಡೆದರು. ಇಂಥ ಅಧಿಕಾರವು ಕೈಸೇರಬೇಕಾದರೆ, ಹತ್ತಿಪ್ಪತ್ತು ವರ್ಷ ಋಷ್ಯಾಶ್ರಮಗಳಲ್ಲಿ ಶಿಷ್ಯರು ಕಾಲಯಾಪನೆ ಮಾಡ ಬೇಕಾಗಿತ್ತು.

ಗುರು ಶಿಷ್ಯರೊಳಗಿನ ಆ ಕಾಲದ ಸಂಬಂಧವು ತಂದೆ ಮಕ್ಕಳೊಳಗಿನ ಪ್ರೇಮ, ಭಕ್ತಿ ಬದ್ಧವಾಗಿತ್ತು. ಬಡವನಾಗಲಿ ಶ್ರೀಮಂತನಾಗಲಿ ಒಂದೇ ಗುರುವಿನ ಬಳಿಯಲ್ಲಿ ಓದಲಿಕ್ಕೆ ಪ್ರತಿಬಂಧಕಗಳಿರಲಿಲ್ಲ. ಕ್ಷತ್ರಿಯ ಕುಲೋತ್ಪನ್ನನಾದ ರಾಜಪುತ್ರ ದ್ರುಪದನೂ ನಿರ್ಗತಿಕ ಬ್ರಾಹ್ಮಣನಾದ ದ್ರೋಣಾಚಾರ್ಯನೂ ಒಬ್ಬನೇ ಗುರುವಿನ ಬಳಿಯಲ್ಲಿ ಪಾಠಹೇಳಿಸಿ ಕೊಂಡಿದ್ದರು. ಸಹಪಾಠಿಗಳಾಗಿದ್ದ ಕೃಷ್ಣಕುಚೇಲರ ಸ್ನೇಹವು ಅವರವರ ಸ್ಥಾನಭೇದಗಳಿಂದ ಕುದುರಲಿಲ್ಲವೆಂಬದು ಪುರಾಣ ಪ್ರಸಿದ್ಧವಾಗಿದೆ. ಶಿಕ್ಷಣಕಾಲದಲ್ಲಿ ಗುರು ಶುಶ್ರೂಷೆಯೇ ಶಿಷ್ಯನು ಗುರುವಿಗೆ ಅರ್ಪಿಸುವ ವೇತನ. ಕಟ್ಟಿಗೆ ಒಡೆಯುವುದು, ಪತ್ರಪುಷ್ಪಸಮಿಧೆಗಳನ್ನು ಸಂಗ್ರಹಿಸು ವುದು, ಆಶ್ರಮವನ್ನು ಗುಡಿಸಿ ಸಾರಿಸಿ ಚೊಕ್ಕಟವಾಗಿರಿಸುವುದು, ಅಗತ್ಯ ಬಿದ್ದಾಗ ಜನನಿವಾಸವಿದ್ದಲ್ಲಿಗೆ ಹೋಗಿ ಬೇಡಿ ತಂದ ಭಿಕ್ಷ್ಯವನ್ನು ಮೊದಲು ಗುರುವಿಗೆ ಸಮರ್ಪಿಸಿ, ಆತನ ಹಸಿವೆ ತಣಿದ ಮೇಲೆಯೇ ತಾನು ಆಹಾರ ವನ್ನು ತೆಕ್ಕೊಳ್ಳುವುದು, ಕಂದ ಮೂಲಫಲಗಳನ್ನು ಸಂಗ್ರಹಿಸುವುದು ಮುಂತಾದ ದಿನಚರ್ಯೆಯು ಮುಗಿದ ಅನಂತರವೇ ಗುರುವಿನಿಂದ ಪಾಠ ಪ್ರವಚನಗಳನ್ನು ಶಿಷ್ಯನು ಹೇಳಿಸಿಕೊಳ್ಳುವುದಿತ್ತು. ಹೀಗಾಗಿ ರಾತ್ರೆ ನಿದ್ರೆಯ ಹೊತ್ತಿನ ತನಕ ಶಿಷ್ಯನಿಗೆ ಕೈತುಂಬಾ ಕೆಲಸ. ಗರ್ಭಾಷ್ಟಮದಲ್ಲಿ ಉಪನಯನವಾಗಿ ಗುರುಕುಲವಾಸಕ್ಕೆ ಸೇರಿದ ಶಿಷ್ಯನ ಎಳೆಯ ಮನಸ್ಸನ್ನು ತಿದ್ದಿ, ಕಷ್ಟ ಸಹಿಷ್ಣುತೆ, ಜಿತೇಂದ್ರಿಯತ್ವ, ಭೂತದಯೆ, ಭಗವಂತನ

ಮೇಲಣ ಭಕ್ತಿ, ಅಧ್ಯಾತ್ಮವಿಚಾರ, ಇವನ್ನೆಲ್ಲಾ ಶಿಷ್ಯನಲ್ಲಿ ಬೇರೂರಿಸುವುದು ಗುರುವಿನ ಕರ್ತವ್ಯವಾಗಿತ್ತು. ವೇದ, ಶಾಸ್ತ್ರ, ಕಾವ್ಯ, ವ್ಯಾಕರಣ, ತರ್ಕ, ಜ್ಯೋತಿಷ್ಯ, ಸಂಗೀತ, ಮುಂತಾದವುಗಳನ್ನು ಕಲಿಯುತ್ತಿದ್ದರೂ, ಅಧ್ಯಾತ್ಮ ವಿಚಾರದ ಪ್ರಾಶಸ್ತ್ಯವು ಶಿಷ್ಯನ ಕಣ್ಣ ಮುಂದೆಯೇ ಸಾರ್ವದಾ ಇತ್ತು. ಈ ವಿದ್ಯೆಯು ಮುಗಿದ ಅನಂತರ ಯಥಾನುಶಕ್ತಿ ಗುರುದಕ್ಷಿಣೆಯನ್ನು ಸಮರ್ಪಿಸಿ, ತೀರ್ಥಾಟನೆ ಮಾಡಿ, ಅನಂತರವೇ ಗೃಹಸ್ಥಾಶ್ರಮವನ್ನು ಈ ಬ್ರಹ್ಮಚಾರಿಯು ಕೈಕೊಳ್ಳಬೇಕಿತ್ತು. ಅನಂತರ ತನ್ನ ಮಕ್ಕಳು ಗೃಹ ವಿಚಾರದ ಭಾರವನ್ನು ವಹಿಸಿಕೊಳ್ಳಲು ಸಮರ್ಥರಾದ ಮೇಲೆ ಈತನು ಕ್ರಮವಾಗಿ ವಾನಪ್ರಸ್ಥ, ಸನ್ಯಾಸಗಳಲ್ಲಿ ಕಳೆಯುವುದು ಆ ಕಾಲದ ಜೀವನದ ಧ್ಯೇಯ. ಈ ವ್ಯವಸ್ಥೆಯು ಬ್ರಹ್ಮ, ಕ್ಷತ್ರಿಯ, ವೈಶ್ಯರಿಗೆ ಮಾತ್ರ ಹೇಳಿದ್ದು. ಈ ಬಗೆಯ ಶಿಕ್ಷಣಕ್ಕೆ ಸ್ತ್ರೀಯರೂ ನಾಲ್ಕನೇ ವರ್ಗದವರೂ ಅಧಿಕಾರಿಗಳಲ್ಲ ಎಂದು ಆಗ ಭಾವಿಸಿದ್ದರೂ, ಉಚ್ಚ ತರದ ಶಿಕ್ಷಣವನ್ನು ಹೊಂದಿ ಪ್ರಸಿದ್ಧಿಗೆ ಬಂದ ಮಹಿಳೆಯರ ಹೆಸರುಗಳು ಪ್ರಾಚೀನ ಗ್ರಂಥಗಳಲ್ಲಿ ಕಂಡು ಬರುತ್ತಿವೆ.

ಈ ಪ್ರಾಚೀನ ಶಿಕ್ಷಣದ ಧ್ಯೇಯವನ್ನು ಸಂಗ್ರಹವಾಗಿ ಈ ರೀತಿ ಹೇಳಬಹುದು:—(1) ಶಿಷ್ಯರನ್ನು ಪ್ರಾಚೀನ ವೇದಶಾಸ್ತ್ರ ತಲೆಗಳಲ್ಲಿ ಪಾರಂಗತರಾಗಿ ಮಾಡುವುದು. (2) ಈ ಜ್ಞಾನದ ಮೂಲಕ ಅಧ್ಯಾತ್ಮ ವಿಚಾರದಿಂದ ಮೋಕ್ಷಸಾಧನೆ. (3) ಇದಕ್ಕೆ ಶಿಷ್ಯರಲ್ಲಿ ಶಿಷ್ಟಾಚಾರ, ಗುರುಭಕ್ತಿ, ಅಧಿಕಾರ ಮನ್ನಣೆ, ಆತ್ಮ ಸಂಯಮನ, ಜ್ಞಾನ ಪರಿಗ್ರಹದ ಕಾಂಕ್ಷೆ—ಇವನ್ನು ಕರ್ಮ ಮಾರ್ಗದಿಂದಲೇ ನೆಲೆಗೊಳಿಸುವುದು. (4) ಸುಖಾಕಾಂಕ್ಷೆಯಲ್ಲಿ ಮಿತಿಯ ಮೂಲಕ ಸಾರ್ವದಾ ಶಾಂತಚಿತ್ತರಾಗಿ ಸಮಾಜಕ್ಕೆ ಕ್ಷೇಮಕಾರಿಯಾಗುವಂತೆ ಅಭ್ಯಾಸ. (5) ಸ್ವಾವಲಂಬನ. ಚೆನ್ನಾಗಿ ವಿವೇಚಿಸಿದರೆ ಇವುಗಳೊಳಗೆ ನಿಕಟ ಸಂಬಂಧವಿದೆಯೆಂದು ತಿಳಿದು ಬರುವುದು. ಶಿಕ್ಷಣ ಕ್ರಮದಲ್ಲಿ ಶಿಷ್ಯನು ಗುರುವಿನ ಮೇಲೆ ತೀರಾ ಅವಲಂಬಿಸಿಕೊಂಡು ಇರುವ ಬದಲಾಗಿ ಸ್ವಂತ ವಿಚಾರ ಶಕ್ತಿಯನ್ನು ಪ್ರಯೋಗಿಸಿ, ಪ್ರತಿಯೊಂದು ಸೂತ್ರಕ್ಕೂ ಸಂದೇಹ ನಿವಾರಣೆಗೆ ಕಾರಣಗಳನ್ನು ತಾನೇ ಗೊತ್ತು ಹಚ್ಚುವ ಮತ್ತು ತನ್ಮೂಲಕ ಆ ಜ್ಞಾನವನ್ನು

ತನ್ನದಾಗಿ ಮಾಡಿಕೊಳ್ಳುವ ಪ್ರಯತ್ನವು ನಡೆಯುತಿತ್ತು ಎಂಬದಕ್ಕೆ ದೃಷ್ಟಾಂತಗಳು ಸಿಗುತ್ತಿವೆ.

ಯಾವ ವರೆಗೆ ಜನರಾಡುವ ಭಾಷೆಯೂ ಈ ಗ್ರಂಥಸ್ಥ ಭಾಷೆಯೂ ಒಂದೇಯಾಗಿತ್ತೋ ಅದು ವರೆಗೆ ಆ ಕ್ರಮವು ಸರಿ ಹೋಯಿತು. ಎಂದಿಗೆ ಸಂಸ್ಕೃತದಿಂದ ಪ್ರಾಕೃತ, ಅಲ್ಲಿಂದ ಹಲವು ಹದಿನೆಂಟು ಪ್ರಾಂತಿಕ ಭಾಷೆಗಳು ತಲೆಯೆತ್ತಿದವೋ ಅಂದಿಗೆ ಈ ಅಪರಿಚಿತವಾದ ಸಂಸ್ಕೃತ ಭಾಷೆ, ಅದರ ವ್ಯಾಕರಣ ಇತ್ಯಾದಿಗಳನ್ನು ಕಲಿಯುವುದರಲ್ಲಿಯೇ ಹೆಚ್ಚಿನ ಕಾಲವನ್ನು ವ್ಯಯ ಮಾಡಬೇಕಾಗಿ ಬಂತು. ಒಂದು ಕಾಲದಲ್ಲಿ ಲತೀನ ಮತ್ತು ಗ್ರೀಕ್ ಭಾಷೆಯ ಪಾಂಡಿತ್ಯವೇ ಸಭ್ಯ ಲಕ್ಷಣವೆಂದು ಪಾಶ್ಚಾತ್ಯ ದೇಶಗಳಲ್ಲಿ ಪರಿಗಣಿಸಲ್ಪಡುತಿದ್ದ ಹಾಗೆ ಆಗ ಈ ಭರತಖಂಡದಲ್ಲಿ ಗೀರ್ವಾಣ ಭಾಷಾ ಪಾಂಡಿತ್ಯವೇ ಶಿಕ್ಷಣದ ಧ್ಯೇಯವಾಗಿ ನಿಂತಿತು. ಹೀಗಿದ್ದರೂ ರಾಜಾಶ್ರಯವು ಯಾವ ವರೆಗೆ ಇದಕ್ಕೆ ಇತ್ತೋ ಅದು ವರೆಗೆ ನಾಲಂದಾ ಮುಂತಾದ ನಿಖಿಲ ಕಲೆಯ ಕೇಂದ್ರಸ್ಥಾನಗಳಲ್ಲಿ ಸಾವಿರ ಗಟ್ಟಲೆ ವಿದ್ಯಾರ್ಥಿಗಳು ಅಭ್ಯಾಸ ಮಾಡುತಿದ್ದರು. ಹಿಂದೂಗಳ ಕೈಯಿಂದ ಸಾಮ್ರಾಜ್ಯ ದಂಡವು ವಿಧರ್ಮಿಯರಾದ ಮುಸಲ್ಮಾನರ ಕೈಯಲ್ಲಿ ಸೇರುವ ಮೊದಲೇ ಈ ಕೇಂದ್ರಸ್ಥಾನಗಳ ಪ್ರಭೆಯು ಕುಗ್ಗಿ, ಶಿಕ್ಷಣವು ಅಧೋಗತಿಯ ಮೆಟ್ಟಲನ್ನು ಇಳಿಯ ತೊಡಗಿತ್ತು. ಆದರೂ ಬೌದ್ಧಮತದ ವಿಹಾರಗಳ ಕ್ರಮವನ್ನು ಅನುಸರಿಸಿ, ಹಿಂದೂ ಅವತಾರ ಪುರುಷರು, ಧರ್ಮ ಬೋಧಕರು ಸ್ಥಾಪಿಸಿದ ಮಠಗಳಲ್ಲಿ ಈ ಪ್ರಾಚೀನ ಆರ್ಯ ಸಂಸ್ಕೃತಿಯ ದೀವಿಗೆಯು ಬೆಳಗುತಿತ್ತು. ಅದರ ಪ್ರಭೆಯು ಬಹು ದೂರ ಹರಡದಿದ್ದರೂ ಅಧ್ಯಾತ್ಮ ವಿಚಾರದ ಗಿಲಾವಿನೊಂದಿಗೆ ನಿತ್ಯನೈಮಿತ್ಯಕದ ಮಂತ್ರ ತಂತ್ರಗಳು, ಕಾವ್ಯ, ವ್ಯಾಕರಣ, ತರ್ಕ, ಅಲಂಕಾರ ಇತ್ಯಾದಿ ಶಾಸ್ತ್ರಗಳ ಪರಿಚಯವು ಬ್ರಾಹ್ಮಣರಿಗೆ ಆಗುತ್ತಿತ್ತು. ಮುಸಲ್ಮಾನರ ಆಳ್ವಿಕೆಯಲ್ಲಿ ಮೊಗಲರ ಕೈಗೆ ರಾಜ್ಯದಂಡವು ಸೇರುವ ವರೆಗೆ ಆರ್ಯ ಸಂಸ್ಕೃತಿಗೆ ಅಂಧಕಾರದ ಕಾಲವೆನ್ನಬೇಕು. ಮೊಗಲರ ಕಾಲದಲ್ಲಿ ಸಾಮ್ರಾಜ್ಯದ ವರ್ಚಸ್ಸು ಕನ್ಯಾಕುಮಾರಿಯ ವರೆಗೆ ವಿಸ್ತರಿಸುತಿದ್ದಾಗ ಧರ್ಮವಿಚಾರದ ಬಗ್ಗೆ, ಅರಬಿ ಭಾಷೆ, ಕಲೆಗಳ ಬಗ್ಗೆ ಫಾರಸಿ ಭಾಷೆ, ಇವುಗಳ ನೂತನ ಸಂಸ್ಕೃತಿಯು

ಶಿಕ್ಷಣವು ಮುಸಲ್ಮಾನರಿಗೆ ಮಾತ್ರ ಅವರ ಮೌಲ್ವಿಗಳ ಮೂಲಕ ಮಹಜೀದಿಗಳಲ್ಲಿ ದೊರೆಯುತ್ತಲಿತ್ತು. ಫಾರಸಿ ಭಾಷೆಯಂತೂ ರಾಜಕೀಯ ಭಾಷೆಯಾಗಿದ್ದು ಅದನ್ನರಿಯದವನು ಸಭ್ಯನಲ್ಲವೆಂಬ ವಿಚಾರವು ಜನರಲ್ಲಿ ಪಸರಿಸುತ್ತಿದ್ದುದರಿಂದ ಈ ಭಾಷೆಯನ್ನು ಹಿಂದೂಗಳಲ್ಲಿ ಅನೇಕರು ಕಲಿಯತೊಡಗಿದರು. ಆದರೆ, ಜನ ಸಾಮಾನ್ಯರಿಗೆ ಮಾತ್ರ ಆರ್ಯರ ಪುರಾತನ ಸಂಸ್ಕೃತಿಯಾಗಲಿ ಮುಸಲ್ಮಾನರ ನೂತನ ಸಂಸ್ಕೃತಿಯಾಗಲಿ ಸಿಗುವಷ್ಟು ಪುಣ್ಯೋದಯವಿರಲಿಲ್ಲ. ಲೋಕ ವ್ಯವಹಾರಕ್ಕೆ ಬೇಕಾದ ಓದು, ಬರಹ, ಲೆಕ್ಕಗಳನ್ನು ದೇಶ ಭಾಷೆಯಲ್ಲಿ ಹಳ್ಳಿ ಪಾಠಶಾಲೆಗಳಲ್ಲಿ ಕೆಲವೇ ಕೆಲವರು ಕಲಿತು ತೃಪ್ತಿಹೊಂದಬೇಕಾಗಿತ್ತು. ಅದರೊಂದಿಗೆ ಹಿಂದುಗಳಿಗೆ ಸಂಸ್ಕೃತ ಗ್ರಂಥಗಳಿಂದ ಕೆಲವು ಶ್ಲೋಕಗಳನ್ನು ಮುಸಲ್ಮಾನರಿಗೆ ಅರಬಿ ಭಾಷೆಯಲ್ಲಿ ಖುರಾನಿನ ಶ್ಲೋಕಗಳನ್ನು ಮಾತ್ರ ಬಾಯಿಪಾಠ ಮಾಡಿಸಲಾಗುತ್ತಿತ್ತು. ಈ ಹಳ್ಳಿಶಾಲೆಗಳ ಬೋಧಕರು ವಿದ್ವಾಂಸರೆಂದು ಹಳ್ಳಿಗಳಲ್ಲಿ ಪೂಜ್ಯತೆ ಹೊಂದಿದ್ದರೂ ಅವರು ಓದಿದ್ದೂ ಕಡಿಮೆ, ಅವರಿಗೆ ಈ ಈ ವೃತ್ತಿಗಾಗಿ ಸಿಗುತಿದ್ದ ಜೀವನಾಂಶವೂ ಕಡಿಮೆ. ಹೀಗಾಗಿ ಜನ ಸಾಮಾನ್ಯರು ಜ್ಞಾನಾಂಧರಾಗುತ್ತ ಬಂದರು. ಕೊಮಿನಿಯಸ್, ರೂಸೋ ಕಾಲಕ್ಕೆ ಪಾಶ್ಚಾತ್ಯದೇಶಗಳಲ್ಲಿ ಇದ್ದ ಸ್ಥಿತಿಯೇ ಹಿಂದೂಸ್ಥಾನಕ್ಕೆ ಬ್ರಿಟಿಷರ ಆಳ್ತನವು ಕೈಸೇರುವಾಗ ಬಂದಿತ್ತು. ಉತ್ತರ ಹಿಂದೂಸ್ಥಾನದಲ್ಲಿಯ ಬೌದ್ಧವಿಹಾರಗಳಂತೆ ದಕ್ಷಿಣ ಹಿಂದೂಸ್ಥಾನದಲ್ಲಿ ಸ್ಥಾಪನೆಯಾದ ಜೈನರ ಬಸದಿ, ಜಂಗಮರ ಮಠ ಇವುಗಳಲ್ಲಿ ಬರೆ ಕೆಲವರು ಮಾತ್ರ ಸಂಸ್ಕೃತ ಓದಿ, ದೇಶಿಯ ಭಾಷೆಗಳಲ್ಲಿ ಹೊಸ ಗ್ರಂಥಗಳನ್ನು ಬರೆದುದಲ್ಲದೆ ಸಂಸ್ಕೃತ ಉದ್ಗ್ರಂಥಗಳ ಪರಿವರ್ತನೆ ಮಾಡುವುದಕ್ಕೆ ಯತ್ನಿಸಿದ್ದರೂ, ಮುದ್ರಣದ ಸೌಕರ್ಯವೂ, ಸಾರ್ವಜನಿಕವಾದ ಪಾಠಶಾಲೆಗಳೂ ಇದ್ದಿಲ್ಲವಾದುದರಿಂದ ಜನಸಾಮಾನ್ಯರಿಗೆ ಉಚ್ಚ ಶಿಕ್ಷಣ ಉಚ್ಚ ಬೋಧನೆಯ ಗಂಧಗಾಳಿಯೇ ಇರಲಿಲ್ಲ.

ಹಿಂದುಸ್ಥಾನದಲ್ಲಿ ಆಧುನಿಕ ಶಿಕ್ಷಣ ವಿಚಾರ

26ನೆಯ ಅಧ್ಯಾಯ

ಈ ಆಧುನಿಕ ಶಿಕ್ಷಣದ ಕಾಲವನ್ನು ನಾಲ್ಕು ಮಜಲುಗಳಾಗಿ ವಿಂಗಡಿಸಬಹುದು :—(1) ಕ್ರಿ. ಶ. 1835ರಿಂದ 1854ರ ವರೆಗೆ (2) 1854ರಿಂದ 1882ರ ವರೆಗೆ (3) 1882ರಿಂದ 1904ರ ವರೆಗೆ (4) 1904ರಿಂದ ಈ ವರೆಗೆ.

ಕ್ರಿ. ಶ. *1835—1854:*—ಈಸ್ಟ್ ಇಂಡಿಯಾ ಕಂಪೆನಿಯವರಿಗೆ ಬ್ರಿಟಿಷ್ ಪಾರ್ಲಿಮೆಂಟಿನವರು ಕ್ರಿ. ಶ. 1813ರಲ್ಲಿ ರಾಜ್ಯಾಧಿಕಾರದ ಪತ್ರವನ್ನು ಮಾರ್ಪಡಿಸಿ ಕೊಡುವಾಗ ಈ ದೇಶದಲ್ಲಿ ವಾಂಙ್ಮಯದ ಜೀರ್ಣೋದ್ಧಾರ, ವಿದ್ವಾಂಸರಿಗೆ ಪ್ರೋತ್ಸಾಹ, ಶಾಸ್ತ್ರಗಳ ಪ್ರಸಾರ, ಇದಕ್ಕಾಗಿ ವರ್ಷಂಪ್ರತಿ ಒಂದು ಲಕ್ಷ ರೂಪಾಯಿಗಳನ್ನು ಪ್ರತ್ಯೇಕಿಸಿಡಬೇಕೆಂದು ಷರತ್ತು ಹಾಕಿ ಕೊಟ್ಟಿದ್ದರು. ಆದರೆ ಈ ಶಾಸ್ತ್ರಗಳ ಪ್ರಸಾರವೆಂಬ ಮಾತು ಯಾವುದಕ್ಕೆ ಅನ್ವಯಿಸುತ್ತದೆ ಎಂಬ ವಿಷಯದಲ್ಲಿ ಬ್ರಿಟಿಷ್ ಇಂಡಿಯದ ಅಧಿಕಾರಿ ವರ್ಗದಲ್ಲಿ ಭಿನ್ನಾಭಿಪ್ರಾಯ ಹುಟ್ಟಿ ಇತ್ತಂಡಗಳಾದುವು. ಪಾಶ್ಚಾತ್ಯ ವಿಜ್ಞಾನಕ್ಕೆ, ಪಾಶ್ಚಾತ್ಯ ಸಂಸ್ಕೃತಿಗೆ ಪ್ರಾಧಾನ್ಯ ಕೊಡಬೇಕೊ, ಪ್ರಾಚೀನ ಸಂಸ್ಕೃತಿಗಳಿಗೆ—ಆರ್ಯ ಮತ್ತು ಇಸ್ಲಾಮಿ ಸಂಸ್ಕೃತಿಗೆ ಪುಷ್ಟಿ ಕೊಡಬೇಕೊ, ಬೋಧನೆಯ ಭಾಷೆಯು ಇಂಗ್ಲಿಷ್ ಆಗಬೇಕೊ ಕಿಂವಾ ಸಂಸ್ಕೃತ, ಅರಬಿ ಅಥವಾ ಫಾರಸೀ ಆಗಬೇಕೊ ಎಂಬ ವಿಷಯದಲ್ಲಿ ಇತ್ತಂಡದವರು ಬಹಳ ಕಾಲ ಚರ್ಚಿಸಿದರು. ಯಾವುದೊಂದೂ ನಿರ್ಧಾರವಾಗಲಿಲ್ಲ. ಕಡೆಗೆ ಕ್ರಿ. ಶ. 1823ರಲ್ಲಿ ಶಿಕ್ಷಣ ವಿಚಾರದ ಒಂದು ಕಮಿಟಿಯು ಬ್ರಿಟಿಷ್ ಸರಕಾರದವರಿಂದ ನೇಮಕವಾಗಿ, ಅವರು ಆ ಕಾಲದ ಶಾಲೆಗಳ ಪರಿಸ್ಥಿತಿಯನ್ನು ಪರ್ಯಾಲೋಚಿಸಿ, ಕೆಲವು ಸೂಚನೆಗಳನ್ನು ಕೊಟ್ಟರು. ಕಲ್ಕತ್ತೆ, ಢಿಲ್ಲಿ, ಆಗ್ರಾ ಪಟ್ಟಣಗಳಲ್ಲಿ ಸಂಸ್ಕೃತ, ಫಾರಸಿ ಭಾಷೆಗಳನ್ನು ಕಲಿಸುವ ಕೋಲೇಜುಗಳನ್ನು ಸ್ಥಾಪಿಸಿದ್ದಲ್ಲದೆ ಈ ಕಮಿಟಿ

ಯವರು ಫಾರಸಿ ಅಥವಾ ಸಂಸ್ಕೃತ ಭಾಷೆಗಳ ಗ್ರಂಥಗಳನ್ನೂ ಪಾಶ್ಚಾತ್ಯ ಇಂಗ್ಲಿಷ್ ಗ್ರಂಥಗಳನ್ನೂ ಮುದ್ರಿಸಲಿಕ್ಕೆ ಏರ್ಪಡಿಸಿದರು. ಈ ಪ್ರಾಚೀನ ಭಾಷೆಗಳೊಂದಿಗೆ ಇಂಗ್ಲೀಷನ್ನೂ ಈ ಕೋಲೇಜುಗಳಲ್ಲಿ ಕಲಿಸುವಂತೆ ಪ್ರಯತ್ನವಿಟ್ಟರು. ಕಲ್ಕತ್ತೆಯ ಹಿಂದೂ ಕೋಲೇಜಿನ ಮೂಲಸ್ಥಾಪಕರಲ್ಲಿ ಒಬ್ಬರಾದ ರಾಜಾ ರಾಮಮೋಹನರಾಯಿಯವರು ಪಾಶ್ಚಾತ್ಯ ಸಂಸ್ಕೃತಿ ಮತ್ತು ಇಂಗ್ಲಿಷ್ ಭಾಷೆಯ ಅಭಿಮಾನಿಗಳಾಗಿದ್ದು ಅವಕ್ಕೇನೆ ಹೆಚ್ಚಿನ ಪ್ರಾಶಸ್ತ್ಯಕೊಟ್ಟರು.

ರಾಜ ರಾಮಮೋಹನರಾಯ್:—ನೂತನ ವಿಚಾರಗಳಲ್ಲಿ ಇವರೇ ಮೊದಲಿಗರಾದುದರಿಂದ ಇವರ ವಿಚಾರಸರಣಿಯನ್ನು ಇಲ್ಲಿ ಕೊಂಚ ಟೀಕಿಸ ಬೇಕಾಗಿದೆ. ಇವರು ಉಚ್ಚ ಬ್ರಾಹ್ಮಣ ಕುಲದಲ್ಲಿ ಜನ್ಮವೆತ್ತಿದವರು. ಇವರ ತಾಯಿ ಶಾಕ್ತೇಯ* ಪಂಥದವರು. ಹೀಗಾಗಿ ಇವರ ಮನೆಯಲ್ಲಿ ವಿಗ್ರಹಾರಾಧನೆ ಮತ್ತು ಪ್ರಾಚೀನ ಸಾಂಪ್ರದಾಯಗಳೇ ಬಲವಾಗಿ ನೆಲೆಗೊಂಡಿದ್ದವು. ರಾಮಮೋಹನರಾಯರಿಗೆ ಈ ಆಚಾರಗಳ ಮೇಲೆ ಒಂದು ಬಗೆಯ ಜುಗುಪ್ಸೆ ಹುಟ್ಟಿ ವೇದ ಧರ್ಮದ ಗ್ರಂಥಗಳನ್ನೂ ಆ ಮೇಲೆ ಇಸ್ಲಾಮೀ ಧರ್ಮದ ಗ್ರಂಥಗಳನ್ನೂ ಅನಂತರ ಟೀಬೇಟಿಗೆ ಹೋಗಿ ಬೌದ್ಧ ಧರ್ಮದ ಗ್ರಂಥಗಳನ್ನೂ ಅವರು ಮಗುಚಿ ಹಾಕಿದ್ದಲ್ಲದೆ, ಇಂಡಿಯಕ್ಕೆ ಬಂದ ಕ್ರೈಸ್ತ ಮಿಶನರಿಗಳೊಡನೆ ಧರ್ಮ ವಿಚಾರದ ಪ್ರಶ್ನೆಗಳನ್ನು ಚರ್ಚಿಸಿ "ಏಕಮೇವಾ ದ್ವಿತೀಯಂ" ಎಂಬ ಏಕೇಶ್ವರ ವಾದಕ್ಕೆ ಅನುಕೂಲವಾದ ನೂತನ ಒಂದು ಧರ್ಮವನ್ನು ಇವರು ಸ್ಥಾಪಿಸಿದರು. ಇದರಲ್ಲಿ ಆರ್ಯ ಧರ್ಮದ ಮತ್ತು ಕ್ರೈಸ್ತ ಧರ್ಮದ ಮೂಲ ತತ್ವಗಳು ಹಾಸುಹೊಕ್ಕಾಗಿ ಸೇರಿದ್ದುವು. ಇದರೊಂದಿಗೆ ಶಿಕ್ಷಣ ಕ್ರಮದಲ್ಲಿಯೂ ಪಾಶ್ಚಾತ್ಯ ಸಂಸ್ಕೃತಿಯ ಕಡೆಗೆ ಅವರ ಮನೋನಿರ್ಧಾರವು ಒಲೆಯಿತು. ಈ ಮಹಾ ಪುರುಷರು ತಮ್ಮ ದೃಷ್ಟಿ ಪಥದ ಮುಂದೆ 5 ಧ್ಯೆಯಗಳನ್ನು ಇಟ್ಟಿದ್ದರೆಂದು ಅವರ ಜೀವನ ಚರಿತ್ರೆಯಿಂದ ಗೊತ್ತಾಗುತ್ತಿದೆ. ಈ ಧ್ಯೇಯಗಳು ಯಾವುವೆಂದರೆ (1) ಹಿಂದುಸ್ಥಾನವು ಪಾಶ್ಚಾತ್ಯ ಶಿಕ್ಷಣ, ಪಾಶ್ಚಾತ್ಯ ಸಂಸ್ಕೃತಿ ಇವುಗಳ ಅನುಲೇಪನದಿಂದಲೇ ಉದ್ಧಾರವಾಗಬೇಕು.

---

* ಶಕ್ತಿಯ ಪೂಜೆ, ದುರ್ಗೆಯ ಆರಾಧನ ಮಾಡುವವರು.

(2) ಹಿಂದುಸ್ಥಾನದಲ್ಲೆಲ್ಲ ಏಕೇಶ್ವರ ವಾದಿಯಾದ ಕ್ರೈಸ್ತ ಮತವೇ ಹರಡಬೇಕು. (3) ಹಿಂದುಸ್ಥಾನದಲ್ಲಿ ರಾಜಕೀಯ ಭಾಷೆಯಾದ ಇಂಗ್ಲಿಷೇ ಸಾರ್ವತ್ರಿಕ ಭಾಷೆಯಾಗಬೇಕು. (4) ಪಾಶ್ಚಾತ್ಯ ರಾಜಕೀಯ ತತ್ವವಿಚಾರಗಳ ಅನುಸರಣೆಯಿಂದಲೇ ಹಿಂದೂಸ್ಥಾನವು ಪಾಶ್ಚಾತ್ಯ ದೇಶಗಳ ಸಾಲಿಗೆ ಬಂದು ನಿಲ್ಲಬೇಕು. (5) ಈ ರೀತಿ ಮಾರ್ಪಟ್ಟ ಹಿಂದುಸ್ಥಾನವು ಇಡೀ ಆಸ್ಯಖಂಡದ ನವಚೇತನ ಮತ್ತು ಪುನರುದ್ಧಾರಕ್ಕೆ ಮಾರ್ಗದರ್ಶಕವಾಗಬೇಕು. ಈ ದೃಷ್ಟಿಯಿಂದ ಅವರು ಈ ದೇಶದಲ್ಲಿ ಚಳವಳ ಎಬ್ಬಿಸಿದಲ್ಲದೆ, ಬ್ರಿಟನ್ನಿನಲ್ಲಿ ಪ್ರವಾಸ ಮಾಡಿ, ತಮ್ಮ ಭಾಷಣ ಲೇಖನಗಳಿಂದ ಬ್ರಿಟಿಷ್ ಜನಾಂಗದ ಮನಸ್ಸನ್ನು ತನ್ನ ಕಡೆಗೆ ತಿರುಗಿಸಲು ಸಾಧಿಸಿದರು. "ಹಿಂದಿಯರ ನರನಾಡಿಗಳಲ್ಲಿ ಆಧ್ಯಾತ್ಮಿಕ ವಿಚಾರವು ಸೇರಿಕೊಂಡಿದೆ, ಅಂಥವರಿಗೆ ವ್ಯಾವಹಾರಿಕ ಜ್ಞಾನ ಮತ್ತು ವಿಚಾರಸ್ಪಷ್ಟತೆ ಆಗ ಬೇಕಾದರೆ ಪಾಶ್ಚಾತ್ಯ ಸಂಸ್ಕೃತಿಯ ಅನುಲೇಪನವೇ ಅತಿ ಅಗತ್ಯ" ಎಂದು ರಾಮಮೋಹನ ರಾಯಿಯವರು ಖಂಡಿತವಾಗಿ ನಂಬಿದ್ದರು. ಪವಿತ್ರವಾದ ಗಂಗಾಪ್ರವಾಹವು ಹಿಮತ್ಪರ್ವತವನ್ನು ಬಿಟ್ಟು ಬಯಲಿಗೆ ಇಳಿದಾಗ, ಅಲ್ಲಲ್ಲಿಯ ಹಳ್ಳಗಳಲ್ಲಿ ಅದರ ಅಡ್ಡ ತೊರೆಗಳು ಸಿಲುಕಿ, ಆ ನೀರು ಕೊಳೆತು ದುರ್ವಾಸನೆ ಹೊರಡಿಸಿ, ರೋಗಗಳ ತವರ್ಮನೆಯಾದರೆ, ಗಂಗಾ ನದಿಯ ಪಾವಿತ್ರ್ಯವು ಕೆಡುವುದಿಲ್ಲ. ಗಂಗಾ ನದಿಯು ಕೊನೆಗೆ ಸಮುದ್ರವನ್ನು ಸೇರುತ್ತದೆಂದು ಸಮುದ್ರಕ್ಕೇ ಮಹತ್ವವನ್ನು ಕೊಟ್ಟು ಅದರ ಉಪ್ಪು ನೀರು ಕುಡಿದು ಪ್ರಾಣಧಾರಣೆ ಮಾಡುವುದು ಸಾಧ್ಯವಾದೀತೆ? ಇದರಲ್ಲಿ ಎರಡು ಮುಖ್ಯ ವಿಚಾರಗಳಿವೆ. ಹಳ್ಳಕೊಳ್ಳಗಳಲ್ಲಿ ಕೊಳೆ ನಿಂತ ನೀರಿಗೆ ಕಡಿದು ದಾರಿ ಮಾಡಿಕೊಟ್ಟು ಪವಿತ್ರವಾದ ನೀರನ್ನು ಆ ಹಳ್ಳಗಳಿಗೆ ಪುನರಪಿ ಪ್ರವಹಿಸುವಂತೆ ಮಾಡುವುದು ಮೊದಲನೆಯದು. ಅಥವಾ ಸಮುದ್ರದ ನೀರು ಕ್ಷಾರವಾದ ಉಪ್ಪನ್ನು ಹಿಂದಕ್ಕೆ ಬಿಟ್ಟು ಮೋಡವಾಗಿ ಎಲ್ಲಿ ಶುದ್ಧನೀರನ್ನು ಸುರಿಯುತ್ತದೋ, ಅಲ್ಲಿ ಅಣೆಕಟ್ಟನ್ನು ಕಟ್ಟಿ, ಆ ಶುದ್ಧನೀರಿನಿಂದ ತೃಷೆಯನ್ನು ನಿವಾರಿಸುವುದು ಎರಡನೆಯದು.

ಇನ್ನೊಂದು ರೀತಿಯಾಗಿ ಹೇಳುವುದಾದರೆ ಆರ್ಯ ಸಂಸ್ಕೃತಿಯ ಮೂಲಕ ಹುಟ್ಟಿದ ಆಚಾರಗಳಲ್ಲಿ ಆ ಕಾಲದ ಸ್ಥಿತಿಗೆ ಪ್ರತಿಕೂಲವಾಗಿರುವವು

ಗಳನ್ನು ಕಿತ್ತು ಹಾಕಿ, ಮೂಲಧರ್ಮವನ್ನು ಅನುಸರಿಸುವುದು ; ಅಥವಾ ಪಾಶ್ಚಾತ್ಯ ಸಂಸ್ಕೃತಿಯು ಮತ್ತು ಧರ್ಮಗಳ ಉಚ್ಚ ಧ್ಯೇಯಗಳ ಹಬೆಯಿಂದ ಉಂಟಾದ ಶುದ್ಧ ನೀರನ್ನು ಹೀರಿಕೊಂಡು ಜೀವಿಸುವುದು. ಇವೆರಡೂ ಕಾರ್ಯಗಳು ಇಲ್ಲಿ ಹೇಗೆ ಕೈಸಾಗಲಿಲ್ಲವೆಂಬುದು ಮುಂದಿನ ವಿಚಾರಗಳಿಂದ ಗೊತ್ತಾಗುವುದು.

ರಾಮಮೋಹನರಾಯರ ಕಾಲಕ್ಕೆ ಸರಕಾರದಲ್ಲಿ ಹಿಂದೆ ಹೇಳಿದಂತೆ ತಲೆ ಎತ್ತಿದ್ದ ಎರಡು ಪಕ್ಷದವರ ಚರ್ಚೆಯು ಪರಿಣಾಮವಾಗಿ ಆಗಿನ ಗವರ್ನರ್ ಜನರಲ್‌ರವರ ಎಗ್ಸಿಕ್ಯೂಟಿವ್ ಕೌನ್ಸಿಲಿನ ಲೊ ಮೆಂಬರರಾಗಿದ್ದ, ಮಿ॥ ಮೆಕೋಲೆಯುವರು ಶಿಕ್ಷಣದ ಪ್ರಗತಿಗೆ ತನ್ನ ತೀರ್ಮಾನದಿಂದ ತೀರ ಹೊಸ ದಾರಿಯನ್ನು ಕಡಿದು ಕೊಟ್ಟರು. ಮಿ॥ ಮೆಕೋಲೆ (ಅನಂತರ ಲೊರ್ಡ್ ಮೆಕೊಲೆ)ಗೆ ಪಾಶ್ಚಾತ್ಯ ಸಂಸ್ಕೃತಿಯ ಮೇಲೆ ಅಭಿಮಾನವೆಷ್ಟಿತ್ತೊ, ಅಷ್ಟೇ ತಾತ್ಸಾರವು ಇಲ್ಲಿಯ ಪ್ರಾಚೀನ ಸಂಸ್ಕೃತಿಯ ಮೇಲಿತ್ತು. ರಾಜಾ ರಾಮ ಮೋಹನರಾಯಿಯುವರ ಮತ್ತು ಮಿ॥ ಮೆಕೋಲೆಯುವರ ಮನೋಗತಗಳಲ್ಲಿ ಇಷ್ಟೇ ಪ್ರಭೇದ. ಮಿ॥ ಮೆಕೋಲೆಯುವರಿಗೆ ಪ್ರಾಚೀನ ಸಂಸ್ಕೃತಿಯ ಗಂಧಗಾಳಿ ಕೂಡ ಇರಲಿಲ್ಲ. ರಾಮಮೋಹನರಾಯಿಯುವರಿಗೆ ನಮ್ಮ ಮನೆಗಳಲ್ಲಿ, ದೇವಸ್ಥಾನಗಳಲ್ಲಿ ಉರಿಸುತಿದ್ದು ಕಿಲುಬಿನ ಆವರಣದಿಂದ ಕೂಡಿ ದೃಷ್ಟಿಗೆ ಅಸಹ್ಯವಾದ ಮತ್ತು ಮಿನುಗು ಬೆಳಕನ್ನು ಕೊಡುವ ದೀವಿಗೆಗಳ ಕಡೆಗೆ ಲಜ್ಜೆ ಮತ್ತು ತಿರಸ್ಕಾರ ಹುಟ್ಟಿ, ಪಾಶ್ಚಾತ್ಯ ಸಂಸ್ಕೃತಿಯು ಗ್ಯಾಸ್ ಲೈಟ್ ಮತ್ತು ವಿದ್ಯುತ್‌ಛಕ್ತಿಯ ದೀಪಗಳ ಪ್ರಭೆಯು ಬೆರಗಾಗಿ ಮಾಡಿತು. ಆದರೆ ಈ ದೀಪಗಳ ಉರಿಸುವಿಕೆಯಲ್ಲಿ ಉಂಟಾಗುವ ಕಷ್ಟ ಸಂಕಷ್ಟಗಳ ಪರಿಚಯವಾಗುವ ವರೆಗೆ ಅವರು ಜೀವಂತರಾಗಿ ಉಳಿಯಲಿಲ್ಲ. "ಇಂಗ್ಲೆಂಡಿನಲ್ಲಿ ಲಾಳಕಟ್ಟುವಂತಹ ಮೂಢನಲ್ಲಿಯೂ ನಗೆಯನ್ನು ಹುಟ್ಟಿಸುವ ಆಯುರ್ವೇದ ಸೂತ್ರಗಳು, ಇಂಗ್ಲೆಂಡಿನ ಬೋರ್ಡಿಂಗ್ ಶಾಲೆಗಳಲ್ಲಿ ಕಲಿಯುವ ಚಿಕ್ಕ ಹೆಣ್ಣು ಮಕ್ಕಳು ಕೂಡ ನಂಬದೆ ತಿರಸ್ಕರಿಸುವ ಜ್ಯೋತಿಷ್ಯ, 30 ಫೀಟು ಎತ್ತರವಿದ್ದು 30,000 ವರ್ಷ ಆಳಿದ ಅರಸರ ಪುರಾಣ ಕಥೆಗಳು, ಸಪ್ತ ಸಮುದ್ರಗಳು ಉಂಟೆಂದು ಭ್ರಮಿಸುವ ಭೂಗೋಲಶಾಸ್ತ್ರ ಇಂಥ ನಗೆಗೇಡಾದ ವಿಚಾರಗಳುಳ್ಳ ಗ್ರಂಥ

ಗಳನ್ನು ಕಲಿಸಲಿಕ್ಕೆ" ಕ್ರೈಸ್ತಮತಾವಲಂಬಿಯಾದ ಬ್ರಿಟಿಷ್ ಸರಕಾರವು ಹಣವನ್ನು ವೆಚ್ಚಮಾಡುವುದು ನ್ಯಾಯವಲ್ಲವೆಂದು ಮಿ। ಮೆಕೋಲೆಯವರು ತೀರ್ಮಾನಿಸಿ, ಪಾಶ್ಚಾತ್ಯ ರೀತಿಯ ಶಿಕ್ಷಣವನ್ನು ಇಂಗ್ಲೀಷ್ ಭಾಷೆಯಲ್ಲಿ ಕೊಡಿಸಬೇಕೆಂದು ದೊಡ್ಡ ರಿಪೋರ್ಟನ್ನು ಬರೆದರು. ನೈಬಣ್ಣವೊಂದರಲ್ಲಿ ಅಲ್ಲದೆ ಹಿಂದೀ ಜನರನ್ನು ಇಂಗ್ಲಿಷರ ಪ್ರತಿರೂಪವಾಗಿ ಮಾಡುವುದು ಅವರ ಸ್ಪಷ್ಟೋಕ್ತ ವಿಚಾರವಿತ್ತು. ಅಲ್ಲಿಗೇ ಅವರ ಮಾತು ಮುಗಿಯಲಿಲ್ಲ. ಈ ಬಗೆಯ ಶಿಕ್ಷಣದಿಂದ "ಹಿಂದೀ ಜನರು ಪಾಶ್ಚಾತ್ಯ ಇತಿಹಾಸ, ಪಾಶ್ಚಾತ್ಯ ರಾಜಕೀಯ ಸಂಸ್ಥೆಗಳ ಪ್ರಭಾವ, ಇವುಗಳ ಪರಿಚಯ ಮಾಡಿಕೊಂಡು ಅಂಥ ಸಂಸ್ಥೆಗಳನ್ನು ಇಲ್ಲಿಯೂ ಏರ್ಪಡಿಸಬೇಕೆಂದೂ ಪ್ರಜೆಗಳಿಗೆ ಸ್ವಾತಂತ್ರ್ಯವನ್ನು ಕೊಡಬೇಕೆಂದೂ ಬಯಸಿ ಚಳವಳ ಎಬ್ಬಿಸಬಹುದು. ಒಂದು ವೇಳೆ ಅಂಥ ಸುಯೋಗ ಬಂದರೆ ಬ್ರಿಟಿಷರ ಇತಿಹಾಸದಲ್ಲಿ ಅದೇ ಮಹಾ ಯೋಗವೆನ್ನಬೇಕು," ಎಂದು ಅವರ ದೃಢ ವಿಶ್ವಾಸವಿತ್ತು. ಈ ತೀರ್ಮಾನವನ್ನು ಅಂಗೀಕರಿಸಿ, ಗವರ್ನರ್ ಜನರಲ್ ವಿಲ್ಲಿಯಮ್ ಬೆಂಟಿಂಕರು ಒಂದು ಪ್ರಕಟಣೆಯನ್ನು ಹೊರಡಿಸಿ, ಈ ಒಂದು ಲಕ್ಷ ರೂಪಾಯಿಯನ್ನು ಇಂಗ್ಲಿಷ್ ವಿದ್ಯಾಭ್ಯಾಸಕ್ಕೆನೆ ಹಚ್ಚಬೇಕೆಂದು ನಿರ್ಧರಿಸಿದರು. ಇದರಿಂದ ಪ್ರಾಚೀನ ಸಂಸ್ಕೃತಿಯ ವೃಕ್ಷವನ್ನು ಕಡಿದು ಉರುಳಿಸಿ, ಪಾಶ್ಚಾತ್ಯ ಸಂಸ್ಕೃತಿಯ ಬೀಜವನ್ನು ಬಿತ್ತಿದಂತಾಯಿತು.

ಕ್ರಿ. ಶ. *1854—1882 :* – ಈ ಇಂಗ್ಲೀಷ್ ವಿದ್ಯಾಭ್ಯಾಸವು ರಾಮಮೋಹನರಾಯಿಯವರ ಮತ್ತು ಮೆಕೋಲೆ ಪ್ರಭುವಿನ ಉದ್ದೇಶವಿದ್ದಂತೆ ಸಾರ್ವತ್ರಿಕ ಭಾಷೆಯಾಗಲೇ ಇಲ್ಲ. ರಾಜಾಶ್ರಯವು ಇಲ್ಲವೆಯೂ ಧರ್ಮ ಪೀಠಗಳ ಅವಲಂಬನವಿಲ್ಲದೆಯೂ ಪ್ರಾಚೀನ ಸಂಸ್ಕೃತಿಯು ಮಾತ್ರ ಕುಗ್ಗಿ ಹೋಯಿತು; ಜನಸಾಮಾನ್ಯರ ಕಣ್ಣು ಕುರುಡಾಯ್ತು; ಹಳ್ಳಿ ಶಾಲೆಗಳು ಬರೇ ನಾಮಪೂರ್ತಿಯಾದವು. ಲೋರ್ಡ್ ಹಾರ್ಡಿಂಜನು ಜಿಲ್ಲಾ ಶಾಲೆಗಳನ್ನು ಸ್ಥಾಪಿಸಿ, ಅವುಗಳಲ್ಲಿ ಇಂಗ್ಲಿಷ್ ಭಾಷೆಯೊಂದಿಗೆ ದೇಶ ಭಾಷೆಗೆ ಸ್ಥಾನ ಕೊಡಲು ಯತ್ನಿಸಿದನು. ಆದರೆ ಜನಸಾಮಾನ್ಯರ ಶಿಕ್ಷಣದ ಕಡೆಗೆ ಸರಕಾರದ ದೃಷ್ಟಿಯನ್ನು ಪಸರಿಸಿದ ಕೀರ್ತಿಯು ಸರ್ ಚಾರ್ಲ್ಸ್ ವೂಡ್ ಎಂಬವನಿಗೆ ಸಲ್ಲುತ್ತದೆ. ಹಳ್ಳಿಗಳ ಉದ್ಧಾರವು ಕೆಲವೇ

ಕೆಲವು ಇಂಗ್ಲಿಷ್ ಭಾಷೆಯ ಶಾಲೆಗಳಿಂದ ಹೊರಬಿದ್ದ ಯುವಕರಿಂದ ಆದೀತು ಎಂಬ ಮೆಕೋಲೆಯ ನಿರ್ಧಾರವನ್ನು ವೂಡನು ತೀರಾ ಅಲ್ಲಗಳೆದನು. ಅಂಥ ಉದ್ಧಾರವು ದೇಶೀಯ ಭಾಷೆಗಳನ್ನು ಕಲಿಸುವ ಹಳ್ಳಿ ಪಾಠಶಾಲೆಗಳಿಂದ ಆಗಬೇಕಾದುದರಿಂದ ಸರಕಾರದ ದೃಷ್ಟಿಯು ಪ್ರಾಥಮಿಕ ಶಿಕ್ಷಣದ ಕಡೆಗೆ ಪಸರಿಸಬೇಕೆಂದು ವೂಡನು ಸ್ಪಷ್ಟೋಕ್ತಿಗಳಿಂದ ಸೂಚನೆ ಕೊಟ್ಟನು. ಇದನ್ನು ಅಂಗೀಕರಿಸಿ ಪ್ರತಿಯೊಂದು ಪ್ರಾಂತದಲ್ಲಿಯೂ ಶಿಕ್ಷಣವಿಚಾರದ ಒಂದು ಇಲಾಖೆ, ಅದಕ್ಕೆ ಒಬ್ಬ ಡಿರೆಕ್ಟರ್, ಅವನ ಕೈಕೆಳಗೆ ಇನ್ಸ್‌ಪೆಕ್ಟರುಗಳು ಇತ್ಯಾದಿ ಸಿಬಂದಿಯ ಏರ್ಪಾಡಾಯಿತು. ಜಿಲ್ಲೆಯ, ತಾಲೂಕಿನ ಕೇಂದ್ರಸ್ಥಾನಗಳಲ್ಲಿ ಸರಕಾರದವರು ಶಾಲೆಗಳನ್ನು ಸ್ಥಾಪಿಸಲು ಕೈಕೊಂಡದ್ದಲ್ಲದೆ, ಮಿಶನೆರಿ ಮತ್ತು ಖಾಸಗಿ ಶಾಲೆಗಳಿಗೆ ದ್ರವ್ಯ ಸಹಾಯವನ್ನು ಕೊಡುವ ಹಂಚಿಕೆ ಕೂಡ ಆಯಿತು. ಈ ವೂಡನ ರಿಪೋರ್ಟು ಬ್ರಿಟಿಷ್ ಆಳ್ವಿಕೆಯಲ್ಲಿ ಶಿಕ್ಷಣ ವಿಚಾರದಲ್ಲಿ ಎರಡನೇಯ ಮಜಲು.

ಕ್ರಿ. ಶ. *1882—1904*:—ಈ ಬಗೆಯಿಂದ ಸರಕಾರದ ಬೊಕ್ಕಸದಿಂದ ಹನಿಹನಿಯಾಗಿ ಒಸರುವ ಹಣವು ಇಷ್ಟು ದೊಡ್ಡ ಖಂಡಕ್ಕೆ ಎಲ್ಲಿ ಸಾಕಾದೀತು? ಕ್ರಿ, ಶ. 1882ರಲ್ಲಿ ವೈಸರಾಯಿಯಾಗಿದ್ದ ಲೋರ್ಡ್ ರಿಪನ್ ಆ ಕಾಲದ ಶಿಕ್ಷಣದ ಕುಂದುಕೊರತೆ, ಅದರ ಸುಧಾರಣೆಗೆ ಉಪಾಯ, ಇವನ್ನು ಕಂಡು ಹಿಡಿಯುವುದಕ್ಕೆ ಒಂದು ಕಮಿಶನನ್ನು ಏರ್ಪಡಿಸಿದರು. ಇವರ ಸೂಚನೆ ಮೇರೆಗೆ ದೇಶೀಯ ಪಾಠಶಾಲೆಗಳು ಶಿಕ್ಷಣ ಕ್ರಮದಲ್ಲಿಯೂ ವಿಷಯಗಳಲ್ಲಿಯೂ ಸರಕಾರದ ನಿಯಮಗಳನ್ನು ಅನುಸರಿಸುವುದಾದರೆ ಅಂಥವುಗಳನ್ನು ಪ್ರೋತ್ಸಾಹಿಸಿ, ಪರೀಕ್ಷಾ ಫಲದ ಮೇಲೆ ಆಧರಿಸಿ, ಗ್ರೇಂಟ್ ಕೊಡುವಂತೆ ನಿಶ್ಚಯವಾಯಿತು. ಹಳ್ಳಿಯ ಶಾಲೆಗಳು ಸರಕಾರದವರ ಕೈಕೆಳಗಿರುವ ಬದಲಾಗಿ ಪ್ರಜಾಪ್ರತಿನಿಧಿಗಳಿಂದ ಕೂಡಿದ ಲೋಕಲ್ ಬೋರ್ಡು ಮ್ಯುನ್ಸಿಪಾಲಿಟಿ ಮುಂತಾದ ಸಂಸ್ಥೆಗಳಿಂದಲೇ ನಡಿಸಲ್ಪಟ್ಟು, ತಮ್ಮ ಆದಾಯದ ನಿರ್ದಿಷ್ಟ ಅಂಶವನ್ನು ಶಿಕ್ಷಣ ಪ್ರಚಾರಕ್ಕೆ ವಿನಿಯೋಗಿಸಬೇಕಾಗಿ ನಿರ್ಧರಿಸಲಾಯಿತು. ಇದಲ್ಲದೆ ಪ್ರಾಥಮಿಕ ಶಾಲೆ ಮತ್ತು ಕೊಲೇಜುಗಳ ನಡುವೆ ಮಧ್ಯವರ್ತಿಯಾಗಿ ಸ್ಥಾಪಿಸಿದ ಸೆಕೆಂಡರೀ ಶಾಲೆ

ಗಳಲ್ಲಿ ಬರೇ ಭಾಷಾ ಜ್ಞಾನದೊಂದಿಗೆ ಗಣಿತ, ಚರಿತ್ರೆ, ಭೂಗೋಲ, ಮುಂತಾದ ವ್ಯಾವಹಾರಿಕ ವಿಷಯುಗಳನ್ನು ಕಲಿಸುವಂತೆ ಏರ್ಪಡಿಸಿದ್ದಲ್ಲದೆ ಅಂಥ ಸಂಸ್ಥೆಗಳನ್ನು ಲೋಕಲ್ ಬೋರ್ಡುಗಳು—ಖಾಸಗಿ ಜನರು ಸ್ಥಾಪಿಸಲಿಕ್ಕೆ ಅವಕಾಶ ದೊರೆಯುುವಂತೆ ಗ್ರೇಂಟುಗಳ ಕ್ರಮವನ್ನು ಸರಕಾರದವರು ವಿಸ್ತರಿಸಿದರು. ಇದರಿಂದ ಎಲ್ಲಾ ತರಗತಿಯು ಖಾಸಗಿ ಸಂಸ್ಥೆಗಳು ತಲೆ ಎತ್ತಿದುವು.

ಈ ಗ್ರೇಂಟಿನ ಕ್ರಮುದ ಕೊನೆಯು ಪರಿಣಾಮುವು ಶಿಕ್ಷಣವನ್ನು ಒಂದು ವ್ಯಾಪಾರದ ಸ್ಥಾನಕ್ಕೆ ತಂದು ಇಳಿಸಿತು. ಸರಿಯಾದ ಕಟ್ಟೋಣಗಳಿಲ್ಲ, ಶಿಕ್ಷಣದ ಸಾಧನ ಸಾಮುಗ್ರಿಗಳಿಲ್ಲ, ಶಿಕ್ಷಕರಿಗೆ ನ್ಯಾಯುವಾದ ಜೀವನೋಪಾಯುಕ್ಕೆ ಸಾಕಷ್ಟು ವೇತನವಿಲ್ಲ; ಆದರೆ ಸಂಸ್ಥೆಗಳ ಮತ್ತು ವಿದ್ಯಾರ್ಥಿಗಳ ಸಂಖ್ಯೆಯುು ಮಾತ್ರ ಏರುತ್ತ ಬಂತು. ಶಿಕ್ಷಣ ಕ್ರಮುವೂ ವಿಷಯುಗಳೂ ತೀರ ಪರೀಕ್ಷೆಯ ಮೇಲೆ ಆಧರಿಸಿದ್ದು, ವಿದ್ಯಾರ್ಥಿಗಳು ಪರೀಕ್ಷೆಯು ಅಚ್ಚಿನಲ್ಲಿ ಎರಕ ಹೊಯಿದ ಮೂರ್ತಿಗಳಾದರು. ಅಚ್ಚಿನಲ್ಲೇ ದೋಷವಿದ್ದುದರಿಂದ ಮೋರೆ ಸೊಟ್ಟಗೆ, ಹೊಟ್ಟೆ ದೊಡ್ಡದು, ಕೈಕಾಲು ಕಡ್ಡಿಯಂತೆ,—ಹೀಗೆ ಏನೊ ಏನೊ ವಿಕಾರ ರೂಪಗಳು ಹೊರಬಿದ್ದುವು. ಹೀಗಾಗಿ ಶಿಕ್ಷಣವು ಉಚ್ಚಫಲವನ್ನು ಕೊಡಬೇಕು, ಸಾರ್ವತ್ರಿಕವಾಗಿ ಹಬ್ಬಬೇಕು, ಎಂಬ ಆಶೆಯುು ಕನಸಿನ ಗಂಟಾಗಿ ಉಳಿಯಿತು.

*1904*ರಿಂದ **ಈ ವರೆಗೆ:**—1904ನೇ ಇಸವಿಯುಲ್ಲಿ ಹಿಂದಿಯುರ ಶಿಕ್ಷಣವು ಹೊಸ ಮಜಲಿನಲ್ಲಿ ಕಾಲಿಟ್ಟಿತು. ತುಂಬಾ ಚಟುವಟಿಕೆ, ಕಲ್ಪನಾ ಸಾಮರ್ಥ್ಯ, ಕಾರ್ಯಚಾತುರ್ಯ, ಮತ್ತು ರಾಜಕೀಯು ತತ್ವಗಳ ಅನುಭವ, ಇಷ್ಟೆಲ್ಲಾ ಇದ್ದು ತನಗೆ ಯುುಕ್ತ ಕಂಡಂತೆ ಸರಕಾರದ ಎಲ್ಲಾ ಇಲಾಖೆಗಳಲ್ಲಿ ಒಂದು ಬಗೆಯು ನೂತನ ಸ್ಫೂರ್ತಿಯುನ್ನು ಉಂಟು ಮಾಡಿದ ವೈಸರಾಯಿ ಲೋರ್ಡ್ ಕರ್ಝನ್ ಇಲ್ಲಿಯು ಶಿಕ್ಷಣ ಪ್ರಚಾರದಲ್ಲಿ ಹೊಸತೊಂದು ಜಾಹೀರನಾಮೆಯುನ್ನು ಪ್ರಕಟಿಸಿದನು. ಪ್ರಕಟವಾದೊಡನೆಯೇ ಹಲವು ಪ್ರಾಜ್ಞರು ಇದನ್ನು ಸ್ಪಷ್ಟೋಕ್ತಿಗಳಿಂದ ಖಂಡಿಸಿದ್ದಾರೆ. "ಹೈಸ್ಕೂಲ್ ಮತ್ತು ಕೊಲೇಜುಗಳು ಸ್ವತಂತ್ರವಾಗಿ ತಲೆ ಎತ್ತುವುದಕ್ಕೆ ಈ

ಜಾಹೀರುನಾಮೆಯು ಪ್ರತಿಬಂಧಕವಾಗುತ್ತದೆ; ಶಾಲೆ, ಕೊಲೇಜುಗಳಲ್ಲಿ ವಿದ್ಯಾರ್ಥಿಗಳು ತೆರುವ ಫೀಸಿನ ದರವು ಹೆಚ್ಚುವಂತಿದೆ; ಸರಕಾರದ ಉರುಳು ಕೊಂಡಿಯು ಖಾಸಗಿ ಸಂಸ್ಥೆಗಳ ಕುತ್ತಿಗೆಯ ಮೇಲೆ ಬಿಗಿಯುತ್ತ ಬರುತ್ತದೆ; ಪರೀಕ್ಷೆಗಳ ಮಾನವು ಹೆಚ್ಚಿದೆ; ಕಲಿಸುವ ವಿಷಯುಗಳ ಮೊತ್ತವೂ ಮಿತಿಯೂ ವಿಸ್ತಾರವಾಗಿ ಬೆಳೆದಿದೆ; ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕವಾಗಿ ಪಸರಿಸುವ ಭಾರವು ಸಗಕಾರದ್ದಾಗಿದೆ ಎಂಬುದೊಂದೇ ಈ ಕುರುಡು ಕಣ್ಣಿನಲ್ಲಿಯ ಮುಸುಕು ಬೆಳಕು," ಎಂದು ಹಲವರು ಆಗಲೇ ಅಭಿಪ್ರಾಯ ಪಟ್ಟಿದ್ದರು. ಲೋರ್ಡ್ ಕರ್ಝನನ ವ್ಯವಸ್ಥೆಗೆ ಅನುಗುಣವಾಗಿ ಶಿಕ್ಷಣ ಪ್ರಚಾರಕ್ಕೆ ವೆಚ್ಚವಾಗುವ ಹಣದ ಮೊತ್ತವು ಹೆಚ್ಚಾಗುತಿದ್ದರೂ ಪ್ರಾಥಮಿಕ ಶಿಕ್ಷಣವು ಇನ್ನೂ ಸಾರ್ವತ್ರಿಕವಾಗಲಿಲ್ಲ. ಆ ಉದ್ದೇಶವು ನೆರವೇರುವಂತೆ ದಿವಂಗತ ಗೋಪಾಲ ಕೃಷ್ಣ ಗೋಖಲೆಯುವರು ಕ್ರಿ. ಶ. 1910ರಲ್ಲಿ ವರಿಷ್ಠ ನ್ಯಾಯವಿಧಾಯಕ ಸಭೆಯಲ್ಲಿ ಒಂದು ಠರಾವನ್ನು ಚರ್ಚೆಗಿಟ್ಟರು. ಪ್ರಾಥಮಿಕ ಶಿಕ್ಷಣವು ಕಡ್ಡಾಯವಾಗಿಯೂ ಸಾರ್ವತ್ರಿಕವಾಗಿಯೂ ಇದ್ದು, ಪ್ರತಿ ಒಂದು ಮಗುವಿಗೆ 6ನೇಯ ವರ್ಷದ ಪ್ರಾಯದಿಂದ ಹತ್ತನೆಯ ವರ್ಷದ ವರೆಗೆ ಶಿಕ್ಷಣಕ್ಕೆ ಏರ್ಪಾಡು ಇರಬೇಕು, ಈ ಬಗ್ಗೆ ಖರ್ಚಿನಲ್ಲಿ ಸರಕಾರವು 2 ಪಾಲನ್ನೂ ಸ್ಥಳಿಯ ಬೋರ್ಡುಗಳು ಒಂದು ಪಾಲನ್ನೂ ವಹಿಸಬೇಕೆಂದು ಈ ಠರಾವಿನ ಉದ್ದೇಶ. ಈ ವಿಷಯುದಲ್ಲಿ ಸಾಧ್ಯಾಸಾಧ್ಯತೆಯನ್ನು ಕುರಿತು ವಿಚಾರ ನಡೆಸುವುದಾಗಿ ಸರಕಾರವು ಭರವಸೆ ಕೊಟ್ಟದ್ದರಿಂದ ಗೋಖಲೆಯುವರು ಈ ಠರಾವನ್ನು ಹಿಂದೆಗೆದರು. ಕ್ರಿ. ಶ. 1911ರಲ್ಲಿ ಇದೇ ಉದ್ದೇಶವನ್ನಿಟ್ಟು ಅಲ್ಪ ಸ್ವಲ್ಪ ಬದಲಾವಣೆಗಳನ್ನು ಮಾಡಿ ಗೋಖಲೆಯುವರು ಕಾನೂನಿನ ಒಂದು ಮಸೂದೆಯುನ್ನು ವರಿಷ್ಠ ಕೌನ್ಸಿಲಿನ ಮುಂದೆ ತಂದಾಗ 'ಜನತೆಯು ವಿದ್ಯೆಬೇಕೆಂಬ ಲಾಲಸೆ ತೋರಿಸಿಲ್ಲ, ಪ್ರಾಂತಿಕ ಸರಕಾರದವರು ಈ ಕಾನೂನಿಗೆ ತಯಾರಾಗಿಲ್ಲ, ಇದನ್ನು ಜ್ಯಾರಿಗೆ ತರಲಿಕ್ಕೆ ಅಪರಿಮಿತ ದ್ರವ್ಯಾನುಕೂಲವು ಅಗತ್ಯ, ಕಡ್ಡಾಯದ ನಿಬಂಧನೆಯುನ್ನು ಆಚರಣೆಗೆ ತರಲಿಕ್ಕೆ ಹಲವು ತೊಡಕುಗಳಿವೆ,' ಎಂಬಿತ್ಯಾದಿ ಕಾರಣಗಳನ್ನು ಈ ಸಭೆಯಲ್ಲಿ ಹೇಳಿದ್ದರಿಂದ ಈ ಕಾನೂನು ಮಂಜೂರಾಗಲಿಲ್ಲ.

ಕ್ರಿ. ಶ. 1912ರಲ್ಲಿ ಐದನೆಯ ಜೋರ್ಜ್ ಸಾರ್ವಭೌಮರು ಹಿಂದುಸ್ಥಾನದಲ್ಲಿ ಪ್ರವಾಸ ಮಾಡಿದಾಗ, ಪ್ರಾಥಮಿಕ ಶಿಕ್ಷಣದ ಪ್ರಚಾರಕ್ಕಾಗಿ ಹೆಚ್ಚಿನ ದ್ರವ್ಯಾನುಕೂಲವನ್ನು ಒದಗಿಸುವುದಾಗಿ ಆಶ್ವಾಸನ ದಯಪಾಲಿಸಿದರು. ಅದರಿಂದ 1913ರಲ್ಲಿ ಶಿಕ್ಷಣವು ಚಿಕ್ಕದೊಂದು ಹೊಸ ಮಜಲಿಗೆ ತಲಪಿತು. ಈ ಹೊಸ ಏರ್ಪಾಡಿನ ಮೇರೆಗೆ ಪ್ರಾಥಮಿಕ ಶಿಕ್ಷಣದಲ್ಲಿ ಓದು ಬರಹ ಲೆಕ್ಕಗಳೊಂದಿಗೆ ಚಿತ್ರಲೇಖನ, ಗ್ರಾಮ ಭೂಗೋಳ, ಸೃಷ್ಟಿ ಪರಿಚಯ್ಯ, ವ್ಯಾಯಾಮದ ಅಭ್ಯಾಸಗಳು ಇಷ್ಟನ್ನು ಸೇರಿಸುವಂತೆ ವ್ಯವಸ್ಥೆ ಆಯಿತು. ಶಾಲೆಗಳ ಮಂಜೂರಾತಿಗೆ ಹೊಸ ನಿಬಂಧನೆಗಳು ಸೆಕೆಂಡರೀ ಶಾಲೆ ಮತ್ತು ಕೊಲೆಜುಗಳನ್ನು ಖಾಸಗಿ ಜನರು ಏರ್ಪಡಿಸುವಲ್ಲಿ ವ್ಯವಸ್ಥಿತ ಆಡಳಿತೆಯ ಕಮಿಟಿ, ಅದಕ್ಕನುಗುಣವಾದ ದ್ರವ್ಯಾನುಕೂಲತೆ, ಕಟ್ಟೋಣಗಳ ವಿಸ್ತರಣ, ಶಿಕ್ಷಣದ ಸಾಹಿತ್ಯ ಸಾಮಗ್ರಿಗಳ ಪುರವಣೆ, ಉಪಾಧ್ಯಾಯರುಗಳಿಗೆ ಯೋಗ್ಯರೀತಿಯ ತರಬೇತಿ, ಸ್ವಲ್ಪ ಹೆಚ್ಚಿದ ಸಂಬಳ ದರಗಳು ಇತ್ಯಾದಿ ವಿಷಯಗಳ ಕಡೆಗೆ ಜನತೆಯ ದೃಷ್ಟಿಯೂ ಸರಕಾರದ ದೃಷ್ಟಿಯೂ ವ್ಯಾಪಿಸ ತೊಡಗಿದೆ. ಆದರೆ ಏನನ್ನು ಕಲಿಸಬೇಕು, ಎಷ್ಟನ್ನು ಕಲಿಸಬೇಕು, ಹೇಗೆ ಕಲಿಸಬೇಕು, ಎಂಬ ವಿಷಯವು ಇನ್ನೂ ಸ್ಥಿಮಿತಕ್ಕೆ ಬರಲಿಲ್ಲ. ಈ ವಿಚಾರದಲ್ಲಿ ಭಿನ್ನಾಭಿಪ್ರಾಯಗಳ ಹೊಡೆದಾಟ ಇನ್ನೂ ನಡೆಯುತ್ತಲೇ ಇದೆ.

ರಾಷ್ಟ್ರೀಯ ಶಿಕ್ಷಣದ ವಿಚಾರ

ಒಂದು ಕಡೆ ರಾಮ್‌ಮೋಹನ್‌ರಾಯ್, ಇನ್ನೊಂದು ಕಡೆ ಲೋರ್ಡ್ ಮೆಕೋಲೆ ಇವರ ಉತ್ಸಾಹದಿಂದ ಬಿತ್ತಿದ ಪಾಶ್ಚಾತ್ಯ ಸಂಸ್ಕೃತಿಯ ಬೀಜವು ಮಹತ್ತಾದ ದುಷ್ಪರಿಣಾಮವನ್ನು ಉಂಟುಮಾಡಿತೆಂದು ಹಿಂದಿನ ಅಧ್ಯಾಯದಲ್ಲೇ ಸ್ವಲ್ಪ ಸೂಚನೆಯನ್ನು ಕೊಟ್ಟದೆ. ಮೊದಲನೆಯದಾಗಿ ಜನಸಾಮಾನ್ಯರಿಗೆ ಸುಲಭವಾಗಿ ಎಟಕದಂಥ ಸಂಸ್ಕೃತ ಪಾಠದ ಸ್ಥಾನದಲ್ಲಿ ಅಷ್ಟೇ ದುರ್ಲಭವಾದ ಇಂಗ್ಲಿಷ್ ಭಾಷೆಯು ನಿಂತಿತು. ಇದರೊಂದಿಗೆ ಪಾಶ್ಚಾತ್ಯರ ಮನೋಭಾವ, ಪಾಶ್ಚಾತ್ಯರ ಆಚಾರ, ನಡವಳಿತೆ ಇವೇ ಉಚ್ಚ ಸ್ಥಾನವನ್ನು ಹೊಂದಿದುವು; ಪ್ರಾಚೀನ ಆಚಾರಗಳು ಮೂಲೆಪಾಲಾದುವು. ಪಾಶ್ಚಾತ್ಯರ ಪೋಷಾಕು, ಸುಖ ಸೌಕರ್ಯಗಳ ಸಾಧನೆಗಳು, ಇವೆಲ್ಲ ಮನೆಯ ಹೊಸ್ತಿಲನ್ನು ದಾಟಿ ತಂಡ ತಂಡವಾಗಿ ಒಳನುಗ್ಗಿದವು. ಈ ನೂತನ ಶಿಕ್ಷಣವನ್ನು ಹೊಂದಿದವನು, ಇತ್ತ ದೇಶೀಯನೂ ಅಲ್ಲ, ಅತ್ತ ವಿದೇಶೀಯನೂ ಅಲ್ಲ, ವಿಜಾತೀಯವಾದ ಪ್ರಾಣಿಯಾದನು. "ಏಕಮೇವಾ ದ್ವಿತೀಯಂ" ಎಂಬುದರ ಅರ್ಥವು 'ಇಂಗ್ಲಿಷರಲ್ಲದೆ ಬೇರೆ ದೇವರಿಲ್ಲ' ಎಂಬದಾಗಿ ಪರಿಣಮಿಸಿತು. ಪಾಶ್ಚಾತ್ಯರೇ ಸುಸಂಸ್ಕೃತರು, ಅವರ ಅನುಕರಣೆಯೇ ಸುಶಿಕ್ಷಣದ ಲಕ್ಷಣ ಎಂಬ ಭಾವನೆಯು ಈ ಹೊಸ ಜಾತಿಯಲ್ಲಿ ಹರಡಿ, ಅವರು ತಮ್ಮ ಅಶಿಕ್ಷಿತ ಹಳ್ಳಿ ಬಾಂಧವರನ್ನು ಒಂದು ಬಗೆಯ ಕಾಡು ಪ್ರಾಣಿಯಾಗಿ ಪರಿಗಣಿಸ ತೊಡಗಿದರು. ಹೀಗಾಗಿ ಹೊಸ ಶಿಕ್ಷಿತರಿಗೂ ಜನಸಾಮಾನ್ಯರಿಗೂ, ಹೊಕ್ಕುಬಳಕೆ ಪ್ರೇಮ ವಿಶ್ವಾಸಗಳು ತಪ್ಪಿ ಹೋದುವು. ಯಾವ ವಿಜ್ಞಾನ ಶಾಸ್ತ್ರದ ಪರಿಚಯದಿಂದ ಪಾಶ್ಚಾತ್ಯರಂತೆ ನೂತನ ಜನಾಂಗವನ್ನು ತಯಾರಿಸ ಬೇಕೆಂಬ ಸದುದ್ದೇಶವು ಮೇಲೆ ಹೇಳಿದ ಮಹಾ ಪ್ರಭೃತಿಗಳಲ್ಲಿ ಇತ್ತೊ, ಅದು ಸ್ವಲ್ಪವೂ ಕೈಸಾಗದೆ, ವಿದ್ಯಾರ್ಥಿಗಳ ಆಯುಷ್ಕಾಲದ ಅಧಿಕಾಂಶವು ಇಂಗ್ಲಿಷ್ ಭಾಷೆಯೊಂದನ್ನು ಕಲಿಯುವುದರಲ್ಲೇ ವೆಚ್ಚವಾಯಿತು. ಈ ಶಾಲಾ ಯಂತ್ರಗಳಿಂದ ಹೊರ ಬಿದ್ದವರೆಲ್ಲ ಒಂದೇ ಅಚ್ಚು.

ಅಂದರೆ ಬ್ರಿಟಿಷ್ ಸಂಸ್ಕೃತಿಯ ಮರುಧ್ವನಿ, ಆದರೆ ಇಂಗ್ಲಿಷ್ ಭಾಷೆಯಿಂದ ಪತ್ರವ್ಯವಹಾರ ನಡಿಸಿ ಕೋರ್ಟು ಕಚೇರಿಗಳಲ್ಲಿ, ವರ್ತಕರ ಮಳಿಗೆಗಳಲ್ಲಿ ಗುಮಾಸ್ತೆಯರಾಗಿ ಜೀವನ ನಡಿಸುವ ಸ್ಥಿತಿಗೆ ಇಳಿದರು. ಇಂಥ ದುಷ್ಪರಿಣಾಮವು ಕೆಲವೇ ಕೆಲವು ಪಟ್ಟಣಿಗರ ಮೇಲೆ ಆಗಿದ್ದರೂ ಅದರ ಛಾಯೆಯು ಹಳ್ಳಿಪಳ್ಳಿಗಳಿಗೆ ವ್ಯಾಪಿಸ ತೊಡಗಿತು.

ಆದರೆ ಲೋರ್ಡ್ ಮೆಕೋಲೆಯು ಕನಸು ಕಂಡಂತೆ ಪಾಶ್ಚಾತ್ಯ ರಾಜಕೀಯ ತತ್ವಗಳನ್ನು ಹೀರಿ ತಾವು ಪಾಶ್ಚಾತ್ಯರಂತೆ ಸ್ವತಂತ್ರರಾಗಬೇಕು, ಎಂಬ ಪ್ರಜ್ಞೆಯು ಈ ನವ ಶಿಕ್ಷಿತರಲ್ಲಿ ತಲೆದೋರಿ, ಚಿಕ್ಕ ಜಾಪಾನು ಅಷ್ಟು ದೊಡ್ಡ ರುಷ್ಯ ಸಾಮ್ರಾಜ್ಯವನ್ನು ಪಾಶ್ಚಾತ್ಯ ರೀತಿಯ ಶಿಕ್ಷಣದ ಸಹಾಯದಿಂದ ತನ್ನ ಎಡಗಾಲಿನಿಂದ ಒದ್ದು ಬಿಟ್ಟಿತು ಎಂದು ತಿಳಿದೊಡನೆ ಇಷ್ಟು ದೊಡ್ಡ ಭೂಖಂಡದ 30 ಕೋಟಿ ಜನರಿಗೆ ಅಂಥ ಶಿಕ್ಷಣದ ಸಹಾಯದಿಂದ ಏನು ಅಸಾಧ್ಯವಾದೀತು? ಎಂಬ ವಿಚಾರವು ಈ ಶಿಕ್ಷಿತ ವರ್ಗದಲ್ಲಿ ಹೊಳೆತು, ಒಂದು ಕಡೆ 'ಕೊಂಗ್ರೆಸ್' ಎಂಬ ರಾಜಕೀಯ ಕೂಟವು ತಮಗೆ ಬೇಕಾದ ಸಲಹೆಗಳನ್ನು ಸರಕಾರದೊಡನೆ ಕೇಳಿಕೊಳ್ಳುವುದಕ್ಕೆ ಸ್ಥಾಪನೆಯಾಯಿತು. ಇದೇ ಸಮಯದಲ್ಲಿ ಹಿಂದೀ ಪ್ರಾಚೀನ ಶಾಸ್ತ್ರಕಲೆಗಳ ಉತ್ಕೃಷ್ಟತೆಯನ್ನು ವಿಲಾಯತಿಯ ಪ್ರೊಫೆಸರ್ ಮೆಕ್ಸ್‌ಮುಲ್ಲರರಂಥ ಹಲವು ಮಹಾ ಪುರುಷರು ಪ್ರಶಂಸಿಸಿ ಟೀಕಿಸಿದ್ದರಿಂದ, ಅಂಥ ಗ್ರಂಥಗಳ ಇಂಗ್ಲಿಷ್ ಪರಿವರ್ತನೆಗಳನ್ನು ಓದಿದ ಸುಶಿಕ್ಷಕರು ಮೂಲ ಗ್ರಂಥಗಳನ್ನೇ ಓದಲು ಉಪಕ್ರಮಿಸಿದರು. ಸ್ವಾಮಿ ದಯಾನಂದ ಸರಸ್ವತಿಯಂಥ ಹಲವು ದೇಶೀಯರು ಅಚ್ಚ ಸಂಸ್ಕೃತದಲ್ಲಿಯೇ ಮೂಲ ಗ್ರಂಥಗಳನ್ನು ಪಠಿಸಿ, ಅವುಗಳ ಟೀಕೆಟಿಪ್ಪಣಿಯನ್ನು ಹಿಂದೀ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ಬರೆದು, ಈ ಆರ್ಯ ಸಂಸ್ಕೃತಿಯ ಮಹತ್ವವನ್ನು ಜನಸಾಮಾನ್ಯರು ಕೂಡ ತಿಳಿಯುವಂತೆ ಸಾಹಸ ಮಾಡಿದರು. ಹೀಗಾಗಿ ಈ ಸಂಸ್ಕೃತಿಯ ಕಡೆಯಿಂದ ಒಮ್ಮೆ ತೊಲಗಿ ಹೋಗಿದ್ದ ಪುನಃ ಜಾಗೃತವಾದ ಸ್ವಾಭಿಮಾನವು ಸ್ವದೇಶಾಭಿಮಾನ, ಸ್ವಸಂಸ್ಕೃತಿಯ ಅಭಿಮಾನ ಇವುಗಳು ಜನ್ಮವೆತ್ತುವುದಕ್ಕೆ ಸಹಾಯಕವಾಯಿತು. ರಾಮ್‌ಮೋಹನ್ ರಾಯ್, ಲೋರ್ಡ್ ಮೆಕೋಲೆ ಇವರ ಏಕ್ಯಪ್ರಯತ್ನಗಳಿಂದ ಪೂರ್ವದಿಕ್ಕಿನಿಂದ

ಪಶ್ಚಿಮಕ್ಕೆ ಒಲೆದ ಶಿಕ್ಷಣವು ಪುನಃ ಪೂರ್ವಕ್ಕೆ ಆಂದೋಲನ ಕ್ರಮವನ್ನು ಅನುಸರಿಸಿತು. ಇಂಗ್ಲೀಷ್ ಶಿಕ್ಷಣದ ಬಣ್ಣದ ಗಾಜಿನ ಕನ್ನಡಕವನ್ನು ಇಟ್ಟುಕೊಂಡು ನೋಡಿದ ಪ್ರಾಚೀನ ಸಂಸ್ಕೃತಿಯ ಚಿತ್ರವು ನೈಜವಾದ್ದಲ್ಲ, ಅದರ ನಿಜವಾದ ಪ್ರಭೆಯೂ ಅಸಾಧಾರಣವಾಗಿದೆ, ಎಂದು ಉಂಟಾದ ದೃಢನಂಬಿಕೆಯ ಫಲವೇ ರಾಷ್ಟ್ರೀಯ ಶಿಕ್ಷಣದ ಔತ್ಸುಕ್ಯಕ್ಕೆ ಕಾರಣವಾಯಿತು.

ಈ ರಾಷ್ಟ್ರೀಯ ಶಿಕ್ಷಣವೆಂದರೇನು, ಅದರ ಧ್ಯೇಯ ಕಾರ್ಯಗಳೇನು, ಎಂಬ ವಿಷಯದಲ್ಲಿ ಡಾ। ಎನ್ನಿಬಿಸೆಂಟಮ್ಮನವರು ಚೆಲುವಾಗಿ ವಿವರಿಸಿದ್ದಾರೆ. ಅವರು ಅನ್ನುವಂತೆ ರಾಷ್ಟ್ರಿಯ ಶಿಕ್ಷಣದ ಲಕ್ಷಣಗಳು ಹೀಗಿವೆ:—

(1) ಅದರ ಸೂತ್ರಗಳು ಹಿಂದೀ ಜನರ ಕೈಯಲ್ಲಿದ್ದು, ಅವರೇ ಅದರ ರೀತಿ ಪ್ರಕಾರಗಳನ್ನು ನಿರ್ಣಯಿಸಿ, ಆಚರಣೆಯಲ್ಲಿ ತರಬೇಕು. ಅದು ಹಿಂದೀ ಜನರ ಭಕ್ತಿ, ಜ್ಞಾನ, ನೈತಿಕ ವಿಚಾರಗಳನ್ನು ಒಳಕೊಂಡಿದ್ದು, ಪ್ರಾಚೀನ ಧರ್ಮದ ಆಧಾರವಾದ ಮೂಲ ತತ್ವಗಳನ್ನು ಮಾತ್ರ ಒಳಕೊಂಡಿರಬೇಕಲ್ಲದೆ, ಇದರ ಮೇಲೆ ಅನಂತರ ಎದ್ದ ಗುಳ್ಳೆಗಳಂತಿರುವ ಮತ್ತು ಚರ್ಚಾಸ್ಪದವಾದ ಮತಭೇದಗಳಿಗೆ ಪುಷ್ಟಿಕೊಡಬಾರದು. ಈ ಮೂಲಧರ್ಮವು 'ಸರ್ವವೂ ಬ್ರಹ್ಮವಾಗಿದೆ' ಎಂಬ ಮಹಾತತ್ವವನ್ನು ಪ್ರತಿಪಾದಿಸಿದೆ. ಈ ಪರಬ್ರಹ್ಮದ ಜ್ಞಾನಕ್ಕೆ ಬೇರೆ ಬೇರೆ ಅವತಾರ ಪುರುಷರು ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಮಾರ್ಗಗಳನ್ನು ತೋರಿಸಿದ್ದಾರೆ; ದಾರಿಗಳು ಎಷ್ಟೇ ಇರಲಿ, ಮುಟ್ಟಲಿರುವ ಶಿಖರವು ಒಂದೇ. ವಿಸ್ತಾರವಾದ ತನ್ನ ವಕ್ಷತಳದಲ್ಲಿ ಇತರ ಎಲ್ಲಾ ಧರ್ಮಗಳ ತತ್ವಗಳಿಗೂ ಸ್ಥಳ ಕೊಟ್ಟು ವ್ಯಾಪಕ ದೃಷ್ಟಿಯನ್ನು ತಳೆದಿರುವ ಈ ಪ್ರಾಚೀನ ಧರ್ಮವನ್ನು ಲೋಕೋತ್ತರವಾಗುವ ಹಾಗೆ ಕಲಿಸಬೇಕು.

(2) ರಾಷ್ಟ್ರಿಯ ಶಿಕ್ಷಣವು ಸ್ವಾಭಿಮಾನ ಮತ್ತು ಸ್ವದೇಶ ಪ್ರೇಮದ ವಾತಾವರಣದಲ್ಲಿಯೆ ಬೆಳೆಯಬೇಕು. ಈ ವಾತಾವರಣವು ಕೆಡದ ಹಾಗೆ ಪ್ರಾಚೀನ ವಾಂಙ್ಮಯ, ಇತಿಹಾಸ, ವಿಜ್ಞಾನ ಶಾಸ್ತ್ರ, ಕಲೆ, ರಾಜತಂತ್ರ, ಯುದ್ಧ ಕೌಶಲ, ಅನ್ಯ ದೇಶಗಳಲ್ಲಿ ಪ್ರವಾಸ, ವೃತ್ತಿ ಕೈಗಾರಿಕೆ, ವ್ಯಾಪಾರ,

ಮುಂತಾದುವುಗಳಲ್ಲಿ ಹಿಂದೀಯರು ತೋರಿಸಿದ ಸಾಹಸಗಳ ಉಲ್ಲೇಖದಿಂದ ಈ ಶಿಕ್ಷಣಕ್ಕೆ ನವಚೇತನವನ್ನು ತುಂಬಬೇಕು. ಪ್ರಾಚೀನ ಅರ್ಥಶಾಸ್ತ್ರ, ಧರ್ಮಶಾಸ್ತ್ರಗಳನ್ನು ಜನ ಸಾಮಾನ್ಯರು, ಭಕ್ತಿ ಪುರಸ್ಸರವಾಗಿ ಪಠಿಸುವಂತೆ ಯತ್ನಿಸಬೇಕು.

(3) ರಾಷ್ಟ್ರಿಯ ಶಿಕ್ಷಣವು ಹಿಂದೀ ಜನಾಂಗದ ನಡತೆ ನಡಾವಳಿಗಳಿಂದ ದೂರವಿರಬಾರದು. ಯಾವ ನ್ಯಾಯವಾದ ಆಚಾರಗಳು ಮನೆಗಳಲ್ಲಿ ಪಾರಂಪರ್ಯವಾಗಿ ಪ್ರಚಲಿತವಾಗಿದ್ದವೊ ಅವನ್ನೇ ಸುರಕ್ಷಿತವಾಗಿರಿಸಬೇಕು. ರಾಷ್ಟ್ರವೆಂಬುದು ಹಲವು ಕುಟುಂಬಗಳ ಸಮುದಾಯ. ರಾಷ್ಟ್ರವೇ ವಿಸ್ತೃತವಾದ ಕುಟುಂಬ, ಕುಟುಂಬವೇ ಸಂಕುಚಿತವಾದ ರಾಷ್ಟ್ರ ಎಂಬಂತಿರಬೇಕು. ಈಗಿನಂತೆ 'ಮನೆಯಲ್ಲಿ ಓದುವುದು ಶಾಸ್ತ್ರ; ಶಾಲೆಯಲ್ಲಿ ಇಕ್ಕುವುದು ಗಾಳ' ಎಂಬಂತೆ ಪರಸ್ಪರ ವಿರೋಧ ಸ್ಥಿತಿಗೆ ಅವಕಾಶ ಕೊಡಬಾರದು. ಮನೆಯಲ್ಲಿ ಸಭ್ಯರಾದ ತಾಯಿತಂದೆಗಳು ಏನನ್ನು ಬೋಧಿಸುತ್ತಾರೊ, ಅದನ್ನೇ ಉಪಾಧ್ಯಾಯರು ವಿಸ್ತಾರಗೊಳಿಸಬೇಕು.

(4) ರಾಷ್ಟ್ರಿಯ ಶಿಕ್ಷಣವು ಜನತೆಯ ಮನೋಭಾವಗಳಿಗೆ ಅನುಕೂಲವಾದದ್ದಿರಬೇಕು. ಹಿಂದೂಸ್ಥಾನವು ಹಿಂದೀಯರ ಸ್ಥಾನವಾಗಿರಬೇಕಲ್ಲದೆ ಇಂಗ್ಲೆಂಡಿನ ಪ್ರತಿಬಿಂಬ ಅಥವಾ ಚಿಕ್ಕ ನಕ್ಷೆಯಾಗಿರಬಾರದು. ತನ್ನ ಆಸ್ತಿಕ್ಯವನ್ನು ಸುರಕ್ಷಿತ ಪಡಿಸಿಕೊಂಡು, ಸರ್ವತೋಮುಖವಾಗಿ ದೊಡ್ಡ ವೃಕ್ಷವಾಗಿ ಬೆಳೆದು, ತನ್ನ ಶಾಖೆಗಳನ್ನು ಎಲ್ಲ ಕಡೆಗೂ ಪಸರಿಸಿ, ಅವುಗಳ ನೆರಳಲ್ಲಿ ಎಲ್ಲರಿಗೂ ಸರಿಸಮಾನವಾದ ಆಶ್ರಯ ಕೊಡಬೇಕು.

ಈ ಉದ್ದೇಶದಿಂದ ಹಿಂದೂಸ್ಥಾನದಲ್ಲಿ 19ನೇ ಶತಮಾನದ ಕೊನೆಯ ವರ್ಷಗಳಿಂದಲೇ ಅನೇಕ ಪ್ರಯತ್ನಗಳು ನಡೆದವು. ಕ್ರಿಸ್ತ ಶಕ 1883ರಲ್ಲಿ ಲಾಲಾಲಜಪತರಾಯರು ಈ ವಿಷಯದಲ್ಲಿ ಕೈಹಾಕಿದರು. ಕ್ರೈಸ್ತ ಮಿಶನರಿಗಳಂತೆ ಆರ್ಯ ಧರ್ಮ ಪ್ರಸಾರವನ್ನು ಮಾಡಬೇಕು, ಅದರ ಅಭಿಮಾನವನ್ನು ಕಾಯಬೇಕು, ಅದನ್ನು ಸಾಯಗೊಡಿಸಬಾರದು, ಎಂಬ ಆಕಾಂಕ್ಷೆಯಿಂದ ಆರ್ಯಸಮಾಜದವರು **ದಯಾನಂದ ಎಂಗ್ಲೋ ವೇಡಿಕ್ ಕೊಲೇಜನ್ನು** ಲಾಹೋರಲ್ಲಿ ಸ್ಥಾಪಿಸಿದರು. ಇದರ ಮೂಲ ಸ್ಥಾಪಕರಲ್ಲಿ ಲಾಲಾಲಜಪತರಾಯರು ಒಬ್ಬರು. ಇವರು ಸುಮಾರು 25

ವರ್ಷಗಳ ಕಾಲ ಈ ವಿಷಯದಲ್ಲಿ ತುಂಬಾ ಸಾಹಸ ಮಾಡಿದರು. ಈ ಕೊಲೇಜಿನ ಆಡಳಿತೆ ಮಂಡಲದವರು ಸರಕಾರದ ದ್ರವ್ಯಸಹಾಯವನ್ನು ನಿರೀಕ್ಷಿಸದೆ ಮೊತ್ತಮೊದಲು ಮುಂದೊತ್ತಿದರು. ಈ ಕೊಲೇಜಿನಿಂದ ಹೊರಬಿದ್ದ ಅನೇಕಾನೇಕ ವಿದ್ಯಾರ್ಥಿಗಳು ದೇಶ ಪ್ರೇಮ, ದೀನರ ಕಡೆಗೆ ಸಹಾನುಭೂತಿ, ದೇಶೋದ್ಧರಣದ ಆಕಾಂಕ್ಷೆ, ಇವುಗಳಿಂದ ತುಂಬಿದವರಾಗಿದ್ದರೂ, ಅವರಲ್ಲಿ ಹಿಂದೀ ಜನಾಂಗವೆಂದರೆ ಹಿಂದೂ ಮತದವರೆಂಬ ಸಂಕುಚಿತ ದೃಷ್ಟಿಯು ನಿಂತು ಬಿಟ್ಟಿತು.

ಸರ್ ಸಯ್ಯದ್ ಅಹಮ್ಮದ್ ಖಾನರು ಮುಸಲ್ಮಾನರ ಉದ್ಧರಣೆಗಾಗಿ ಆಲೀಘರ ಎಂಬಲ್ಲಿ **ಎಂಗ್ಲೋ ಓರಿಯೆಂಟಲ್ ಕೋಲೇಜನ್ನು** ಸ್ಥಾಪಿಸಿ, ಅದರಲ್ಲಿ ಫಾರಶೀ, ಅರಬೀ, ಉರ್ದು ಭಾಷೆಗಳಿಗೆ ಪ್ರಾಧಾನ್ಯ ಕೊಟ್ಟು, ಅವುಗಳೊಂದಿಗೆ ಪಾಶ್ಚಾತ್ಯ ಕಲೆಗಳನ್ನೂ ವಿಜ್ಞಾನ ಶಾಸ್ತ್ರವನ್ನೂ ಕಲಿಸುವ ಏರ್ಪಾಡನ್ನು ಮಾಡಿದರು. ಇಲ್ಲಿಂದ ಹೊರಟ ವಿದ್ಯಾರ್ಥಿಗಳು ದಯಾನಂದ ಕೊಲೇಜಿನ ವಿದ್ಯಾರ್ಥಿಗಳಂತೆ ಸುಶಿಕ್ಷಿತರಾಗಿ ವರ್ಚಸ್ಸಿನಿಂದ ಕೂಡಿದ್ದರೂ, ಇಸ್ಲಾಮೀ ಧರ್ಮ, ಮುಸಲ್ಮಾನ್ ಸಂಸ್ಕೃತಿ ಇವುಗಳ ದೃಷ್ಟಿಯಿಂದ ಹಿಂದೀ ಜನಾಂಗವನ್ನು ತಯಾರಿಸಲು ಯತ್ನಿಸಿದರು.

ಕಾಶಿಯಲ್ಲಿ ಡಾ॥ ಎನ್ನಿಬಿಸೆಂಟರು ಸ್ಥಾಪಿಸಿದ **ಸೆಂಟ್ರಲ್ ಹಿಂದೂ ಕೊಲೇಜಿನಲ್ಲಿ** ರಾಷ್ಟ್ರೀಯ ಶಿಕ್ಷಣದ ಉದ್ದೇಶವೇ ದೊಡ್ಡ ಅಕ್ಷರಗಳಿಂದ ಕೊರೆಯಲ್ಪಟ್ಟಿತು. ಎಂಗ್ಲೋ ಒರಿಯಂಟಲ್ ಕೊಲೇಜಿಗೆ ಮುಸಲ್ಮಾನ ರಾಜರೂ ದೊಡ್ಡ ಜಮೀನುದಾರರೂ ಸೆಂಟ್ರಲ್ ಹಿಂದೂ ಕೊಲೇಜಿಗೆ ಹಿಂದೂ ರಾಜರೂ ಜಮೀನುದಾರರೂ ದ್ರವ್ಯ ಸಹಾಯ ಕೊಡುತಿದ್ದರೂ ಡಾ॥ ಎನ್ನಿಬಿಸೆಂಟರು ಮೇಲೆ ಪ್ರತಿಪಾದಿಸಿದ ಮೊದಲನೆಯ ತತ್ವಕ್ಕೇ ಭಂಗ ಬಂತು. ಸರಕಾರದ ಆಶ್ವಾಸನದ ನಿರೀಕ್ಷಣೆಯಿಂದಲೋ ಅಥವಾ ಪಾಶ್ಚಾತ್ಯರ ದೃಷ್ಟಿಯು ಹಿಂದೀಯವರಿಗಿಂತ ವ್ಯಾಪಕವಾಗಿದೆ ಎಂಬದರಿಂದಲೋ ಈ ಎರಡು ಸಂಸ್ಥೆಗಳ ಅಧಿಕಾರಸೂತ್ರಗಳು ಪಾಶ್ಚಾತ್ಯರಿಂದ ಮಿಶ್ರಿತವಾದ ಕಮಿಟಿಯ ಕೈಯಲ್ಲಿದ್ದು, ಮುಖ್ಯ ಮುಖ್ಯ ಅಧ್ಯಾಪಕರು ಪಾಶ್ಚಾತ್ಯರೇ ಆದರು. ಕೊನೆಗೆ ಸರಕಾರದ ದ್ರವ್ಯಸಹಾಯ ಪಡೆದು ಅಲೀಘರ್ ಕೋಲೇಜು ಮುಸಲ್ಮಾನರ ಯುನಿವರ್ಸಿಟಿಯಾಗಿಯೂ, ಕಾಶಿಯ ಹಿಂದೂ

ಕೊಲೇಜು ಹಿಂದೂ ಯುನಿವರ್ಸಿಟಿಯಾಗಿಯೂ ರೂಪುಗೊಂಡವು. ಇವುಗಳಲ್ಲಿ ಪ್ರಾಚೀನ ಸಂಸ್ಕೃತಿಗಳ ಪರಿಚಯ ಮಾಡಿಸುವುದಷ್ಟೇ ಕಾರ್ಯವು ನಡೆಯುತ್ತದಲ್ಲದೆ, ಅವು ಈ ದೇಶದ ಇತರ ಯುನಿವರ್ಸಿಟಿಗಳಂತೆ ಪರೀಕ್ಷೆಗಳ ಮೇಲೆ ಆಧರಿಸಿಕೊಂಡಿವೆ. ಸ್ವತಂತ್ರವಾಗಿದ್ದ ದಯಾನಂದ ಕೊಲೇಜು ಕೂಡಾ ಸರಕಾರ ನಿಯುಕ್ತ ಪರೀಕ್ಷೆಗಳ ನೊಗಕ್ಕೆ ಹೆಗಲನ್ನೊಡ್ಡಿ, ತನ್ನ ಉಚ್ಚ ಧ್ಯೇಯಗಳಲ್ಲಿ ಹಲವನ್ನು ಕಳಕೊಂಡಿತು.

ಕಾಂಗ್ರೀಯಲ್ಲಿ ಲಾಲಾ ಮುನ್ಶಿರಾಮ್ (ಸ್ವಾಮಿ ಶ್ರದ್ಧಾನಂದಜಿ) ಇವರ ಪ್ರಯತ್ನದಿಂದ ಸರಕಾರದ ಸಹಾಯವಿಲ್ಲದೆ ನೂತನ ಸಂಸ್ಥೆಯೊಂದು ಜನ್ಮವೆತ್ತಿತು. ಇದರಲ್ಲಿ ಆರ್ಯ ಸಂಸ್ಕೃತಿಯ ಪ್ರಚಾರ, ವೇದ ಶಾಸ್ತ್ರಗಳ ಪಠಣ, ಇವು ಮುಖ್ಯವಾಗಿ ನಡೆಯುತ್ತಿವೆ. ಪ್ರಾಚೀನ ಋಷ್ಯಾಶ್ರಮಗಳನ್ನೇ ಪ್ರತಿಬಿಂಬಿಸುವುದು ಈ ಸಂಸ್ಥೆಯ ಉದ್ದೇಶ. ಈ ಸಂಸ್ಥೆಯಲ್ಲಿ ವಟುವು ಉಪನಯನವಾದೊಡನೆ ಸೇರಿ, ಬ್ರಹ್ಮಚಾರಿಯಾಗಿ 15, 16 ವರ್ಷಗಳ ಕಾಲ ಓದಬೇಕು. ಈಗಿನ ವ್ಯಾವಹಾರಿಕ ರೀತಿಯಿಂದ ವಿಶೇಷ ಪ್ರಯೋಜನಕ್ಕೆ ಬಾರದ ಈ ನೂತನ ಸಂಸ್ಥೆಯಿಂದ ತಮ್ಮ ಅಭ್ಯಾಸವನ್ನು ಪೂರೈಸಿ ಕೆಲವು ವಿದ್ಯಾರ್ಥಿಗಳು ಮಾತ್ರ ಈಚೆಗೆ ಹೊರಬಿದ್ದಿರುವರು. ಇವರು ದೇಶೋಭಿವೃದ್ಧಿಗಾಗಿ ಮಾಡಲಿರುವ ಪ್ರಯತ್ನಗಳ ಯಶಸ್ವಿತೆಯು ತಿಳಿದು ಬಂದನಂತರವೇ ಇಂಥಾ ಸಂಸ್ಥೆಯ ಮೇಲೆ ಜನತೆಗೆ ವಿಶ್ವಾಸವು ಹುಟ್ಟಬಹುದು.

ಪೂನೆಯಲ್ಲಿ **ಫೆರ್ಗೂಸನ್ ಕೊಲೇಜು** ಎಂಬ ಸಂಸ್ಥೆಯು ರಾಷ್ಟ್ರೀಯ ಶಿಕ್ಷಣಕ್ಕಾಗಿಯೇ ಸ್ಥಾಪನೆಯಾಯಿತು. ಗೋಖಲೆ, ಲೋಕಮಾನ್ಯ ತಿಲಕ, ಡಾ। ಪಾರಂಜಪೆ ಮುಂತಾದ ಪ್ರಭೃತಿಗಳು ಅತೀ ಕಡಮೆ ವೇತನದಿಂದ ಈ ಸಂಸ್ಥೆಯಲ್ಲಿ ಅಧ್ಯಾಪಕರಾಗಿದ್ದು, ದೇಶಪ್ರೇಮ, ನಿರ್ಗತಿಕರ ಕಡೆಗೆ ಸಹಾನುಭೂತಿ, ಸಮಾಜ ಸುಧಾರಣೆ ಇವುಗಳ ಕಡೆಗೆ ತಮ್ಮ ವಿದ್ಯಾರ್ಥಿವೃಂದದಲ್ಲಿ ಪ್ರೇರೇಪಣೆಯನ್ನು ಕೊಡುತಿದ್ದರು. ವಿದೇಶಿಯನೊಬ್ಬನ ಹೆಸರಿನಲ್ಲಿ ಸ್ಥಾಪಿಸಲ್ಪಟ್ಟ ಈ ಸಂಸ್ಥೆಯು ಸರಕಾರಿ ಗ್ರೇಂಟು ಮತ್ತು ಸರಕಾರ ನಿಯುಕ್ತವಾದ ಯುನಿವರ್ಸಿಟಿಯ ನಿಬಂಧನೆಗಳಿಗೆ ಹೆಗಲೊಡ್ಡಿ ತನ್ನ ಉದ್ದೇಶ ಸ್ವಾತಂತ್ರ್ಯವನ್ನು ಕಳಕೊಂಡಿದೆ.

ಭೋಲಪುರದಲ್ಲಿ ಡಾ। ರವೀಂದ್ರನಾಥ ಟಾಗೋರರು '**ಶಾಂತಿನಿಕೇತನ**' ಅದರ ಹಿಂದೆಯೇ '**ಶ್ರೀನಿಕೇತನ**' ಎಂಬೆರಡು ಸಂಸ್ಥೆಗಳನ್ನು ಸ್ಥಾಪಿಸಿ, ತಾನು ಸ್ವತಃ ವಿದ್ಯಾರ್ಥಿಗಳೊಂದಿಗೆ ಪಾಠ ಪ್ರವಚನಗಳಲ್ಲಿ ಬೆರತುಕೊಳ್ಳುವುದಲ್ಲದೆ, ಜಾತಿಮತಭೇದಗಳನ್ನಿಡದೆ ದೇಶಿಯ, ವಿದೇಶಿಯ ಅಧ್ಯಾಪಕರನ್ನು ಜತೆಗೊಳಿಸಿದ್ದಾರೆ. ಇಲ್ಲಿ ಪರೀಕ್ಷೆಗಳ ಗೊಂದಲವೇ ಇಲ್ಲ. ನಿಖಿಲ ಪ್ರಪಂಚವೇ ಒಂದು ಜನಾಂಗ, ಒಂದೇ ಕುಟುಂಬ ಎಂಬ ಭಾವನೆಯನ್ನು ಬಾಲ್ಯದಿಂದಲೇ ಮಕ್ಕಳು ಹೀರಿಕೊಳ್ಳಬೇಕು ಎಂಬ ವಿಚಾರವನ್ನು ಶಾಂತಿನಿಕೇತನದಲ್ಲಿ ಅನುಷ್ಠಾನಕ್ಕೆ ತರಹತ್ತಿದ್ದಾರೆ. ಶಾಂತಿನಿಕೇತನದಲ್ಲಿ ವಾಙ್ಮಯ ಕಲೆಗಳ ಪ್ರಚಾರ, ಶ್ರೀನಿಕೇತನದಲ್ಲಿ ಕೃಷಿಯ ಸುಧಾರಣೆ, ಹಳ್ಳಿಗಳ ಜೀರ್ಣೋದ್ಧಾರ ಇತ್ಯಾದಿ ವಿಷಯಗಳನ್ನು ಹೇಳಿಕೊಡುತ್ತಾರೆ. ಡಾ। ಟಾಗೋರರು ತನ್ನ ಹೇರಳ ಆಸ್ತಿಯ ಅಧಿಕಾಂಶವನ್ನು ಈ ಸಂಸ್ಥೆಗಳಿಗೆ ವಿನಿಯೋಗಿಸಿದ್ದಲ್ಲದೆ, ಬೇರೆ ಬೇರೆ ದೇಶಗಳಲ್ಲಿ ಸಂಚರಿಸಿ, ಈ ಸಂಸ್ಥೆಯ ಬಗ್ಗೆ ದ್ರವ್ಯ ಸಂಗ್ರಹವನ್ನು ಮಾಡುತಿದ್ದಾರೆ. ಈ ಸಂಸ್ಥೆಗಳ ಕರ್ತೃವೂ ಮುಖ್ಯ ಚಾಲಕರೂ ಟಾಗೋರರೊಬ್ಬರೆ. ಅವರ ನೂರು ಕಾಲದ ನಂತರ ಈ ಸಂಸ್ಥೆಗಳು ಯಾವರೂಪವನ್ನು ಹೊಂದಬಹುದೆಂಬದು ಈಗ ನಿರ್ಧರಿಸಲಾಗುವುದಿಲ್ಲ. ಇದಲ್ಲದೆ, ಮಧ್ಯಮ ವರ್ಗದ ಜನತೆಗೆ ತಮ್ಮ ಮಕ್ಕಳು ಇಂಥಿಂಥ ಪರೀಕ್ಷೆಗಳನ್ನು ಪಾಸು ಮಾಡಿ, ಇಂಥಿಂಥ ಉದ್ಯೋಗಕ್ಕೆನೇ ಯೋಗ್ಯತೆ ಪಡೆಯಬೇಕು, ಸರಕಾರದ ಮನ್ನಣೆ ಪರೀಕ್ಷೆಗಳಿಗೆ ಹೊರಪಟ್ಟ ಸಂಸ್ಥೆಗಳಿಂದ ಮಕ್ಕಳಿಗೆ ಉದ್ಯೋಗ ಸಿಗುವುದಿಲ್ಲ, ಎಂಬ ಅಭಿಪ್ರಾಯವು ಅಂಟಿಕೊಂಡಿರುವ ವರೆಗೆ ಈ ಬಗೆಯ ಸಂಸ್ಥೆಗಳ ಸಂಖ್ಯೆ ಏರಲಿಕ್ಕಿಲ್ಲ. ಇಡೀ ಹಿಂದೂಸ್ಥಾನದ ವಿಸ್ತಾರಕ್ಕೆ ಒಂದೇ ಒಂದು ಶಾಂತಿನಿಕೇತನವಿದ್ದರೆ ಏನೇನೂ ಸಾಲದು.

ಸ್ವದೇಶಿಯ ಚಳವಳದ ಕಾಲದಲ್ಲಿ ಬಂಗಾಳದಲ್ಲಿ **ನೆಶನಲ್ ಕೌನ್ಸಿಲ್ ಒಫ್ ಎಡ್ಯುಕೇಶನ್** ಎಂಬ ಸಂಸ್ಥೆಯೊಂದು ಸ್ಥಾಪನೆಯಾಯಿತು. ಇದರಲ್ಲಿ ಜಾತಿಧರ್ಮ ಭೇಧಗಳ ಅನುಲೇಪನವಿರಲಿಲ್ಲ. ಸ್ವದೇಶಿವೃತ್ತಿ ಕೈಗಾರಿಕೆಗಳಿಗೆ ಪುಷ್ಟಿಕೊಟ್ಟು, ಹಿಂದೀ ಜನಾಂಗವೂ ಬರೇ ಕೃಷಿಕರಾಗಿರದೆ, ಕೈಗಾರಿಕೆಯಲ್ಲಿಯೂ, ಪಾಶ್ಚಾತ್ಯರಂತೆ ನಿಪುಣರಾಗಿ ಇಲ್ಲಿಯ ಅಸಿದ್ಧ

ಪದಾರ್ಥಗಳನ್ನು ತಾವೇ ಸಿದ್ಧಪಡಿಸುವಂತೆ ಮಾಡುವ ಉದ್ದೇಶವನ್ನಿಟ್ಟು ಕೊಂಡು ಈ ಕೌನ್ಸಿಲು ಜನ್ಮವೆತ್ತಿತು. ಆದರೆ ಅದರ ವ್ಯವಸ್ಥಾಪಕರಲ್ಲಿ ಮುಖಂಡರಾದ ಶ್ರೀ। ಟಿ. ಪಾಲಿತ್ ಮತ್ತು ಸರ್ ರಾಸವಿಹಾರಿ ಘೋಷ್ ಇವರಿಬ್ಬರು ತಮ್ಮ ಹೇರಳ ಹಣವನ್ನು ಈ ಸಂಸ್ಥೆಗೆ ಒಪ್ಪಿಸದೆ ಕಲ್ಕತ್ತಾ ಯುನಿವರ್ಸಿಟಿಗೆ ದಾನ ಮಾಡಿಕೊಟ್ಟದ್ದರಿಂದ ಜನರಿಗೆ ಈ ಸಂಸ್ಥೆಯ ಮೇಲಣ ವಿಶ್ವಾಸವು ಕುಗ್ಗಿ ಇದು ಅಲ್ಲೇ ಕಣ್ಣು ಕೂರುತ್ತಿದೆ. ಇದಕ್ಕೆ ಸೇರಿ ತಮ್ಮ ತನುಮನಗಳನ್ನು ಅರ್ಪಿಸಿದ ಉಪಾಧ್ಯಾಯರನೇಕರು ಕೊನೆಗೆ ಜೀವನರಥವನ್ನು ನಡಿಸುವುದಕ್ಕೆ ಸರಕಾರಿ ಕೆಲಸಗಳಿಗೆ ಕೈಯೊಡ್ಡ ಬೇಕಾಯಿತು.

ಸರಕಾರದೊಡನೆ, ಅಸಹಕಾರವನ್ನು ಬೆಳೆಯಿಸಿ ಸ್ವತಂತ್ರವಾಗಿ ಜನತೆಯು ಅಲ್ಲಲ್ಲಿ ಸ್ಥಾಪಿಸಿದ ಸಂಸ್ಥೆಗಳಿಗೂ ಇದೇ ಬಗೆಯ ಗ್ರಹಚಾರ ದೋಷವು ತಟ್ಟಿತು. ಒಮ್ಮೆ ಉತ್ಸಾಹದಿಂದ ಅಲ್ಲಲ್ಲಿ ತಲೆ ಎತ್ತಿದ ಈ ಆಶ್ರಮಗಳು ಉತ್ಸಾಹಿಗಳ ಆ ಶ್ರಮಕ್ಕೆ ತಕ್ಕ ಫಲವನ್ನು ಕೊಡಲಾರದೆ ಮಳೆಗಾಲದ ಕೊನೆಯಲ್ಲಿ ತಲೆಎತ್ತಿದ ಅಳಿಂಬೆಗಳಂತೆ ಬೇಗನೆ ನಿರ್ನಾಮ ವಾದವು. ಹೀಗೆ ಅಲ್ಪಾಯುಷಿಗಳಾಗಲಿಕ್ಕೆ ದ್ರವ್ಯಾನುಕೂಲದ ಅಭಾವವೂ ಜನತೆಯ ಅಶ್ರದ್ಧೆಯೂ ಬಹಳ ಮಟ್ಟಿಗೆ ಕಾರಣಗಳಾದವೆನ್ನಬೇಕು.

ಉಪಸಂಹಾರ

ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ರಾಷ್ಟ್ರೀಯ ಶಿಕ್ಷಣದ ಕನಸು ಕಂಡವರು ರಾಮದೇವರನ್ನು ಚಿತ್ರಿಸಲಿಕ್ಕೆ ಹೋಗಿ ಮಂಗನ ಮುಖವನ್ನು ಕೊರೆದರು ಎಂಬ ಭಾವನೆಯು ಒಂದು ವೇಳೆ ಹುಟ್ಟೀತು. ಚಿತ್ರವನ್ನು ಬರೆದು ಬರೆದು ಒಳ್ಳೇಯ ಚಿತ್ರಗಾರನಾಗುತ್ತಾನೆ. ಹೀಗಾಗಿ ಮೊದಲಿನ ಪ್ರಯತ್ನಗಳ ನಿಷ್ಫಲತೆಯಿಂದ ನಾವು ಅಧೀರರಾದರೆ ಶುದ್ಧ ಅನ್ಯಾಯವಾದೀತು. ಹಿಂದೆ ಡಾ| ಎನ್ನಿಬಿಸೆಂಟರು ಹಾಕಿ ಕೊಟ್ಟ ರಾಷ್ಟ್ರೀಯ ಶಿಕ್ಷಣದ ಗಡಿರೇಖೆಯನ್ನು ಉಲ್ಲೇಖಿಸಿದ್ದೇವೆ. ಅದರೊಳಗೆ ನೈಜವಾದ ಬೆಳಕು ಮತ್ತು ಮಸುಕನ್ನು ತುಂಬಿಸಿ ಆ ಚಿತ್ರವನ್ನು ಚೆಲೋದಾಗಿ ಬರೆಯುವುದೇ ಹಿಂದೀ ಸುಶಿಕ್ಷಿತರ ಮುಖ್ಯ ಧ್ಯೇಯವಾಗಿರಬೇಕು. ಹೀಗೆ ಚಿತ್ರಿಸಬೇಕಾದರೆ ಸ್ಪಷ್ಟವಾದ ಗುರಿ, ಆ ಗುರಿಯನ್ನು ತಲಪಲಿಕ್ಕೆ ತಕ್ಕ ಸುವಿಚಾರ, ಅದರ ಕಾರ್ಯನಿರ್ವಾಹಕ್ಕೆ ಅಗತ್ಯವಿರುವ ತಾಳ್ಮೆ, ವಿಚಕ್ಷಣತೆ, ಸಾಧನೆ, ಪೂರ್ವ ಪ್ರಯತ್ನಗಳಲ್ಲಿ ಒಡೆದು ತೋರಿದ ಕುಂದುಕಗಳು ಇನ್ನೂ ಮುಂದೆ ಬಾರದಂತೆ ವಿವೇಚನೆ, ಇಷ್ಟೆಲ್ಲಾ ಧಾರಾಳವಾಗಿ ಸೇರಿಕೊಳ್ಳಬೇಕು. ಅದಕ್ಕೆ ರಾಜಾಶ್ರಯ ಮತ್ತು ಶ್ರೀಮಂತರ ದ್ರವ್ಯಸಹಾಯದ ಬೆಂಬಲ ಇವು ಬೇಕು.

ಹಾಗಿದ್ದರೆ ರಾಷ್ಟ್ರೀಯ ಶಿಕ್ಷಣದ ಧ್ಯೇಯವೇನು? ಎಂಬದನ್ನು ಈಗ ವ್ಯಾಖ್ಯಾನ ಮಾಡೋಣ. ಮನುಷ್ಯನ ಜೀವನದ ಕೊನೆಯ ಧ್ಯೇಯವು ಮುಕ್ತಿಯೆಂದು ಎಲ್ಲಾ ಧರ್ಮಗಳು ಸಾರುತ್ತಿವೆ. ಧರ್ಮ ಸಂಸ್ಥಾಪಕರು, ಅವರ ಬೋಧನೆಗಳಲ್ಲಿ ವ್ಯವಸಾಯ ಮಾಡಿದವರು ಈ ಮುಕ್ತಿ ಪ್ರಾಪ್ತಿಗಾಗಿಯೇ ಬೇಕು ಬೇಕಾದ ರೀತಿಯಲ್ಲಿ ದಾರಿಗಾಣಿಸಿದ್ದಾರೆ. ಐಹಿಕ ಸುಖವು ನಶ್ವರ, ಅದರ ಲಾಲಸೆಯಿಂದ ಮನುಷ್ಯನು ಸಂಸಾರ ಸಾಗರದಲ್ಲಿ ತೇಲುಮುಣುಗು ಆಗಿ, ಕಷ್ಟ ಅನುಭವಿಸುವ ಬದಲಾಗಿ ವಿರಕ್ತನಾಗಿ ಮೋಕ್ಷ ಚಿಂತನೆಯಲ್ಲಿಯೇ ಕಾಲಕಳೆಯಬೇಕು ಎಂದು ಬೇರೆ ಬೇರೆ ಧರ್ಮ ಗ್ರಂಥಗಳು ಬೋಧಿಸುತ್ತಿವೆ. ಹಾಗಿದ್ದರೆ ಪ್ರವೃತ್ತಿ ಮಾರ್ಗ

ವನ್ನು ಕೈಕೊಳ್ಳಬೇಕೋ, ನಿವೃತ್ತಿಮಾರ್ಗವನ್ನು ಅನುಸರಿಸಬೇಕೋ ಎಂಬದೇ ಮಹತ್ವದ ಪ್ರಶ್ನೆ. ನಿವೃತ್ತಿ ಮಾರ್ಗವನ್ನು ಹಿಡಿದು ಸಂಸಾರ ತ್ಯಾಗ ಮಾಡಿ, ಕಾಡುಗಳನ್ನು ಸೇರಿ, ಧ್ಯಾನ ಸಮಾಧಿಗಳಿಂದ ಮುಕ್ತಿ ಪಡೆಯುವುದು ಅತಿ ದುರ್ಲಭ; ಹಾಗೆ ಪಡೆದ ಜನರು ತೀರಾ ವಿರಳ. ಇದು ಜನಸಾಮಾನ್ಯರೀಗೆ ಸಾಧ್ಯವಾದ ವಿಚಾರವೂ ಅಲ್ಲ. ಋಷಿಗಳೂ ಪೀರರೂ ಕ್ರೈಸ್ತಪಾದ್ರಿಗಳೂ ಸಂಸಾರದ ಕೊಟಲೆಯನ್ನು ತೊರೆದು, ಧ್ಯಾನಾಸಕ್ತರಾಗಿ ಸತ್ಯಜ್ಞಾನವನ್ನು ಪಡೆದ ಮೇಲೆ ಅದನ್ನು ಜನ ಸಾಮಾನ್ಯರಿಗೆ ಬೋಧಿಸಿ ಸಮಾಜದ ಬಂಧಗಳು ಸಡಿಲಿಸದಂತೆ ಮಾಡುವುದು ತಮ್ಮ ಕರ್ತವ್ಯವೆಂದು ಲೆಕ್ಕಿಸುತ್ತಿದ್ದಾರೆ. ಗೀತಾವಾಕ್ಯದಲ್ಲಿಯೂ ಯೋಗಗಳಲ್ಲಿ ಕರ್ಮಯೋಗಕ್ಕೂ ಆಶ್ರಮುಗಳಲ್ಲಿ ಗೃಹಸ್ಥಾಶ್ರಮಕ್ಕೂ ಹೆಚ್ಚಿನ ಪ್ರಾಶಸ್ತ್ಯವಿದೆ. ಕರ್ಮಮಾಡದೆ ಜ್ಞಾನ ಉಂಟಾಗಲಾರದು; ಕರ್ಮಕ್ಕೆ ವ್ಯವಹಾರ ಕ್ಷೇತ್ರವು ಗೃಹಸ್ಥಾಶ್ರಮವೇ. ಈಸಿ ಪಾರಾಗಬೇಕೆನ್ನುವವನು ಹೊಳೆಯಲ್ಲಾಗಲೀ, ಕೆರೆಯಲ್ಲಾಗಲೀ ದುಮುಕಿ, ಎರಡು ಗುಟುಕು ನೀರು ಕುಡಿಯದೆ ಬರೇ ಪುಸ್ತಕಪಾಠದಿಂದ ಈಸಲು ಕಲಿಯುವನೇ? ಹಾಗೆಯೇ ಕರ್ಮಮಾಡಿ ಅದರ ಫಲಿತಾಂಶವನ್ನು ಗೊತ್ತು ಹಚ್ಚಿದ ಮೇಲೆ ಸಿಗುವ ಜ್ಞಾನವೇ ನಿಜವಾದ ಆತ್ಮಜ್ಞಾನ. ಇದರಿಂದ ಕರ್ಮಮಾಡಲು ಪ್ರೋತ್ಸಾಹಿಸುವ ಪ್ರವೃತ್ತಿಮಾರ್ಗಕ್ಕೆ ಪ್ರಾಧಾನ್ಯವಲ್ಲದೆ ವಿರಕ್ತಿಯಿಂದ ಕಾಡನ್ನು ಸೇರುವ ನಿವೃತ್ತಿ ಮಾರ್ಗಕ್ಕೆ ಪ್ರಾಧಾನ್ಯವು ಬರುವುದಿಲ್ಲ. ಆದ್ದರಿಂದ ಸಮಾಜಧಾರಕವಾದ ಕರ್ಮಮಾರ್ಗವನ್ನು ಬೋಧಿಸುವ ಮತ್ತು ಸಮಾಜವು ದಿನ ಹೋದ ಹಾಗೆ ಸುಖದಿಂದ ಬೆಳೆಯಲಿಕ್ಕೆ ಅನುಕೂಲವಾದ ಬೋಧನೆಯು ಉತ್ತಮ ಶಿಕ್ಷಣವೆಂಬುದು ನಿರ್ವಿವಾದ.

ಎರಡನೇಯದಾಗಿ ಬೋಧನೆಯು ಅತೀ ಪ್ರಾಚೀನ ಸಂಸ್ಕೃತಿಗಳನ್ನು ಒಳಕೊಂಡಿರುವ ಸಂಸ್ಕೃತ, ಅರಬೀ, ಫಾರಸಿ ಭಾಷೆಗಳಲ್ಲಿ ಆಗಬೇಕೋ, ಆಧುನಿಕ ಸಂಸ್ಕೃತಿಯ ಮುದ್ರೆಯುಳ್ಳ ಇಂಗ್ಲಿಷ್ ಭಾಷೆಯಲ್ಲಿ ಜರಗಬೇಕೋ ಎಂಬುದು ಇನ್ನೊಂದು ಪ್ರಶ್ನೆ. ಅರಬಿ, ಫಾರಸೀ, ಇಂಗ್ಲಿಷ್ ಇವು ಪ್ರಚಲಿತ ಭಾಷೆಗಳು. ಅವನ್ನು ಆಡುವ ಜನರು ಈಗಲೂ ಇದ್ದಾರೆ. ಸಂಸ್ಕೃತವು ಆ ಸ್ಥಾನದಲ್ಲಿಲ್ಲ. ಇಂಗ್ಲೀಷ್ ಭಾಷೆಯು ತನ್ನ ಸ್ವಾತಂತ್ರ್ಯ

ವನ್ನು ಕಾಪಾಡಿಕೊಳ್ಳುವಾಗ ಪಾರಿಭಾಷಿಕ ಶಬ್ದಗಳನ್ನೂ ಅನ್ಯ ಜನಾಂಗಗಳ ಸಂಸ್ಕೃತಿಯನ್ನೂ ಎಡೆಬಿಡದೆ ಸ್ವೀಕರಿಸಿ ಬೆಳೆಯುತ್ತಾ ಬರುತ್ತದೆ. ಹೀಗಾಗಿ ಅರಬೀ ಫಾರಸಿ ಭಾಷೆಗಳಿಗಿಂತಲೂ ಅದು ಸುಧಾರಿತ ಭಾಷೆ ಎನ್ನಬಹುದು. ಅಷ್ಟೇ ಅಲ್ಲ, ಅದು ಇಲ್ಲಿ ರಾಜಕೀಯ ಮತ್ತು ವ್ಯಾಪಾರ ವೈವಾಟಿನ ಭಾಷೆಯಾಗಿ ನಿಂತಾಗ ಅದಕ್ಕೆ ಪ್ರಥಮಸ್ಥಾನ ಸಿಗುವುದು ಆಶ್ಚರ್ಯವಲ್ಲ. ಆದರೆ ಅದು ಸಾರ್ವತ್ರಿಕವಾಗಿ ಶಿಕ್ಷಣದ ಭಾಷೆಯಾಗ ಬೇಕು ಎಂದು ಸಾಧಿಸುವುದಾದರೆ ಕೈಲಾಸಗಿರಿಯನ್ನು ಹತ್ತುವ ಸಾಹಸ ವೆನ್ನಬೇಕು. ಬ್ರಿಟಿಷರು ಹಿಂದುಸ್ಥಾನವನ್ನು ತಮ್ಮ ಮುಷ್ಟಿಯೊಳಗೆ ತಂದುಕೊಂಡು ಈಗ ಸಮಾರು 200 ವರ್ಷಗಳಾದರೂ ಇಂಗ್ಲೀಷ್ ಭಾಷೆಯನ್ನು ಓದಬಲ್ಲವರು ಶೇಕಡಾ 3ರಷ್ಟು ಕೂಡಾ ಇಲ್ಲ. ಹಾಗನ್ನು ವಾಗ ಸಾರ್ವತ್ರಿಕ ಭಾಷೆಯಾಗಬೇಕಾದರೆ ಆ ಮಧ್ಯೆ ಎಷ್ಟೊ ಶತಮಾನ ಗಳು ಕಳೆದು ಹೋದಾವು. ಇದಲ್ಲದೆ ಇಂಗ್ಲಿಷಕ್ಕೂ ದೇಶೀಯ ಭಾಷೆ ಗಳಿಗೂ ಏನೇನೂ ಸಂಬಂಧವಿರುವುದಿಲ್ಲ. ಅವುಗಳ ವೈಶಿಷ್ಟ್ಯವೂ ರಚನಾ ಕ್ರಮವೂ ಪ್ರತ್ಯೇಕವಿದೆ. ಒಂದು ಕಾಲದಲ್ಲಿ ಸಂಸ್ಕೃತವು ಆಡುವ ಭಾಷೆಯಾಗಿಲ್ಲದಾಗ ಅದನ್ನು ಕಲಿಯುವುದಕ್ಕೆ ಎಷ್ಟು ಸಮಯವು ಅನಾ ವ್ರಯವಾಗುತ್ತಿತ್ತೋ ಅಷ್ಟೇ ಸಮಯವು ಇಂಗ್ಲೀಷ್ ಭಾಷಾರಚನೆಯನ್ನು ಹೃದ್ಗತಮಾಡಿಕೊಳ್ಳುವುದಕ್ಕೆ ವೆಚ್ಚವಾಗುತ್ತಿದೆ. ದೇಶೀಯ ಭಾಷೆಗಳಲ್ಲಿ, ಅದರಲ್ಲಿಯೂ ಮಾತೃ ಭಾಷೆಯಲ್ಲಿಯೇ ಶಿಕ್ಷಣವು ದೊರೆತರೆ, ಅನೇಕ ವಿಷಯಗಳನ್ನು ಮಕ್ಕಳು ಅತೀ ಕೊಂಚ ಸಮಯದೊಳಗೆ ಕಲಿತುಕೊಳ್ಳುತ್ತ ವೆಂಬುದು ನಮ್ಮ ಸ್ವಂತ ಅನುಭವ. ದೇಶೀಯ ಭಾಷೆಯಲ್ಲಿ ಉದ್ಗ್ರಂಥಗಳು ಪರಿವರ್ತಿತವಾಗಿಲ್ಲವೆಂಬ ಆಕ್ಷೇಪವಿದ್ದರೆ "ಹುಚ್ಚು ಹೋಗದೆ ಮದುವೆ ಯಾಗದು, ಮದುವೆಯಾಗದೆ ಹುಚ್ಚು ಹೋಗದು" ಎಂಬದೇ ಆದಕ್ಕೆ ಸಮಾ ಧಾನ. ದೇಶೀಯ ಭಾಷೆಗೆ ಈಗ ಇರುವ ಬಡತೊತ್ತಿನ ಸ್ಥಾನವು ಹೋಗಿ, ಮನೆಒಡತಿಯ ಸ್ಥಾನ ಸಿಕ್ಕಿದರೆ— ಮೊದಲು ಸಿಂಡರೆಲ್ಲ ಇದ್ದವಳು ಈಗ ರಾಜ ಕುಮಾರನ ಪತ್ನಿಯಾದರೆ—ಆ ಸ್ಥಾನವನ್ನು ಅವಳು ಯಾಕೆ ಬೆಳಗಿಸಲಿಕ್ಕಿಲ್ಲ? ಬೋಧನೆಯು ದೇಶೀಯ ಭಾಷೆಯಲ್ಲಿ ಸಿಗುವುದರ ಪ್ರಯೋಜನ ಎಷ್ಟೆಂದು ಶಾಲಾ ಅಧಿಕಾರಿಗಳಿಗೂ ಪ್ರಜಾಜನಗಳಿಗೂ ಒಮ್ಮೆ ಖಚಿತವಾಯಿತೆಂದರೆ ಪರಿವರ್ತಿತ ಗ್ರಂಥಗಳಾಗಲೀ ಸ್ವಯಂಕೃತ ಗ್ರಂಥಗಳಾಗಲೀ ಹುಟ್ಟಿ

ಬರಲಿಕ್ಕೆ ವಿಳಂಬವಾಗಲಾರದು. ಆಗ ವಿದ್ಯಾರ್ಥಿಗಳ ಜೀವನಕಾಲವು ಸದ್ವ್ಯಯವಾಗಿ ಹೆಚ್ಚಿನ ಅಭ್ಯಾಸ ಮಾಡಲಿಕ್ಕೆ ಅವಕಾಶವು ದೊರೆಯುತ್ತದೆ. ಇಂಗ್ಲೀಷ್, ಸಂಸ್ಕೃತ, ಅರಬೀ, ಫಾರಸೀ ಭಾಷೆಗಳಿಗೆ ಬಹಿಷ್ಕಾರ ಇಡಬೇಕೆಂದು ನಮ್ಮ ಮತವಲ್ಲ. ಪ್ರೌಢ ಕಲಾನಿಲಯಗಳಲ್ಲಿ ಆರ್ಯ ಸಂಸ್ಕೃತಿ, ಇಸ್ಲಾಮಿ ಸಂಸ್ಕೃತಿ ಇವುಗಳ ಮೂಲಕ ಪ್ರಾಚೀನ ಧರ್ಮ ಪ್ರಾಚೀನ ಕಲೆ ಇವುಗಳ ಮೇಲಣ ಅಭಿಮಾನವು ಹೆಚ್ಚುವಂತೆ ಆ ಭಾಷೆಗಳನ್ನು ಐಚ್ಛಿಕವಾಗಿ ಕಲಿಸಬೇಕು. ಆ ಸಂಸ್ಕೃತಿಯು ನೆಲೆಗಾಣುವ ಉತ್ಸಾಹವುಳ್ಳವರು ತೀರಾ ಕೆಲವರು. ಅವರು ಆ ಸಂಸ್ಕೃತಿಗಳ ದೀವಿಗೆಗಳನ್ನು ಬೆಳಗಿಸಿ, ಶುಭ್ರವಾಗಿ ಇಡಲಿ. ಆಧುನಿಕ ಶಾಸ್ತ್ರಗಳ ಕಲೆಗಳ ಪರಿಚಯುವಾಗಿ, ಅದರ ಮೂಲಕ ದೇಶೋನ್ನತಿಯು ಆಗ ಬೇಕೆಂದಿದ್ದರೆ ಇಂಗ್ಲೀಷ್ ಭಾಷೆಯು ಅವಶ್ಯಕತೆ ಉಂಟೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇಂಗ್ಲೀಷರು ಬ್ರಿಟಿಷರಿಗಾಗಿಯೇ ಏರ್ಪಡಿಸಿದ ಪ್ರೌಢ ವಿದ್ಯಾನಿಲಯಗಳಲ್ಲಿ ಆಧುನಿಕ ವಿಜ್ಞಾನಶಾಸ್ತ್ರ ಪರಿಚಯಕ್ಕೋಸ್ಕರ ಜರ್ಮನ್ ಭಾಷೆಯನ್ನು ಕಲಿಸುತ್ತಾರೆಂಬದನ್ನು ಇಲ್ಲಿ ನಾವು ಸ್ಮರಣೆಯಲ್ಲಿಡಬೇಕು. ಎಂದಿಗೆ ದೇಶೀಯ ಭಾಷೆಗಳಲ್ಲಿ ಈ ವಿವಿಧ ಶಾಸ್ತ್ರಗಳ ಗ್ರಂಥಗಳು ತಲೆದೋರುತ್ತವೋ, ಅಂದಿಗೆ ಇಂಗ್ಲೀಷ್ ಕಲೆಗಳ ಮತ್ತು ವಾಙ್ಮಯದ ಪರಿಚಯಕ್ಕಾಗಿ ಮಾತ್ರ ಕಲಿಯುವ ಐಚ್ಛಿತ ಭಾಷೆಯು ಸ್ಥಾನವನ್ನು ಇಂಗ್ಲೀಷ್ ಭಾಷೆಗೆ ಕೊಡಬಹುದು.

ಮೇಲೆ "ದೇಶೋನ್ನತಿ" ಎಂಬ ಮಾತನ್ನು ಎತ್ತಿಕೊಂಡೆವು. ಇದರಲ್ಲಿ ಭಿನ್ನ ಅಭಿಪ್ರಾಯಗಳಿವೆ. ಪಾಶ್ಚಾತ್ಯರಂತೆ ವಿವಿಧ ವಿಜ್ಞಾನಶಾಸ್ತ್ರಗಳಲ್ಲಿ ನುರಿತು ಸುಖಜೀವನದ ಸೌಕರ್ಯಗಳನ್ನು ಹೆಚ್ಚಿಸುವುದು ಯುಕ್ತವೇ ಅಥವಾ ಇದ್ದುದನ್ನು ಉಂಡು ತಿಂದು ತೃಪ್ತಿ ಪಡುವುದು ಯುಕ್ತವೇ ಎಂಬದೊಂದು ಮಹತ್ತರ ಪ್ರಶ್ನೆ. ಪ್ರಾಚೀನ ಸಂಸ್ಕೃತಿಯು ಅಭಿಮಾನ ಇದ್ದು ಎಂಗ್ಲೊವೇದಿಕ್ ಕೊಲೆಜಿನಂಥಾ ಸಂಸ್ಥೆಗಳಿಗೆ ದ್ರವ್ಯಸಹಾಯ ಮಾಡಿದವರು ಕೂಡಾ ತಮ್ಮ ಮಕ್ಕಳುಮರಿಗಳನ್ನು ಆ ಕೊಲೆಜಿಗೆ ಕಳುಹಿಸಲಿಕ್ಕೆ ಕೈ ಹಿಂದೆಗೆದು ಅವರನ್ನು ಸರಕಾರ ನಿಯುಕ್ತ ವಿದ್ಯಾಲಯಗಳಿಗೆನೇ ಕಳುಹಿಸುತ್ತಿದ್ದಾರೆಂದು ಆ ಕೊಲೆಜಿನ ವ್ಯವಸ್ಥಾಪಕರಲ್ಲೊಬ್ಬ

ನಾದ ಲಾಲಾ ಲಜಪತರಾಯರೇ ದೋಷವಿಟ್ಟಿದ್ದಾರೆ. ಸರಕಾರ ನಿಯುಕ್ತ ಕೊಲೆಜುಗಳಲ್ಲಿ ಕಲಿತವರಿಗೆ ರಾಜಾಶ್ರಯ, ಸರಕಾರದ ಮನ್ನಣೆ ದೊರಕಿ, ದೊಡ್ಡ ಹುದ್ದೆಗಳು ಕೈಸೇರುತ್ತವೆ ಎಂಬುದು ಈ ಜನಗಳ ಒಂದು ಉದ್ದೇಶ ವಿರಬಹುದು. ಹಾಗೆ ಸರಿಯಾಗಿ ಲಾಭ ಪಡೆದವರು ಅತೀ ಕಡಮೆ ಸಂಖ್ಯೆಯಾದರೂ ಉಳಿದವರಲ್ಲಿ ಆ ಹಾರೈಕೆ ಇದ್ದೇ ಇದೆ. ಎರಡನೆಯ ದಾಗಿ ಸಂಸ್ಕೃತದ ಪರಿಚಯಕ್ಕೆ ದೇಶದಲ್ಲಿ ದ್ರವ್ಯದ ದೃಷ್ಟಿಯಿಂದ ಬೆಲೆಯು ತೀರಾ ಕಡಿಮೆ. 20 ವರ್ಷ ಪಾಠ ಮಾಡಿ ಮಹಾ ಮಹೋಪಾಧ್ಯಾಯ ಪದವಿಯನ್ನು ಪಡೆದವನಿಗೆ ನೂರು ರೂಪಾಯಿಗಿಂತ ಮಿಕ್ಕಿ ಸಂಬಳ ಸಿಗುವುದು ಅಪರೂಪ. ಇಲ್ಲಿಯ ಯುನಿವರ್ಸಿಟಿಯಲ್ಲಿ, ಬಿ. ಎ., ಯಂ. ಎ. ಪಾಸು ಮಾಡಿದವರಿಗೆ ರೂಪಾಯ 200ರಿಂದ 800ರ ವರೇಗೆ ಸಂಬಳ ಸಿಗು ವಂತಿದ್ದರೆ ಅಂಥವರು ಇಂಗ್ಲೆಂಡಿನ ಕೊಲೆಜುಗಳಲ್ಲಿ ಅತಿ ಕೀಳು ತರದ "ಡಿಗ್ರಿ"ಯನ್ನು ಪಡೆದರೂ ಒಂದೆರಡು ಸಾವಿರ ರೂಪಾಯಿ ಸಂಬಳ ಪಡೆಯುವಂತಿದ್ದರೆ, ಯಾವ ಕಡೆಗೆ ಮಧ್ಯಮ ತರಗತಿಯ ಜನರ ಮನಸ್ಸು ಆಕರ್ಷಿಸಲ್ಪಟ್ಟೀತು? ಊರಿನಲ್ಲಿಯೂ ಮಂತ್ರತಂತ್ರ ಜ್ಯೋತಿಷ್ಯ, ವ್ಯಾಕರಣ ಇತ್ಯಾದಿಗಳನ್ನು ಪಾಠಮಾಡಿದವನಿಗೂ 2 ದರ್ಭೆ ಚೂರುಗಳನ್ನೂ ಅಕ್ಕಿ ಕಾಳನ್ನೂ ಅಭಿಮಂತ್ರಿಸಿ, ಸ್ವರ ಲೋಪವಿದ್ದು ಮಣ ಮಣ ಮಂತ್ರ ಹೇಳುವವನಿಗೂ ದಕ್ಷಿಣೆಯ ಮಿತಿಯು ಒಂದೇ ಎಂದಾದರೆ, ಪ್ರಾಚೀನ ಶಾಸ್ತ್ರಕಲೆಗಳ ದೀವಿಗೆಯನ್ನು ಹಚ್ಚಿ ಬೆಳಗಿಸಬೇಕಾದ ಧರ್ಮಪೀಠಗಳು ಲೌಕೀಕ ವಿಚಾರಗಳಲ್ಲಿ ಕೈಹಾಕತೊಡಗಿ ಈ ದೀವಿಗೆಗಳಿಗೆ ಕಿಲುಬು ಹಿಡಿದು ಅಸಹ್ಯರೂಪ ಬಂದು, ಎಣ್ಣೆ ಬತ್ತಿ ಹಾಕುವವರಿಲ್ಲದೆ ಆ ದೀವಿಗೆ ಗಳು ಕತ್ತಲೆಗೆ ಇನ್ನಷ್ಟು ಪುಟವಿಡುತ್ತಿದ್ದರೆ, ಈ ಆರ್ಯ ಸಂಸ್ಕೃತಿಗೆ ಪುರಸ್ಕಾರವೆಲ್ಲಿಂದ ಸಿಗಬೇಕು? ಈ ದೀವಿಗೆಗಳ ಕಿಲುಬನ್ನು ಚೆನ್ನಾಗಿ ತಿಕ್ಕಿ ತೆಗೆದು, ಒಳ್ಳೆಯ ಎಣ್ಣೆ ಬತ್ತಿಗಳನ್ನು ಹಾಕಿದರೆ ಗರ್ಭಗೃಹದಲ್ಲಾದರೂ ಚೆನ್ನಾಗಿ ಪ್ರಕಾಶವು ಹರಡಿ, ಒಳಗಿದ್ದ ಮೂರ್ತಿಯ ಅಲಂಕಾರವೂ, ಸೊಬಗೂ ಕಣ್ಮನಗಳನ್ನು ತಣಿಸುತ್ತಿದ್ದುವಲ್ಲಾ!

ಇನ್ನೊಂದು ವಿಚಾರ. ಭಾಷೆಯು ಯಾವುದೇ ಇರಲಿ, ವಿಷಯವು ಆಯಾಯ ಕಾಲದ ಸಮಾಜದ ಸ್ಥಿತಿಗತಿಗಳಿಗೆ ಅನುಸರಿಸಿ, ಜನರ ಸುಖ

ಜೀವನಕ್ಕೆ ಅನುಕೂಲವಾಗಬೇಕು. ದೀವಿಗೆಗಳಿಗೆ ಕಿಲುಬು ಹಿಡಿದಿದೆ ಎಂದು ಅವನ್ನು ಕಿತ್ತು ಬಿಸಾಡುವಂತೆ ಪಾರಂಪರ್ಯವಾಗಿ ನಮ್ಮ ಧರ್ಮಕ್ಕನುಸರಿಸಿ ನಡೆಸುತ್ತಿರುವ ಕೆಲವು ಆಚಾರಗಳನ್ನು ಕೂಡ ತುಕ್ಕು ಹಿಡಿದು ಮಸುಕಾಗಿವೆ ಎಂದು ಅವನ್ನು ಕಿತ್ತೊಗೆಯುವ ಪ್ರಯತ್ನವು ಭರದಿಂದ ನಡೆಯುತೊಡಗಿದೆ. ಇಷ್ಟೇ ಅಲ್ಲ; ನಾವು ತೀರಾ ಮೂರ್ಖರು, ಜ್ಞಾನಾಂಧರು, ಅಪ್ಪ ನೆಟ್ಟ ಆಲದ ಮರವೆಂದು ನೇಣು ಹಾಕಿಕೊಳ್ಳುವವರು, ಅನ್ಯರ ತೊಡೆ ಪಾದಗಳನ್ನು ಹಿಸುಕಿ ಜೀವಿಸಲು ಯೋಗ್ಯರು, ಅನ್ಯರ ಕತ್ತಿಯ—ಅನ್ಯರ ರಾಜದಂಡದ ಸಹಾಯವಿಲ್ಲದಿದ್ದರೆ ಅಮೇರಿಕದ 'ರೆಡ್ ಇಂಡಿಯನ' ರಂತೆ ಎಂದೋ ನಿರ್ನಾಮವಾಗಲಿರುವವರು ಎಂಬ ಮಾತಿನಿಂದಲೆ ಶಾಲೆಯಲ್ಲಿ ಓನಾಮ ಹಾಕಿಕೊಡುತ್ತೇವೆ. ಹೀಗಾಗಿ ಪ್ರಾಚೀನ ಧರ್ಮದ ಮಸುಕು ಬೆಳಕಿನ ದೀವಿಗೆ ಇಲ್ಲದ ಗರ್ಭಗುಡಿ ಎಂಬ ನಮ್ಮ ಮನಸ್ಸು ಪಾಶ್ಚಾತ್ಯ ಸಂಸ್ಕೃತಿ, ಪಾಶ್ಚಾತ್ಯ ರೀತಿನೀತಿಗಳ ಕಡೆಗೆ ಹಾತೊರೆಯತೊಡಗಿದೆ. ಇನ್ನು ಹೀಗೆಯೇ ಕೆಲವು ಕಾಲ ನಡೆದರೆ ಈ ಗರ್ಭಗುಡಿಯ ಪಾವಿತ್ರ್ಯವು ತೀರಾ ಕೆಟ್ಟು ಹೋಗುವುದು ಖಂಡಿತ. ಆದ್ದರಿಂದ ಆ ಹಳೆಯ ದೀವಿಗೆಗಳನ್ನು ಬೆಳಗಿಸಿ ನಮ್ಮ ಮನೋಭಾವವೆಂಬ ಗರ್ಭಗುಡಿಯನ್ನು ಪರಿಷ್ಕರಿಸಬೇಕು. ಇದಕ್ಕಾಗಿ ನಮ್ಮ ಪ್ರಾಚೀನ ಧರ್ಮದ ಮೂಲಸೂತ್ರಗಳು, ಪ್ರಾಚೀನ ಇತಿಹಾಸ, ಪವಿತ್ರ ಪುರುಷರ ಜೀವನ ಚರಿತ್ರೆ, ಮಹಾ ವೀರರ ಸಾಹಸ ಇವುಗಳ ಪಾನಕದ ಬತ್ತಿಯನ್ನು ಬಾಲ್ಯದಿಂದಲೇ ನಮ್ಮ ಮಕ್ಕಳು ಹೀರುವಂತೆ ಮಾಡಬೇಕು. ಸ್ವಾಭಿಮಾನ, ಸ್ವಧರ್ಮಾಭಿಮಾನ, ಸ್ವದೇಶಾಭಿಮಾನ, ಸ್ವಾವಲಂಬನ ಇವುಗಳ ತತ್ವಗಳು ಕಥಾರೂಪವಾಗಿ, ಚರಿತ್ರೆಯ ರೂಪವಾಗಿ, ಮಕ್ಕಳ ಮುಂದೆ ನಲಿದಾಡಬೇಕು. ಜರ್ಮನರಿಗೆ 'ಫಾದರ್ ಲೇಂಡ್' ಇಂಗ್ಲಿಷರಿಗೆ 'ಹೋಮ್' ಎಂಬ ಮಾತುಗಳಲ್ಲಿ ಅಡಕವಾದ ಅಭಿಪ್ರಾಯವು ನಮ್ಮಲ್ಲಿದೆಯೆ? ಸ್ವದೇಶಾಭಿಮಾನದ ಸೋಗು ಹಾಕಿದವರಲ್ಲಿ ಮುಕ್ಕಾಲು ಮೂರು ವೀಸ ಜನರ ಮೈ ಸ್ವಲ್ಪ ಕೆರೆದರೆ ಅವರ ಜಾತಿಯ ಅಭಿಮಾನದ ಧೂಳು ಮೇಲಕ್ಕೆ ಹಾರುತ್ತದೆ. ನಮ್ಮ ದೃಷ್ಟಿಯು ನಮ್ಮ ಕುಟುಂಬ, ನಮ್ಮ ಜಾತಿ, ಇಷ್ಟಕ್ಕಿಂತ ಮುಂದರಿಸಿ ಹೋಗಿಲ್ಲವೆಂಬುದಕ್ಕೆ ಈಗಿನ ಹಿಂದೂ, ಮುಸ್ಲಿಮ, ಬ್ರಾಹ್ಮಣ, ಬ್ರಾಹ್ಮಣೇತರ, ಇವರಲ್ಲಿ ಶಾಖೋಪಶಾಖೆಗಳು, ಇವರೊಳಗಿನ ಜಗಳಗಳೇ ಸಾಕು.

ಇಂಥ ದುರಭಿಮಾನದ ಬದನಿಕೆಯು ನಮ್ಮ ಮೆದುಳಿಗೆ ಬಲವಾಗಿ ಅಂಟಿಕೊಂಡಿರುವಾಗ, ಸ್ವದೇಶಾಭಿಮಾನದ ಎಳೆ ಸಸಿಯು ಬೆಳೆವಣಿಗೆಗೆ ಅವಕಾಶವೆಲ್ಲಿ? ಸ್ವಾಭಿಮಾನ, ಸ್ವಧರ್ಮಾಭಿಮಾನ, ಇತ್ಯಾದಿಗಳಿಗೆ ಬಾಲ್ಯದಿಂದಲೇ ನಾವು ನಟ್ಟು ಗೊಬ್ಬರವಿಡದಿದ್ದರೆ ನಾವು ಎಂದಾದರೂ ಸ್ವತಂತ್ರ ಜನಾಂಗಗಳ ಸಾಲಿಗೆ ಬರುವೆವೆಂಬುದು ಬರೇ ಕನಸಿನ ಗಂಟು. ನಾವು ಸಾರ್ವದಾ ನಿರ್ಭೀತರಾಗಿ ನೆಟ್ಟಗೆ ನಡೆಯಲು ಬಾರದೆ ಅನ್ಯರಿಗೆ ತಲೆಬಾಗಿಸಿ, ಅವರ ಪಾದಗಳಲ್ಲಿ ಬೆರಳೆಷ್ಟು ಎಂದು ನೋಡುವುದೇ ನಮ್ಮ ಹಣೆಯ ಬರಹವಾಗಬಹುದು.

ಇನ್ನೊಂದು ಪ್ರಶ್ನೆ. ವಿಜ್ಞಾನ ಶಾಸ್ತ್ರದ ಹೊಸ ಹೊಸ ಶೋಧಗಳಿಂದ ಪಾಶ್ಚಾತ್ಯ ಮತ್ತು ಅಮೇರಿಕದ ಜನಾಂಗಗಳು ತಮ್ಮ ಜೀವನದ ಸೌಕರ್ಯಗಳನ್ನು ಹೆಚ್ಚಿಸಲು ಯತ್ನಿಸುವಂತೆ ನಾವು ಅದನ್ನು ಅನುಸರಿಸುವುದು ಯಾತಕ್ಕೆ ಆಗಬಾರದು? ಅಂಥ ಜೀವನವೇ ಮನುಷ್ಯನ ಧ್ಯೇಯವಾಗಿದ್ದರೆ ಆ ನವನಾಗರಿಕ ದೇಶಗಳಲ್ಲಿ ನಿರುದ್ಯೋಗಿಗಳ ಸಂಖ್ಯೆ ವಿಷ ಏರಿದಂತೆ ಏರಿ, ಸಮಾಜ ಕ್ರಾಂತಿಗೆ ಕಾರಣವಾಗುತ್ತಿರುವಾಗ, ಆ ಧ್ಯೇಯವನ್ನು ಮನ್ನಿಸಬೇಕೇ ಎಂಬದೂ ಒಂದು ವಿಚಾರ. ಪ್ರಾಚೀನ ಕಾಲದಂತೆ ಅನ್ಯ ಜನಾಂಗಗಳನ್ನು ನಮ್ಮ ಗಡಿಗಳಿಂದ ಬಹಿಷ್ಕರಿಸಿ, ನಾವು ಈಗ ಜೀವಿಸಲು ಸಾಧ್ಯವಿಲ್ಲ. ನೂತನ ಬಗೆಯ ಯಾನಗಳು, ತಂತಿ, ಟೆಲಿಫೋನ್, ಟೆಲಿವಿಜನ್, ಮುಂತಾದುವು ಇಡೀ ಪ್ರಪಂಚವನ್ನು ಒಂದೇ ಆಯುಕಟ್ಟಿನೊಳಗೆ ತರಲಿರುವಾಗ, ಈ ಕಟ್ಟಿನೊಳಗಿಂದ ಜಗುಳಿ ಜೀವಿಸುವುದು ನಮಗೆ ಸಾಧ್ಯವಾದೀತೆ? ಇದಲ್ಲದೆ ನಮ್ಮ ದೇಶದಲ್ಲಿ ಯಾವುದಕ್ಕೆ ಕೊರತೆ ಇದೆ? ಆಹಾರ ಪೈರುಗಳ ತುಟ್ಟಿ ಇದೆಯೇ? ಕೃಷಿಯ ನೆಲಕ್ಕೆ ಕಡಿಮೆಯೇ, ಬಟ್ಟೆಯ ಅರಳೆಗೆ ಕಡಿಮೆಯೇ, ಕಲ್ಲಿದ್ದಲು, ಕಬ್ಬಿಣ, ಚಿನ್ನ, ಮುಂತಾದ ಧಾತುಗಳಿಗೆ ಕಡಿಮೆಯೇ? ಇವನ್ನು ಅನ್ಯ ಜಗಾಂಗಗಳು ನಮ್ಮ ಕಾಯಕಷ್ಟದಿಂದ ಸಂಗ್ರಹಿಸಿ ಮಾರ್ಪಡಿಸಿ ನಮಗೇನೇ ಹೆಚ್ಚು ಬೆಲೆಗೆ ಮಾರಿ ಗಂಟು ಕಟ್ಟುತ್ತಾರೆ. ನಮಗಂತು 'ಬೀಸಿದ ಮುಂಡೆಗೆ ಮುಕ್ಕಿದ್ದೇ ಲಾಭ' ಎಂಬಂತಿದೆ. ಈ ವಸ್ತುಗಳನ್ನು ಮಾರ್ಪಡಿಸುವ ವಿದ್ಯೆಯನ್ನು ನಾವು ಏತಕ್ಕೆ ಕಲಿಯಬಾರದು? ಅದಕ್ಕೆ ಬೇಕಾದ ಶಾಲೆಗಳನ್ನು

ನಾವು ಏತಕ್ಕೆ ಸ್ಥಾಪಿಸ ಬಾರದು? ಈಗಿನ ನಮ್ಮ ವಿದ್ಯೆಯಿಂದ ನಾವು ಪಾಶ್ಚಾತ್ಯರನ್ನು ಸರ್ವ ಬಗೆಯಲ್ಲೂ ಅನುಸರಿಸುವುದೇ ನಾಗರಿಕತೆಯ ಲಕ್ಷಣವೆಂದು ಭಾವಿಸುತ್ತೇವೆ. ಆದರೆ ಈ ಸೌಕರ್ಯಗಳಿಗೆ ಬೇಕಾದ ವಸ್ತುಗಳಿಗೋಸ್ಕರ ಅನ್ಯ ಜನಾಂಗಗಳ ಮೇಲೆ ಆಧರಿಸಿರುತ್ತೇವೆ. ನಮ್ಮ ಮನೆಯೊಳಕ್ಕೆ ಇಣಿಕಿ ನೋಡಿದರೆ ಆಹಾರ ಪಾನಗಳ ಕೆಲವು ವಸ್ತುಗಳಲ್ಲದೆ ಇತರ ಎಲ್ಲಾ ವಸ್ತುಗಳಿಗೋಸ್ಕರ ನಾವು ಅನ್ಯ ಜನಾಂಗಗಳಿಗೆ ಆಭಾರಿಯಾಗಿರುತ್ತೇವೆ. ಹಲವು ಸಲ ಆ ವಸ್ತುಗಳು ನಮ್ಮ ಹವೆಗೆ, ನಮ್ಮ ದ್ರವ್ಯಾನುಕೂಲತೆಗೆ ಯುಕ್ತವಾದವುಗಳೇ ಎಂಬ ವಿಚಾರವೂ ಕೂಡ ನಮ್ಮಲ್ಲಿ ಇಲ್ಲ. ಅವನ್ನು ಒದಗಿಸಿಕೊಳ್ಳುವ ತವಕದಿಂದ ನಮ್ಮ ಚೀಲವನ್ನು ಸಾರ್ವದಾ ಬರಿದಾಗಿಟ್ಟು, ದರಿದ್ರ ನಾರಾಯಣನ ಔಪಾಸಕರಾಗುತ್ತೇವೆ. ಇದರಲ್ಲಿ ಎರಡೇ ವಿಷಯಗಳನ್ನು ನಾವು ಆಲೋಚಿಸಬೇಕಾಗಿದೆ. ನಮ್ಮ ಸುಖ ಜೀವನದ ಸೌಕರ್ಯಗಳನ್ನು ನಾವು ಹೆಚ್ಚಿಸುವುದಾದರೆ ಅವಕ್ಕೆ ಬೇಕಾದ ವಸ್ತುಗಳನ್ನು ನಾವೇ ತಯಾರಿಸಬೇಕು; ಅದಕ್ಕೆ ಬೇಕಾದ ಶಿಕ್ಷಣದ ಸಂಸ್ಥೆಗಳನ್ನು ನಾವೇ ಸ್ಥಾಪಿಸಬೇಕು. ಇಲ್ಲವಾದರೆ ನಮ್ಮಲ್ಲೇ ಪೈದಾಸ್ತು ಆಗುವ ವಸ್ತುಗಳಿಂದ ತೃಪ್ತಿ ಪಟ್ಟು ಅನ್ಯರ ಅನುಸರಣೆಯ ಗೋಜಿಗೆ ಹೋಗಬಾರದು.

ಇನ್ನೊಂದು ಮಾತು. ಪಾಶ್ಚಾತ್ಯ ಸಂಸ್ಕೃತಿ ಎನ್ನುವಾಗ ಅದು ಬರೇ ಇಂಗ್ಲಿಷರ ಶಿಕ್ಷಣ ಕ್ರಮದಿಂದಲೇ ಕೈ ಸೇರದು ಎಂಬುದಕ್ಕೆ ಮಹಾಯುದ್ಧದ ಕಾಲದಲ್ಲಿ ಇಂಗ್ಲೆಂಡಿನಲ್ಲಿ ವಿದ್ಯಾಖಾತೆಯ ಮಂತ್ರಿಯಾಗಿದ್ದ ಮಿ। ಫಿಶ್ಶರರು ಅಂದ ಮಾತುಗಳು ನಮಗೆ ಒಳ್ಳೇ ನಿದರ್ಶನಗಳಾಗಿವೆ. 'ಒಂದು ರಾಜ್ಯದ ಸಂಪತ್ತು ಆ ದೇಶದಲ್ಲಿ ಓಡಾಡುವ ಹಣ ಅಥವಾ ನೋಟುಗಳಲ್ಲಿಲ್ಲ, ಆ ರಾಜ್ಯದ ನಿವಾಸಿಗಳ ಮೆದುಳು ಮತ್ತು ದೇಹ ಶಕ್ತಿಯಲ್ಲಿದೆ,' ಎಂದು ಅವರು ಹೇಳಿ, ಅಲ್ಲಿಯ ಆ ಕಾಲದ ಶಿಕ್ಷಣದ ಸ್ಥಿತಿಯನ್ನು ವರ್ಣಿಸಿದ್ದಾರೆ. 'ಬೇಕಿಲ್ಲದ ವಿಷಯಗಳನ್ನು ಗೊತ್ತಿಲ್ಲದ ಉಪಾಧ್ಯಾಯರು ದುಷ್ಟ ರೀತಿಯಲ್ಲಿ ಕಲಿಸುತ್ತಾರೆ. ಇದಕ್ಕೆ ಹೊಣೆ ಯಾರು?' ಎಂದು ಪ್ರಶ್ನಿಸಿ ಪುಸ್ತಕ ಪಾಠದೊಂದಿಗೆ ಶಾಲೆಗಳಲ್ಲಿ ಕಣ್ಣುಕಿವಿಗಳ ಶಕ್ತಿಯನ್ನೂ ಸಂಗೀತದ ಪ್ರೀತಿಯನ್ನೂ ಆ ಕಾಲದ ಶಾಲೆಗಳಲ್ಲಿ ಹೆಚ್ಚಿಸುತಿಪ್ಪರೂ,

ಶಿಕ್ಷಣ ಪ್ರಚಾರಕ್ಕಾಗಿ ಮಾಡುವ ದ್ರವ್ಯ ವೆಚ್ಚವು ಏನೇನೂ ಸಾಲದು, ಚಿತ್ತ ಪ್ರಫುಲ್ಲತೆಗೆ ಪ್ರತಿಯೊಂದು ಮಗುವಿಗೂ ಹಕ್ಕಿರುವುದರಿಂದ ಅದಕ್ಕೆ ಸಾಕಷ್ಟು ಆಸ್ಪದ ಸಿಗಬೇಕು, ವಿಜ್ಞಾನ ಶಾಸ್ತ್ರದ ಪರಿಚಯವು ಜನಸಾಮಾನ್ಯರಿಗೂ ಸಿಗಬೇಕು, ಪ್ರಜೆಗಳಾಗಿ ತಮ್ಮ ಜವಾಬುದಾರಿಗಳನ್ನು ನಿರ್ವಹಿಸುವುದಕ್ಕೆ ಸ್ತ್ರೀಪುರುಷರೆಂಬ ಭೇದವಿಲ್ಲದೆ, ಎಲ್ಲರಿಗೂ ಶಿಕ್ಷಣ ದೊರೆಯಬೇಕು ಎಂಬುದು ಅವರ ಅಭಿಮತ. ಶಿಕ್ಷಣವು ಪ್ರಾಥಮಿಕ ಮೆಟ್ಟಲಿನಲ್ಲಿಯೇ ಅಂತ್ಯವಾಗದೆ ಸಾಧ್ಯವಿದ್ದಷ್ಟು ಪ್ರೌಢ ಶಿಕ್ಷಣ ಕೂಡಾ ಅಧಿಕಾಂಶ ಜನರಿಗೆ ಸಿಗುವುದಕ್ಕೆ ದಾರಿ ಸುಗಮವಾಗಿರಬೇಕು, ಪ್ರಾಥಮಿಕ ಶಿಕ್ಷಣದ ನಂತರ ಜೀವನದ ವೃತ್ತಿಯನ್ನು ಕಲ್ಪಿಸಿ ಕೊಡಲಿಕ್ಕೆ ಅವಕಾಶ ಸಿಗಬೇಕು, ಪ್ರತಿಯೊಂದು ಮಗುವೂ ದೈವಿಕ ವಿಚಾರ, ಮಾನಸಿಕ ಮತ್ತು ದೇಹ ಶಕ್ತಿಯ ಬೆಳವಣಿಗೆಯಿಂದ ಪರಿಪಕ್ವವಾಗುವಂಥಾ ಶಿಕ್ಷಣವು ದೊರೆಯಬೇಕು ಎಂದು ಮಿ। ಫಿಶ್ಶರರು ತಮ್ಮ ಲೇಖನ ಭಾಷಣಗಳಲ್ಲಿ ಸ್ಪಷ್ಟೀಕರಿಸಿದ್ದಲ್ಲದೆ ಅದಕ್ಕಾಗಿಯೇ ಒಂದು ಕಾನೂನನ್ನು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮಂಜೂರು ಮಾಡಿಸಿದರು. “ಬಹು ಬೇಗನೆ ದುಡಿತದ ಆವಶ್ಯಕತೆಯಿಂದ ಚಿಕ್ಕ ಮಕ್ಕಳು ಶಾಲೆಯನ್ನು ಬಿಟ್ಟುಬಿಡುತ್ತಾರೆ. ಅವರಿಗೆ ನ್ಯಾಯವಾದ ವಿರಾಮವೂ ಸಿಗುವುದಿಲ್ಲ. ಅವರ ಶಕ್ತಿಗಳೆಲ್ಲಾ ಕುದುರಿ ಹೋಗುತ್ತವೆ” ಎಂದು ಮಿ। ಫಿಶ್ಶರರು ವ್ಯಸನ ಪಡುತಿದ್ದರು. ಅವರ ಕೆಲವು ಮಾತುಗಳು ವಿಚಾರಾರ್ಹವಾಗಿವೆ. ‘ಶಿಕ್ಷಣವು ಜನತೆಯ ಅಜ್ಞಾನ, ಅಸುಖ, ದುರ್ನಡತೆಗಳು, ರೋಗರುಜಿನ ಇವನ್ನು ತಗ್ಗಿಸಬೇಕು.’ ಶಿಕ್ಷಣವು ಹಿರಿಯರು ಕಿರಿಯರಿಗೆ ಮರುಪಡಿಯಾಗಿ ತೆರುವ ಋಣ’ ‘ಇಲ್ಲಿ ಮಿಲಿಯಗಟ್ಟಲೆಯ ಸ್ತ್ರೀಪುರುಷರು ಪುಸ್ತಕ ಭಂಡಾರ, ಸಂಗೀತ ಚಿತ್ರಕಲಾಭಂಡಾರ ಇವುಗಳಿಂದ ಏನೊಂದೂ ಬಗೆಯ ಸುಖವನ್ನೂ ಹೊಂದದೆ, ಬುದ್ಧಿವಿಕಾಸವೂ ಇಲ್ಲದೆ ಬರೇ ದುಡಿತದ ಯಂತ್ರಗಳಾಗಿ ಬಿಟ್ಟಿದ್ದಾರೆ’ ಎಂದು ಮಿ। ಫಿಶ್ಶರರು ಬರೆದ ಈ ಚಿತ್ರಗಳ ಅಡಿಗೆ ‘ಗ್ರೇಟ್ ಬ್ರಿಟನಿನ ಸ್ಥಿತಿ’ ಎಂದು ಬರೆಯುವ ಬದಲಾಗಿ ‘ಹಿಂದೂಸ್ಥಾನದ ಸ್ಥಿತಿ’ ಎಂದು ಬರೆದರೆ ಅದು ಅಲ್ಲವೆಂದು ಹೇಳಲು ಯಾರಿಗಾದರೂ ಧೈರ್ಯ ಬರುವುದೇ? ನಮ್ಮ ಹಳ್ಳಿಗಳ ಸ್ಥಿತಿ ಇದಕ್ಕಿಂತಲೂ ಹೀನ ದೆಸೆಯಲ್ಲಿದೆ. ಮಿ। ಫಿಶ್ಶರರು ತಮ್ಮ ದೇಶದ ಹೀನ ಸ್ಥಿತಿಯನ್ನು ಕುರಿತು ಉದ್ಗಾರವನ್ನು ಹೊರಡಿಸುವಾಗ, ಫ್ರಾನ್ಸ್ ದೇಶದ ಶಾಲೆಗಳ

ಕಡೆಗೆ ಬೆರಳು ತೋರಿಸಿ ಹೀಗಂದಿದ್ದಾರೆ:—'ಫ್ರಾನ್ಸಿನಲ್ಲಿ ಪ್ರಾಥಮಿಕ ಶಾಲಾ ಉಪಾಧ್ಯಾಯನು ತನ್ನ ಕಾರ್ಯಕ್ಕೆ ದೀಕ್ಷೆಹಿಡಿದ ಮಿಶ್ನರಿಯಂತಿದ್ದಾನೆ. ಫ್ರೆಂಚ್ ಭಾಷೆಯ ಇಂಪನ್ನು ಹಳ್ಳಿ ಪಳ್ಳಿಗಳಲ್ಲಿಯೂ ತೋರಿಸಿ ಕೊಡುವುದಲ್ಲದ ಆ ಭಾಷೆಯಲ್ಲಿ ಮಹಾ ವಿದ್ವಾಂಸರು ಬರೆದ ಸೊಗಸಾದ ಗ್ರಂಥಗಳ ಪರಿಚಯವನ್ನು ಹಳ್ಳಿಗರಿಗೆ ಉಂಟು ಮಾಡಲು ಸಾಹಸ ಮಾಡುತ್ತಾನೆ. ಆಧುನಿಕ ವಿಜ್ಞಾನಶಾಸ್ತ್ರದ ಮತ್ತು ಫ್ರಾನ್ಸಿನ ಇತಿಹಾಸದ ಪ ಚಯವನ್ನು ಮಾಡಿಕೊಟ್ಟು ದೇಶಾಭಿಮಾನವನ್ನು ಮಕ್ಕಳಲ್ಲಿ ನೆಲೆಗೊಳಿಸುತ್ತಾನೆ.'

ಮೇಲಿನ ಟೀಕೆಗಳಿಂದ ಯಾವುದಾದರೂ ಒಂದೇ ದೇಶದ ಅಂಧ ಅನುಕರಣವು ನಮಗೆ ಸಲ್ಲದು, ನಮ್ಮ ಒಳ್ಳೆಯದನ್ನು ನೀಗಿಕೊಳ್ಳದೆ ಇತರರಲ್ಲಿಯ ಒಳ್ಳೆಯದನ್ನು ಹೀರಿಕೊಳ್ಳುವಂಥಾ ಶಿಕ್ಷಣವನ್ನು ನಾವು ಕೈಕೊಂಡು, ನಮ್ಮ ದೇಶದ ಏಳಿಗೆಯನ್ನು ಸಾಧಿಸಬೇಕು, ನಮ್ಮ ಶಾಲೆಗಳಿಂದ ಒಂದೇ ಅಚ್ಚಿನಲ್ಲಿ ತಯಾರಾಗುವ ವಸ್ತುಗಳಂತಹ ವಿದ್ಯಾರ್ಥಿಗಳು ಹೊರ ಬೀಳಬಾರದು, ನಮ್ಮ ಸ್ವಾಭಿಮಾನವನ್ನು ಕಾಪಾಡಿಕೊಂಡು ಸುಧಾರಿತ ಜನಾಂಗಗಳ ಸ್ಥಾನದಲ್ಲಿ ನಾವು ಕೂಡಾ ನಿಲ್ಲಲು ಅನುಕೂಲವಾಗುವಂತೆ ನಮ್ಮ ಶಿಕ್ಷಣ ಕ್ರಮವನ್ನು ನಾವು ತಿದ್ದಿಕೊಳ್ಳಬೇಕೆಂದು ಸ್ಪಷ್ಟವಾಗುವುದು.

ಸಂಪೂರ್ಣಂ

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರ
ಪ್ರಕಾಶಕರು, ಪುಸ್ತಕ ವ್ಯಾಪಾರಿಗಳು.
ಮಾಳಮಡ್ಡಿ, ಧಾರವಾಡ.